ಸಂವಾದ

ಮೇ ೨೦೦೮ ರೂ. ೨೦

ಅರುಂಧತಿ ರಾಯ್

ಮಿಡತೆಗಳಿಗೆ ಕಿವಿಯೊಡ್ಡಿ...

ಕ್ಯಾಸ್ಟ್ರೋ ನೆನಪು

ಬುದ್ಧನ ಬೆಳಕು ಅಂಬೇಡ್ಕರ್ ಬದುಕು

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೭

ಮೇ ೨೦೦೮

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

© ೨೩೪೮೦೨೭೮/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23480278, 94480 48306

e-mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ ೦೪
- ❑ ಅಂತರಂಗ ೦೫
- ❑ 'ನಾನು ಮುಸ್ಲಿಮನಲ್ಲ; ನನ್ನ ಸುದ್ದಿಗೆ ಬರಬೇಡಿ! ೦೬
  - ❍ ಶ್ರೀಶ ಉಡುಪ
- ❑ ಸೌಹಾರ್ದ ಸಂಸ್ಕೃತಿಯ ರಕ್ಷಣೆಗಾಗಿ ೦೮
  - ❍ ಸನತ್‌ಕುಮಾರ್ ಬೆಳಗಲಿ
- ❑ ಮಹಾನ್ ಕ್ರಾಂತಿಕಾರಿ ಫಿಡಲ್ ಕ್ಯಾಸ್ಟ್ರೋ ೧೦
  - ❍ ನಾ. ದಿವಾಕರ
- ❑ ಪ್ರತಿಭೆಗಳು ಭಿಕರಿಗಿವೆ ೧೩
  - ❍ ನಾ. ದಿವಾಕರ
- ❑ ಬುದ್ಧನ ಬೆಳಕು ಅಂಬೇಡ್ಕರ್ ಬದುಕು ೧೪
  - ❍ ಡಾ॥ ಎಚ್.ಟಿ ಪೋತೆ





- ❑ ಹಣದುಬ್ಬರ, ಬೆಲೆ ಏರಿಕೆ... ೧೮
  - ❍ ಶಿವಸುಂದರ್
- ❑ ಮತಾಂತರ ತಡೆ ಕಾಯ್ದೆಗಳ ಒತ್ತಡದಲ್ಲಿ... ೨೦
  - ❍ ಸತ್ಯಪ್ರಕಾಶ್ ಎಂ.ಆರ್.
- ❑ 'ಸತ್ತ' ಜಾತಿಯ ಶಾಶ್ವತ ಅಸ್ತಿತ್ವ...!? ೨೪
  - ❍ ಜೆ.ಪಿ. ದೇಶಪಾಂಡೆ
- ❑ ರಾಜಕಾರಣ ಚರ್ಚೆ ೨೬
  - ❍ ಜಿ. ರಾಜಶೇಖರ್
  - ❍ ಜಂಬಣ್ಣ ಅಮರಚಿಂತ
  - ❍ ಕೆ.ಎಲ್. ಅಶೋಕ್
  - ❍ ವಿ.ಬಿ. ವೀರಭದ್ರಪ್ಪ
  - ❍ ಕು.ಸ. ಮಧುಸೂದನ್
- ❑ ಯೋಜಿತ ನರಮೇಧ, ನಿರಾಕರಣೆ ಮತ್ತು ಸಂಭ್ರಮ ೩೪
  - ❍ ಅರುಂಧತಿ ರಾಯ್
- ❑ ಮತಗಳು, ಚುನಾವಣೆ ಮತ್ತು ಡೆಮಾಕ್ರಸಿ ೪೨
  - ❍ ರಹಮತ್ ತರೀಕೆರೆ
- ❑ ದಲಿತ್ ಡೈರಿ ೪೬
  - ❍ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ❑ ಬುದ್ಧಾಯಣ ೫೦
  - ❍ ಸಿ.ಎಚ್ ರಾಜಶೇಖರ್

ಕವನಗಳು : ❑ ನನ್ನ ಕವಿತೆ ೦೭ ❑ ನಲದ ಗಮ್ಮತ್ತು ೧೭ ❑ ಋತುಗಾನ ೩೨

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮಾಂಸಾಹಾರದ ರಾಜಕಾರಣ

ಮಾನ್ಯರೇ,

'ಸಂವಾದ'ದ ಏಪ್ರಿಲ್ ಸಂಚಿಕೆಯ ರಹಮತ್ ಸರ್ ಅವರ ಮಾತಿನಹಂಗು ಅಂಕಣದ 'ಆಹಾರದ ಹಲ್ಲೆ' ಬಗ್ಗೆ:

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಸಣ್ಣ ಸಣ್ಣ ವಿಷಯಗಳಿಗೂ ದಲಿತರು, ದುರ್ಬಲರು, ಮುಸ್ಲಿಂ ಸಮುದಾಯಗಳ ಮೇಲೆ ಸಂಘ ಪರಿವಾರ ನಡೆಸುತ್ತಿರುವ ಆಕ್ರಮಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ದಲಿತರು ದುರ್ಬಲರು ಮುಸ್ಲಿಮರು ಮಾಂಸಾಹಾರ ತಿನ್ನುವುದೇ ತಪ್ಪಾ? ಅಥವಾ ಈ ಜಾತಿಯವರು ಇದನ್ನೆ ತಿನ್ನಬೇಕು, ಇದನ್ನ ತಿನ್ನಬಾರದು. ಎಂಬ ಕಟ್ಟುಪಾಡುಗಳು, ನೀತಿ ನಿಯಮಗಳು ಏನಾದರೂ ಇವೆಯೆ ಎನ್ನುವ ಪ್ರಶ್ನೆ? ರಹಮತ್ ಸರ್ ಅವರು ಈ ಲೇಖನದಲ್ಲಿ ಇತ್ತೀಚೆಗೆ ನಡೆದ ಎಲ್ಲಾ ವಿದ್ಯಾಮಾನಗಳನ್ನ ಚಿತ್ರಿಸುತ್ತ ತಮ್ಮ ಕೋಪ, ಅಸಮಾಧಾನ, ವಿಷಾದ ಎಲ್ಲವನ್ನು ವ್ಯಕ್ತ ಪಡಿಸಿದ್ದಾರೆ.

ನಾವು ನಮ್ಮ ಇತಿಹಾಸವನ್ನು ಸರಿಯಾಗಿ-ನೋಡಿಕೊಂಡರೆ ಎಲ್ಲರೂ ಮಾಂಸಾಹಾರಿಗಳೆ ಮತ್ತು ಎಲ್ಲರು ಪ್ರಾಣಿ ಬೇಟೆಯಾಡಿ ಕೊಂದು ತಿಂದವರೆ. ಡಾರ್ವಿನ್‌ನ ಮಾನವ ವಿಕಾಸವಾದದಲ್ಲಿ ನಾವು ಇದನ್ನು ಕಾಣಬಹುದು. ವಿಕಾಸದ ಕಾಲದಲ್ಲಿ ಮಾನವ ಅಲೆಮಾರಿಯಾಗಿದ್ದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಆಹಾರದ ಉದ್ದೇಶದಿಂದಲೇ ತಿರುಗಾಡುತ್ತಿದ್ದ, ಕಾಡಿನಲ್ಲಿ ಸಿಗುವ ಗೆಡ್ಡೆ ಗೆಣಸುಗಳು ಮತ್ತು ಸಾದುಗಳಾಗಿ ಕಾಣುತ್ತಿದ್ದ ದನಗಳನ್ನು ಬೇಟೆಯಾಡಿ ಅವುಗಳನ್ನ ಹಸಿ ಹಸಿಯಾಗಿಯೇ ತಿನ್ನುತ್ತಿದ್ದ ಆನಂತರ ಕಲ್ಲಿನಿಂದ ಬೆಂಕಿಯನ್ನ ಕಂಡುಕೊಂಡ- ಆ ಬೆಂಕಿಯಿಂದ ಮಾಂಸವನ್ನು ಸುಟ್ಟು ತಿನ್ನಲು ಆರಂಭಿಸಿದ (ಕ್ರಮೇಣ-ಪ್ರಾಣಿಗಳನ್ನು ಬೇಟೆಯಾಡುತ್ತಾ, ಅವುಗಳನ್ನ ಜೀವಂತವಾಗಿ ಹಿಡಿದು ಪಳಗಿಸಿ ಸಾಕಲು ಆರಂಭಿಸಿದ ಮತ್ತು ಇವುಗಳ ಪ್ರಯೋಜನ ಪಡೆಯಲು ವ್ಯವಸಾಯ ಆರಂಭಿಸಿದ ವಿವಿಧ ತಳಿಯ ಬೀಜಗಳನ್ನು ಕಂಡುಕೊಂಡ ಆಗ ಅವನಿಗೆ ಮಾಂಸಾಹಾರಕ್ಕೆ ಪರ್ಯಾಯವಾಗಿ ವಿವಿಧ ಧಾನ್ಯಗಳು- ಕಂಡುಬಂದವು.

ತನಗೆ ತನ್ನ ಕೆಲಸಗಳಿಗೆ ಈ ದನಗಳು ಉಪಕಾರಿಯಾಗಿದ್ದನ್ನು ಕಂಡು ಇವುಗಳ ಕೊಲ್ಲುವುದನ್ನು ಕ್ರಮೇಣ ಕಡಿಮೆ ಮಾಡಿ ದನಗಳ ಸಂತತಿಯನ್ನ ಹೆಚ್ಚಿಸಿಕೊಳ್ಳಲು-ಪ್ರಯತ್ನಿಸಿರಬಹುದು.

ಇತಿಹಾಸವನ್ನು ನಾವು ನೋಡುತ್ತಾ ಬಂದಂತೆ ಸಮಾಜದಲ್ಲಿ ಮೈ-ಮುರಿದು, ಬೆವರು ಸುರಿಸಿ ದುಡಿಯಲಾಗದ ಜನ ಬ್ರಾಹ್ಮಣರಾಗಿ ತಾವಿದ್ದ ಪ್ರದೇಶದಲ್ಲಿ ದೇವರುಗಳನ್ನ ಭಯ ಭಕ್ತಿಯ ರೂಪದಲ್ಲಿ ಸೃಷ್ಟಿಸಿ ವಿವಿಧ ಪಂಗಡಗಳನ್ನಾಗಿ ಜನರನ್ನು ವಿಂಗಡಿಸಿದ್ದಾರೆ.

ಇತಿಹಾಸದಿಂದ ವರ್ತಮಾನಕ್ಕೆ ಬರೋಣ. ಇತ್ತೀಚಿಗೆ ಬಾಳೆಹೊನ್ನೂರಿನ ಸಮೀಪದ ಶಾಂತಿಪುರ ಗ್ರಾಮದ ದಲಿತ & ಮುಸ್ಲಿಂ ಸಮುದಾಯದ ಇಬ್ಬರನ್ನು ದನ ಕಡಿದು ತಿನ್ನುತ್ತಾರೆ ಎಂಬ ಕಾರಣಕ್ಕೆ ಹಾಡ ಹಗಲೆ ಅವರನ್ನ ಬೆತ್ತಲೆಗೊಳಿಸಿ ಬೀದಿ ಬೀದಿಗಳಲ್ಲಿ ಥಳಿಸುವುದು ಸಮಾಜದಲ್ಲಿ ಬಡವನಾಗಿ ಹುಟ್ಟಿದ ಕಾರಣ- ವಿಷವನ್ನು-ಕುಡಿಸಿ ಸಾಯಿಸಲು- ಹೊರಡುವುದು- ಈ ಎಲ್ಲವುಗಳನ್ನ ನೋಡುತ್ತಿದ್ದರೆ. ಇದೊಂದು ನಿರಂಕುಶ ಪ್ರಭುತ್ವ ಹಿಟ್ಲರ್‌ನ ಅನುಯಾಯಿಗಳ ತರಹದ ಸಮಾಜದ್ರೋಹ ಕೆಲಸಗಳನ್ನು ನೆನಪಿಗೆ ತರುತ್ತವೆ. ಈ ಪ್ರಭುತ್ವ, ಈ ಸಮಾಜ ಎಲ್ಲವೂ ನಮ್ಮನ್ನು ಅಣಕಿಸುತ್ತವೆ. ಸಮಾಜದಲ್ಲಿನ ವರ್ಗ ಬೇಧಗಳು, ಉತ್ಪಾದನೆಯ ಅಪಮಾನ ಹಂಚಿಕೆ. ಆಹಾರದ ಕೊರತೆ, ಇವು ಪರ್ಯಾಯ ಆಹಾರ ಕ್ರಮಕ್ಕೆ ಪ್ರೇರಣೆ ನೀಡುತ್ತವೆ.

ಸಂಘ-ಪರಿವಾರದ ಡಿ.ಎಚ್. ಶಂಕರ ಮೂರ್ತಿ, ಚಿದಾನಂದ ಮೂರ್ತಿ ಇವರಿಗೆಲ್ಲಾ ಬಡತನ ಹಸಿವು, ನೋವು, ಇವ್ಯಾವುದರ ಅರಿವು ಇಲ್ಲ. ಸಮಾಜದಲ್ಲಿ- ನಾಲ್ಕಾಣೆ ಪ್ರಯೋಜನವಿಲ್ಲದ ಏನೇನೊ- ಸಂಶೋಧನೆ ಮಣ್ಣಂಗಟ್ಟಿ-ಮಾಡುತ್ತಾರೆ. ಈ ಚಿದಾನಂದ ಮೂರ್ತಿಗೆ ಇತಿಹಾಸವನ್ನ ತಿರುಚುವುದನ್ನ ಬಿಟ್ಟು- ಯಾವುದಾದರೂ ಸಾಮಾಜಿಕ ಕಾಳಜಿಯುಳ್ಳ, ಬಡತನದ ಬಗ್ಗೆ, ಕೃಷಿ ಬಗ್ಗೆ, ವ್ಯವಸಾಯ ಮಾಡುವ ರೈತನ ಬಗ್ಗೆ, ರೈತರ ಆತ್ಮಹತ್ಯೆ ಬಗ್ಗೆ ಅಧ್ಯಯನ ಮಾಡಿ ಏನಾದರೂ ಸತ್ಯಾಂಶಗಳನ್ನ ಬರೆಯಲಿ. ಸಮಾಜಕ್ಕೆ ನಾಲ್ಕು ಜನರಿಗೆ ಅನುಕೂಲವಾಗುತ್ತದೆಂಬದು ನನ್ನ ಅನಿಸಿಕೆ

ಶಾಲೆಗಳಲ್ಲಿ ಮಧ್ಯಾಹ್ನದ ವೇಳೆ ಮಕ್ಕಳಿಗೆ ಬೂಸ್ಟ್-ಬೋರ್ನವೀಟಾ, ಹಾರ್ಲಿಕ್ಸ್-ಪದಗಳನ್ನೆ ಕೇಳದ ಬಡಜನರ ಮಕ್ಕಳಿಗೆ-ಹಾಲು, ಮೊಟ್ಟೆಯನ್ನ ಕೊಟ್ಟಿದ್ದರೆ. ಆ ಮಕ್ಕಳು ಕೂಡ ಪೌಷ್ಟಿಕತೆಯಿಂದ ಆರೋಗ್ಯವಾಗಿರುತ್ತಿದ್ದರು. ಇದೊಂದು ಸಣ್ಣ ಅವಕಾಶ. ಅದನ್ನೂ ಈ ಸಂಘ ಪರಿವಾರ ಹಾಳುಮಾಡಿದ್ದಾಯಿತು.

(ಮುಂದಿನ ಪುಟಕ್ಕೆ)

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಪತ್ರಗಳು

ಅರ್ಥಪೂರ್ಣ ಸಂಪಾದಕೀಯ

ಮಾನ್ಯರೆ,

ತಮ್ಮ ಸಂಪಾದಕೀಯ "ಅಂಬೇಡ್ಕರ್ ನಿರಂತರ ಅಂತರ್‌ಪ್ರವಾಹ" (ಸಂವಾದ ಏಪ್ರಿಲ್, ೨೦೦೮) ಓದಿ ಮನಸ್ಸಿಗೆ ಸಂತಸವಾಯಿತು. ತಾವು ಒಬ್ಬ ವೈಚಾರಿಕೆ ಹೋರಾಟಗಾರ. ಜನಪರ ತಳಸಮುದಾಯಗಳ ಮತ್ತು ದಲಿತ ಪರ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದೀರಿ. ನಿಮ್ಮ ಸಂಪಾದಕೀಯ ಲೇಖನದಲ್ಲಿ ಈ ಕೆಳಗಿನ ವಾಕ್ಯಗಳು ಅರ್ಥಪೂರ್ಣವಾಗಿ ಮೂಡಿ ಬಂದಿದೆ.

"ಸದ್ಯದ ಸಾಮಾಜಿಕ ಸಂದರ್ಭ ಎಂದರೆ ಅದು ಒಂದು ರೀತಿಯಲ್ಲಿ ತಳಸಮುದಾಯಗಳ ಸಂಕ್ರಮಣ ಕಾಲ. ಸಹಮಾನವ ಸಂಬಂಧಗಳ ಕನಿಷ್ಠ ಅಸ್ತಿತ್ವಕ್ಕಾಗಿಯಾದರೂ ಹೋರಾಡುವ ವರ್ತಿಸುವ ಅಥವಾ ಸಮಾನ ಆಶಯ-ಚಿಂತನೆಗಳನ್ನು ಸಂಘಟಿತವಾಗಿ ವ್ಯಕ್ತಪಡಿಸುವ ಪ್ರಯತ್ನಗಳನ್ನು ಮಾಡದೇ ಇರುವುದರಿಂದ ಅವುಗಳು ಬಿಡಿ ಬಿಡಿ ಹೋರಾಟಗಳಲ್ಲಿ ಇತರೆ ಸಮುದಾಯಗಳನ್ನು ಪೋಷಣೆ ಮಾಡುವ ಮಟ್ಟಕ್ಕೆ ಮಾತ್ರ ಬಂದು ನಿಂತಿವೆ ಅಂಬೇಡ್ಕರ್ ಅವರು ಅಸ್ಪೃಶ್ಯ ಜನ ಸಮುದಾಯದವರನ್ನು ಸಂಘಟಿಸಿದರೂ ಅವರ ಆಶಯಗಳಿದದ್ದು ಎಲ್ಲ ತಳ ಸಮುದಾಯಗಳತ್ತ. ಇಂಥ ಎಲ್ಲ ತಳ ಸಮುದಾಯಗಳ ನಡುವೆ ಸಮಾನ ಅಂಶಗಳ ಆಧಾರದ ಮೇಲೆ ಅವರೆಲ್ಲರನ್ನು ಸಂಘಟಿಸುವ ಮಹದಾಸೆ ಅವರಿಗಿತ್ತ."

ಕನ್ನಡ ಭಾಷೆಯ ಮೇಲೆ ಇರುವ ತಮ್ಮ ಪ್ರಭುತ್ವ ಮೆಚ್ಚುತ್ತೇನೆ.

ಡಾ॥ ಅಂಬಾರಾವ ಉಪಳಾಂವಕರ್, ಗುಲಬರ್ಗಾ

ಸಾಮಾಜಿಕ ಬದ್ಧತೆ ಮತ್ತು ಸಾಹಿತ್ಯ

ಸಂಪಾದಕರಾದ ಇಂದೂಧರ್ ಸಾರ್‌ಗೆ ನಮಸ್ಕಾರಗಳು.

ನಾನು ನಿಮ್ಮ ಪತ್ರಿಕೆಯನ್ನು ಗೆಳೆಯನೊಬ್ಬನ ಸ್ನೇಹದಿಂದ ಒಂದು ವರ್ಷದಿಂದ ಓದುತ್ತಿದ್ದೇನೆ. ನಿಮ್ಮ ಪತ್ರಿಕೆಯ ಎಲ್ಲ ಲೇಖನಗಳು ವೈಜ್ಞಾನಿಕವಾಗಿ, ವಸ್ತುನಿಷ್ಠವಾಗಿ ನಿರೂಪಿತವಾಗಿರುವುದು ತುಂಬಾ ಇಷ್ಟವಾಯಿತು. ಮುಖ್ಯವಾಗಿ ರೆಹಮತ್ ತರಿಕೆರೆಯವರ 'ಮಾತಿನ ಹಂಗು' ಲೇಖನ ಮಾಲೆ ಇಷ್ಟ ನನ್ನ ಕಡೆಯಿಂದ ಅವರಿಗೆ ವಂದನೆಗಳನ್ನು ತಿಳಿಸಿ.

ಸಾಮಾಜಿಕ ಬದ್ಧತೆ ಮತ್ತು ಸಾಹಿತ್ಯ ಇವು ಪೂರಕವಾದವು. ನಿಜವಾದ ಸಾಹಿತಿಗೆ ಸಾಮಾಜಿಕ ಬದ್ಧತೆ ಇರಬೇಕು. ಇಲ್ಲದಿದ್ದರೆ ಬೂಟಾಟಿಕೆಯ ರಾಜಕರಣಿಗಳ ಆಶ್ವಸನೆಯಾಗಿ ಉಳಿಯಬೇಕಾಗುತ್ತದೆ ಸಾಹಿತ್ಯ. ಅನಂತಮೂರ್ತಿಯವರ ಸಾಹಿತ್ಯ ಓದುಗರಲ್ಲಿ ಒಂದು ರೀತಿಯ ಗೊಂದಲ ಉಂಟು ಮಾಡುತ್ತದೆ. ಆ ಗೊಂದಲದಲ್ಲಿಯೂ ಸಾಮಾಜಿಕ ಬದ್ಧತೆಯನ್ನು ಉಳಿಸಿಕೊಳ್ಳುವ ಅನಂತಮೂರ್ತಿ ಬೈರಪ್ಪನವರಿಗಿಂತ ಭಿನ್ನರಾಗಿ ನಿಲ್ಲುತ್ತಾರೆ.

ನವೀನ ಅನುಗವಳ್ಳಿ
ಹಾಸನ

(ಹಿಂದಿನ ಪುಟದಿಂದ)

ಇನ್ನೂ ಈ ಪ್ರಾಣಿ-ದಯಾ ಸಂಘದವರು. ದಲಿತ ವ್ಯಕ್ತಿಯೊನ್ನೊ- ಅಥವಾ ಮುಸ್ಲಿಂ ವ್ಯಕ್ತಿಯನ್ನೊ ನಡು ಬೀದಿಗಳಲ್ಲಿ ಥಳಿಸಿದರೆ. ಬೆತ್ತಲೆಯಾಗಿ ಮೆರವಣಿಗೆ ಮಾಡಿದರೆ - ಕೇಳೋದಿಕ್ಕೆ ಬಾಯಿಯೆ ಇಲ್ಲ. ಇನ್ನು ಪ್ರಾಣಿಗಳ ಬಗ್ಗೆ ಏನು ದಯೆ ಬಂದು ಬಿಡುತ್ತೆ. ಇವರುಗಳಿಗೆ ಪ್ರಥಮವಾಗಿ ಒಂದು ಸಮಾಜದಲ್ಲಿ ಮನುಷ್ಯರನ್ನು ಮನುಷ್ಯರಂತೆ ನೋಡುವುದು ಮುಖ್ಯ ಅಂಥ ಅನ್ನಿಸುವುದೇ ಇಲ್ಲ.

ಬಸವಣ್ಣ ಹೇಳ್ಯಾರ ಧಯವೇ ಧರ್ಮದ ಮೂಲವಯ್ಯ. ಆದರೆ ಇಲ್ಲಿ ಒಬ್ಬರಿಗೊಂದು-ಒಬ್ಬರಿಗೊಂದು ನ್ಯಾಯ ನೀತಿಗಳು ಆಗಿಬಿಟ್ಟವೆ.

-ಹರಿಯುವ ನೀರಿಗೆ ದೊಣ್ಣೆ ನಾಯಕನ ಅಪ್ಪಣೇನಾ?

-ಮಾಂಸ ತಿನ್ನುವುದಕ್ಕೆ ನಾವು. ಸಂಘ ಪರಿವಾರದವರನ್ನು ಕೇಳಬೇಕಾ ಅಥವಾ ಅವರ ಅನುಮತಿಗಾಗಿ ಕಾದು- ಅವರು ಹೇಳಿದ ಮೇಲೆ ತಿನ್ನುವುದಾ. ಹೆಚ್ಚು ಕಡಿಮೆ- ಈ ಸಲದ ಚುನಾವಣೆಯಲ್ಲಿ -BJP ಅಧಿಕಾರಕ್ಕೆ ಬಂದರೆ ಸಂವಿಧಾನ ತಿದ್ದುಪಡಿ ಮಾಡಿ ಮಾಂಸಾಹಾರ ನಿಷೇಧ ಮಾಡಿದರೂ ಮಾಡಬಹುದು?

ಮುಂಜಾಗ್ರತೆಯಾಗಿ ಮೂಲಭೂತ ಹಕ್ಕುಗಳ ಜೊತೆ ಆಹಾರದ ಹಕ್ಕನ್ನು ಸೇರಿಸುವ ವ್ಯವಸ್ಥೆಯನ್ನ ಮಾಡಬೇಕು?

ಸಮಾಜವನ್ನು ಹೊಸ ರೀತಿಯಿಂದ ನೋಡುವ ಕಣ್ಣು ಮತ್ತು ಮನಸ್ಸು ಇವೆರಡೂ ಸಂಘ ಪರಿವಾರದ ಯಾವ ವ್ಯಕ್ತಿಗೂ ಇಲ್ಲ.

ಅವರಿಗೆ ಅಮೇರಿಕಾ ಕಾಣುತ್ತೆ. ಅಮೆರಿಕಾದ ಶ್ರೀಮಂತಿಕೆ ಕಾಣುತ್ತೆ- ಆದರೆ ಇಲ್ಲೆ ಜೊತೆಯಲ್ಲಿರುವ ಬಡವರು ದಲಿತರು ದುರ್ಬಲರು ಕಾಣಿಸುವುದಿಲ್ಲ- ಇವನ್ನೆಲ್ಲಾ ಅವರು ನೋಡಿಯೂ ಇಲ್ಲ ಹಸಿವೆಗೆ ನೋವಿಗೆ -ಬಡತನಕ್ಕೆ ಉತ್ತರವಿಲ್ಲ-ಕಾರಣವಿಲ್ಲ-ಕಾಳಜಿಯಿಲ್ಲ - ಸಂಘ ಪರಿವಾರದವರು ಅಧಿಕಾರ ಬರಲಿಕ್ಕೆ ಈ ಸೌಹಾರ್ದವಾಗಿ ಬಾಳುವಂತಹ ಕೋಮುಗಳ ನಡುವೆ-ಘರ್ಷಣೆ ಏರ್ಪಡಿಸಿ ಸಮಾಜವನ್ನು ವಿಭಜಿಸಿ ಆಳುವುದೆ ಆಗಿದೆ.

ಮಾಂಸ ಎನ್ನುವುದು ಯಾವುದೇ ಜಾತಿಯ ಸೂಚಕವಾಗಬೇಕಿಲ್ಲ. ಎಲ್ಲಾ ಜಾತಿಯ ಜನರು ಎಲ್ಲಾ ರೀತಿ ಮಾಂಸವನ್ನೂ ತಿನ್ನುತ್ತಿದ್ದಾರೆ. ಅದು ಅವರವರ ಸಂಸ್ಕೃತಿ-ಪರಂಪರೆಗೆ ಬಿಟ್ಟ ವಿಚಾರ. ಮೈ-ಮುರಿದು ಬೆವರು ಸುರಿಸಿ, ಬಿಸಿಲು ಮಳೆಯೆನ್ನದೆ ದುಡಿಯುವ ಜನತೆಗೆ, ಪೌಷ್ಟಿಕತೆ ಬೇಕು. ಅದಕ್ಕೆ ಕೆಲವರು ಮಾಂಸಾಹಾರಿಗಳಾಗುತ್ತಿದ್ದಾರೆ. ಒಂದು ಕಬ್ಬಿಣದ ಅಂಗಡಿಯಲ್ಲಿ ದೊಡ್ಡ ದೊಡ್ಡ ಕಬ್ಬಿಣದ ಕಂಬಗಳನ್ನ ಎತ್ತಿ ಹಾಕಲು ಶಕ್ತಿ ಬೇಕು. ಬರೀ ಅನ್ನ ತಿಂದರೆ ಸಾಲದ್ದು- ಏನಾದರೂ ಖಂಡ ತಿನ್ನಬೇಕು ಸಾರ್. ಅಂತಾರೆ ಅಲ್ಲಿ ಕೆಲಸ ಮಾಡುವ ಹುಡುಗರು. ಸದಾ ಗಂಟೆ ಅಲ್ಲಾಡಿಸಿ ಕೊಂಡು ಇರುವ ಈ ಬ್ರಾಹ್ಮಣನಿಗೆ ಏನು ಗೊತ್ತು ಅಲ್ಲಿನ ಕಷ್ಟ. ಅಲ್ವ.

ಯಾರಿಗೊ. ನಾಲ್ಕು ಜನಕ್ಕೆ ಅಥವಾ ಒಂದು ಸಂಘಕ್ಕೆ ಹೆದರಿ ನಮ್ಮ ಜೀವನ ಶೈಲಿಯನ್ನೆ ನಮ್ಮ ಆಹಾರದ ಕ್ರಮವನ್ನೆ ತ್ಯಜಿಸಬೇಕಿಲ್ಲ. ಎಲ್ಲವನ್ನು ದಿಟ್ಟತನದಿಂದ ಎದುರಿಸಿದರೆ ಮಾತ್ರ ಈ ಸಮಾಜದಲ್ಲಿ ಬಾಳಲು ಸಾಧ್ಯವಿದೆ.

ಲೇಖನ ಪ್ರಕಟಿಸಿದ 'ಸಂವಾದ'ಕ್ಕೆ ಅಭಿನಂದನೆಗಳು

ಸುರೇಶ್ ಎಮ್
ಸಮತಳ

ಮಾಂಸಾಹಾರದ ಆತಂಕ

ಪ್ರಿಯ ಸಂಪಾದಕರೇ,

ಶ್ರೀಯುತ ರಹಮತ್ ತರೀಕೆರೆಯವರು ಮಾಂಸಾಹಾರವನ್ನು ಸಮರ್ಥಿಸುವ ಉತ್ಸಾಹದಲ್ಲಿ (ಈಗ ಅದರ ಅಗತ್ಯವೇನಿತ್ತೋ ತಿಳಿಯದು!) ಪ್ರಾಣಿ ಬಲಿ ಸಂಸ್ಕೃತಿಯನ್ನೂ ಸಮರ್ಥಿಸಿರುವುದು ('ಮಾತಿನ ಹಂಗು': ಸಂವಾದ, ಏಪ್ರಿಲ್, ೨೦೦೮) ನನಗೆ ಆಶ್ಚರ್ಯ ತಂದಿದೆ. ತಮ್ಮ ಈ ವಾದಕ್ಕೆ ಪೂರಕವಾಗಿ ಅವರು ಬುದ್ಧ ಪ್ರಾಣಿ ಬಲಿಯನ್ನು ಬೇಸಾಯಕ್ಕೆ ದನಗಳ ಕೊರತೆಯುಂಟಾದುದಕ್ಕಾಗಿ ಬೇಡವೆಂದನೆಂದು ಹೇಳಿದ್ದಾರೆ. ಆದರೆ ನನಗೆ ತಿಳಿದಂತೆ (ಅಂದರೆ ನನ್ನ ಈವರೆಗಿನ ಬೌದ್ಧ ಸಾಹಿತ್ಯದ ಓದಿನ ಪ್ರಕಾರ) ಬುದ್ಧ ಪ್ರಾಣಿ ಬಲಿಯನ್ನು ಬೇಡವೆಂದದ್ದು, ತನ್ನ ಧರ್ಮದ ವೈಚಾರಿಕತೆಯ ನೆಲೆಯಲ್ಲಿ-ಅದೊಂದು ಮೌಢ್ಯ ಎಂದು-ಮತ್ತು ತನ್ನ ಧರ್ಮದ ಮೂಲ ಸೆಲೆಯಾದ 'ಕರುಣಾ'ದ ಭಾಗವಾಗಿ. ಅಂಬೇಡ್ಕರ್ ಕೂಡಾ ಬುದ್ಧ ಧರ್ಮ ಕುರಿತ ತಮ್ಮ ಪುಸ್ತಕದಲ್ಲಿ ಇದನ್ನು ಹೇಳಿದ್ದಾರೆ.

ಬುದ್ಧ ರಹಮತ್ ಅವರು ಹೇಳಿದಂತೆ ತನ್ನ ಶಿಷ್ಯರಿಗೆ ಮಾಂಸಾಹಾರವನ್ನೇನೂ ನಿಷೇಧಿಸಿರಲಿಲ್ಲ, ನಿಜ. ಆದರೆ ಇದನ್ನು ಬುದ್ಧ ಮಾಂಸಾಹಾರದ ಸಮರ್ಥಕ ಎಂದೇನೂ ಅರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ಆತ ತನ್ನ ಶಿಷ್ಯರಿಗೆ ಆಹಾರಕ್ಕಾಗಿ ಮಾಂಸ ಬೇಡದಂತೆ ಕೂಡಾ ಸೂಚಿಸಿದ್ದ. ಅಂದರೆ ಅವನು ಹೇಳಿದ್ದು, ಭಿಕ್ಷೆಯಲ್ಲಿ ಏನು ಬೀಳುತ್ತದೋ ಅದನ್ನು ತಿಂದು ಬದುಕಬೇಕೆಂದು. ಇದು ಬುದ್ಧನ ಮಧ್ಯಮ ಮಾರ್ಗಕ್ಕೆ ತಕ್ಕುನಾಗಿಯೇ ಇತ್ತು.

ವೈಚಾರಿಕ ಆಂದೋಲನಗಳಿಂದಾಗಿ ಈವರೆಗೆ ಸ್ವಲ್ಪವಾದರೂ ನಿಯಂತ್ರಣದಲ್ಲಿದ್ದ (ಖಾಸಗಿಯಾಗಿ ನಡೆಯುತ್ತಿದ್ದ) ಪ್ರಾಣಿ ಬಲಿ ಈಗ ಮುಕ್ತ ಮಾರುಕಟ್ಟೆ ನೀತಿ ಸೃಷ್ಟಿಸಿದ ಮಾನಸಿಕ ವಾತಾವರಣದ ಪರಿಣಾಮವೋ ಎಂಬಂತೆ, ಹಲವಾರು ಕಡೆ ಎಗ್ಗಿಲ್ಲದಂತೆ ಬಹಿರಂಗವಾಗಿ- ಕೆಲವೆಡೆ, ಇಡೀ ಊರಿನ ರಸ್ತೆಗಳೆಲ್ಲ ರಕ್ತ ಸಿಕ್ತವಾಗುವಷ್ಟರ ಮಟ್ಟಿಗೆ- ಸಾಮೂಹಿಕ ಸನ್ನಿ ರೂಪದಲ್ಲಿ ನಡೆಯುತ್ತಿದೆ. ಇತ್ತೀಚೆಗೆ ಟಿ.ವಿ.ಯೊಂದರಲ್ಲಿ ಕಂಡಂತೆ, ಜಾತ್ರೆಯೊಂದರಲ್ಲಿ -ಬಹುಶಃ ಮೈಲಾರಲಿಂಗನ ಜಾತ್ರೆ- ನೂರಾರು ಎಳೆಯ ಕುರಿ ಮರಿಗಳನ್ನು ತೇರಿಗೆ ಬಾಳೆಹಣ್ಣು-ದವನ ಎಸೆದಂತೆ ಎಸೆಯುತ್ತಿದ್ದ ದೃಶ್ಯ ಭಯಾನಕವಾಗಿತ್ತು. ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಯಲಯದ ಮಾಜಿ ಮುಖ್ಯ ನ್ಯಾಯಾಧೀಶರೊಬ್ಬರು ಭಕ್ತರಾಗಿ ಹಾಜರಿದ್ದದ್ದು, ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆ ಎಂಬುದನ್ನು ಸೂಚಿಸುವಂತಿತ್ತು!

ರಹಮತ್ ಅವರು ಬಲಿ ಮತ್ತು ಮಾಂಸಾಹಾರವನ್ನು ಒಟ್ಟಿಗೆ ಜೋಡಿಸಿ ವಿಶ್ಲೇಷಣೆ ಮಾಡುತ್ತಾ, ಇವನ್ನು ಹಿಂಸೆ, ಅಪವಿತ್ರ ಎನ್ನುವವರು ನಮ್ಮ ದೇಶದ ಸಂಸ್ಕೃತಿಗೆ ಬಾಹಿರರು ಎಂದು ಘೋಷಿಸುವಾಗ ಅವರ ಮನಸ್ಸಿನಲ್ಲಿ ಸಂಸ್ಕೃತಿ ಎಂದರೆ ಸಿದ್ಧ ವಸ್ತು ಎಂಬ ಅರ್ಥವಿದ್ದಂತಿದೆ. ಇದು ನನ್ನಲ್ಲಿ ಆತಂಕವನ್ನು ಹುಟ್ಟಿಸಿದೆ. ಅದಕ್ಕಾಗಿ ಈ ಪ್ರತಿಕ್ರಿಯೆ.

ಇನ್ನು ರಹಮತ್ ಅವರು ಈ ಹಿಂದಿನ ಅಂಕಣದಲ್ಲಿ ರೈಲ್ವೇ ಬಗ್ಗೆ ಬರೆಯುತ್ತಾ, ಲಾಲೂ ಪ್ರಸಾದ್ ಯಾದವರನ್ನು ಲೋಹಿಯಾ ಅವರ ನೇರ ಶಿಷ್ಯ ಎಂದು ಗುರುತಿಸಿದ್ದಾರೆ. ವಾಸ್ತವವಾಗಿ ಲೋಹಿಯಾ ನಿಧನರಾದಾಗ ಲಾಲೂ ಇನ್ನೂ ಶಾಲಾ ಬಾಲಕ. ಲಾಲೂ ಮೂಲತಃ ಎಪ್ಪತ್ತರ ದಶಕದ ಜೆ.ಪಿ ಚಳವಳಿಯಲ್ಲಿ ಆಗಿನ ಸಮಾಜವಾದಿ ಯುವಜನ ಗುಂಪಿನೊಂದಿಗೆ ಗುರುತಿಸಿಕೊಂಡು ಭಾಗವಹಿಸಿ, ಕಾಲಕ್ರಮೇಣ (ಎಂಭತ್ತರ ದಶಕದ ಕೊನೆಯಲ್ಲಿ) ಬೆಳಕಿಗೆ ಬಂದ ನಾಯಕ.

ನಿತೀಶ್ ಕುಮಾರ್, ರಾಮವಿಲಾಸ್ ಪಾಸ್ವಾನ್, ಶರದ್ ಯಾದವರೂ ಇದೇ ತಲೆಮಾರಿನವರು. ಮುಲಾಯಂ ಸಿಂಗ್ ಯಾದವ್ ಅವರು ಲೋಹಿಯಾ ಕಾಲದ ಸಮಾಜವಾದಿಯೇ ಆದರೂ, ಅವರನ್ನು ಲೋಹಿಯಾ ಶಿಷ್ಯ ಎನ್ನದೆ, ಅನುಯಾಯಿ ಎಂದರೆ ಸರಿಯಾದೀತು. ನನಗೆ ತಿಳಿದಂತೆ ಲೋಹಿಯಾ ಶಿಷ್ಯರೆಂದೆನ್ನಿಸಿಕೊಂಡಿದ್ದವರು ಈಗ ರಾಷ್ಟ್ರೀಯ ಮಟ್ಟದಲ್ಲಿ ಯಾರಾದರೂ ಇದ್ದರೆ ಅವರು ಜಾರ್ಜ್ ಫರ್ನಾಂಡೀಸ್, ರಬಿರಾಯ್ ಮತ್ತು ಜ್ಞಾನೇಶ್ವರ ಮಿಶ್ರ ಎಂದು ಕಾಣುತ್ತದೆ.

ಇದು ಕೇವಲ ಮಾಹಿತಿಗಾಗಿ.

ಡಿ.ಎಸ್.ನಾಗಭೂಷಣ
ಶಿವಮೊಗ್ಗ

ಭಯೋತ್ಪಾದನಾ ಮಿಮಾಂಸೆ

ಮಾನ್ಯರೆ,

೨೦೦೮ರ ಜನವರಿಯ 'ಸಂವಾದ'ವನ್ನು ಭಯೋತ್ಪಾದನಾ ಮಿಮಾಂಸೆ ಎನ್ನಬಹುದೇನೊ!

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚೆಗಿನವರೆಗೂ ಅರೆ ಅಲೆಮಾರಿಗಳಾಗಿದ್ದ ಆದಿವಾಸಿಗಳೆಂದು ಕರೆಯಲ್ಪಡುವ ಕೊರಗರು (ಈಗಲೂ ಕೆಲವೆಡೆ ನೆಲೆಯಿಲ್ಲದವರು) ಮೇಲ್ವರ್ಗದವರು ಉಟ್ಟು ಎಸೆದ ಹಳೆ ಬಟ್ಟೆಗಳನ್ನು ತೊಟ್ಟುಕೊಳ್ಳಲು ಭಯ ಪಡುತ್ತಿದ್ದರೆನ್ನುವುದು ನಂಬಲಾರದ ಸತ್ಯ! ಇಲ್ಲಿ ಮೇಲ್ವರ್ಗದವರು ಎಂದರೆ 'ನಾಗರಿಕರು' ಎಂದು ಅರ್ಥೈಸಿಕೊಳ್ಳ ಬಹುದೇನೊ!

ಸಂಪತ್ತು ಅಧಿಕಾರಿಗಳ ಯಜಮಾನಿಕೆಯನ್ನು ಹೊಂದಿರುವವರಿಗೆ ಬಂದೂಕನ್ನೇ ಕಳಕೊಂಡಿರುವವರ ಪ್ರತಿರೋಧದ ಭೀತಿಯಿದೆ. ಸ್ವರಕ್ಷಣೆಗಾಗಿ ಅಮಾಯಕರನ್ನು ಕತ್ತಲೆಯಲ್ಲಿಟ್ಟು, ಉದಾರೀಕರಣ ಖಾಸಗೀಕರಣ, ಜಾಗತೀಕರಣಗಳೆನ್ನುವ ಕರಣತ್ರಯಗಳ ತ್ರಿಶೂಲದಿಂದ ತಿವಿದು ಅವರ ದೈಹಿಕ ಮಾನಸಿಕ, ಸಾಂಸ್ಕೃತಿಕ ಚೈತನ್ಯಗಳನ್ನು ನಾಶಗೊಳಿಸುತ್ತಿರುವುದು ಭಯೋತ್ಪಾದನೆಯಲ್ಲವೆ?

ವಂದನೆಗೊಂದಿಗೆ

ಪಿ. ಗೋಕುಲ್‌ದಾಸ್
ಮಂಗಳೂರು

ಸಂಪಾದಕೀಯ



ಅಂತರಂಗ

ಸೋಲು ಗೆಲುವಿನ ಲೆಕ್ಕಾಚಾರದಲ್ಲಿ...

'ಈ ಸಾರಿ ಏನಾದರೂ ಮಾಡಿ ಬಿಜೆಪಿ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳಬೇಕು'

'ಕೋಮುವಾದಿ ಬಿಜೆಪಿಯನ್ನು ಸೋಲಿಸಿ, ಜಾತ್ಯತೀತ ಶಕ್ತಿಗಳನ್ನು ಗೆಲ್ಲಿಸಿ'.

ಈ ಮಾತುಗಳು ಕಳೆದ ಎರಡು ಮೂರು ತಿಂಗಳುಗಳಿಂದ ಎಲ್ಲಿ ಪ್ರಗತಿಪರ ವ್ಯಕ್ತಿಗಳು, ಶಕ್ತಿಗಳು ಸಂಘಟನೆಗಳು ಹಾಗೂ ಪಕ್ಷಗಳಿಂದ ಕೇಳಿಬರುತ್ತಿವೆ. ಸಭೆ, ಸಮಾರಂಭ, ಚರ್ಚಾಗೋಷ್ಠಿ ಎಲ್ಲಿ ಹೋದರೂ ಇವೇ ಮಾತುಗಳು, ಎಲ್ಲ ಸಂಘಟಕರು, ಚಿಂತಕರು, ಕಾರ್ಯಕರ್ತರು ಎಲ್ಲರೂ ವೀರಾವೇಶದಿಂದ ವಿಚಾರ ಮಂಡನೆ ಮಾಡುತ್ತಾರೆ. ಠರಾವು ಪಾಸಾಗುತ್ತವೆ.

ನನಗೆ ತಿಳಿದಂತೆ ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದಲೂ ಇಂಥವೇ ಮಾತುಗಳು ಕೇಳಿಬರುತ್ತಿವೆ. ಪ್ರಕ್ರಿಯೆಗಳು ನಡೆಯುತ್ತಿವೆ. ೭೦ರ ದಶಕದಲ್ಲಿ ಚಳವಳಿಗೆ ಧುಮುಕಿದ ನನಗೆ ಇಷ್ಟು ವರ್ಷಗಳ ನಮ್ಮ ಕೋಮುವಾದದ ವಿರುದ್ಧದ ಹೋರಾಟ ನೀಡಿರುವ ಫಲಿತಾಂಶ ಕುರಿತು ಆತಂಕ ವಾಗುತ್ತಿದೆ. ೭೦ರ ದಶಕದಲ್ಲಿ ಒಬ್ಬರೋ ಇಬ್ಬರೋ ಇದ್ದ ಕೋಮುವಾದಿ ಶಾಸಕರು ಈಗ ೭೦-೮೦ಕ್ಕೇರಿದ್ದಾರೆ. ಹತ್ತಾರು ಸಂಖ್ಯೆಯಲ್ಲಿರುತ್ತಿದ್ದ ಜಾತ್ಯತೀತ ಶಾಸಕರು ಒಂದೆರಡಕ್ಕೆ ಇಳಿದಿದ್ದಾರೆ.

ಮೊನ್ನೆ ಒಂದು ಸಭೆಯಲ್ಲಿ ಬಿಜೆಪಿಯನ್ನ ಸೋಲಿಸ ಬೇಕೆಂದು ವಾದ ಹೂಡುತ್ತಿದ್ದ ಸಂಘಟನೆಯೊಂದರ ಗೆಳೆಯರಿಗೆ ಪ್ರಶ್ನಿಸಿದೆ 'ಹಾಗಿದ್ದರೆ ಯಾರಿಗೆ ಮತ ನೀಡಬೇಕು?' ಅವರಿಂದ ಥಟ್ಟನೆ ಉತ್ತರ ಬಂತು 'ಜಾತ್ಯತೀತ ಪಕ್ಷಗಳ ಗೆಲ್ಲುವ ಅಭ್ಯರ್ಥಿ ಯನ್ನ ಆಯ್ಕೆ ಮಾಡಬೇಕು!' ಹೌದು, ಇದು ಕಳೆದ ಮೂವತ್ತು ವರ್ಷಗಳಿಂದಲೂ ನಾವು ಹೇಳುತ್ತಲೇ ಬಂದಿರುವ ಮಂತ್ರ. ಆದರೆ ಆಗುತ್ತಿರುವುದಾದರೂ ಏನು?

ಕಳೆದ ಬಾರಿ ಜಾತ್ಯಾತೀತ ಜನತಾ ದಳ ಮಾಡಿದ ದ್ರೋಹವೇನು ಕಡಿಮೆಯೆ? ಜನರೇ ದೂರವಿಟ್ಟಿದ್ದ ಬಿಜೆಪಿ ಜತೆ ಅಧಿಕಾರದ ಆಸೆಗಾಗಿ ಕೈ ಜೋಡಿಸಿ ಅವರಿಗೆ ಅಧಿಕಾರದ ರುಚಿ ತೋರಿಸಿದ್ದೇ ಅಲ್ಲದೆ, ನಾಡಿನ ಮೂಲೆಮೂಲೆಯಲ್ಲೂ ತನ್ನ ಬೇರನ್ನು ಭದ್ರಪಡಿಸಿಕೊಳ್ಳಲು ನೆರವಾದದ್ದು ಇದೇ ಜಾತ್ಯತೀತರು ತಾನೆ? ಈಗ ಮತ್ತೆ ಜಾತ್ಯತೀತತೆಯ ಮುಖವಾಡ ಹಾಕಿಕೊಂಡೇ ದೇವೇಗೌಡ-ಕುಮಾರಸ್ವಾಮಿ ಅವರು ಚುನಾವಣೆಗೆ ಇಳಿದಿದ್ದಾರೆ. ಗೆಲ್ಲುವ ಜಾತ್ಯತೀತ ವ್ಯಕ್ತಿ ಇದೇ ದೇವೇಗೌಡ-ಕುಮಾರ ಸ್ವಾಮಿಯ ಶಿಷ್ಯನಾದರೆ ಏನು ಮಾಡಬೇಕು?

ಇನ್ನೂ ಕಾಂಗ್ರೆಸ್ ಕಥೆ ನೋಡಿ. ಜಾತ್ಯತೀತತೆಯ ವಾರಸುದಾರರೆಂದು ಬೀಗುವ ಕಾಂಗ್ರೆಸ್ಸಿಗರು ಮಾಡಿದ್ದಾದರೂ ಏನು? ಅಂತರಂಗದಲ್ಲಿ ಕೋಮುವಾದಿಗಳಾಗಿರುವ ಕಾಂಗ್ರೆಸ್ಸಿಗರು ಬಹಿರಂಗದಲ್ಲಿ ಮಾತ್ರ ಉಗ್ರ ಜಾತ್ಯತೀತರು! ಬಾಬ್ರಿ ಮಸೀದಿ ಆವರಣದಲ್ಲಿ ಶ್ರೀರಾಮನ ಪೂಜೆಗೆ ಅವಕಾಶ ಮಾಡಿಕೊಟ್ಟಿದ್ದೇ ಅಂದಿನ ಪ್ರಧಾನಿ ರಾಜೀವ್ ಗಾಂಧಿ. ಯಾವ ಪೂಜೆಗೂ ಅವಕಾಶವಿಲ್ಲದ ಸ್ಥಳದಲ್ಲಿ ರಾಮ ಪೂಜೆಗೆ ಅವಕಾಶ ಮಾಡಿಕೊಡದಿದ್ದರೆ ಬಾಬ್ರಿ ಮಸೀದಿಯ ಧ್ವಂಸ ಕಾರ್ಯ ನಡೆಯುತ್ತಲೇ ಇರಲಿಲ್ಲ.

ಇನ್ನೂ ಬಾಬಾಬುಡನ್ ಗಿರಿಗೆ ಬನ್ನಿ. ಗಿರಿಯಲ್ಲಿ ಹಿಂದೂ ಪೂಜಾ ಪದ್ಧತಿಗೆ ನ್ಯಾಯಾಲಯವೇ ಅವಕಾಶ ನಿರಾಕರಿಸಿರುವಾಗ ಎಸ್.ಎಂ. ಕೃಷ್ಣ ಮಂತ್ರಿಮಂಡಲದಲ್ಲಿ ಕಾನೂನು ಸಚಿವರಾಗಿದ್ದ ಡಿ.ಬಿ. ಚಂದ್ರೇಗೌಡ ನೇರವಾಗಿ ಭಾಗವಹಿಸಿ ಹೋಮ ಹವನ ನಡೆಸಿ ಅಲ್ಲಿನ ಜಾತ್ಯತೀತ ಸಂಸ್ಕೃತಿಗೆ ಎಳ್ಳುನೀರು ಬಿಟ್ಟರು. ಅದನ್ನು ಪ್ರತಿಭಟಿಸಿದ ಸಾವಿರಾರು ಜನ ಜಾತ್ಯತೀತ ಸಂಘಟನೆಗಳ ಕಾರ್ಯಕರ್ತರನ್ನು ಬಂಧಿಸಿ ಶಾಂತಿಯುತ ಪ್ರತಿಭಟನೆಯ ಹಕ್ಕನ್ನೂ ನಿರಾಕರಿಸಿದರು.

ರಾಷ್ಟ್ರಮಟ್ಟದಲ್ಲಿ ಸಂಪೂರ್ಣ ತಿರಸ್ಕಾರಕ್ಕೆ ಗುರಿಯಾಗಿದ್ದ ಬಿಜೆಪಿಯನ್ನು ರಾಜಕೀಯ ಅಧಿಕಾರಕ್ಕಾಗಿ ಮುಖ್ಯವಾಹಿನಿಗೆ ತಂದವರೇ ಜಾತ್ಯತೀತರು! ೧೯೭೭ ರಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ನೆಲಕಚ್ಚಿದಾಗ ಜಯಪ್ರಕಾಶ ನಾರಾಯಣರೂ ಸೇರಿದಂತೆ ಮಧು ದಂಡವತೆ ಮುಂತಾದವರೇ ಬಿಜೆಪಿ ಜತೆ ಸೇರಿ (ಹಿಂದಿನ ಜನ ಸಂಘ) ಸರ್ಕಾರ ರಚಿಸುವ ಮೂಲಕ ಕೋಮುವಾದಿಗಳಿಗೆ ಮಣೆ ಹಾಕಿದರು. ಹಿಂಬಾಗಿಲಿಂದ ಬಂದ ಕೋಮುವಾದಿಗಳು ಜಾತ್ಯತೀತರನ್ನು ಮೂಲೆ ಗುಂಪು ಮಾಡಿ ತಮ್ಮದೇ ಅಧಿಪತ್ಯ ಸ್ಥಾಪಿಸಿದರು. ಕಟ್ಟಾ ಲೋಹಿಯಾ ವಾದಿ ಜಾರ್ಜ್ ಫರ್ನಾಂಡಿಸ್ ಥರದವರ ಅಧಃಪತನವನ್ನು ಕಂಡಾಗ ಜಾತ್ಯತೀತರ(?) ಬಗ್ಗೆಯೇ ಜಿಗುಪ್ಸೆ ಹುಟ್ಟುತ್ತದೆ.

ಈಗ ನನ್ನ ನಿಜವಾದ ಪ್ರಶ್ನೆ ಎಂದರೆ ನಮ್ಮಲ್ಲಿ ಜಾತ್ಯತೀತರು ಯಾರು ಎನ್ನುವುದು. ಇದು ಹತಾಶೆಯ ಪ್ರಶ್ನೆಯಲ್ಲ. ವ್ಯಾವಹಾರಿಕವಾಗಿ ಮಾತಾಡಿದರೆ ಇದಕ್ಕೆ ಉತ್ತರ ಸಿಗುತ್ತದೆ. ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸ ಬೇಕಾದರೆ ನಾನೂ ಸೇರಿದಂತೆ ನನ್ನ ಗೆಳೆಯರೆಲ್ಲ ಹೇಳುತ್ತಿರುವ ಜಾತ್ಯತೀತ ಪಕ್ಷದ ಗೆಲ್ಲುವ ಅಭ್ಯರ್ಥಿಗೆ ಮತ ನೀಡಬೇಕು. ಹಾಗೆಂದಾಕ್ಷಣ ಜಾತ್ಯತೀತ ಪಕ್ಷಗಳಿಗೆಲ್ಲ ಒಂದೇ ಅಜೆಂಡಾ ಏನೂ ಇಲ್ಲ. ಜಾತ್ಯತೀತ ಮೌಲ್ಯಗಳನ್ನು ಕಾಪಾಡುವ ಕನಿಷ್ಠ ಕಾರ್ಯ ಕ್ರಮಗಳೂ ಇಲ್ಲ. ಇದನ್ನು ಪ್ರತಿಪಾದಿಸುವ ಎಡ ಮತ್ತು ಪ್ರಜಾ ಸತ್ತಾತ್ಮಕ ರಾಜಕೀಯ ಪಕ್ಷಗಳೂ ಇಂದು ಒಂದು ವೇದಿಕೆಗೆ ಬಂದಿಲ್ಲ.

ಕರ್ನಾಟಕದಲ್ಲಿ ಇಂದು ಕಾಂಗ್ರೆಸ್ ಬಿಟ್ಟರೆ ರಾಜ್ಯಾಧಿಕಾರ ಹಿಡಿಯುವಂತ ಯಾವುದೇ ಜಾತ್ಯತೀತ ಪಕ್ಷ ಕಾಣಿಸುತ್ತಿಲ್ಲ. ಹಾಗಂತ ಕಾಂಗ್ರೆಸ್ ಅನ್ನೇ ಗೆಲ್ಲಿಸಿ ಅಂತ ಹೇಳಲು ಯಾವ ಸಂಘಟನೆಗಳೂ ಸಿದ್ದರಿಲ್ಲ. ಪ್ರತಿ ಸಂಘಟನೆಗೂ ಹೀಗೆ ಹೇಳಿದರೆ ತಮ್ಮ ಸಂಘಟನೆಗೆ ಮುಂದೆ ತೊಂದರೆ ಆಗುತ್ತದೆ ಎಂಬ ಅಳುಕು ಕಾಡಿಸುತ್ತಿದೆ. 'ಕಾಂಗ್ರೆಸ್‌ಗೇ ಎಲ್ಲರೂ ಓಟು ಹಾಕಿ ಗೆಲ್ಲಿಸಲಿ. ಆದರೆ ನಾವು ಮಾತ್ರ ಜಾತ್ಯತೀತರಿಗೆ ಮತ ಎಂದೇ ಹೇಳೋಣ' ಎಂದು ಎಲ್ಲ ಜಾತ್ಯತೀತ ಸಂಘಟನೆಗಳೂ ಹೇಳುತ್ತಿವೆ.

ಹಾಗಾದರೇ ಕೋಮುವಾದ ಮನೆಬಾಗಿಲ ಮುಂದೆ ಬಂದು ನಿಂತಿರುವ ಈ ಭೀಕರ ಕ್ಷಣದಲ್ಲಿ ನಮಗೆ ನಿರ್ದಿಷ್ಟ ಆಯ್ಕೆಯೇ ಇಲ್ಲವೆ? ದೊಡ್ಡ ಶತ್ರುವನ್ನು ನಾಶಪಡಿಸಲು ನಿರ್ದಿಷ್ಟ ಚಿಕ್ಕ ಶತ್ರುವಿನೊಂದಿಗೆ ಸಣ್ಣ ಹೊಂದಾಣಿಕೆ ಮಾಡಿಕೊಳ್ಳುವ 'ವಿವೇಕ' ನಮಗೇಕೆ ಬರುತ್ತಿಲ್ಲ? ನಮ್ಮೊಳಗೂ ಯಾವುದಾದರೂ ಗುಪ್ತ ಅಂಜೆಂಡಾ ಇರಬಹುದೇ? ನನಗೆ ನಿಜವಾಗಲೂ ಅರ್ಥ ವಾಗುತ್ತಿಲ್ಲ. ಹೀಗೆ ಮಾಡದಿದ್ದರೆ, ನಮ್ಮದೇ ಆದ ರಾಜಕೀಯ ಪಕ್ಷವೊಂದನ್ನು ಅಧಿಕಾರಕ್ಕೆ ತರುವ ಸಂಘಟಿತ ಯತ್ನದಲ್ಲಿ ಸಫಲರಾಗುವವರೆಗೆ ನಾವು ಮತ್ತೊಂದು ಅವಕಾಶವನ್ನು ಕಳೆದುಕೊಳ್ಳುತ್ತಿದ್ದೇವೆಂಬ ಆತಂಕ ಮಾತ್ರ ನನ್ನನ್ನು ಕಾಡಿಸುತ್ತಿದೆ.

○ ಇಂದೂಧರ ಹೊನ್ನಾಪುರ

'ನಾನು ಮುಸ್ಲಿಮನಲ್ಲ; ನನ್ನ ಸುದ್ದಿಗೆ ಬರಬೇಡಿ!'

ಶ್ರೀಶ ಉಡುಪ

'ಮುಂಬಯಿ ದಿನಾಂಕ' ದಲ್ಲಿ ಬಲ್ಲಾಳರು ಪ್ರೀತಿಯ ಮುಂಬಯಿಯ ಎರಡು ಚಿತ್ರಗಳನ್ನು ಕೊಡುತ್ತಾ ತಮ್ಮ ತಲ್ಲಣಗಳನ್ನು ಹಂಚಿಕೊಳ್ಳುತ್ತಾರೆ. ಮೊದಲನೆಯದು ಬಾಬ್ರಿ ಮಸೀದಿ ಧ್ವಂಸಗೊಂಡ ಮರುದಿನದ ಮುಂಬಯಿ; ನನ್ನ ಪ್ರೀತಿಯ ಮುಂಬಯಿಗೆ ಏನಾಗಿದೆ ಎಂಬ ನೋವು ನನ್ನನ್ನು ಕಾಡಿದ್ದು ಅಂದೇ. ನಮ್ಮ ಕಟ್ಟಡದ ಟೆರೇಸಿನಲ್ಲಿ ನಿಂತಾಗ ಅಲ್ಲಲ್ಲಿ ಉರಿಯುತ್ತಿದ್ದ ಬೆಂಕಿ ಕಾಣಿಸುವಂತಿತ್ತು. ನೂರಾರು ಮನೆಗಳು ಅಂಗಡಿಗಳು ಈ ಅರ್ಥಹೀನ ಜಾತೀಯ ಹತ್ಯಾಕಾಂಡದಲ್ಲಿ ಭಸ್ಮ... ನಡೆದ ಹಿಂಸೆ, ನಾನು ಪ್ರತ್ಯಕ್ಷವಾಗಿ ಕಂಡ ಬೆಂಕಿಯ. ಹಿಂಸೆಯ ಜ್ವಾಲೆ ನನ್ನ ಮನಸ್ಸನ್ನು ಹಿಂದೆಂದೂ ಕದಡಿಸದ ರೀತಿಯಲ್ಲಿ ಕದಡಿಸಿತ್ತು.

೨೦೦೭ರ ಡಿಸೆಂಬರ್‌ನಲ್ಲಿ ಉಡುಪಿಯಲ್ಲಿ ನಡೆದ ಸೌಹಾರ್ದ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಜಿಆರ್ ತಮ್ಮ ಮಾತುಗಳಲ್ಲಿ ವ್ಯಾಸರಾಯ ಬಲ್ಲಾಳರ ಬಗ್ಗೆ ಪ್ರಸ್ತಾಪಿಸಿದ್ದರು. ಅದರ ನಂತರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿಗೆ ನಡೆದ ಲಾಬಿಯಲ್ಲಿ ಈ ಹಿರಿಯ ಮನಸ್ಸು ಬಲಿಪಶುವಾದ ಬಗ್ಗೆ ವಿಷಾದ ಅವರ ಮಾತಿನಲ್ಲಿತ್ತು. ಈ ಲಾಬಿ ಶೇಷಗಿರಿರಾಯರ ಪರವಾಗಿ ನಡೆದ ಲಾಬಿಯಂತೆಯೇ ಬಲ್ಲಾಳರ ವಿರುದ್ಧ ನಡೆದ ಲಾಬಿ ಕೂಡ ಆಗಿತ್ತು. ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಕೂಡ ನಿರಾಕರಿಸಿದ ಬಲ್ಲಾಳರ ಮಾತುಗಳು ಸಾಹಿತ್ಯ ಜಾತ್ರೆಯ ಉನ್ಮತ್ತರ ಹುಚ್ಚೇರಿಸಿತ್ತು' ವಿವಿಧ ವ್ಯಾಖ್ಯಾನಗಳಿಗೆ ಕೂಡ ಕಾರಣವಾಗಿತ್ತು. ಮಾಧ್ಯಮಗಳು ಈ ಅಭಿಪ್ರಾಯ ಮೂಡಿಸುವಲ್ಲಿ ಮುಂಚೂಣಿಯಲ್ಲಿದ್ದವು. ಗಮನಿಸಬೇಕಾದ ಮೊದಲ ಅಂಶ ಇದು.

ಇದನ್ನು ವಿಸ್ತರಿಸುವುದರ ಮೊದಲು ಆಯೋಜಕರ ಲಕ್ಷಣವನ್ನೊಮ್ಮೆ ವಿವರಿಸಿಕೊಳ್ಳೋಣ; ಇವರು ನಿಗದಿತ ಅಭಿಪ್ರಾಯದ ಗುಂಪಿಗೆ ಸೇರಿದವರು. ನೆಲದ ಪ್ರಶ್ನೆ, ಭಾಷೆಯ ಪ್ರಶ್ನೆ ಮತ್ತು ಸಾಂಸ್ಕೃತಿಕ 'ದಾಖಲೆ'ಗಳ ಪ್ರಶ್ನೆಗಳನ್ನಾಧರಿಸಿ ಮೌಲ್ಯ ತೀರ್ಮಾನ ಮಾಡುವವರು ತಾನೆ? ಮುರ್ತವಾಗಿ ಹಿಂದೂ ಸ್ಥಾನ-ಸಂಸ್ಕೃತ/ಹಿಂದಿ-ಹಿಂದುತ್ವದ (ಹಿಂದಿ-ಹಿಂದುತ್ವಗಳ ಅಂತರ್ ಸಂಬಂಧದ ಬಗ್ಗೆ ಈಗಾಗಲೇ ಚರ್ಚೆ ನಡೆದಿದೆ) ಪ್ರತಿಪಾದಕರು ಇವರು. ಇವರ ಪ್ರತಿಪಾದನೆಯ ತಾರ್ಕಿಕ ನೆಲೆಯಲ್ಲೆ ಬಲ್ಲಾಳರು ಪ್ರತಿಕ್ರಿಯೆ ನೀಡಿ ಅಧ್ಯಕ್ಷರ ಆಯ್ಕೆಯನ್ನು ವಿವಾದಗೊಳಿಸಲು ಪ್ರಯತ್ನಿಸಬಹುದಿತ್ತು. ಮೊದಲನೆಯದು ನೆಲದ ಪ್ರಶ್ನೆ ಅಥವಾ ಪ್ರತಿಪಾದಿಸಲ್ಪಡುತ್ತಿರುವ 'ಜನ್ಮಭೂಮಿ'ಯ ಪ್ರಶ್ನೆ: ಬಲ್ಲಾಳರು ಉಡುಪಿಯಲ್ಲೇ ಹುಟ್ಟಿದವರು. ಮದರಾಸು ವಿಶ್ವವಿದ್ಯಾನಿಲಯದ ಮೆಟ್ರಿಕ್ ಪರೀಕ್ಷೆಯನ್ನು ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ಪಾಸು ಮಾಡಿದವರು. ಎರಡನೆಯದು ಭಾಷೆಯ ಪ್ರಶ್ನೆ: ಬಲ್ಲಾಳರ ಕನ್ನಡ ಪರಿಚಿರಿಕೆಗೆ ಸಹಸ್ರಾರು ಮುಂಬಯಿ ಕನ್ನಡಿಗರು ಸಾಕ್ಷಿ ಒದಗಿಸುತ್ತಾರೆ.



ಕನ್ನಡ ಪ್ರೀತಿಗೆ ಸಾಕ್ಷಿಯಾಗಿ ಕರ್ನಾಟಕ ಸಂಘ, ಮಾಹಿತಿ ಕೇಂದ್ರಗಳು ಇವೆ. ಅವರ ವಿಫುಲ ಸಾಹಿತ್ಯ ಕೃತಿ ಗಳಿವೆ. ಮೂರನೆಯದು ದಾಖಲೆಗಳ ಪ್ರಶ್ನೆ: 'ಬಂಡಾಯ'ಕ್ಕೆ ಸಿಕ್ಕ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿಯೂ ಸೇರಿ ಹಲವಾರು ಪ್ರಶಸ್ತಿಗಳು ಅವರಿಗೆ ದೊರೆತಿವೆ. ಕರ್ನಾಟಕ ಸಂಘದ ಬೆಳ್ಳಿಹಬ್ಬ ಚಿನ್ನದ ಹಬ್ಬಗಳನ್ನು ಸಂಘಟಿಸಿದ, ಅದಕ್ಕೊಂದು ಕಟ್ಟಡ ಒದಗಿಸಿದ, ಶಿವರಾಮ ಕಾರಂತರ ಮಹತ್ವಕಾಂಕ್ಷಿ ಯಕ್ಷಗಾನ ಬ್ಯಾಲೆಯ ಪ್ರಯೋಗಗಳನ್ನು ಸಂಘಟಿಸಿದ ಹಿಂದೆ ಬಲ್ಲಾಳರ ಶ್ರಮ ಇದೆ. ಎದುರಾಳಿಯ ಸಮೀಕರಣದ ನೆಲೆ ಯಲ್ಲೆ ಇವುಗಳನ್ನಿಟ್ಟು ವಿವಾದ ಬೆಳೆಸಬಹುದಿತ್ತು. ಆದರೆ ಸಂಕೋಚಸ್ವಭಾವದ ಅವರು ತಮ್ಮ ಉಪ ಸ್ಥಿತಿಯನ್ನೇ ನಿರಾಕರಿಸಿದರು. ಮಿಡಿಯೋಕರ್ ತಂತ್ರಗಾರಿಕೆಗೆ ಪಕ್ಕಾಗದಮಗುತನದ ಮನಸ್ಸಿನ ಸಹಜ ನಡವಳಿಕೆ ಇದು. ಜಾತ್ರೆಯ ಗೌಜಿನಲ್ಲಿ ಮೆಲುದನಿ ಕೇಳದೆ ಹೋಯಿತೆ? ಅಥವಾ ಉಡುಪಿಯ ಜಾಯಮಾನವೇ ಇದು?

ಪ್ರಾಯಾಶಃ ಬಲ್ಲಾಳರ ವಿಷಯದಲ್ಲಿ ಎರಡನೆಯದೇ ಸರಿಯಿರಬೇಕು. ಬಾಲ್ಯದಲ್ಲಿ ಕೂಡ ಬಲ್ಲಾಳರಿಗೆ ಈ ಸಾಂಪ್ರದಾಯಿಕ ಪರಿಸರವೇ ಅಸಹ್ಯ ಎನಿಸಿದ ಉಡುಪಿ ಅದು. ಬಾಲ್ಯದ ನೆನಪುಗಳು ನಿಮ್ಮ ಬರವಣಿಗೆಯಲ್ಲೇಕೆ ಕಾಣುವುದಿಲ್ಲ ಎಂಬ ರಾಘವೇಂದ್ರ ವಕೀಲರ ಪ್ರಶ್ನೆಗೆ ತಾನು ತನ್ನ ಬಾಲ್ಯದಲ್ಲಿ ಅನುಭವಿಸಿದ ಮಾನಸಿಕ ಹಿಂಸೆ, ಯಾವ ರೀತಿಯ ವೈಚಾರಿಕ ಅಭಿವ್ಯಕ್ತಿಯನ್ನು ಪೋಷಿಸದ ಪರಿಸರದಲ್ಲಿ ತಾನು ಹೊಂದಿಕೊಳ್ಳಲಾರದ ಕಷ್ಟದಿಂದಾದ ಹಿಂಸೆ ಇದಕ್ಕೆ ಕಾರಣ ಎಂದು ಉತ್ತಿರಿಸುತ್ತಾರೆ. ಈ ಬಗ್ಗೆ ಬರೆಯುತ್ತಾ 'ಸಂಪ್ರದಾಯದ ಶಿಸ್ತಿನ ಮನೆಯ ಪರಿಸರದಲ್ಲಿ ನಾನು ಸ್ವತಂತ್ರವಾಗಿ ಯಾವ ನಿರ್ಧಾರವನ್ನು ತಳೆಯಲು ಸಾಧ್ಯವಿರಲಿಲ್ಲ. ಸಂಘರ್ಷದ ಜಾಯಮಾನ ನನ್ನದಾಗಿರಲಿಲ್ಲ. ಸಂಪ್ರದಾಯದ ಉಲ್ಲಂಘನೆಗೆಂದು ಬಾಲ್ಯದಲ್ಲಿ ಅನುಭವಿಸಿದ್ದ ಏಟಿನ ಶಿಕ್ಷೆಯೂ ಮನಸ್ಸನ್ನು ಮುದುಡಿಸಿತ್ತು ಎನ್ನುತ್ತಾರೆ.

ಈ ವಿವಾದದ ಪ್ರಸ್ತಾಪವಾಗಿದ್ದು ಬಲ್ಲಾಳರ ಪರ ವಕೀಲ ಮಾಡಲೂ ಅಲ್ಲ; ಸತ್ತ ಹೊತ್ತಿನಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಮಾತು ಮುಗಿಸಲು ಕೂಡ ಅಲ್ಲ. ಹಾಗೆ ನೋಡಿದರೆ ಇದು ಬಲ್ಲಾಳ V/s ಎಲ್ಲೆಸ್ಸೆಸ್ ಪ್ರಶ್ನೆಯೇ ಅಲ್ಲ. ಬಲ್ಲಾಳರು ಶೋಷಿಗಿರಿರಾಯರನ್ನು ಬಹುಕಾಲದಿಂದ ಮೆಚ್ಚಿಕೊಂಡವರು. ಮುಖತಃ ಭೇಟಿ ನಂತರದ್ದಾದರೂ ಅವರ ಒಡನಾಟ 'ಕತೆಗಾರ' ಪತ್ರಿಕೆಯ 'ಕಥಾವಾಹಿನಿ'

ಅಂಕಣದಲ್ಲಿ ಬಲ್ಲಾಳರ 'ಮುಗಿದಯುದ್ಧ' ಎಂಬ ಕತೆಯನ್ನು ಕುರಿತು ಬರೆದ ದಿನಗಳಷ್ಟು ಹಳೆಯದು.

ಯಾಕೆ ಎಲ್ಲ ಚರ್ಚೆಗಳೂ ಸರಳೀಕೃತಗೊಳ್ಳುತ್ತವೆ? ಯಾಕೆ ಸೀಮಿತ ನೆಲೆಯಲ್ಲಿ ವೈಯಕ್ತಿಕ ಚೌಕಟ್ಟುಗಳೊಳಕ್ಕೆ ಇಳಿದು ಬಿಡುತ್ತವೆ? ಚರ್ಚೆ, ವಾಗ್ವಾದ, ಸಂವಾದಗಳೆಲ್ಲ ಸೀಮಿತ ಸಾಧ್ಯತೆಯ ಕಲಂ-ಬೈಟ್‌ಗಳೊಗೆ ಸಿಲುಕುವುದು ಇದಕ್ಕೆ ಕಾರಣವೆ? ಎಲ್ಲವನ್ನು ವಿವಾದದ ಮಟ್ಟಕ್ಕಿಳಿಸುವುದು ಸಮಾಜದ ಹಸಿವೆ? ಜಾತ್ರೆಯ ಗದ್ದಲಗಳ ನಡುವೆ ಸಾವಧಾನತೆಗೆ ಅವಕಾಶವಿಲ್ಲ' ಮೆಲುದನಿಗಳೂ ಕೇಳುವುದೂ ಇಲ್ಲ. Dissentನ ಸದ್ದಡಗಿಸುವ ಅಸೂಕ್ಷ್ಮ ದನಿಗಳೇ ಚರಿತ್ರೆ ಕಟ್ಟಿಕೊಡುತ್ತಿವೆ.

ಸಮೂಹ ಸನ್ನಿಗಳು ನಿರ್ಮಿಸಿಕೊಡುವ ಚರಿತ್ರೆ ಅವುಗಳಷ್ಟೇ ಅಪಾಯಕಾರಿ.

* * * *

ತಮ್ಮ ಅನುಭವ ಕಥನ 'ಮುಂಬಯಿ ದಿನಾಂಕ'ದಲ್ಲಿ ಬಲ್ಲಾಳರು ಪ್ರೀತಿಯ ಮುಂಬಯಿಯ ಎರಡು ಚಿತ್ರಗಳನ್ನು ಕೊಡುತ್ತಾ ತಮ್ಮ ತಲ್ಲಣಗಳನ್ನು ಹಂಚಿಕೊಳ್ಳುತ್ತಾರೆ. ಮೊದಲನೆಯದು ಬಾಬ್ರಿ ಮಸೀದಿ ಧ್ವಂಸಗೊಂಡ ಮರುದಿನದ ಮುಂಬಯಿ; ನನ್ನ ಪ್ರೀತಿಯ ಮುಂಬಯಿಗೆ ಏನಾಗಿದೆ ಎಂಬ ನೋವು ನನ್ನನ್ನು ಕಾಡಿದ್ದು ಅಂದೇ. ನಮ್ಮ ಕಟ್ಟಡದ ಟೆರೇಸಿನಲ್ಲಿ ನಿಂತಾಗ ಅಲ್ಲಲ್ಲಿ ಉರಿಯುತ್ತಿದ್ದ ಬೆಂಕಿ ಕಾಣಿಸುವಂತಿತ್ತು. ನೂರಾರು ಮನೆಗಳು ಅಂಗಡಿಗಳು ಈ ಅರ್ಥಹೀನ ಜಾತೀಯ ಹತ್ಯಾಕಾಂಡದಲ್ಲಿ ಭಸ್ಮ... ನಡೆದ ಹಿಂಸೆ, ನಾನು ಪ್ರತ್ಯಕ್ಷವಾಗಿ ಕಂಡ ಬೆಂಕಿಯ. ಹಿಂಸೆಯ ಜ್ವಾಲೆ ನನ್ನ ಮನಸ್ಸನ್ನು ಹಿಂದೆಂದೂ ಕದಡಿಸದ ರೀತಿಯಲ್ಲಿ ಕದಡಿಸಿತ್ತು. ಎಲ್ಲ ಕಡೆಗಳಿಂದ ಬರುತ್ತಿದ್ದ ವಾರದಿಗಳೂ ಮನುಷ್ಯ ಎಷ್ಟು ಕ್ರೂರಿಯಾಗಬಲ್ಲ ಎನ್ನುವುದನ್ನು ಸಾರಿ ಹೇಳುವಂತಿದ್ದವು... ನಮ್ಮ ನಾಡಿನಲ್ಲಿ ಜಾತಿ ಸಾಮರಸ್ಯ, ಭಾವೈಕ್ಯ, ರಾಷ್ಟ್ರಪ್ರೀತಿ, ಸ್ವಾತಂತ್ರ್ಯ ಒಂದು ಅರ್ಧಶತಮಾನ ಕಳೆದರೂ ಮರಿಚೀಕೆಯಾಗಿಯೇ ಉಳಿಯುವುದೇ? ಸ್ಥಿತಿಯನ್ನು ತಡೆಯುವ, ಸುಧಾರಿಸುವ ಬೇರೆ ಯಾವ ದಾರಿಯೂ ಇಲ್ಲವೇ?.

ಎರಡನೆಯದು ೧೯೯೩ರ ಸರಣಿ ಸ್ಫೋಟದ ನಂತರದ ಮುಂಬಯಿ ಬಾಂಬ್ ಸ್ಫೋಟದ ಎರಡು ಮೂರು ವಾರದ ನಂತರ 'ಏನೋ, ಕಾರಣ ಕಿಂಗ್ಸ್ ಸರ್ಕಲ್ ಬಳಿ ಬಾಂದ್ರಾದಿಂದ ಬಂದವನು ಸುತ್ತಾಡುತ್ತಿದ್ದಾಗ ಒಬ್ಬ ಪರಿಚಿತ, ನಾನು ಆತನಕವೂ ಇರಾಣೀ ಹೋಟೆಲೆಂದೇ ಬಗೆದಿದ್ದ ಹೋಟೆಲಿನ ಹೊರಗೋಡೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆದಿದ್ದ ಒಂದು ವಾಕ್ಯವನ್ನು ಗಮನಿಸಿದಾಗ ನನ್ನ ಮುಂಬಯಿಗೆ ಈ ಅವಸ್ಥೆಯೂ ಬಂತೇ ಎಂದುಕೊಳ್ಳುವಂತಾಗಿತ್ತು. ಅಲ್ಲಿ ಬರೆದಿದ್ದುದು. ಇದು ಮುಸ್ಲಿಮರ ಹೋಟೇಲಲ್ಲ 'ಇದು ಪಾರ್ಸಿ ಮಾಲೀಕತ್ವದ ಹೋಟೆಲು' ಎಂಬುದಾಗಿತ್ತು. ಮುಸ್ಲಿಮರ ಹೋಟೆಲೆಂದು ತಿಳಿದು ಧಾಳಿ ನಡೆಸಬೇಡಿ, ಬೆಂಕಿ ಕೊಡಬೇಡಿ ಎಂಬ ಬೇಡಿಕೆ ಈ ರೀತಿಯ ಬರವಣಿಗೆಯಲ್ಲಿ ವ್ಯಕ್ತವಾಗಿತ್ತು. ಸ್ವಾತಂತ್ರ್ಯ ಬಂದು ನಲವತ್ತಾರು ವರ್ಷಗಳಾದ ಮೇಲೂ 'ನಾನು ಮುಸ್ಲಿಮನಲ್ಲ, ನನ್ನ ಸುದ್ದಿಗೆ ಬರಬೇಡಿ' ಎಂದು ಹೇಳುವಂತಾದ ಸ್ವಾತಂತ್ರ್ಯ ಯಾರ ಸ್ವಾತಂತ್ರ್ಯ ಎಂದು ನಾನು ಯೋಚಿಸುತ್ತಲೇ ಇದ್ದೇನೆ. ಉಡುಪಿಯ ಬಲ್ಲಾಳರ ಮುಂಬಯಿ ಬಗೆಗಿನ ತಲ್ಲಣಗಳು ಇಂದು ಉಡುಪಿಯ ತಲ್ಲಣಗಳೂ ಕೂಡಾ. □

ನನ್ನ ಕವಿತೆ

ಹೂವಿನ ತೂಕದ
ಹಣ್ಣಿನ ಪಾಕದ
ಮಣ್ಣಿನ ವಾಸನೆಯ
ನನ್ನ ಕವಿತೆ
ರಾಮ ಬೆನ್ನಟ್ಟಿದ ಜಿಂಕೆ!

ಬಂಡಾಯದ ರೇಸಿನಲಿ
ಮುಗ್ಗರಿಸಿ ಬಿದ್ದ
ಬಡಕಲು ಕುದುರೆ
ನನ್ನ ಕವಿತೆ!

ಪರಿಣಾಮವಿಲ್ಲದವಳಲಿ
ಸಂಗಕ್ಕೆ ಪರಿತಪಿಸಿ
'ಬಂಧನ' ಪಾಪಾಸು ಕಳ್ಳಿ
ತಂತಿ ಭವದಾತು
ನನ್ನ ಕವಿತೆ!

ಬಾಗ್ದಾದಿನಲಿ, ಬಾಂಬೆಯಲಿ
ಬಾಂಬಿಗೆ ಸಿಕ್ಕ ಮಾಂಸ ಮುದ್ದೆ
ನನ್ನ ಕವಿತೆ!

ಗೋಧ್ರಾ ರೈಲಿನಲಿ
ಜೀವಂತ ಬೇಯಿಸಿದ
ಅಮಾಯಕ ಹೃದಯ
ನನ್ನ ಕವಿತೆ

ಪ್ಯಾಂಟಸಿ ಪಾರ್ಕಿನ
ಕಂಪ್ಯೂಟರಿನ ಅನಿಮೇಶನ್ನಿನ
ಅಚ್ಚರಿ;
ಹುಲಿ ಕರುಳು ಮಿಡಿದ ಗೋವಿನ ಹಾಡು
ನನ್ನ ಕವಿತೆ!

ಸತ್ತವರ ಹಟ್ಟಿಯಲಿ
ಹಚ್ಚಿಟ್ಟ ದೀಪ ನನ್ನ ಕವಿತೆ!



○ ಟಿ.ಎಸ್. ರಾಜೇಂದ್ರ ಪ್ರಸಾದ್

ಸೌಹಾರ್ದ ಸಂಸ್ಕೃತಿಯ ರಕ್ಷಣೆಗಾಗಿ

೧೯ನೇ ಶತಮಾನದ ಆರಂಭದಲ್ಲಿ ಮಹಾರಾಷ್ಟ್ರದಲ್ಲಿ ಜ್ಯೋತಿ ಬಾ ಪುಲೆ, ಶಾಹು ಮಹಾರಾಜ, ಅಗರ್‌ಕರ್ ನಂತರ ಅಂಬೇಡ್ಕರ್ ನೇತೃತ್ವದಲ್ಲಿ ವೈದಿಕ ಶಾಹಿಯ ಚಾತುರ್ವರ್ಣ ಪದ್ಧತಿ ವಿರುದ್ಧ ಜನಜಾಗೃತಿ ಮೂಡ ತೊಡಗಿತ್ತು. ಶೂದ್ರ ಸಮುದಾಯ ಪುರೋಹಿತಶಾಹಿ ವಿರುದ್ಧ ಸಿಡಿದೆದ್ದಿತ್ತು. ಈ ಶೂದ್ರ ಸಮುದಾಯವನ್ನು ದಾರಿ ತಪ್ಪಿಸಲು ಚಿತ್ಪಾವನ ಬ್ರಾಹ್ಮಣರ ಒಂದು ಗುಂಪು ಹಿಂದುತ್ವದ ಹುಸಿ ಸಿದ್ಧಾಂತ ಸೃಷ್ಟಿಸಿ ಜರ್ಮನಿಯ ಹಿಟ್ಲರ್ ಹಾಗೂ ಇಟಲಿಯ ಮುಸಲೋನಿಯವರಿಂದ ಎರವಲು ತಂದು ಜನಾಂಗ ದ್ವೇಷದ ವಿಷಬೀಜ ಬಿತ್ತಿತು. ಈ ಉದ್ದೇಶಕ್ಕಾಗಿಯೇ ಆಗ ಡಾ|| ಮುಂಜೆ ಎಂಬ ಪುರೋಹಿತಶಾಹಿ ನಾಯಕನೊಬ್ಬ ಇಟಲಿಗೆ ಹೋಗಿ ಮುಸಲೋನಿಯನ್ನು ಭೇಟಿ ಮಾಡಿ ಬಂದು ಫ್ಯಾಸಿಸ್ಟ್ ಪಾರ್ಟಿಯ ಕಾರ್ಯಕ್ರಮ ಅಂಗ ರಚನೆ ಅಭ್ಯಾಸ ಮಾಡಿಕೊಂಡು ಬಂದು ಇಲ್ಲಿ ಆರ್.ಎಸ್.ಎಸ್.ಗೆ ಅಡಿಪಾಯ ಹಾಕಿದ.

ಸನತ್‌ಕುಮಾರ್ ಬೆಳಗಲಿ

ಗುಜರಾತ್ ಹತ್ಯಾಕಾಂಡದ ಘಟನೆಗಳನ್ನು ನೆನೆದಾಗ ಮನಸ್ಸು ತಲ್ಲಣಿಸುತ್ತದೆ. ಮಂಗಳೂರು ಗಲಭೆಯ ಚಿತ್ರಗಳು ಕಣ್ಣ ಮುಂದೆ ಬಂದಾಗ ಎದೆ ನಡುಗುತ್ತದೆ. ನನ್ನ ಬಾಲ್ಯದ ದಿನಗಳ ಸೌಹಾರ್ದ ಬದುಕಿನ ಮಧುರ ಕ್ಷಣಗಳ ನೆನಪಾಗುತ್ತದೆ. ಎಂಥ ಭಾರತ ಏನಾಗಿ ಹೋಗುತ್ತಿದೆ ಎಂದು ನೋವು ಮಡುಗಟ್ಟುತ್ತದೆ.

ನನ್ನ ಹಳ್ಳಿಯಲ್ಲಿ ಮುಸಲ್ಮಾನರ ಮನೆಗಳಿರುವುದು ಕೇವಲ ಹನ್ನೆರಡು. ಆದರೆ ಮೊಹರಂ ಬಂತೆಂದರೆ ಸಾಕು ಇಡೀ ಊರಿಗೆ ಊರೇ ಹಬ್ಬದ ಆಚರಣೆಗೆ ಸಜ್ಜಾಗುತ್ತಿತ್ತು. ಅಲಾಯಿ ದೇವರ ಸ್ವಾಗತಕ್ಕೆ ಬೀದಿಗಳಲ್ಲಿ ಜನ ಎರಡೂ ಬದಿ ನಿಲ್ಲುತ್ತಿದ್ದರು. ಬಹಸಂಖ್ಯಾತ ಹಿಂದೂಗಳೇ ನೇತೃತ್ವ ವಹಿಸುತ್ತಿದ್ದರು.

ಗುರು ಗೋವಿಂದಭಟ್ಟರು ಶಿಶುನಾಳದ ಶರೀಫ್ ಸಾಹೇಬರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ್ದ ಕನ್ನಡ ನಾಡಿನಲ್ಲಿ ಸೌಹಾರ್ದತೆ ಹಾಸುಹೊಕ್ಕಾಗಿದೆ ಅಂತಲೇ ರಾಷ್ಟ್ರಕವಿ ಕುವೆಂಪು ಅವರು ಇದನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಕರೆದರು. ಹಿಂದೂ ಮುಸಲ್ಮಾನರು ಒಂದೇ ಬಳ್ಳಿಯ ಹೂಗಳು ಎಂದು ಕವಿಗಳು ವರ್ಣಿಸಿದರು.

ಇಲ್ಲಿ ಆಳಿದ ರಾಜರಾರೂ ಜನಾಂಗ ದ್ವೇಷಿಗಳಾಗಿರಲಿಲ್ಲ. ಜಾತಿ-ಧರ್ಮದ ಆಧಾರದಲ್ಲಿ ಪ್ರಜೆಗಳಲ್ಲಿ ಭೇದ ಮಾಡುತ್ತಿರಲಿಲ್ಲ. ತಮ್ಮ ಅರಸೊತ್ತಿಗೆ ರಕ್ಷಣೆಗೆ ಇಂಥ ಸೌಹಾರ್ದ ಬದುಕು ಅಗತ್ಯ ಎಂಬ ಅರಿವು ಅವರಿಗಿತ್ತು. ಆದರೆ ಇಂದು ದ್ವೇಷವನ್ನೆ ಬಿತ್ತಿ ದ್ವೇಷದ ಬೆಳೆ ತೆಗೆಯುವ ಜನರನ್ನು ಎಲ್ಲೆಡೆ ಕಾಣುತ್ತಿದ್ದೇವೆ.

ಬಿಜಾಪುರವನ್ನು ಶತಮಾನ ಕಾಲ ಆಳಿದ ಆದಿಲ್‌ಶಾಹಿಯ ಆ ಸ್ಥಾನದಲ್ಲಿ ಕಾಖಂಡಕಿಯ ಮಹಿಪತಿ ದಾಸರಂಥ ಕೀರ್ತನಕಾರರಿದ್ದರು. ಶ್ರೀರಂಗಪಟ್ಟಣದ ಟಿಪ್ಪು ಸುಲ್ತಾನ್‌ಗೆ ಮನುಷ್ಯರ ನಡುವೆ ಭೇದ ಗೊತ್ತಿರಲಿಲ್ಲ. ದಿವಾನ ಪೂರ್ಣಯ್ಯ ಅವರ ಪ್ರಭುತ್ವದ ಸೂತ್ರಧಾರನಾಗಿದ್ದ. ಶ್ರೀರಂಗ ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯ ಟಿಪ್ಪುವಿನ ನಿತ್ಯದ ದರ್ಶನದ ತಾಣವಾಗಿತ್ತು.

ಕಿತ್ತೂರಿನ ವೀರ ರಾಣಿ ಚೆನ್ನಮ್ಮನ ಸೇನೆಯಲ್ಲಿ ಆಕೆಗೆ ಅತ್ಯಂತ ನಂಬಿಕೆಯ ಮುಸ್ಲಿಂ ಸೇನಾಧಿಕಾರಿಯಾಗಿದ್ದ ಇಂಥ ಪರಂಪರೆ ಈ ನಾಡಿನದು.

ದೇಶದ ಉಳಿದ ರಾಜ್ಯಗಳ ಅಂದಿನ ಸಾಮಾಜಿಕ ಬದುಕು ಭಿನ್ನವಾಗಿರಲಿಲ್ಲ. ಸ್ವಾತಂತ್ರ್ಯ ಚಳವಳಿಯಲ್ಲಿ ಹಿಂದೂ-ಮುಸಲ್ಮಾನರು ಜೊತೆಗೂಡಿ ಹೋರಾಡಿದರು. ೧೮೫೭ರ ಬ್ರಿಟಿಷ್ ಆಡಳಿತ ವಿರುದ್ಧ ಮೊದಲ ಬಂಡಾಯದಲ್ಲಿ ಮೊಗಲ್ ಸಾಮ್ರಾಜ್ಯದ ಕೊನೆಯ ದೊರೆ ಬಹಾದ್ದೂರ್ ಶಾ ಜಾಫರ್ ನೇತೃತ್ವ ವಹಿಸಿ ಬಂಧನಕ್ಕೊಳಗಾಗಿ ಬರ್ಮಾದಲ್ಲಿ ಕೊನೆಯುಸಿರೆಳೆದರು.

ಈ ಭಾರತ ಎಂಬ ದೇಶ ಹಿಂದೂ ಮುಸಲ್ಮಾನ, ಕ್ರೈಸ್ತ ಹೀಗೆ ಎಲ್ಲ ಜನಸಮುದಾಯಗಳ ದುಡಿಯುವ ಜನತೆ ಸೇರಿ ಕಟ್ಟಿದ ರಾಷ್ಟ್ರ. ಇದು ಯಾವುದೇ ಒಂದು ಧರ್ಮದ ಸೊತ್ತಲ್ಲ. ಭಾರತವನ್ನಾಳಿದ ಮೊದಲ ತಲೆಮಾರಿನ ಮುಸಲ್ಮಾನರನ್ನು ಬಿಟ್ಟರೆ ಉಳಿದವರೆಲ್ಲ ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದು ಇಲ್ಲೆ ಮಡಿದವರು.

ಮೊಗಲರು ಬ್ರಿಟೀಷ್‌ರಂತೆ ಎಲ್ಲೊ ದೂರದಲ್ಲಿ ಕುಳಿತು ಈ ದೇಶವನ್ನಾಳಿದವರಲ್ಲ. ಇಲ್ಲಿನ ಸಂಪತ್ತನ್ನು ಹೊರಗೆ ಸಾಗಿಸಿದವರಲ್ಲ. ಇಲ್ಲಿ ರಜಪೂತರೊಂದಿಗೆ ವಿವಾಹ ಸಂಬಂಧ ಬೆಳೆಸಿದ ಅಕ್ಬರ್ ಬಾದಶಹಾನ ಉತ್ತರಾಧಿಕಾರಿಗಳ ದಮನಿಗಳಲ್ಲಿ ರಜಪೂತ ರಕ್ತವೂ ಹರಿಯುತ್ತಿದೆ.

ಬೀರಾರ್‌ನ ಇಮಾದಶಾಹಿ ಮತ್ತು ಅಹಮದ್ ನಗರದ ನಿಜಾಮಿಶಾಹಿ ಸುಲ್ತಾನರಲ್ಲಿ ಬ್ರಾಹ್ಮಣರ ರಕ್ತವಿತ್ತು. ಇವರ ಪೂರ್ವಜರು ಅಂದರೆ ಬೀರಾರ್‌ನ ರಾಜ್ಯದ ಸ್ಥಾಪಕನಾಗಿದ್ದ ಫಾತುಲ್ಲಾ ಇಮೂದ್-ಉಲ್ ಮುಲ್ಕ ಹಾಗೂ ಅಹಮದ್‌ನಗರದ ಪ್ರಥಮ ಸುಲ್ತಾನನ (ಅಹಮದ್ ನಿಜಾಮ್-ಉಲ್ ಮುಲ್ಕ್) ತಂದೆಯಾಗಿದ್ದ ಮಾಲಿಕ್ ಹಸನ್ ಎಂಬವರು ಇಸ್ಲಾಮಿ ಧರ್ಮವನ್ನು ಸ್ವೀಕರಿಸಿದ್ದ ಬ್ರಾಹ್ಮಣರಾಗಿದ್ದರು. ಇದು ಈ ದೇಶದಲ್ಲಿ ಹೊಕ್ಕಳ ಬಳ್ಳಿಯಂತೆ ಬೆಳೆದ ಹಿಂದೂ ಮುಸ್ಲಿಂ ಸಮುದಾಯಗಳ ಬದುಕು.

ಮುಸ್ಲಿಂ ಸುಲ್ತಾನರು ಬಾದಶಹರು ತಮ್ಮ ಹಿಂದೂ ಪ್ರಜೆಗಳನ್ನು ಎಂದು ನಿಶಸ್ತ್ರೀಕರಣಗೊಳಿಸಲಿಲ್ಲ. ಹಿಂದೂ ಕ್ಷಾತ್ರ ವರ್ಗಗಳನ್ನು ಮತ್ತು ಮುಸಲ್ಮಾನರನ್ನು ಶಸ್ತ್ರ ಹೀನರನ್ನಾಗಿ ಮಾಡಿ ಈರ್ವರನ್ನು ಕಾರಕೂನರ ಸ್ಥಾನಕ್ಕೆ ಇಳಿಸಿದವರು ಬ್ರಿಟೀಷರು.

ಮುಸ್ಲಿಂ ದೊರೆಗಳ ಆಳ್ವಿಕೆಯಲ್ಲಿ ಶಸ್ತ್ರಾಸ್ತ್ರಗಳನ್ನು ಧರಿಸುವ ಅಧಿಕಾರ ಮುಸ್ಲಿಮರಷ್ಟೆ ಹಿಂದೂಗಳಿಗೂ ಇತ್ತು. ಸ್ವಾತಂತ್ರ್ಯದ ಮುಖ್ಯ ಚಿಹ್ನೆಯಾದ ಇದರಲ್ಲಿ ಹಿಂದೂ ಮತ್ತು ಮುಸ್ಲಿಂ ಪ್ರಜೆಗಳ ನಡುವೆ ಭೇದಭಾವ ಇರಲಿಲ್ಲ.

ಆದರೆ ಚರಿತ್ರೆಯ ಗೋರಿಯನ್ನು ಅಗೆದು ವರ್ತಮಾನದಲ್ಲಿ ಹಿಂದೂರಾಷ್ಟ್ರ ಕಟ್ಟಲು ಹೊರಟಿರುವ ಸಂಘ ಪರಿವಾರಕ್ಕೆ ಈ ವಾಸ್ತವ ಸಂಗತಿಗಳನ್ನು ಒಪ್ಪಿಕೊಳ್ಳಲು ಮನಸ್ಸಿಲ್ಲ. ಇದನ್ನು ಒಪ್ಪಿಕೊಂಡಿದ್ದೇ ಆದರೆ ಅಸ್ತಿತ್ವವೇ ಇರುವುದಿಲ್ಲ.

ವಾಸ್ತವವಾಗಿ ೧೯೨೫ರಲ್ಲಿ ಆರ್.ಎಸ್.ಎಸ್. ಸ್ಥಾಪಿಸಿದ ಕೇಶವ ಬಲಿರಾಮ್ ಹೆಡ್ಗೆವಾರ್‌ಗೆ ಪ್ರೇರಣೆಯಾಗಿದ್ದು ಭಾರತೀಯ ಸಂಸ್ಕೃತಿಯಲ್ಲ. ಜರ್ಮನಿಯಲ್ಲಿ ಆರ್ಯ ಜನಾಂಗದ ಶ್ರೇಷ್ಠತೆಯ ಆಧಾರದಲ್ಲಿ ನಾಜಿ ಹಿಟ್ಲರ್ ಹಾಗೂ ಇಟಲಿಯಲ್ಲಿ ಮುಸಲೋನಿಯ ಫ್ಯಾಸಿಸ್ಟ್ ಪಾರ್ಟಿ ಆರ್.ಎಸ್.ಎಸ್. ಬ್ರಾಂಡ್ ಹಿಂದುತ್ವದ ಮೂಲ ಸೆಲೆಯಾಗಿದೆ.

ಆಗ ೧೯ನೇ ಶತಮಾನದ ಆರಂಭದಲ್ಲಿ ಮಹಾರಾಷ್ಟ್ರದಲ್ಲಿ ಜ್ಯೋತಿ ಬಾ ಪುಲೆ, ಶಾಹು ಮಹಾರಾಜ, ಅಗರ್‌ಕರ್ ನಂತರ ಅಂಬೇಡ್ಕರ್ ನೇತೃತ್ವದಲ್ಲಿ ವೈದಿಕ ಶಾಹಿಯ ಚಾತುರ್ವರ್ಣ ಪದ್ಧತಿ ವಿರುದ್ಧ ಜನಜಾಗೃತಿ ಮೂಡತೊಡಗಿತ್ತು. ಶೂದ್ರ ಸಮುದಾಯ ಪುರೋಹಿತ ಶಾಹಿ ವಿರುದ್ಧ ಸಿಡಿದೆದ್ದಿತ್ತು.

ಈ ಶೂದ್ರ ಸಮುದಾಯವನ್ನು ದಾರಿತಪ್ಪಿಸಲು ಚಿತ್ತಪಾವನ ಬ್ರಾಹ್ಮಣರ ಒಂದು ಗುಂಪು ಹಿಂದುತ್ವದ ಹುಸಿ ಸಿದ್ಧಾಂತ ಸೃಷ್ಟಿಸಿ ಜರ್ಮನಿಯ ಹಿಟ್ಲರ್ ಹಾಗೂ ಇಟಲಿಯ ಮುಸಲೋನಿಯವರಿಂದ ಎರವಲು ತಂದು ಜನಾಂಗ ದ್ವೇಷದ ವಿಷ ಬೀಜ ಬಿತ್ತಿತು.

ಈ ಉದ್ದೇಶಕ್ಕಾಗಿಯೇ ಆಗ ಡಾ॥ ಮುಂಜೆ ಎಂಬ ಪುರೋಹಿತಶಾಹಿ ನಾಯಕನೊಬ್ಬ ಇಟಲಿಗೆ ಹೋಗಿ ಮುಸಲೋನಿಯನ್ನು ಭೇಟಿ ಮಾಡಿ ಬಂದು ಫ್ಯಾಸಿಸ್ಟ್ ಪಾರ್ಟಿಯ ಕಾರ್ಯಕ್ರಮ ಅಂಗ ರಚನೆ ಅಭ್ಯಾಸ ಮಾಡಿಕೊಂಡು ಬಂದು ಇಲ್ಲಿ ಆರ್.ಎಸ್.ಎಸ್.ಗೆ ಅಡಿಪಾಯ ಹಾಕಿದ.

ಹಿಂದು-ಮುಸ್ಲಿಂ ಬಾಂಧವ್ಯವನ್ನು ಹದಗೆಡಿಸಲು ಆರ್.ಎಸ್.ಎಸ್, ಮುಸ್ಲಿಂ ದಾಳಿ, ದೇವಾಲಯ ನಾಶ, ಮತಾಂತರ, ಗೋವಿನ ಪ್ರಶ್ನೆಯಂಥ ವಿವಾದಗಳನ್ನು ಮುಂದೆ ಮಾಡುತ್ತ ಬಂತು.

ದೇವಾಲಯಗಳನ್ನು ದೋಚುವುದರಲ್ಲಿ ಹಿಂದಿನ ಕಾಲದ ಹಿಂದೂ ರಾಜರು ಮುಸ್ಲಿಂ ಸುಲ್ತಾನರಿಗಿಂತ ಭಿನ್ನವಾಗಿರಲಿಲ್ಲ. ಅವಶ್ಯವಿದ್ದಾಗ ದೇವಾಲಯಗಳ ಸಂಪತ್ತನ್ನು ರಾಜ ತನ್ನ ಕೈವಶ ಮಾಡಿಕೊಳ್ಳಬಹುದೆಂದು ದೇವಾಲಯಗಳ ಖಾತೆಯ ಮಂತ್ರಿಯು ಶತ್ರುಗಳ ಭಯದ ನೆಪದಲ್ಲಿ, ದೇವಾಲಯಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಧನವನ್ನು ಅಪಹರಿಸಿ ರಾಜನಿಗೆ ತಂದೊಪ್ಪಿಸಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ.

೧೧ನೇ ಶತಮಾನದಲ್ಲಿ ಕಾಶ್ಮೀರದ ದೊರೆಯಾಗಿದ್ದ ಹರ್ಷನೆಂಬ ಹಿಂದೂ ರಾಜ ತನ್ನ ರಾಜ್ಯದಲ್ಲಿದ್ದ ದೇವಾಲಯಗಳ ಸಂಪತ್ತನ್ನು ಹೀಗೆ ದೋಚಿದ್ದು ಮಾತ್ರವಲ್ಲದೆ ಅವುಗಳಿಂದ ಚಿನ್ನ ಬೆಳ್ಳಿಗಳ ದೇವತಾ ಮೂರ್ತಿಗಳೂ ಸಹ ಅಪಹರಿಸಿ ಕರಗಿಸಿದ್ದ ಎಂದು ಕಲ್ಹಣ ರಾಜತರಂಗಿಣಿ ತಿಳಿಸುತ್ತದೆ.

ಇನ್ನು ಗೋವಿನ ಪ್ರಶ್ನೆಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಸಂಘ ಪರಿವಾರ ಉಂಟು ಮಾಡಿದ ಅನಾಹುತ ನೆಮ್ಮದಿಯ ಬದುಕಿಗೆ ಹುಳಿ ಹಿಂಡಿದ ಕೃತ್ಯ ಅಲ್ಲಿನ ಮನಸ್ಸುಗಳನ್ನು ಒಡೆದು ಹಾಕಿದೆ.

ಗೋವುಗಳನ್ನು ಸಾಕಷ್ಟು ದುಡಿಸಿ ಮುದಿಯಾದಾಗ ಉಪಯೋಗವಿಲ್ಲವಾದಾಗ ಅವುಗಳನ್ನು ಕಟುಕರಿಗೆ ಮಾರಾಟ ಮಾಡುವುದು, ಭಾರತದ ಚರ್ಮೋದ್ಯೋಮದಲ್ಲಿ ಹಾಗೂ ವಿದೇಶಕ್ಕೆ ಗೋಮಾಂಸ ರಫ್ತು ಮಾಡುವುದರಲ್ಲಿ ವಿಶ್ವ ಹಿಂದೂ ಪರಿಷತ್ ಬೆಂಬಲಿಗರು ಅಧಿಕ ಸಂಖ್ಯೆಯಲ್ಲಿದ್ದಾರೆ.

ಹಿಂದುಗಳಿಗೆ ಈಗ ಗೋಮಾಂಸ ವರ್ಜ್ಯವಾಗಿರಬಹುದು. ಆದರೆ ಹಿಂದಿನ ಕಾಲದಲ್ಲಿ ಅಂದರೆ ಸುಮಾರು ಕ್ರಿಸ್ತ ಶಕೆಯ ಮೊದಲ ಒಂದೆರಡು ಶತಮಾನಗಳವರೆಗೆ ಅವರು ಧಾರಾಳವಾಗಿ ಅದನ್ನು ತಿನ್ನುತ್ತಿದ್ದರು. ಎಲ್ಲ ರೀತಿ ಗೋಮಾಂಸವನ್ನು ಅವರು ಭಕ್ಷಿಸುತ್ತಿದ್ದರು.

ಹೀಗೆ ಸಂಘ ಪರಿವಾರದ ಸುಳ್ಳು ಸೃಷ್ಟಿಗಳಿಗೆಲ್ಲಾ ಉತ್ತರ ಕೊಡುತ್ತ ಹೋದರೆ ಹೊಸ ಭಾರತವನ್ನು ನಿರ್ಮಾಣ ಮಾಡುವ ಕೆಲಸ ಬಿಟ್ಟು ನಾವು ಅದನ್ನೇ ಉದ್ಯೋಗವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಉತ್ತರ ಕೊಡುವ ಜೊತೆ ಸೌಹಾರ್ದ ಸಂಸ್ಕೃತಿ ಬಲಪಡಿಸುವ ಕಾರ್ಯವೂ ನಡೆಯಬೇಕಾಗಿದೆ.

ಕೋಮುವಾದವನ್ನು ವಿರೋಧಿಸುವ ಎಲ್ಲ ಪ್ರಗತಿಪರ ಜಾತ್ಯತೀತ ಶಕ್ತಿಗಳು ಸೌಹಾರ್ದತೆಯನ್ನು ಕಾಪಾಡುವ ಭಾರತವನ್ನು ಜಾತ್ಯತೀತ ದೇಶವನ್ನಾಗಿ ಉಳಿಸುವ ಸಮಾನ ಕಾಳಜಿಗಾಗಿ ಒಂದೇ ನೆಲೆಯಲ್ಲಿ ನಿಂತು ಹೋರಾಡಬೇಕಾಗಿದೆ.

ಚರಿತ್ರೆಯನ್ನು ತಿರುಚುವುದರಲ್ಲಿ ಸಂಘ ಪರಿವಾರ ಕುಖ್ಯಾತವಾಗಿದೆ. ಗಾಂಧಿಯನ್ನು ಕೊಂದು ಈಗ ಅವರ ಹೆಸರು ಹೇಳುವವರು ಸಮಾಜವಾದವರೂ ವಿರೋಧಿಸುತ್ತಲೆ, ಭಗತ್‌ಸಿಂಗ್ ಶತಾಬ್ದಿ ಆಚರಿಸುವ ಅದರ ಕಳ್ಳ ಜಾಯಮಾನವಾಗಿದೆ.

ಈ ದೇಶದ ಮಹಾಪುರುಷರಾದ ಗಾಂಧಿ, ಅಂಬೇಡ್ಕರ್, ಲೋಹಿಯಾ, ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್ ಹೀಗೆ ಎಲ್ಲರ ಹೆಸರನ್ನು ಆರ್.ಎಸ್.ಎಸ್. ದುರುಪಯೋಗಪಡಿಸಿಕೊಳ್ಳುತ್ತಿದೆ. ಅದಕ್ಕೆ ಅವಕಾಶ ಕೊಡಬಾರದು.

ಬುದ್ಧ-ಬಸವಣ್ಣ, ಶಿಶುನಾಳ ಶರೀಫ ಸಾಹೇಬ್, ಟಿಪ್ಪು ಸುಲ್ತಾನ್, ಗಾಂಧಿ, ಭಗತ್‌ಸಿಂಗ್ ಕನಸಿನ ಸಮಾನತೆ ಭಾರತದ ಮೂಲಕ ಕೋಮುವಾದಿಗಳ ಈ ಫ್ಯಾಸಿಸ್ಟ್ ಸವಾಲನ್ನು ನಾವು ಎದುರಿಸಬೇಕಾಗಿದೆ. □

೧೧ನೇ ಶತಮಾನದಲ್ಲಿ ಕಾಶ್ಮೀರದ ದೊರೆಯಾಗಿದ್ದ ಹರ್ಷನೆಂಬ ಹಿಂದೂ ರಾಜ ತನ್ನ ರಾಜ್ಯದಲ್ಲಿದ್ದ ದೇವಾಲಯಗಳ ಸಂಪತ್ತನ್ನು ಹೀಗೆ ದೋಚಿದ್ದು ಮಾತ್ರವಲ್ಲದೆ ಅವುಗಳಿಂದ ಚಿನ್ನ ಬೆಳ್ಳಿಗಳ ದೇವತಾ ಮೂರ್ತಿಗಳೂ ಸಹ ಅಪಹರಿಸಿ ಕರಗಿಸಿದ್ದ ಎಂದು ಕಲ್ಹಣ ರಾಜತರಂಗಿಣಿ ತಿಳಿಸುತ್ತದೆ. ಇನ್ನು ಗೋವಿನ ಪ್ರಶ್ನೆಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಸಂಘ ಪರಿವಾರ ಉಂಟು ಮಾಡಿದ ಅನಾಹುತ ನೆಮ್ಮದಿಯ ಬದುಕಿಗೆ ಹುಳಿ ಹಿಂಡಿದ ಕೃತ್ಯ ಅಲ್ಲಿನ ಮನಸ್ಸುಗಳನ್ನು ಒಡೆದು ಹಾಕಿದೆ.

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಮಹಾನ್ ಕ್ರಾಂತಿಕಾರಿ ಕ್ಯಾಸ್ಟ್ರೋ

"ನಾವೆಲ್ಲಿದ್ದೇವೆ ಎಂಬ ಸಂಗತಿ ಅವರಿಗೆ ಎಂದೂ ಗೊತ್ತಾಗುವುದಿಲ್ಲ. ಆದರೆ ಅವರೆಲ್ಲಿದ್ದಾರೆ ಎಂದು ನಮಗೆ ಸದಾ ತಿಳಿದಿರುತ್ತದೆ" ೫೦ ವರ್ಷಗಳ ಹಿಂದಿನ ಈ ಘೋಷಣೆ ಇಂದಿಗೂ ವಿಶ್ವದ ಹಲವೆಡೆ ಒಂದು ರೀತಿಯ ಕುತೂಹಲ, ಆಸಕ್ತಿ ಹುಟ್ಟಿಸುತ್ತದೆ. ಈ ಘೋಷಣೆಯನ್ನು ಮಾಡಿದ ವ್ಯಕ್ತಿ ಐದು ದಶಕಗಳ ಕಾಲ ಲ್ಯಾಟಿನ್ ಅಮೆರಿಕಾದ ಪುಟ್ಟ ರಾಷ್ಟ್ರ ಕ್ಯೂಬಾವನ್ನು ಆಳಿದ, ೨೦ನೆಯ ಶತಮಾನದ ಮಹಾನ್ ಕ್ರಾಂತಿಕಾರಿ, ಲ್ಯಾಟಿನ್ ಅಮೆರಿಕಾ ದೇಶಗಳ ಕಮ್ಯುನಿಸ್ಟ್ ಕ್ರಾಂತಿಯ ಹರಿಕಾರರಾದ ಅಪ್ರತಿಮ ಹೋರಾಟಗಾರ ಮತ್ತು ಜಗತ್ತು ಕಂಡ ಆದರ್ಶ ಮತ್ತು ಸಮರ್ಥ ಆಡಳಿತಗಾರ, ಫಿಡಲ್ ಕ್ಯಾಸ್ಟ್ರೋ. ಪ್ರಸ್ತುತ ಪೀಳಿಗೆಯ ಮಾರ್ಕ್ಸ್‌ವಾದಿಗಳಿಗೆ ತಾವು ಫಿಡಲ್ ಕ್ಯಾಸ್ಟ್ರೋರವರ ಜೀವಿತಾವಧಿಯಲ್ಲಿ ಬದುಕಿದ್ದೆವು ಎಂಬ ಅಂಶವೇ ಒಂದು ಹೆಮ್ಮೆಯ ವಿಷಯವಾಗುತ್ತದೆ.

ನಾ ದಿವಾಕರ.

"೫೦ ವರ್ಷಗಳ ಕಾಲ ಅಮೆರಿಕಾದ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಧೈರ್ಯವಾಗಿ ಎದುರಿಸಿ, ಎದುರಾಳಿಯನ್ನು ಹಿಮ್ಮೆಟ್ಟಿಸಿ ನಿಂತಿರುವ ಪುಟ್ಟ ದೇಶ. ಪಾಕಿಸ್ತಾನದ ಉತ್ತರ ಪ್ರಾಂತ್ಯದಲ್ಲಿ ಭಾರಿ ಭೂಕಂಪವಾಗಿ ಲಕ್ಷಾಂತರ ಜನರಿಗೆ ಹಾನಿಯಾದಾಗ ಈ ದೇಶದಿಂದ ಸಾವಿರಾರು ವೈದ್ಯರು ಅಲ್ಲಿಗೆ ಹೋಗಿ ಉಚಿತವಾಗಿ ನೊಂದವರ ಚಿಕಿತ್ಸೆ ಮಾಡುತ್ತಾರೆ. ವರ್ಣಭೇದ ನೀತಿಯನ್ನು ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕ ಸರ್ಕಾರ ಪುಟ್ಟ ರಾಷ್ಟ್ರವಾದ ಅಂಗೋಲಾವನ್ನು ಆಕ್ರಮಿಸಿದಾಗ ಅಲ್ಲಿನ ಜನತೆಯನ್ನು ರಕ್ಷಿಸಲು ಈ ದೇಶದಿಂದ ಸಾವಿರಾರು ಸೈನಿಕರು ಮುಂದಾಗುತ್ತಾರೆ. ಈ ದೇಶದ ಸಾವಿರಾರು ವೈದ್ಯರು ವಿಶ್ವದ ೧೮ ರಾಷ್ಟ್ರಗಳಲ್ಲಿ ಯಾವುದೇ ವೇತನ, ಆಸ್ತಿ ಪಡೆಯದೆ ಜನ ಸೇವೆ ಮಾಡುತ್ತಿದ್ದಾರೆ. ೯೦ರ ದಶಕದಲ್ಲಿ ಸೋವಿಯತ್ ಪತನದ ನಂತರ ಸಾಕಷ್ಟು ಆರ್ಥಿಕ ಸಂಕಷ್ಟಗಳನ್ನೆದುರಿಸಿ, ಹೆಣಗಾಡಿದರೂ, ಈ ದೇಶದಲ್ಲಿ ಪ್ರತಿಯೊಂದು ಮಗುವೂ ಶಾಲೆಗೆ ಹೋಗುತ್ತದೆ. ಪ್ರತಿಯೊಂದು ಕುಟುಂಬವೂ ಅಗತ್ಯವಾದಷ್ಟು ಆರೋಗ್ಯಕರವಾದ, ಪ್ರೋಟೀನ್ ಯುಕ್ತ ಆಹಾರ ಪಡೆಯುತ್ತದೆ. ಇಲ್ಲಿನ ಅಂಗವಿಕಲ ಮಕ್ಕಳಿಗೆ ವಿಶೇಷವಾದ ಪ್ರತ್ಯೇಕ ಶಾಲೆ, ಆಸ್ಪತ್ರೆ, ಗೃಹ ವ್ಯವಸ್ಥೆ ಇರುತ್ತದೆ. ಅಮೆರಿಕಾದ ನ್ಯೂ ಆರ್ಲಿಯನ್ಸ್‌ನಲ್ಲಿ ಬಿರುಗಾಳಿ ಎದ್ದು, ಪ್ರವಾಹ ಪೀಡಿತವಾದಾಗ, ತನ್ನ ಎದುರಾಳಿ ದೇಶವೆನ್ನುವುದನ್ನೂ ಲೆಕ್ಕಿಸದೆ ಈ ದೇಶದಿಂದ ಸಾವಿರಾರು ವೈದ್ಯರು ಅಲ್ಲಿಗೆ ಹೋಗಿ ಟನ್‌ಗಟ್ಟಲೆ ಔಷಧಿಯೊಂದಿಗೆ ಅಲ್ಲಿನ ಜನತೆಗೆ ಶುಷ್ರೂಷೆ ಮಾಡುವುದರಲ್ಲಿ ನಿರತರಾಗಿರುತ್ತಾರೆ. ಇತರ ದೇಶಗಳಲ್ಲಿ ಜನರ ಸಾಮೂಹಿಕ ಸಾವಿಗೆ ಕಾರಣವಾಗುವ ಅನೇಕ ರೋಗ ರುಜಿನಗಳು ಈ ದೇಶದಲ್ಲಿ ಸುಳಿಯುವುದೂ ಇಲ್ಲ. ಇಲ್ಲಿ ಶೇ ೧೦೦ರಷ್ಟು ಸಾಕ್ಷರತೆ ಇದೆ. ಅಪೌಷ್ಟಿಕತೆಯಿಂದ ಯಾರೂ ನರಳುವುದಿಲ್ಲ. ಎಳೆಯ ಮಕ್ಕಳ ಸಾವಿನ ಪ್ರಮಾಣ ಮುಂದುವರೆದ ದೇಶಗಳಿಗೆ ಸಮಾನವಾಗಿದೆ. ಪ್ರತಿ ೨೦ ಮಕ್ಕಳಿಗೆ ಒಬ್ಬ ಶಿಕ್ಷಕರಿದ್ದಾರೆ."

ಈ ಎಲ್ಲಾ ಅಂಶಗಳನ್ನು ನೋಡಿದಾಗ ನಾವು ಯಾವುದೋ ಭ್ರಮಾ ಲೋಕದಲ್ಲಿ ತೇಲುತ್ತಿದ್ದೇವೆ ಎನಿಸಿದರೆ ಅಚ್ಚರಿಯೇನಿಲ್ಲ. ಜಾಗತೀಕರಣ ಯುಗದಲ್ಲಿ ಅಮೆರಿಕಾದಂತಹ ಶ್ರೀಮಂತ ರಾಷ್ಟ್ರದಲ್ಲೂ ಶೇ ೧೭ರಷ್ಟು ಕಡುಬಡವರಿರುವ ಸಂದರ್ಭದಲ್ಲಿ, ಜನ ಕಲ್ಯಾಣ ಆರ್ಥಿಕ ವ್ಯವಸ್ಥೆಗೆ ಭವಿಷ್ಯವೇ ಇಲ್ಲ ಎಂಬ ಮಾರುಕಟ್ಟೆ ಆರ್ಥಿಕ ತಜ್ಞರ ಪ್ರತಿಪಾದನೆ ವಿಶ್ವಮಾನ್ಯವಾಗಿರುವ ಯುಗದಲ್ಲಿ, ಕಮ್ಯುನಿಸಂ ಅಥವಾ ಸಮಾಜವಾದ ಸತ್ತುಹೋಗಿದೆ ಎಂದು ಹುಯಿಲೆಬ್ಬಿಸುತ್ತಿರುವ ಸನ್ನಿವೇಶದಲ್ಲಿ, ಇಂತಹ ಒಂದು ಕಮ್ಯುನಿಸ್ಟ್ ರಾಷ್ಟ್ರ ತನ್ನ ಎಲ್ಲಾ ಸೈದ್ಧಾಂತಿಕ ವೈರಿಗಳನ್ನೂ ಎದುರಿಸಿ, ಸಾಮ್ರಾಜ್ಯಶಾಹಿಗಳ ಹುನ್ನಾರಗಳನ್ನು ಎದುರಿಸಿ, ಊರ್ಜಿತವಾಗಿದೆ. ಅದೇ ಲ್ಯಾಟಿನ್ ಅಮೆರಿಕಾದ, ಒಂದುವರೆ ಕೋಟಿ ಜನಸಂಖ್ಯೆಯ, ೧೧೦ ಚದರ ಕಿಲೋಮೀಟರ್ ವಿಸ್ತೀರ್ಣದ ಪುಟ್ಟ ರಾಷ್ಟ್ರ ಕ್ಯೂಬಾ. ಮೇಲೆ ಉಲ್ಲೇಖಿಸಿದ ಎಲ್ಲಾ ಸಾಧನೆಗಳ ಹರಿಕಾರರೆಂದರೆ ಇತ್ತೀಚೆಗಷ್ಟೆ ರಾಷ್ಟ್ರಾಧ್ಯಕ್ಷ ಪದವಿಯಿಂದ ಕೆಳಗಿಳಿದ ಫಿಡಲ್ ಕ್ಯಾಸ್ಟ್ರೋ ಮತ್ತು ಅವರ ನೇತೃತ್ವದಲ್ಲಿ, ಮಹಾನ್ ಕ್ರಾಂತಿಕಾರಿ ಚೆ ಗುವಾರರವರ ಮಾರ್ಗದರ್ಶನದಲ್ಲಿ ರೂಪುಗೊಂಡ ಕ್ಯೂಬಾದ ಕಮ್ಯುನಿಸ್ಟ್ ಪಕ್ಷ.

ಫಿಡಲ್ ಕ್ಯಾಸ್ಟ್ರೋ ನಡೆದು ಬಂದ ಹಾದಿ

ಕ್ಯೂಬಾದ ಗ್ರಾಮವೊಂದರಲ್ಲಿ ಶ್ರೀಮಂತ ರೈತ ಕುಟುಂಬದಲ್ಲಿ ಜನಿಸಿದ ಕ್ಯಾಸ್ಟ್ರೋ ತನ್ನ ಬಾಲ್ಯದ ದಿನಗಳಿಂದಲೇ ಪ್ರತಿಭಟನೆಯ ಮನೋಭಾವವನ್ನು ರೂಢಿಸಿಕೊಂಡವರು. ತನ್ನ ಕೌಟುಂಬಿಕ ಬೆಳವಣಿಗೆಯಲ್ಲಾಗಲೀ, ಹಿನ್ನೆಲೆಯಿಂದಾಗಲೀ ಕ್ಯಾಸ್ಟ್ರೋ ಯಾವುದೇ ರೀತಿಯ ಕ್ರಾಂತಿಕಾರಿ ಪರಂಪರೆಯನ್ನು ಕಂಡವರಾಗಿರಲಿಲ್ಲ. ತಂದೆಯ ಆಕಾಂಕ್ಷೆಯ ಮೇರೆಗೆ ಕಾನೂನು ಪದವಿ ಪಡೆದ ಕ್ಯಾಸ್ಟ್ರೋ ತನ್ನ ೧೯೫೨ರಲ್ಲಿ ಕ್ಯೂಬಾವನ್ನು ಆಳುತ್ತಿದ್ದ ಸರ್ವಾಧಿಕಾರಿ ಜನರಲ್ ಬಾಟಿಸ್ಟಾ ವಿರುದ್ಧ ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಅವರ ಜೀವನದಲ್ಲಿ ಮಹತ್ತರ ತಿರುವನ್ನು ನೀಡಿತ್ತು. ೫೦ರ ದಶಕದಲ್ಲಿ ಕ್ಯಾಸ್ಟ್ರೋ ಒಬ್ಬ ರಾಷ್ಟ್ರೀಯವಾದಿಯಾಗಿಯೇ ರೂಪುಗೊಂಡಿದ್ದರು. ಅಮೆರಿಕಾದ ಸಾಮ್ರಾಜ್ಯಶಾಹಿ ದಬ್ಬಾಳಿಕೆ ಮತ್ತು ಬಾಟಿಸ್ಟಾನ ಸರ್ವಾಧಿಕಾರವನ್ನು ಎದುರಿಸಿ ಹೋರಾಡುವುದೇ ಅವರ ಪ್ರಮುಖ ಧ್ಯೇಯವಾಗಿತ್ತು. ಈ ಹಂತದಲ್ಲಿ ಕ್ಯಾಸ್ಟ್ರೋ ಕಮ್ಯುನಿಸ್ಟ್ ವಿರೋಧಿಯಾಗಿದ್ದರೆಂದೂ ಹೇಳಲಾಗುತ್ತದೆ. ಕ್ಯೂಬಾದಲ್ಲಿದ್ದ ಬೂರ್ಷ್ವಾ ರಾಜಕೀಯ ಪಕ್ಷದ ಎಡಪಂಥೀಯರಲ್ಲಿ ತನ್ನನ್ನು ಗುರುತಿಸಿಕೊಂಡಿದ್ದ ಕ್ಯಾಸ್ಟ್ರೋ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಬದ್ಧರಾಗಿದ್ದು ಅವರ ಸೋದರ ರೌಲ್ ಕ್ಯಾಸ್ಟ್ರೋ



ರವರ ಪ್ರಯತ್ನದಿಂದ. ಈಗ ರೌಲ್ ಕ್ಯಾಸ್ಟ್ರೋ ಕ್ಯೂಬಾದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಲಿದ್ದಾರೆ. ತದನಂತರ ಲ್ಯಾಟಿನ್ ಅಮೆರಿಕಾದ ಅಪ್ರತಿಮ ಕ್ರಾಂತಿಕಾರಿ ಹೋರಾಟ ಗಾರನಾದ ಚೆ ಗುವಾರನ ಪರಿಚಯವಾದ ನಂತರ ಕ್ಯಾಸ್ಟ್ರೋ ಸಂಪೂರ್ಣವಾಗಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಸ್ವೀಕರಿಸಿದ್ದೇ ಅಲ್ಲದೆ ತಮ್ಮ ಹೋರಾಟದ ಮಾರ್ಗಗಳನ್ನೂ ಸಹ ಕಮ್ಯುನಿಸ್ಟ್ ಸಿದ್ಧಾತಂಗಳಿಗನುಸಾರವಾಗಿಯೇ ರೂಪಿಸತೊಡಗಿದ್ದರು.

೧೯೫೨ರಲ್ಲಿ ಜನರಲ್ ಬ್ಯಾಟಿಸ್ಟಾ ಅಧ್ಯಕ್ಷೀಯ ಚುನಾವಣೆಗಳನ್ನು ರದ್ದುಪಡಿಸಿದ್ದರ ವಿರುದ್ಧ ಹೋರಾಟದಲ್ಲಿ ಯಶಸ್ಸು ಕಾಣದ ಕ್ಯಾಸ್ಟ್ರೋ ೧೯೫೫ರಲ್ಲಿ ಕ್ಯೂಬಾದಿಂದ ತಪ್ಪಿಸಿಕೊಂಡು ನ್ಯೂಯಾರ್ಕ್ ಮತ್ತು ಮಿಯಾಮಿ ಪ್ರಾಂತ್ಯಗಳಲ್ಲಿ ಕಾಲಕಳೆಯಬೇಕಾಯಿತು. ಕ್ಯಾಸ್ಟ್ರೋರವರ ಜೀವನದಲ್ಲಿ ೧೯೫೬ ಒಂದು ನಿರ್ಣಾಯಕ ಪರ್ವವೆಂದು ಹೇಳಬಹುದು. "ವರ್ಷಾಂತ್ಯದೊಳಗೆ ನಾನೊಬ್ಬ ನಾಯಕನಾಗಿ ಗೆಲುವು ಸಾಧಿಸುತ್ತೇನೆ ಇಲ್ಲವಾದಲ್ಲಿ ಹುತಾತ್ಮನಾಗುತ್ತೇನೆ" ಎಂದು ಘೋಷಿಸಿದ ಕ್ಯಾಸ್ಟ್ರೋ ಈ ಹಂತದಲ್ಲಿಯೇ ಚೆ ಗುವಾರರವರ ಮಾರ್ಗದರ್ಶನದಲ್ಲಿ ರೈತಾಪಿ ಸಮುದಾಯವನ್ನು, ಕಾರ್ಮಿಕರನ್ನು, ಕೂಲಿಕಾರರನ್ನು ಸಂಘಟಿಸಲಾರಂಭಿಸಿದ್ದರು. ಏತನ್ಮಧ್ಯೆ ೧೯೫೩ರ ಜುಲೈ ೨೬ರಂದು ಕ್ಯಾಸ್ಟ್ರೋ ನಡೆಸಿದ್ದ ಕ್ರಾಂತಿಕಾರಿ ಆಕ್ರಮಣದಿಂದ ಕಂಗೆಟ್ಟಿದ್ದ ಕ್ಯೂಬಾ ಸರ್ಕಾರ ಆತನ ಎಲ್ಲಾ ಚಲನ ವಲನಗಳನ್ನೂ ಗಮನಿಸುತ್ತಿತ್ತು.

೧೯೫೩ರ ಜುಲೈ ೨೬ರಂದು ಯುವಕರ ಪಡೆಯನ್ನು ಸಂಘಟಿಸಿ ಕ್ಯಾಸ್ಟ್ರೋ ಸಾಂಟಿಯಾಗೋದ ಮೊಂಕಾಡಾ ದಂಡು ಪಾಳೆಯದ ಮೇಲೆ ಆಕ್ರಮಣ ಮಾಡಿದ್ದರು. ಈ ದಂಗೆಯಲ್ಲಿ ನೂರಕ್ಕೂ ಹೆಚ್ಚು ಯುವಕರು ಮತ್ತು ಸೈನಿಕರು ಸಾವನ್ನಪ್ಪಿದ್ದು, ಕ್ಯಾಸ್ಟ್ರೋರವರ ಪಡೆ ಸೋಲನುಭವಿಸಬೇಕಾಯಿತು. ಸಾಂಟಿಯಾಗೋದ ಆರ್ಚ್ ಬಿಷಪ್‌ರವರ ಮಧ್ಯಸ್ಥಿಕೆಯಿಂದ ಶರಣಾಗತಿ ಪತ್ರ ಬರೆದು ಕೊಟ್ಟ ಕ್ಯಾಸ್ಟ್ರೋರವರಿಗೆ ೧೫ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಆದರೆ ನವೆಂಬರ್‌ನಲ್ಲಿ ನಡೆಯಬೇಕಿದ್ದ ಅಧ್ಯಕ್ಷೀಯ ಚುನಾವಣೆಗಳ ಹಿನ್ನೆಲೆಯಲ್ಲಿ, ಕ್ಷಮೆ ನೀಡಿ ಬಿಡುಗಡೆ ಮಾಡಲಾಯಿತು. ಈ ಘಟನೆಯ ನಂತರವೇ ಕ್ಯಾಸ್ಟ್ರೋ ತನ್ನ ಸಂಗಾತಿಗಳೊಡನೆ ಮೆಕ್ಸಿಕೋ ನಗರಕ್ಕೆ ಹೋಗಿ ಅಲ್ಲಿ ರೈತಾಪಿ ಜನರನ್ನು, ಕಾರ್ಮಿಕರು, ಕೂಲಿ ಕಾರ್ಮಿಕರು ಮತ್ತು ಎಲ್ಲ ದುಡಿಯುವ ವರ್ಗಗಳನ್ನು ಸಂಘಟಿಸಲಾರಂಭಿಸಿದ್ದರು.

ಕ್ಯಾಸ್ಟ್ರೋ ಸಂಘಟಿಸಿದ್ದ ಈ ಯುವಪಡೆಯ ಮೂಲ ಉದ್ದೇಶ ಸರ್ವಾಧಿಕಾರಿ ಬಾಟಿಸ್ಟಾನ ಹಿಡಿತದಿಂದ ಕ್ಯೂಬಾದ ಜನತೆಗೆ ವಿಮೋಚನೆ ದೊರಕಿಸಿಕೊಡುವುದೇ ಆಗಿತ್ತು. ೧೯೫೬ರ ಡಿಸೆಂಬರ್ ೨ನೆಯ ತಾರೀಖು ಕ್ಯಾಸ್ಟ್ರೋರವರ ಯುವಪಡೆ ಕ್ಯೂಬಾದ ಮೇಲೆ ಆಕ್ರಮಣ ಮಾಡಲು ನಿರ್ಧರಿಸಿತು. ಈ ಹೋರಾಟಕ್ಕಾಗಿ ಯುವಕರಿಗೆ ಎರಡು ತಿಂಗಳುಗಳ ಕಾಲ ಶಸ್ತ್ರಾಭ್ಯಾಸ ನೀಡಲಾಗಿತ್ತು. ಆ ದಿನ ೮೨ ಯುವಕರು ೬೨ ಅಡಿ ಉದ್ದದ ಹಡಗಿನಲ್ಲಿ ಮೆಕ್ಸಿಕೋದ ಕಡಲ ತೀರ ಒಲರಾಡೋದಲ್ಲಿ ಬಂದಿಳಿದರು. ಅವರ ಉದ್ದೇಶ ನಿಕ್ವೇರೋ ಎಂಬ ಪ್ರದೇಶದಲ್ಲಿ ನೆಲೆಸಿ ಅಲ್ಲಿ ಯುವಕರನ್ನು ತಮ್ಮ ಪಡೆಗೆ ಸೇರಿಸಿಕೊಳ್ಳುವುದರ ಮೂಲಕ ಬಾಟಿಸ್ಟಾ ಸರ್ಕಾರದ ಮೇಲೆ ನೇರವಾಗಿ ದಾಳಿ ನಡೆಸುವುದಾಗಿತ್ತು. ಆದರೆ ವಿಷಯ ತಿಳಿದ ಬ್ಯಾಟಿಸ್ಟಾನ ಸೇನೆಯು ವೈಮಾನಿಕ ದಾಳಿಯ

ಕ್ಯಾಸ್ಟ್ರೋ ಸತ್ತಿದ್ದಾರೆಂದೇ ನಂಬಿ ಅದನ್ನೇ ಮಾಧ್ಯಮಗಳಲ್ಲೂ ಪ್ರಚಾರ ಮಾಡುತ್ತಿದ್ದ ಕ್ಯೂಬಾ ಮತ್ತು ಅಮೆರಿಕಾ ಸರ್ಕಾರಗಳ ಪಿತೂರಿ ಕ್ಯಾಸ್ಟ್ರೋರವರ ಸಂಘಟನಾಕ್ರಿಯೆಗೆ ಪೂರಕವಾಗಿಯೂ ಇತ್ತು

ಮೂಲಕ ದಂಗೆಯನ್ನು ಹತ್ತಿಕ್ಕುವಲ್ಲಿ ಸಫಲವಾಗಿತ್ತು. ಕೇವಲ ೧೨ ಯುವಕರು ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಾಗಿತ್ತು. ಇದೇ ಹಂತದಲ್ಲಿ ಕ್ಯಾಸ್ಟ್ರೋ ನಿಧನರಾಗಿದ್ದಾರೆ ಎಂಬ ಸುದ್ದಿಯನ್ನೂ ಎಲ್ಲೆಡೆ ಹರಡಲಾಗಿತ್ತು.

ಆದರೆ ಕ್ಯಾಸ್ಟ್ರೋ ಮಡಿದಿರಲಿಲ್ಲ. ಸಿಯೆರಾ ಮೇಸ್ತ್ರಾ ಬೆಟ್ಟಗುಡ್ಡಗಳನ್ನು ತನ್ನ ಅಡಗುತಾಣವನ್ನಾಗಿ ಮಾಡಿಕೊಂಡಿದ್ದ ಕ್ಯಾಸ್ಟ್ರೋ ಅಲ್ಲಿಂದಲೇ ಕ್ರಾಂತಿಕಾರಿ ಯುವ ಪಡೆಯನ್ನು ಕಟ್ಟುವ ಕಾರ್ಯ ನಿರ್ವಹಿಸುತ್ತಿದ್ದರು. ಸ್ನೇಹಿತ-ಸಂಗಾತಿ ಚೆ ಗುವಾರ ಜೊತೆಗೂಡಿ ಸಿಯೇರ ಬೆಟ್ಟ ಗುಡ್ಡಗಳ ನಡುವೆ ತಮ್ಮ ಸಂಘಟನೆಯ ಯುವ ಕ್ರಾಂತಿಕಾರಿ ಸೇನೆಯನ್ನು ಸಿದ್ಧಗೊಳಿಸುತ್ತಿದ್ದ ಕ್ಯಾಸ್ಟ್ರೋರವರಿಗೆ ಅಪಾರ ಜನಬೆಂಬಲವಿದ್ದುದು ಆಗಲೇ ವ್ಯಕ್ತವಾಗತೊಡಗಿತ್ತು. ಕ್ಯಾಸ್ಟ್ರೋ ಸತ್ತಿದ್ದಾರೆಂದೇ ನಂಬಿ ಅದನ್ನೇ ಮಾಧ್ಯಮಗಳಲ್ಲೂ ಪ್ರಚಾರ ಮಾಡುತ್ತಿದ್ದ ಕ್ಯೂಬಾ ಮತ್ತು ಅಮೆರಿಕಾ ಸರ್ಕಾರಗಳ ಪಿತೂರಿ ಕ್ಯಾಸ್ಟ್ರೋರವರ ಸಂಘಟನಾ ಕ್ರಿಯೆಗೆ ಪೂರಕವಾಗಿಯೂ ಇತ್ತು. ಕ್ಯೂಬಾದ ಲಕ್ಷಾಂತರ ಜನತೆ ಕ್ಯಾಸ್ಟ್ರೋ ಮತ್ತವರ ಸಂಗಾತಿಗಳ ಹೋರಾಟಕ್ಕೆ ತಾತ್ವಿಕವಾಗಿ ಬೆಂಬಲ ನೀಡಲು ಸಿದ್ಧರಾಗಿದ್ದರು ಉನ್ನತ ವರ್ಗದ ಬುದ್ಧಿ ಜೀವಿಗಳು, ಸಮಾಜದ ಗಣ್ಯ ವ್ಯಕ್ತಿಗಳೂ ಸಹ ಈ ಹೋರಾಟವನ್ನು ಬೆಂಬಲಿಸುವುದು ಮಾತ್ರವಲ್ಲದೆ ಇಡೀ ಕ್ಯೂಬಾ ದೇಶದಲ್ಲಿ ಬಾಟಿಸ್ಟಾ ಸರ್ವಾಧಿಕಾರದ ವಿರುದ್ಧ ಜನಾಂದೋಲನ ರೂಪಿಸುವಲ್ಲಿ ಭಾಗಿಯಾಗಿದ್ದರು. ದೇಶದಲ್ಲಿ ಹೆಚ್ಚುತ್ತಿದ್ದ ಭ್ರಷ್ಟಾಚಾರ, ನಿರುದ್ಯೋಗ ಮತ್ತು ಬಡತನಗಳಿಂದ ರೋಸಿಹೋಗಿದ್ದ ಜನತೆ ಬ್ಯಾಟಿಸ್ಟಾನ ಸೇನಾಬಲಕ್ಕೆ ಹೆದರಿ ಯಾವುದೇ ಪ್ರತಿಭಟನೆಗಳನ್ನು ಕೈಗೊಳ್ಳುತ್ತಿರಲಿಲ್ಲ. ಆದರೆ ಸಿಯೇರಾ ಗುಡ್ಡಗಾಡುಗಳಲ್ಲಿ ತಮಗಾಗಿ ಹೋರಾಟವನ್ನು ರೂಪಿಸುತ್ತಿದ್ದ ಕ್ಯಾಸ್ಟ್ರೋರವರ ಯುವ ಕ್ರಾಂತಿಕಾರಿ ಪಡೆ ಸಾಮಾನ್ಯ ಜನರಲ್ಲಿ ಆಶಾಭಾವನೆ ಮೂಡಿಸಿತ್ತು.

ಕ್ಯಾಸ್ಟ್ರೋರವರ ಜುಲೈ ೨೬ರ ದಂಗೆ ಜನರಲ್ಲಿ ಹೋರಾಟದ ಸ್ಥೈರ್ಯವನ್ನು ಮೂಡಿಸುವಲ್ಲೂ ಯಶಸ್ವಿಯಾಗಿತ್ತು. ಬಾಟಿಸ್ಟಾ ಸರ್ವಾಧಿಕಾರವನ್ನು ಕಿತ್ತೊಗೆಯಲು ಕಾತರದಿಂದಿದ್ದ ಜನತೆಗೆ ಕ್ಯಾಸ್ಟ್ರೋ ಸ್ಥಾಪಿಸಿದ್ದ ಸಮಾಜವಾದಿ ಸಿದ್ಧಾಂತದ ಯುವ ಕ್ರಾಂತಿಕಾರಿ ಪಡೆ ಹೋರಾಟದ, ಕ್ರಾಂತಿಯ ಸಂಕೇತವಾಗಿ ಪರಿಣಮಿಸಿತ್ತು. ಈ ಹಂತದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ರಾಷ್ಟ್ರೀಯತಾವಾದ ನಿಲುವುಗಳನ್ನು ಪ್ರತಿಪಾದಿಸುತ್ತಿದ್ದ ಕ್ಯಾಸ್ಟ್ರೋ ಪಡೆ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಬದ್ಧರಾಗಿರಲಿಲ್ಲ ಎನ್ನುವುದು ಗಮನಾರ್ಹ ಅಂಶ.

೧೯೫೭ರ ಜೂನ್ ತಿಂಗಳಿನಲ್ಲಿಯೇ ಕ್ಯಾಸ್ಟ್ರೋ ಬಂಡಾಯಗಾರರ ಸೇನೆಯನ್ನು ಎಂಟು ವ್ಯೂಹಗಳನ್ನಾಗಿ ರಚಿಸಿ ಒಂದು ದಳಕ್ಕೆ ಚೆ ಗುವಾರರವರ ಅಧೀನಕ್ಕೆ ನೀಡಲಾಗಿತ್ತು. ಈ ಹಂತದಲ್ಲಿ ಕ್ಯೂಬಾದಲ್ಲಿ ಬಾಟಿಸ್ಟಾ ವಿರೋಧಿ ಬೂರ್ಷ್ವಾ ನಾಯಕರುಗಳು ಕ್ಯಾಸ್ಟ್ರೋರವರೊಡನೆ ಸಂಪರ್ಕಕ್ಕಾಗಿ ಹಾತೊರೆಯುತ್ತಿದ್ದರು: ಈ ನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಕ್ಯಾಸ್ಟ್ರೋ ಕ್ರಾಂತಿಕಾರಿ ಪೌರ ರಂಗವೊಂದನ್ನು ಸ್ಥಾಪಿಸಿ ಸಂಘಟನೆಯ ಮುಖ್ಯ ಪ್ರಣಾಳಿಕೆಯಲ್ಲಿ ಬಾಟಿಸ್ಟಾನ ರಾಜನಾಮೆ ತಾತ್ಕಾಲಿಕ ಅಧ್ಯಕ್ಷರ ನೇಮಕ, ಸಾರ್ವತ್ರಿಕ ಚುನಾವಣೆ ಮತ್ತು ಭೂ ಸುಧಾರಣೆಗಳು ಮುಖ್ಯ ಅಂಶಗಳಾಗಿದ್ದವು. ಈ ಬೆಳವಣಿಗೆಗಳಿಂದ ವಿಚಲಿತನಾದ ಬಾಟಿಸ್ಟಾ ತನ್ನ ಆಕ್ರಮಣಕಾರಿ ಪ್ರವೃತ್ತಿಯನ್ನು ತೀವ್ರಗೊಳಿಸಿ, ಎಲ್ಲಾ ರೀತಿಯ ಹೋರಾಟಗಳನ್ನು ಹತ್ತಿಕ್ಕಲಾರಂಭಿಸಿದ್ದ. ೧೯೫೭ರ ಸೆಪ್ಟೆಂಬರ್ ೫ರಂದು ನಡೆದ ನೌಕಾ ಅಧಿಕಾರಿಗಳ ದಂಗೆಯೂ ವಿಫಲವಾಯಿತು. ೬೦೦ಕ್ಕೂ ಹೆಚ್ಚು ಜನ ಮೃತಪಟ್ಟರು. ಈ ಬೆಳವಣಿಗೆಗಳಿಂದ ಹೆಚ್ಚು ಹೆಚ್ಚು ಜನರು ಸಿಯೇರಾ ಕಾಡುಗಳಿಗೆ ಬಂದು ಬಂಡಾಯಗಾರರನ್ನೂ ಸೇರಿಕೊಳ್ಳಲಾರಂಭಿಸಿದ್ದರು.

ಈ ಹಂತದಲ್ಲಿ ಗೆರಿಲ್ಲಾ ಸ್ವರೂಪದ ಹೋರಾಟವೇ ಸೂಕ್ತವಾದ ಮಾರ್ಗವೆಂದು ಕ್ಯಾಸ್ಟ್ರೋ ಮತ್ತು ಚೆ ನಿರ್ಧರಿಸಿದ್ದರು. ಕ್ಯೂಬಾದಲ್ಲಿನ ಬೂರ್ಷ್ವಾ ಪಕ್ಷಗಳು ತಾವು ಮಾಡಿಕೊಂಡ ಒಪ್ಪಂದವನ್ನು ಉಲ್ಲಂಘಿಸಿ ತಮ್ಮದೇ ಆದ ಅವಕಾಶವಾದಿ ಹಾದಿಯನ್ನು ಅನುಸರಿಸಲಾರಂಭಿಸಿದ್ದರಿಂದ, ಕ್ಯಾಸ್ಟ್ರೋ ಮತ್ತು ಚೆ ರವರ ಅಚಲವಾಯಿತು. ೧೯೫೭ರ ಅಂತ್ಯದ ವೇಳೆಗೆ ಸಿಯೆರಾ ಮೇಸ್ತ್ರಾವನ್ನು ಸಂಪೂರ್ಣ ಹಿಡಿತದಲ್ಲಿರಿಸಿಕೊಂಡಿದ್ದ ಕ್ರಾಂತಿಕಾರಿ ಬಂಡಾಯ ಪಡೆ ಕ್ರಮೇಣ ಕ್ಯೂಬಾದ ರಾಜಧಾನಿ ಹವಾನಾದತ್ತ ದಾಪುಗಾಲು ಹಾಕಲಾರಂಭಿಸಿತ್ತು. ಈ ಹಂತದಲ್ಲಿ ಕ್ಯಾಸ್ಟ್ರೋರವರ ಪರಿಶ್ರಮದಿಂದ ಕ್ರಾಂತಿಕಾರರು ಒಂದು ರೇಡಿಯೋ ವಾಹಕವನ್ನೂ ಪ್ರಾರಂಭಿಸಿ, ಅದು ಕ್ಯೂಬಾದಲ್ಲಿ ಮನೆಮಾತಾಯಿತು. ಏತನ್ಮಧ್ಯೆ ಅಮೆರಿಕಾ ಸರ್ಕಾರವು ಬಾಟಿಸ್ಟಾ ಸರ್ಕಾರಕ್ಕೆ ಎಲ್ಲಾ ರೀತಿಯ ಶಸ್ತ್ರಾಸ್ತ್ರ ಮತ್ತು ಸೇನಾ ಬೆಂಬಲವನ್ನು ನೀಡಲಾರಂಭಿಸಿತ್ತು.

೧೯೫೮ರ ಮಾರ್ಚ್ ತಿಂಗಳಿನಲ್ಲಿ ಬಂಡಾಯ ಸೇನೆ ಸಿಯೆರಾ ಬೆಟ್ಟಗಳಿಂದ ಕೆಳಗಿಳಿಯಲಾರಂಭಿಸಿತು. ಬಾಟಿಸ್ಟಾನ ಸೈನ್ಯವೇ ತುಂಬಿದ್ದ ಪ್ರದೇಶವನ್ನು ಹಾದು ಹೋದ ಬಂಡಾಯ ಸೇನೆ ಸಿಯೆರ್ರಾ ಡೆಲ್ ಕ್ರಿಸ್ಟಲ್ ಬೆಟ್ಟದ ಅಂಚಿಗೆ ಬಂದು ಅಲ್ಲಿಯೂ ಒಂದು ಹೋರಾಟ ವೇದಿಕೆಯನ್ನು ಸ್ಥಾಪಿಸಿದ್ದರು.. ಇನ್ನೊಂದು ಸೈನ್ಯವು ಓರಿಯಂಟ್ ಪ್ರಾಂತ್ಯದ ಪೂರ್ವಭಾಗದಲ್ಲಿ ಸ್ಥಾಪನೆಯಾಗಿತ್ತು. ಇದೇ ವೇಳೆ ಕ್ಯಾಸ್ಟ್ರೋ ಒಂದು ಪ್ರಣಾಳಿಕೆಯನ್ನು ಹೊರಡಿಸಿ ಸರ್ವಾಧಿಕಾರದ ವಿರುದ್ಧ ಸಾರ್ವತ್ರಿಕ ಚುನಾವಣೆಗೆ ಕರೆ ನೀಡಿದ್ದರು. ಬಾಟಿಸ್ಟಾ ಸರ್ಕಾರಕ್ಕೆ ತೆರಿಗೆ ನೀಡಬಾರದು, ಕ್ಯೂಬಾದ ಸೈನಿಕರು ಬಂಡಾಯ ಸೇನೆಗೆ ಸೇರಿಕೊಳ್ಳಬೇಕು, ದೇಶವ್ಯಾಪಿ ಮುಷ್ಕರದಲ್ಲಿ ಪಾಲ್ಗೊಳ್ಳಬೇಕೆಂದು ಆಗ್ರಹಿಸಲಾಗಿತ್ತು. ಆದರೆ ಏಪ್ರಿಲ್ ೯ರ ಮುಷ್ಕರ ವಿಫಲವಾಗಿತ್ತು. ಬಂಡಾಯ ಸೇನೆ ಹಿಮ್ಮೆಟ್ಟಬೇಕಾಯಿತು. ಆದರೂ ಬಾಟಿಸ್ಟಾ ಸೇನೆಗೆ ಸಿಯೆರಾ ಮೇಸ್ತ್ರಾವನ್ನು ಆಕ್ರಮಿಸಿಕೊಳ್ಳಲಾಗಲಿಲ್ಲ.

೧೯೫೮ರಲ್ಲಿ ಕ್ಯಾಸ್ಟ್ರೋ ರೂಪಿಸಿದ್ದ ಸೇನೆಯ ಬಲ ಇಮ್ಮಡಿಗೊಂಡಿತ್ತು. ಬಾಟಿಸ್ಟಾನ ಸೈನಿಕರಿಗೂ ಹೋರಾಡುವ ನೈತಿಕ ಸ್ಥೈರ್ಯ ಕುಂದಿಹೋಗಿತ್ತು. ಸಂಖ್ಯಾ ಬಲದಿಂದಷ್ಟೇ ಅಲ್ಲದೆ ಜನ ಬೆಂಬಲದ ದೃಷ್ಟಿಯಿಂದಲೂ ಬಂಡಾಯ ಸೇನೆ ಬಲಾಢ್ಯವಾಗಿ ರೂಪುಗೊಂಡಿತ್ತು. ಈ ಹಂತದಲ್ಲಿ ಸೈನ್ಯಾಧಿಕಾರಿಗಳನ್ನು ಹುರಿದುಂಬಿಸಲಾರಂಭಿಸಿದ ಚೆ ಗುವಾರ, ಕಮಾಂಡರ್ ಇನ್ ಚೀಫ್ ಕ್ಯಾಸ್ಟ್ರೋರವರ ಉದ್ದೇಶವನ್ನು ಈಡೇರಿಸಲು ಸಿದ್ಧರಾಗು

ವಂತೆ ಸೇನೆಗೆ ಕರೆನೀಡಲಾರಂಭಿಸಿದ್ದರು. ಅಕ್ಟೋಬರ್ ೧೬ರಂದು ಬಂಡಾಯ ಸೇನೆ ಎಸ್ಕಾಂಬ್ರೇ ಪರ್ವತ ಶ್ರೇಣಿಯನ್ನು ಪ್ರವೇಶಿಸಿದ್ದು ಬಹು ದೊಡ್ಡ ವಿಜಯದ ಸಂಕೇತವಾಗಿತ್ತು. ನಿತ್ರಾಣವಾಗಿದ್ದ ೨೦೦ ಮಂದಿಯ ಸೈನ್ಯ ಬಾಟಿಸ್ತಾನ ಭದ್ರ ಕೋಟೆಯನ್ನು ಭೇದಿಸಿತ್ತು. ನವೆಂಬರ್ ತಿಂಗಳ ವೇಳೆಗೆ ಬಾಟಿಸ್ಟಾ ಸರ್ಕಾರವು ನಾಲ್ಕು ರಣರಂಗಗಳಲ್ಲಿ ಬಂಡಾಯ ಸೇನೆಯನ್ನು ಎದುರಿಸುವುದು ಅನಿವಾರ್ಯವಾಗಿತ್ತು. ಡಿಸೆಂಬರ್ ೧೬ರಂದು ಬಂಡಾಯ ಸೇನೆ ಪೊಮೊಂಟೋ ನಗರದ ಮೇಲೆ ದಾಳಿ ನಡೆಸಿ ನಗರವನ್ನು ವಿಮೋಚನೆಗೊಳಿಸಿದರು. ಡಿಸೆಂಬರ್ ೨೧ರಂದು ಕಬಾಯಿಗುವಾನ್ ನಗರವನ್ನು ಆಕ್ರಮಿಸಿಕೊಳ್ಳಲಾಯಿತು. ಡಿಸೆಂಬರ್ ೨೯ ಮತ್ತು ೩೦ರಂದು ಬಂಡಾಯಗಾರರು ಸಂಟಾ ಕ್ಲಾರಾದ ನ್ಯಾಯಾಲಯ, ಚರ್ಚುಗಳು ಮತ್ತು ಇತರ ಪ್ರಮುಖ ಕಟ್ಟಡಗಳನ್ನು ವಶಪಡಿಸಿಕೊಂಡಿದ್ದರು. ೧೯೫೯ರ ಜನವರಿ ೧ರ ವೇಳೆಗೆ ಸೆರೆಮನೆ, ದಂಡುಪಾಳ್ಯ ಮತ್ತು ವಿಮಾನ ನಿಲ್ದಾಣಗಳು ಮಾತ್ರ ಬಾಟಿಸ್ತಾನ ವಶದಲ್ಲಿದ್ದವು. ಈ ವೇಳೆಗೆ ಬಾಟಿಸ್ಟಾ ತಲೆಮರೆಸಿಕೊಂಡು ಓಡಿ ಹೋಗಿದ್ದ. ೧೯೫೯ ಜನವರಿ ೨ರಂದು ರಾಜಧಾನಿ ಹವಾನಾದಲ್ಲಿ ಚೆ ಮತ್ತು ಕ್ಯಾಸ್ಟ್ರೋ ನೇತೃತ್ವದ ಬಂಡಾಯ ಸೇನೆ ಬೀಡು ಬಿಟ್ಟಿತ್ತು. ಎಲ್ಲಡೆ ಗಲಭೆ ಹರಡಿತ್ತು. ಅಡಗಿಕೊಂಡಿದ್ದ ಬಾಟಿಸ್ಟಾ ಬೆಂಬಲಿಗರು ಕುತಂತ್ರದಿಂದ ಪುನಃ ಅಧಿಕಾರ ಗಳಿಸಲು ಯತ್ನಿಸುತ್ತಿದ್ದರು. ಕೊನೆಗೂ ಕ್ಯೂಬ ವಿಮೋಚನೆ ಹೊಂದಿತ್ತು. ಫೆಬ್ರವರಿ ೧೬ ೧೯೫೯ರಂದು ಫಿಡಲ್ ಕ್ಯಾಸ್ಟ್ರೋ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು.

ಸಮರ್ಥ ದಕ್ಷ ಆಡಳಿತಗಾರ

ಕ್ಯಾಸ್ಟ್ರೋ ರವರ ಬಗ್ಗೆ ವಿಶೇಷವಾಗಿ ಹೇಳಬಹುದಾದ ಒಂದು ಅಂಶವೆಂದರೆ ಅವರು ರಾಜಕಾರಣ ಮತ್ತು ಸಿದ್ಧಾಂತಗಳನ್ನು ತೌಲನಿಕವಾಗಿ ನಿಭಾಯಿಸುತ್ತಿದ್ದ ವೈಖರಿ. ತನ್ನ ಗುರು-ಮಾರ್ಗದರ್ಶಕ ಎಂದೇ ಪರಿಗಣಿಸುತ್ತಿದ್ದ ಜೋಸ್ ಮಾರ್ಟಿಯವರ ಆದರ್ಶಗಳನ್ನು ಪಾಲಿಸುತ್ತಿದ್ದ ಕ್ಯಾಸ್ಟ್ರೋ ಮಾರ್ಟಿಯವರು ಹೇಳುತ್ತಿದ್ದ " ವಿಶ್ವದ ಎಲ್ಲಾ ವೈಭವವೂ ಒಂದು ಧಾನ್ಯದ ತಿರುಳಿನಲ್ಲಿ ಅಡಗಿರುತ್ತದೆ " ಎಂಬ ಅಂಶವನ್ನು ಪದೇ ಪದೇ ನೆನಪಿಸಿಕೊಳ್ಳುತ್ತಾರೆ. ಈ ಪದಗಳಲ್ಲಿ ನೈತಿಕತೆಯ ಒಂದು ವೈವಿಧ್ಯಮಯ ಪಾಠಶಾಲೆಯೇ ಅಡಗಿದೆ ಎಂದು ಹೇಳುತ್ತಾರೆ. ತನ್ನ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡದ, ಪೌಷ್ಟಿಕ ಆಹಾರ ನೀಡದ, ರೋಗರುಜಿನಗಳಿಂದ ಮುಕ್ತಿ ದೊರಕಿಸದ ದೇಶವನ್ನು ಅನೈತಿಕ ರಾಷ್ಟ್ರವೆಂದೇ ಕ್ಯಾಸ್ಟ್ರೋ ಪರಿಗಣಿಸುತ್ತಾರೆ.

ಮಾನವೀಯತೆಯೇ ಮಾತೃಭೂಮಿ ಎಂಬ ಸಿದ್ಧಾಂತವನ್ನು ಪಾಲಿಸುವ ಕ್ಯಾಸ್ಟ್ರೋ ಕಮ್ಯುನಿಸ್ಟ್ ಸಿದ್ಧಾಂತದೆಡೆಗೆ ಆಕರ್ಷಿತರಾಗಿದ್ದು ಕ್ಯೂಬಾದಲ್ಲಿ ಒಂದು ಜನಪರ ಸರ್ಕಾರವನ್ನು ಸ್ಥಾಪಿಸಿದ ನಂತರದಲ್ಲಿ. ಅವರ ಪರಿವರ್ತನೆಗೆ ಕಾರಣಗಳೂ ಇದ್ದವು. ತನ್ನ ರಾಷ್ಟ್ರೀಯವಾದಿ ಸಿದ್ಧಾಂತದಿಂದ ಸರ್ಕಾರ ರಚಿಸಿದ್ದ ಕ್ಯಾಸ್ಟ್ರೋ ರವರಿಗೆ ಅಮೆರಿಕಾದ ಸಾಮ್ರಾಜ್ಯಶಾಹಿ ಕುತಂತ್ರಗಳು ದೊಡ್ಡ ಕಂಟಕವಾಗಿತ್ತು. ಹಾಗಾಗಿ ಸಾಮ್ರಾಜ್ಯಶಾಹಿ ವಿರೋಧಿ ನೆಲೆಯಲ್ಲಿ ನಿಂತು ಹೋರಾಡಲು ಸಮಾಜವಾದಿ-ಕಮ್ಯುನಿಸ್ಟ್ ಸಿದ್ಧಾಂತಗಳು ಅನಿವಾರ್ಯವೆಂಬ ಅಂಶವನ್ನು ಕ್ಯಾಸ್ಟ್ರೋ ಮನಗಂಡಿದ್ದರು. ಈ ಹಂತದಲ್ಲಿಯೇ , ಬೇ ಆಫ್ ಪಿಗ್ಸ್ ಆಕ್ರಮಣದ ಹಿಂದಿನ ದಿನ, ೧೯೬೧ರ ಏಪ್ರಿಲ್ ೧೬ರಂದು ಸಮಾಜವಾದಿ ಕ್ರಾಂತಿ ಚಿರಾಯುವಾಗಲಿ ಎಂಬ



ಘೋಷಣೆ ಮಾಡಿದ್ದಲ್ಲದೆ ಮಾತೃಭೂಮಿ ಇಲ್ಲವೇ ಸಾವು ಎಂಬ ವೀರೋಚಿತ ಭಾಷಣವನ್ನೂ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಮಾತೃಭೂಮಿ ಇಲ್ಲವೇ ಸಾವು ಎಂಬ ಘೋಷಣೆ ಅನೇಕ ವರ್ಷಗಳ ಕಾಲ ವಿಶ್ವದಾದ್ಯಂತ ಮೊಳಗಿದ್ದನ್ನೂ ಸ್ಮರಿಸಬಹುದು.

ಕ್ಯೂಬಾದ ಕ್ರಾಂತಿಯ ನಂತರ ಜಾಗತಿಕ ಮಟ್ಟದಲ್ಲಿ ಕ್ರಾಂತಿಕಾರಿ ಸೇನೆಗಳ ಸಂಘಟನೆಗಳಿಗೆ ಉತ್ತೇಜನ ನೀಡಿದಷ್ಟೇ, ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನಗಳಿಗೂ ಪ್ರೋತ್ಸಾಹವನ್ನು ಕ್ಯಾಸ್ಟ್ರೋ ನೀಡುತ್ತಾ ಬಂದಿದ್ದಾರೆ. ಅಲಿಪ್ತ ರಾಷ್ಟ್ರಗಳ ಶೃಂಗಸಭೆಯಲ್ಲಿ ಕ್ಯೂಬಾ ಪ್ರಮುಖ ಪಾತ್ರ ವಹಿಸಿದ್ದನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಲೇಖನದ ಪ್ರಾರಂಭದಲ್ಲಿ ಉಲ್ಲೇಖಿಸಲಾಗಿರುವ ಕ್ಯೂಬಾದ ಸಾಧನೆಗಳೇ ಕ್ಯಾಸ್ಟ್ರೋರವರ ದಕ್ಷತೆಗೆ, ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಂತಿದೆ. ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟದ ನಡುವೆಯೇ ಅನ್ಯರಾಷ್ಟ್ರಗಳಿಗೆ ಅವಶ್ಯಕವಾದ ವೈದ್ಯಕೀಯ ನೆರವು ನೀಡುವುದರಲ್ಲೂ ಕ್ಯೂಬಾ ಎಂದಿಗೂ ಹಿಂಜರಿದಿಲ್ಲ. ನೆರವು ಪಡೆಯುತ್ತಿರುವ ರಾಷ್ಟ್ರ ಕಮ್ಯುನಿಸ್ಟ್ ಆಗಲೀ, ಪ್ರಜಾತಾಂತ್ರಿಕವಾಗಲೀ, ಧರ್ಮಾಧಾರಿತವಾಗಲೀ, ಅಂಗೋಲ, ಹೈಟಿ, ಪಾಕಿಸ್ತಾನ, ವೆನೆಜುಲಾ ಮೊದಲಾದ ದೇಶಗಳಿಗೆ ತೆರಳಿ ಕ್ಯೂಬಾದ ವೈದ್ಯರು ಉಚಿತ ಸೇವೆ ಸಲ್ಲಿಸಿದ್ದಾರೆ. ಅನ್ಯದೇಶಗಳಲ್ಲಿ ಮಾನವೀಯತೆಯ ದೃಷ್ಟಿಯಿಂದ ಹಸ್ತಕ್ಷೇಪ ಮಾಡುವ ಸಾಮ್ರಾಜ್ಯಶಾಹಿ ರಣತಂತ್ರಗಳಿಗೂ, ಸಮಾಜವಾದಿ ಸಿದ್ಧಾಂತದ ಅಂತಾರಾಷ್ಟ್ರೀಯ ಮಾನವೀಯ ಕಾಳಜಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಇಲ್ಲಿ ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ.

೧೯೬೧ರ ನಂತರದಲ್ಲಿ ಅಮೆರಿಕಾದ ಒತ್ತಡ ಮತ್ತು ಬ್ಲಾಕ್ ಮೇಲ್ ತಂತ್ರಗಳ ನಡುವೆಯೂ ಆರ್ಥಿಕವಾಗಿ ಮುನ್ನಡೆ ಸಾಧಿಸಿರುವುದು ಕ್ಯೂಬಾದ ಹೆಗ್ಗಳಿಕೆಯೆಂದೇ ಹೇಳಬಹುದು. ಇಡೀ ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳ ಪೈಕಿ ಕ್ಯೂಬಾದ ಸಾಧನೆ ಎದ್ದುಕಾಣುವುದನ್ನು ಮೇಲೆ ಹೇಳಲಾಗಿದೆ. ೧೯೯೦ರಲ್ಲಿ ಸೋವಿಯತ್ ಪತನವಾದ ನಂತರದಲ್ಲಿ ಕ್ಯೂಬಾ ಸಾಕಷ್ಟು ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಇದೇ ಸಂದರ್ಭದಲ್ಲಿ ಅಮೆರಿಕಾ ತನ್ನ ಆರ್ಥಿಕ ದಿಗ್ಬಂಧನವನ್ನು ಇನ್ನೂ ಬಿಗಿಗೊಳಿಸಿದ್ದು, ಕ್ಯೂಬಾದ ಆರ್ಥಿಕ ವ್ಯವಸ್ಥೆಯ ಕುಸಿತಕ್ಕೂ ಕಾರಣವಾಗಿತ್ತು. ಈ ಹಂತದಲ್ಲಿ ತಮ್ಮ ಸೈದ್ಧಾಂತಿಕ ನಿಲುವುಗಳನ್ನು ಸಡಿಲಗೊಳಿಸಿ, ಮೂಲಭೂತವಾಗಿ ಸಾಮಾನ್ಯ ಜನತೆಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ದೇಶದ ವ್ಯವಸ್ಥೆಯನ್ನು ನಿಭಾಯಿಸಿದ್ದು ಕ್ಯಾಸ್ಟ್ರೋ ರವರ ಚಾಣಾಕ್ಷತನಕ್ಕೆ ಸಾಕ್ಷಿ. ಇದೇ ಸಂದರ್ಭದಲ್ಲೇ ವೆನೆಜುಲಾದ ಹ್ಯುಗೋ ಚಾವೆಜ್, ಬೊಲಿವಿಯಾದ ಎವೋ ಮರೇಲ್ ರಂತಹ ಎಡ ಪಂಥೀಯ ನಾಯಕರನ್ನೂ ಬೆಳೆಸಿದ ಕ್ಯಾಸ್ಟ್ರೋ ತಾವು ಅಧ್ಯಕ್ಷ ಪದವಿಯನ್ನು ತ್ಯಜಿಸುವ ಹಂತದಲ್ಲಿ ಲ್ಯಾಟಿನ್ ಅಮೆರಿಕಾದಲ್ಲಿ ಎಡಪಂಥೀಯ ಅಲೆ ಹರಿಯುತ್ತಿರುವುದನ್ನು ವೀಕ್ಷಿಸುತ್ತಿದ್ದಾರೆ.

ಒಂದು ಪುಟ್ಟ ದ್ವೀಪವಾದ ಕ್ಯೂಬಾದ ಈ ಮಹತ್ತರ ಸಾಧನೆಗಳು ಅನೇಕ ರಾಷ್ಟ್ರಗಳಿಗೆ ಮಾದರಿಯಾಗಿದೆ. ವಿಶ್ವದ ಯಾವುದೇ ರಾಷ್ಟ್ರದ ನಾಯಕರಿಗೆ ದೊರೆಯದ ಅಭೂತಪೂರ್ವ ಗೌರವ, ಹಿರಿಮೆ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಕ್ಯಾಸ್ಟ್ರೋರವರಿಗೆ ಲಭಿಸುತ್ತದೆ. ಈ ದೇಶಗಳಲ್ಲಿ ಕ್ಯಾಸ್ಟ್ರೋರವರಿಂದ ಮಾರ್ಗದರ್ಶನ ಪಡೆಯದ ನಾಯಕರೇ ಇಲ್ಲವೆಂದರೂ ಅಚ್ಚರಿಯೇನಿಲ್ಲ. ಅಮೆರಿಕಾ ೧೯೬೦ ರಲ್ಲಿ ಮತ್ತು ೧೯೬೨ರಲ್ಲಿ ವಿಧಿಸಿದ ಸಂಪೂರ್ಣ ಆರ್ಥಿಕ-ವಾಣಿಜ್ಯ ದಿಗ್ಬಂಧನದಿಂದ ಕ್ಯೂಬಾಕ್ಕೆ ೨೦೦೬ ರಲ್ಲಿ ಮಾತ್ರ ೮೯ ಸಾವಿರ ಮಿಲಿಯನ್ ಡಾಲರ್‌ಗಳಷ್ಟು ನಷ್ಟವಾಗಿತ್ತು. ಏನಿಲ್ಲವೆಂದರೂ ಇಪ್ಪತ್ತು ಬಾರಿ ಅಮೆರಿಕಾದ ಸಿ.ಐ.ಎ ಕ್ಯಾಸ್ಟ್ರೋರವರ ಹತ್ಯೆಗೆ ಯತ್ನ ನಡೆಸಿ ವಿಫಲವಾಗಿದೆ. ಕ್ಯೂಬಾದ ಸರ್ಕಾರವನ್ನು ಪದಚ್ಯುತಗೊಳಿಸಲು ಅಮೆರಿಕಾದಲ್ಲಿ ಒಬ್ಬ ಮಂತ್ರಿಯನ್ನೇ ನೇಮಿಸಲಾಗಿದೆ. ಈ ಕಾರ್ಯ ನಿರ್ವಹಣೆಗೆ ಇತ್ತೀಚಿನ ಬಜೆಟ್‌ನಲ್ಲಿ ೮೯ ಮಿಲಿಯನ್ ಡಾಲರ್‌ಗಳಷ್ಟು ಹಣ ಮೀಸಲಿರಿಸಲಾಗಿದೆ. ಈ ಸಾಮ್ರಾಜ್ಯಶಾಹಿ ಆಕ್ರಮಣಗಳ ನಡುವೆಯೂ ಒಂದು ದೇಶವನ್ನು ಪ್ರಗತಿಯತ್ತ ಕೊಂಡೊಯ್ದು, ಹಿಂದುಳಿದಿದ್ದ ದೇಶವನ್ನು ಸುಭಿಕ್ಷವನ್ನಾಗಿ ಮಾಡಿರುವುದು ಕ್ಯಾಸ್ಟ್ರೋ ರವರ ಅಪ್ರತಿಮ ಸಾಧನೆ.

ಲ್ಯಾಟಿನ್ ಅಮೆರಿಕಾದ ಅನೇಕ ರಾಷ್ಟ್ರಗಳು ಮತ್ತು ನಾಯಕರು, ಅಲೆಂಡೆಯಿಂದ ಅರಿಸ್ಟೈಡ್‌ವರೆಗೆ, ಸಾಂಡಿನಿಸ್ಟಾಸ್‌ನಿಂದ ಚಾವೆಜ್‌ವರೆಗೆ , ಮೊರೇಜ್‌ನಿಂದ ಲೂಲಾನವರೆಗೆ, ಒಂದು ಪುಟ್ಟ ದೇಶದಿಂದ ದೊಡ್ಡ ರಾಷ್ಟ್ರಗಳವರೆಗೆ ಕ್ಯಾಸ್ಟ್ರೋರವರಿಂದ ಪ್ರಭಾವಿತರಾಗಿದ್ದಾರೆ. ಲ್ಯಾಟಿನ್ ಅಮೆರಿಕಾದ ಕ್ರಾಂತಿ ಪಥದ ಹಿರಿಯ ಮುತ್ಸದ್ದಿ ಫಿಡಲ್ ಕ್ಯಾಸ್ಟ್ರೋ ತಮ್ಮ ಪದವಿಯಿಂದ ನಿವೃತ್ತರಾದರೂ ಅವರ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವ ಪರಂಪರೆಯನ್ನು ಸೃಷ್ಟಿಸಿ ಹೋಗುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳನ್ನು ದಿಟ್ಟವಾಗಿ ಎದುರಿಸಿ ನಿಲ್ಲುವಲ್ಲಿ ಅವರಷ್ಟೇ ಸಾಮರ್ಥ್ಯ ತೋರದೆ ಹೋದರೂ, ಆ ಕ್ರಾಂತಿಕಾರಿ ಪರಂಪರೆಯನ್ನು ರಕ್ಷಿಸುವ ನಿಟ್ಟಿನಲ್ಲಿ ಕೆಲವು

infnuide ನಾಯಕರುಗಳು ಅಲ್ಲಲ್ಲಿ ಕಂಡುಬರುತ್ತಿರುವುದು ಜಾಗತಿಕ ಎಡಪಂಥೀಯ ಕ್ರಾಂತಿಕಾರಿಗಳಿಗೆ ಆಶಾದಾಯಕವಾದ ಬೆಳವಣಿಗೆಯಾಗಿದೆ.

ಕ್ಯಾಸ್ಟ್ರೋರವರ ಘೋಷಣೆ ಮಾನವೀಯತೆಯೇ ಮಾತೃಭೂಮಿ ಇನ್ನು ಮುಂದೆಯೂ ವಿಶ್ವದಾದ್ಯಂತ ಮೊಳಗುತ್ತಿರುತ್ತದೆ. ಅವರು ಕ್ಯೂಬಾದ ಅಧ್ಯಕ್ಷ ಪದವಿಯಿಂದ ನಿವೃತ್ತರಾಗಿದ್ದಾರೆ. ಕ್ರಾಂತಿಕಾರಿ ಹೋರಾಟದ ಪಥದಿಂದ ನಿವೃತ್ತರಾಗಿಲ್ಲ. ಬಂಡವಾಳಶಾಹಿ ಜಾಗತೀಕರಣ ಮತ್ತು ಸಾಮ್ರಾಜ್ಯಶಾಹಿ ಆಕ್ರಮಣವು ಪರಾಕಾಷ್ಠೆ ತಲುಪಿರುವ ಈ ಹಂತದಲ್ಲಿ, ಫಿಡಲ್ ಕ್ಯಾಸ್ಟ್ರೋ ಒಂದು ನಡೆದಾಡುವ ಚೇತನವಾಗಿ ಜಗತ್ತಿನಾದ್ಯಂತ ನಡೆಯುತ್ತಿರುವ ಜನಪರ ಹೋರಾಟಗಳಿಗೆ ಸ್ಫೂರ್ತಿ ನೀಡುತ್ತಾರೆಂದು ಆಶಿಸಬಹುದು. □

ಪ್ರತಿಭೆಗಳು ಬಿಕರಿಗಿವೆ

ನಾ ದಿವಾಕರ

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅತ್ಯುನ್ನತ ಹಂತದಲ್ಲಿ ಮನುಕುಲದ ಬೇಕು ಬೇಡಗಳೆಲ್ಲವನ್ನೂ ಮಾರುಕಟ್ಟೆ ಶಕ್ತಿಗಳೇ ನಿರ್ಧರಿಸುತ್ತವೆ . ಈ ಹಂತವನ್ನು ಸಾಮ್ರಾಜ್ಯಶಾಹಿ ವ್ಯವಸ್ಥೆ ಎಂದೂ ಅರ್ಥೈಸಬಹುದು. ಕೈಗಾರಿಕೋದ್ಯಮ ಉತ್ತುಂಗ ಹಂತದಲ್ಲಿ ಪ್ರಚಲಿತವಾಗಿದ್ದ ಬಂಡವಾಳಶಾಹಿ ವ್ಯವಸ್ಥೆಗೂ, ಪ್ರಸ್ತುತ ಜಾಗತೀಕರಣ ಪ್ರಕ್ರಿಯೆಯ ಮೂರನೆಯ ಹಂತದಲ್ಲಿ ಕಾಣುತ್ತಿರುವ ವ್ಯವಸ್ಥೆಗೂ ಮೂಲ ವ್ಯತ್ಯಾಸವನ್ನೂ ಮಾರುಕಟ್ಟೆ ಶಕ್ತಿಗಳಲ್ಲೇ ಗ್ರಹಿಸಬಹುದು.

ಕಳೆದ ಶತಮಾನದ ೭೦-೮೦ರ ದಶಕದಲ್ಲಿ ಕಂಡು ಬಂದಿದ್ದ ಕೈಗಾರಿಕಾ ಬಂಡವಾಳದ ಬೆಳವಣಿಗೆ ಶ್ರಮದ ಶೋಷಣೆಯನ್ನೇ ಮೂಲಮಂತ್ರವನ್ನಾಗಿ ಪರಿಗಣಿಸಿದರೂ, ಮಾನವ ಸಮಾಜವನ್ನು ತನ್ನೊಡನೆ ಕೊಂಡೊಯ್ಯುವ ನಿಟ್ಟಿನಲ್ಲಿ ಸಾಗುತ್ತಿತ್ತು. ಅಭಿವೃದ್ಧಿ ಪಥದಲ್ಲಿ ತನಗೂ ಒಂದು ಅಸ್ಮಿತೆ ಇದೆ ಎಂಬ ಭಾವನೆಯನ್ನು ಅಥವಾ ಭ್ರಮೆಯನ್ನು ಶೋಷಣೆಗೊಳಗಾದ ಶ್ರಮಜೀವಿಗಳಲ್ಲೂ ಉಂಟು ಮಾಡುವುದು ಕೈಗಾರಿಕಾ ಬಂಡವಾಳ ವ್ಯವಸ್ಥೆಯ ಸಿದ್ಧಾಂತವಾಗಿತ್ತು. ಈ ಭ್ರಮೆಯಲ್ಲಿಯೇ ವಿಶ್ವದ ಕಾರ್ಮಿಕರು ಕೈಗಾರಿಕೋದ್ಯಮದ ಬೆಳವಣಿಗೆಗಾಗಿ ಬೆವರು ಸುರಿಸಿ ದುಡಿದು, ಕೊನೆಗೊಂದು ದಿನ ನಿರ್ಗತಿಕರಾದುದನ್ನು ಇತಿಹಾಸದಲ್ಲಿ ಕಾಣಬಹುದು. ಆದರೂ ತಮ್ಮ ಶ್ರಮದ ಮೂಲಕ ಅನ್ಯರು ಕ್ರೋಢೀಕರಿಸಿದ ಸಂಪತ್ತು ಅಥವಾ ಬಂಡವಾಳವು ಒಂದೆಡೆ ಕೇಂದ್ರೀಕೃತವಾಗಿದ್ದುದರಿಂದ, ಈ ಶಕ್ತಿಗಳ ವಿರುದ್ಧ ಹೋರಾಟಗಳನ್ನು ನಡೆಸಿ ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯುವ ಸಾಧ್ಯತೆಗಳು ಕಾರ್ಮಿಕರಿಗೆ, ಶ್ರಮಜೀವಿಗಳಿಗೆ ಇತ್ತು.

ಆದರೆ ಬಂಡವಾಳಶಾಹಿ ಜಾಗತೀಕರಣದ ಮೂರನೆಯ ಹಂತದಲ್ಲಿ, ಕೈಗಾರಿಕೋದ್ಯಮಗಳ ಸ್ಥಾನವನ್ನು ಕಾರ್ಪೋರೇಟ್ ಶಕ್ತಿಗಳು ಆಕ್ರಮಿಸಿಕೊಂಡಿದ್ದು , ಶ್ರಮ ಮತ್ತು ಶ್ರಮಿಕರ ಶೋಷಣೆಗೆ ಒಂದು ಹೊಸ ಆಯಾಮವನ್ನು ನೀಡುತ್ತಿದೆ. ಹಣಕಾಸು ಬಂಡವಾಳವೇ ಪ್ರಧಾನವಾಗಿರುವ ಪ್ರಸ್ತುತ ವ್ಯವಸ್ಥೆಯಲ್ಲಿ ಶೋಷಣೆಗೊಳಗಾದ ಮನುಕುಲದ ಬೆವರು, ಡಿಯೋಡರೆಂಟ್‌ಗಳಿಂದ ಆವೃತವಾಗಿ, ಅಗೋಚರವಾಗಿಬಿಟ್ಟಿದೆ. ಷೇರು ಮಾರುಕಟ್ಟೆಯ ಸಂವೇದಿ ಸೂಚ್ಯಂಕವೇ ಪ್ರಗತಿ-ಅಭಿವೃದ್ಧಿಯ ಸಂಕೇತವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಬೆವರು ಸುರಿಸಿ ದುಡಿಮೆ ಮಾಡುವ ಶ್ರಮಜೀವಿಗಳು ಮಾತ್ರ ಶೋಷಣೆಗೊಳಗಾಗುತ್ತಿಲ್ಲ. ಲಕ್ಷಾಂತರ ರೂಗಳ ಸಂಬಳ ಪಡೆಯುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು, ಹಿಂದೊಮ್ಮೆ ಶ್ರೀಮಂತಿಕೆಯಿಂದ ಬೀಗುತ್ತಿದ್ದ ವ್ಯಾಪಾರಿ ವರ್ಗಗಳು, ಕೃಷಿ ಕ್ಷೇತ್ರದಲ್ಲಿ ರಾರಾಜಿಸುತ್ತಿದ್ದ ದೊಡ್ಡ ರೈತರು, ಬಿಳಿಕಾಲರ್ ಉದ್ಯೋಗಿಗಳೆಂದೇ ಕರೆಯಲ್ಪಡುತ್ತಿದ್ದ ಬ್ಯಾಂಕು-ವಿಮೆ ನೌಕರರು, ಹೀಗೆ ಉನ್ನತ ಹುದ್ದೆ ಎಂಬ ಹಣೆಪಟ್ಟಿ ಹೊತ್ತಿದ್ದವರೆಲ್ಲರೂ ಇಂದು ಶ್ರಮಜೀವಿಗಳ ಸಾಲಿನಲ್ಲಿ ಸೇರಿಬಿಟ್ಟಿದ್ದಾರೆ. ಕಾರ್ಪೋರೇಟ್ ಜಗತ್ತಿನ ಅಡಿಪಾಯಕ್ಕೆ ಇವರೆಲ್ಲರ ಶ್ರಮ ಇಟ್ಟಿಗೆಗಳಾಗುತ್ತವೆ. ಜಗತ್ತಿನ ಆಗುಹೋಗುಗಳನ್ನೆಲ್ಲಾ ಮಾರುಕಟ್ಟೆ ಮತ್ತು ಲಾಭದ ದೃಷ್ಟಿಕೋನದಿಂದಲೇ ನೋಡುವ ಕಾರ್ಪೋರೇಟ್ ಜಾಗತೀಕರಣ ಪ್ರಕ್ರಿಯೆಯಲ್ಲಿ ಇಡೀ ಮನುಕುಲವೇ ಮಾರುಕಟ್ಟೆಯ ವಸ್ತುವಾಗಿ ಪರಿಣಮಿಸುತ್ತದೆ.

ಮನುಕುಲದ ಒಂದು ಭಾಗವನ್ನು ಶೋಷಣೆಗೊಳಪಡಿಸಿ ಬಂಡವಾಳ ವೃದ್ಧಿಸಿಕೊಳ್ಳುವ ಹಂತದಿಂದ, ಮನುಕುಲದ ಎಲ್ಲಾ ಚಟುವಟಿಕೆಗಳನ್ನೂ ಮಾರುಕಟ್ಟೆಯ ನಿಯಂತ್ರಣಕ್ಕೊಳಪಡಿಸಿ, ಜಾಗತಿಕ ಬಂಡವಾಳದ ಅಭಿವೃದ್ಧಿಗೆ ಪೂರಕವನ್ನಾಗಿ ಮಾಡುವ ಹಂತಕ್ಕೆ ಬಂಡವಾಳಶಾಹಿ ವ್ಯವಸ್ಥೆ ತಲುಪಿರುವುದು ಸ್ಪಷ್ಟವಾಗಿದೆ. ಹಾಗಾಗಿಯೇ ಸಂಗೀತ, ಕಲೆ, ನಾಟಕ, ಸಿನಿಮಾ, ಸಾಹಿತ್ಯ ಮತ್ತು ಕ್ರೀಡೆ ಎಲ್ಲಾ ಕ್ಷೇತ್ರಗಳೂ ಮಾರುಕಟ್ಟೆಯ ಸಮ್ಮೋಹನ ಶಕ್ತಿಗೆ ಬಲಿಯಾಗಿರುವುದನ್ನು ನಾವು ಕಾಣಬಹುದು. ಸೋನು ನಿಗಮ್‌ರಂತಹ ಕನ್ನಡ ಸಿನೆಮಾ ರಂಗಕ್ಕೆ ಆಮದಾಗಿರುವ ಕಲಾವಿದರು ತಮ್ಮ ಹಾಡುಗಳನ್ನಾಗಲೀ, ರಾಗವನ್ನಾಗಲೀ ಪುನಃ ಉಪಯೋಗಿಸಿದವರಿಂದ ಲಕ್ಷಾಂತರ ರೂಗಳ ರಾಯಲ್ಟಿ ಕೇಳಲಾರಂಭಿಸಿದ್ದಾರೆ. ಈ ಗಾಯಕ ಬೆಳೆದು ಬಂದದ್ದೇ ಗಾಯನ ಸಾಮ್ರಾಟ ಮಹಮ್ಮದ್ ರಫಿಯವರ ಸ್ವರದ ನೆರಳಿನಲ್ಲಿ ಎಂಬ ಅಂಶವನ್ನು ಆತ ಮರೆತಿದ್ದಾರೆ.

ಇಲ್ಲಿ ಒಬ್ಬ ಗಾಯಕನ ವೈಯಕ್ತಿಕ ಲಾಲಸೆಗಿಂತಲೂ, ಕಲೆ ಮತ್ತು ಸಂಸ್ಕೃತಿಯ ವಾಣಿಜ್ಯೀಕರಣವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದೇ ವಿದ್ಯಮಾನವನ್ನು ಟಿವಿ ಚಾನಲ್‌ಗಳಲ್ಲಿ ಪ್ರಸಾರವಾಗುವ ಇಂಡಿಯನ್ ಐಡಿಯಲ್, ವಾಯ್ಸ್ ಆಫ್ ಕರ್ನಾಟಕ, ಸರೆಗಮಾ ಮುಂತಾದ ಕಾರ್ಯಕ್ರಮಗಳಲ್ಲೂ ಕಾಣಬಹುದು. ಇಲ್ಲಿ ಅರಳುವ ಪ್ರತಿಭೆಗಳ ಸಾಮರ್ಥ್ಯ ಪ್ರತಿಭೆ ನಿರ್ಧಾರವಾಗುವುದು ಎಸ್.ಎಂ.ಎಸ್ ಮೂಲಕ. ಕೋಟ್ಯಾಂತರ ರೂಗಳನ್ನು ಮೊಬೈಲ್ ಕಂಪನಿಗಳು ಈ ಕಾರ್ಯಕ್ರಮಗಳಲ್ಲಿ ಸಂಪಾದಿಸುತ್ತವೆ. ಇಲ್ಲಿ ಭಾಗವಹಿಸುವ ಪುಟ್ಟ ಪ್ರತಿಭೆಗಳಲ್ಲಿ ಒಂದು ರೀತಿಯ ಭ್ರಮೆ ಹುಟ್ಟಿಸಲಾಗುತ್ತದೆ. ಕನ್ನಡದ ಈ ಟಿವಿಯಲ್ಲಿ ನಡೆಸಿದ ಎದೆ ತುಂಬಿ ಹಾಡುವೆನು ಅಂತಿಮ ಸುತ್ತಿನಲ್ಲಿ ಒಂದು ಹುಡುಗಿ ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ, ನನಗೆ ಎಸ್.ಎಂ.ಎಸ್ ಮೂಲಕ ಮತ ನೀಡಿ ಎಂದು ಕೇಳಿಕೊಂಡಿತ್ತು. ಕಾರ್ಪೋರೇಟ್ ಶಕ್ತಿಗಳು ಯಾವ ರೀತಿಯಲ್ಲಿ ಎಲ್ಲಾ ಸಾಂಸ್ಕೃತಿಕ ವಲಯಗಳನ್ನು ತನ್ನ ಕದಂಬ ಬಾಹುಗಳಲ್ಲಿ ಬಂಧಿಸುತ್ತಿದೆ ಎಂದು ನಿರೂಪಿಸಲು ಈ ನಿದರ್ಶನಗಳು ಸಾಕಷ್ಟೆ. ***"ಚಕ್ ದೇ ಇಂಡಿಯಾ"*** ಎಂದು ಒಂದೆಡೆ ಹೇಳುತ್ತಲೇ ಮತ್ತೊಂದೆಡೆ ***"Cheque ದೇ ಇಂಡಿಯಾ"*** ಎಂಬ ಸಂಸ್ಕೃತಿಯನ್ನೂ ಇದೇ ಕಾರ್ಪೋರೇಟ್ ಶಕ್ತಿಗಳು ಬೆಳೆಸುತ್ತವೆ. ಇಲ್ಲಿ ಮನುಷ್ಯರು ಮಾತ್ರವಲ್ಲದೆ ಅವರು ಪ್ರತಿನಿಧಿಸುವ ಕ್ಷೇತ್ರವೂ ವಾಣಿಜ್ಯೀಕರಣಕ್ಕೊಳಗಾಗಿ ಮಾರುಕಟ್ಟೆಯ ಸರಕಾಗಿಬಿಡುತ್ತದೆ. ಇತ್ತೀಚೆಗೆ ನಡೆದ ಕ್ರಿಕೆಟ್ ಕಲಿಗಳ ಹರಾಜು ಪ್ರಕ್ರಿಯೆ ಇದಕ್ಕೊಂದು ನಿದರ್ಶನವಾಗುತ್ತದೆ.

ಅಭಿವೃದ್ಧಿ ಪಥದಲ್ಲಿ ತನಗೂ ಒಂದು ಅಸ್ಮಿತೆ ಇದೆ ಎಂಬ ಭಾವನೆಯನ್ನು ಅಥವಾ ಭ್ರಮೆಯನ್ನು ಶೋಷಣೆಗೊಳಗಾದ ಶ್ರಮಜೀವಿಗಳಲ್ಲೂ ಉಂಟು ಮಾಡುವುದು ಕೈಗಾರಿಕಾ ಬಂಡವಾಳ ವ್ಯವಸ್ಥೆಯ ಸಿದ್ಧಾಂತವಾಗಿತ್ತು.

ಇದುವರೆಗೂ ದೇಶಪ್ರೇಮದ ಕುರುಹಾಗಿದ್ದ Gentleman's game, ಕ್ರಿಕೆಟ್ ಇನ್ನು ಮುಂದೆ ಷೇರು ಮಾರುಕಟ್ಟೆಯ ಸಂವೇದಿ ಸೂಚ್ಯಂಕವನ್ನು ನಿರ್ಧರಿಸುವ ಒಂದು ಸಾಧನವಾದರೂ ಅಚ್ಚರಿಯೇನಿಲ್ಲ. ಪ್ರತಿಯೊಬ್ಬ ಆಟಗಾರನನ್ನು ಕೋಟ್ಯಾಂತರ ರೂಗಳಿಗೆ ಕೊಂಡುಕೊಂಡಿರುವ ಕಾರ್ಪೋರೇಟ್ ಶಕ್ತಿಗಳು ಕ್ರಿಕೆಟ್ ಪಂದ್ಯಾವಳಿಗಳ ನಾಲ್ಕನೆಯ ಅಂಪೈರ್ ಆಗಿರುತ್ತಾರೆ. ಹರಾಜಿಗೊಳಗಾಗಿರು ಆಟಗಾರರ ಪೈಕಿ ಶೇ ೩೩ರಷ್ಟು ಪಟುಗಳು ಭಾರತೀಯರಾಗಿರುವುದು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಮುಖ ಸುದ್ದಿಯಾಗಿ ಹರಿಯುತ್ತಿದೆ. ಮೂರು ವರ್ಷಗಳ ಕಾಲ ಗುತ್ತಿಗೆಗೆ ಸಹಿಮಾಡಿ, ತನ್ನನ್ನು ಖರೀದಿಸಿದ ಮಾಲೀಕನ, ಅಂದರೆ ಕಾರ್ಪೋರೇಟ್ ಉದ್ಯಮಿಯ, ಕೈಕೆಳಗೆ ದುಡಿಯಬೇಕಾದ ಅರ್ಥಾತ್ ಆಡಬೇಕಾದ, ಕ್ರಿಕೆಟ್ ಪಟುಗಳು, ಜೊತೆಯಲ್ಲೇ ಜನರಿಗೆ ಮನ ರಂಜನೆಯನ್ನೂ ಒದಗಿಸಬೇಕಾಗುತ್ತದೆ. ಅದಕ್ಕಾಗಿಯೇ ಜಾಗತಿಕ ಮಟ್ಟದಲ್ಲಿ ಜನಿಸಿದ ೨೦-೨೦ ಕ್ರಿಕೆಟ್ ಈ ಮಾರುಕಟ್ಟೆ ಸರಕುಗಳಿಗಾಗಿ ಹಾತೊರೆಯುತ್ತಿದೆ. ಆರು ಕೋಟಿ ರೂಗಳಿಗೆ ಹರಾಜಾಗಿರುವ ಮಹೇಂದ್ರ ಸಿಂಗ್ ಧೋನಿಗಳಿಸುವ ಪ್ರತಿಯೊಂದು ಓಟವೂ, ಮಾರುಕಟ್ಟೆಯಲ್ಲಿ ಸುನಾಮಿ ಅಲೆ ಗಳನ್ನೆಬ್ಬಿಸುವ ದಿನಗಳು ದೂರ ಉಳಿದಿಲ್ಲವೆಂದು ಹೇಳ ಬಹುದು.

ಕ್ರಿಕೆಟ್ ಎಂದರೆ ಒಂದು ರೀತಿ ಗನುಸಾರ ವಾಗಿ, ಕ್ರಮಬದ್ಧವಾಗಿ, ಜನರಿಗೆ ಶುದ್ಧ ಮನರಂಜ ನೆಯ ಜೊತೆಗೆ ಗಂಭೀರ ವಾದ ಒಂದು ಕ್ರೀಡಾಭಿ ರುಚಿಯನ್ನು ಒದಗಿಸುವ ಉತ್ತಮವಾದ ಆಟ ಎಂಬ ಸಿದ್ಧಾಂತವನ್ನೇ ನಂಬಿ ಕ್ರಿಕೆಟ್ ಜಗತ್ತಿನಲ್ಲಿ ರಾರಾಜಿಸಿದ ಅನೇಕಾನೇಕ ಚೇತನಗಳು ಇನ್ನೂ ನಮ್ಮೊಂದಿಗಿವೆ. ಅಳಿದು ಹೋದವರ ನೆನಪುಗಳು ಇನ್ನೂ ಕೆಲವರಲ್ಲಿ ಹಸಿಯಾಗಿವೆ. ತಮ್ಮ ಕ್ರೀಡಾ ಮನೋಭಾವದಿಂದಲೇ ಕ್ರೀಡೆಗಿಂತಲೂ ಉನ್ನತ ಹಂತಕ್ಕೇರಿದ ಆಟಗಾರರು ಜೀವಂತವಾಗಿದ್ದಾರೆ. ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಆಟವಾಡಿ ಮನ ತಣಿಸಿದ ಬ್ರಾಡ್‌ಮನ್, ಸೋಬರ್ಸ್, ರಿಚರ್ಡ್ಸ್, ಗುಂಡಪ್ಪ ವಿಶ್ವನಾಥ್, ಚಂದ್ರಶೇಖರ್, ಪ್ರಸನ್ನ, ಟೋನಿ ಗ್ರೇಗ್, ಚಾಪೆಲ್ ಬ್ರದರ್ಸ್, ಗವಾಸ್ಕರ್, ಇಂಥವರ ಪಟ್ಟಿ ಮುಗಿಯುವುದೇ ಇಲ್ಲ. ವಿಷಾದನೀಯ ಅಂಶವೆಂದರೆ, ಮುಂಬರುವ ಯುವ ಪೀಳಿಗೆಗೆ ಈ ಮಹಾನ್ ಕ್ರೀಡಾಪಟುಗಳು ಮ್ಯೂಸಿಯಂ ವಸ್ತುಗಳಾಗಿ ಮಾತ್ರ ಉಳಿಯುತ್ತಾರೆ. ಕ್ರಿಕೆಟ್ ಎಂದರೆ ಹರಾಜಿಗೊಳಗಾದ ಆಟಗಾರರ, ಮಾರುಕಟ್ಟೆ ನಿಯಂತ್ರಿತ ಕ್ರೀಡೆಯಾಗಿ ಮಾತ್ರ ಉಳಿಯುತ್ತದೆ. ಜಾಗ ತೀಕರಣದ ಮೋಡಿ ಎಂದರೆ ಇದೇ. □

ಬುದ್ಧನ ಬೆಳಕು: ಅಂಬೇಡ್ಕರ್ ಬದುಕು

ಡಾ|| ಎಚ್.ಟಿ. ಪೋತೆ

"ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧೀಜಿಯವರು ಬಳ್ಳಾರಿಯ ನಂದಿ ಹಳ್ಳಿಗೆ ಬಂದಿದ್ದರು. ಸಮಾಜ ಸುಧಾರಕರಾಗಿದ್ದ ಬ್ರಾಹ್ಮಣ ವ್ಯಕ್ತಿಯೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದರು. ಆಗ ಸಂಡೂರನ್ನು ಆಳುತ್ತಿರುವವರು ಘೋರ್ಪಡೆ ವಂಶಸ್ಥರು, ಅದೊಂದು ಚಿಕ್ಕ ಸಂಸ್ಥಾನ. ಗಾಂಧೀಜಿಯವರು ಅಲ್ಲಿ ಬಂದು ಸುಮ್ಮನೆ ಕಾಲ ಕಳೆಯಲಿಲ್ಲ. ಗಾಂಧೀಜಿಯವರು ಯಾರಮನೆಯಲ್ಲಿ ತಂಗಿದ್ದರು ಅವರನ್ನು ಹಾಗೂ ಆ ಸ್ಥಳದ ಅಸ್ಪೃಶ್ಯರನ್ನು ಕರೆದುಕೊಂಡು ಮೇಲುವರ್ಗದ ಸಮುದಾಯದ ಬಾವಿ ನೀರನ್ನು ಮುಟ್ಟಿದರು. ಎರಡನೆಯದಾಗಿ ನಂದಿಹಳ್ಳಿಯ ಪರಿಸರದಲ್ಲಿದ್ದ ದೇವಸ್ಥಾನ ಪ್ರವೇಶ ಕೂಡ ಮಾಡಿಸಿದರು. ಇದಾದ ಮೇಲೆ ಯಾವ ಅಸ್ಪೃಶ್ಯರು ಗಾಂಧೀಜಿಯೊಂದಿಗೆ ಯಾವ ಬಾವಿ ಪ್ರವೇಶ ಮಾಡಿದ್ದರೋ, ಆಮೇಲೆ ಆ ಬಾವಿಯನ್ನು ಯಾರೂ ಮುಟ್ಟಲಿಲ್ಲ. ಕೊನೆಗೆ ಬಾವಿಯನ್ನೇ ಅಸ್ಪೃಶ್ಯರಂತೆ ಮುಟ್ಟದೆ ಹಾಳುಗೆಡವಿದರು.

"ಅಸ್ಪೃಶ್ಯತೆ, ಅವಮಾನ, ಅಪಮಾನಗಳಿಂದ ನೊಂದು ಬೆಂದು ಹೋಗಿರುವ ದಲಿತ ಬಂಧುಗಳೇ, ನಿಮ್ಮ ಮೇಲಿರುವ ಅಂತಹ ಗಂಭೀರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಜವಾಬ್ದಾರಿಗಳ ಬಗ್ಗೆ ಒಮ್ಮೆ ಒಟ್ಟಿಗೆ ಯೋಚಿಸೋಣ. ತನ್ನ ಪ್ರಾಣವನ್ನು ಪಣವಿಟ್ಟು, ಸುಖ, ಸಂತೋಷಗಳನ್ನು ಮರೆತು ಅಂಬೇಡ್ಕರ್ ಅವರು ನಡೆಸಿದ ಹೋರಾಟಗಳ ಫಲನುಭವಿಗಳಾಗಿರುವ ನಾವು ನಮ್ಮ ಬಿಡುಗಡೆಗಾಗಿ ಅವರು ನಡೆದ ಧಮ್ಮದ ದಾರಿಯಲ್ಲಿ ನಡೆಯಲು ಈಗಲಾದರೂ ದೃಢಸಂಕಲ್ಪ ಮಾಡೋಣ" ಎಂದು ಹೇಳಿದವರು ದಲಿತ ಸಾಹಿತಿ ದೇವನೂರು ಮಹಾದೇವ. ನಿಜಕ್ಕೂ ಈ ನಿಟ್ಟಿನಲ್ಲಿ ದಲಿತ, ಶೋಷಿತರು ಆಲೋಚಿಸಬೇಕಾದ ಅನಿವಾರ್ಯತೆ ಇದೆ. ಈ ಅನಿವಾರ್ಯವಾದ ಚಿಂತನೆಯಲ್ಲಿ ದಲಿತರಿಗೆ ಭವಿಷ್ಯವೂ ಇದೆ.

ಬುದ್ಧ, ಬಸವ, ಮಹಾವೀರರಾದಿಯಾಗಿ ಅನೇಕ ಮಹಾನ್ ಸಾಧಕರು, ಇಲ್ಲಿಯ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸಿದ್ದಾರೆ. ಪಂಪನಂತಹ ಮಹಾಕವಿಯೂ ಕೂಡ ಮಾನವ ಕುಲ ತಾನೊಂದೆ ವಲಂ ಎಂದು ಹೇಳುವುದರ ಮೂಲಕ ಅಸಮಾನವಾದ ಸಾಮಾಜಿಕ ವ್ಯವಸ್ಥೆಗೆ ಮನ್ನಣೆ ದೊರೆಯದಂತೆ ಮಾಡಿದ್ದಾನೆ. ಇನ್ನೂ ಹನ್ನೆರಡನೆಯ ಶತಮಾನದ ಶರಣರ ಚಿಂತನೆಗಳ ಅವಲೋಕನ ಮಾಡಿದಾಗ ನಮಗೆ ಅಲ್ಲಿ ಸಿಗುವುದು ಸಮಾನ ಬದುಕು, ಮಾನವ ಪ್ರೀತಿ, ಮನುಷ್ಯತ್ವದ ಸಿಂಚನ ಹೀಗಾಗಿ ಮತ್ತೆ ಮತ್ತೆ ಅದನ್ನು ಮೆಲುಕು ಹಾಕುತ್ತಲೇ ಸಾಗಿದ್ದೇವೆ.

ಭಾರತೀಯ ಸಾಮಾಜಿಕ ನೆಲೆಯಲ್ಲಿರುವ ಜಾತಿವ್ಯವಸ್ಥೆಯನ್ನು ತೊಡೆದುಹಾಕಲು ಶ್ರಮಿಸಿದ ಬುದ್ಧ, ಬಸವ, ಕನಕರನ್ನೊಳಗೊಂಡಂತೆ, ಆಧುನಿಕ ಯುಗದ ಜ್ಯೋತಿಬಾ ಫುಲೆ, ಪೆರಿಯಾರ್ ಮುಂತಾದವರು ಅವಿರತವಾಗಿ ಶ್ರಮಿಸಿದರೂ ಇಲ್ಲಿಯ ಜಾತಿವ್ಯವಸ್ಥೆ ನಿರ್ಮೂಲನೆಗೊಳಿಸಲು ಸಾಧ್ಯವಾಗುತ್ತಿಲ್ಲ. ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಹರಿಜನೋದ್ಧಾರದ ಕೆಲಸ ಮಾಡಿದರೂ ಪ್ರಯೋಜನವಾಗಲಿಲ್ಲ. ಗಾಂಧೀಜಿಯವರ ಸಮಾಜ ಸುಧಾರಣಾ ಕಾರ್ಯದ ಕುರಿತು ಗೆಳೆಯರೊಬ್ಬರು ವೇದಿಕೆಯೊಂದರಲ್ಲಿ ಹಂಚಿಕೊಂಡ ವಿಚಾರವನ್ನು ನಾನಿಲ್ಲಿ ಪ್ರಸ್ತಾಪಿಸಲು ಇಚ್ಛೆಪಡುತ್ತಿದ್ದಾನೆ.

"ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧೀಜಿಯವರು ಬಳ್ಳಾರಿಯ ನಂದಿಹಳ್ಳಿಗೆ ಬಂದಿದ್ದರು. ಸಮಾಜ ಸುಧಾರಕರಾಗಿದ್ದ ಬ್ರಾಹ್ಮಣ ವ್ಯಕ್ತಿಯೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದರು. ಆಗ ಸಂಡೂರನ್ನು ಆಳುತ್ತಿರುವವರು ಘೋರ್ಪಡೆ ವಂಶಸ್ಥರು, ಅದೊಂದು ಚಿಕ್ಕ ಸಂಸ್ಥಾನ. ಗಾಂಧೀಜಿಯವರು ಅಲ್ಲಿ ಬಂದು ಸುಮ್ಮನೆ ಕಾಲ ಕಳೆಯಲಿಲ್ಲ. ಗಾಂಧೀಜಿಯವರು ಯಾರಮನೆಯಲ್ಲಿ ತಂಗಿದ್ದರು ಅವರನ್ನು ಹಾಗೂ ಆ ಸ್ಥಳದ ಅಸ್ಪೃಶ್ಯರನ್ನು ಕರೆದುಕೊಂಡು ಮೇಲುವರ್ಗದ ಸಮುದಾಯದ ಬಾವಿ ನೀರನ್ನು ಮುಟ್ಟಿದರು. ಎರಡನೆಯದಾಗಿ ನಂದಿಹಳ್ಳಿಯ ಪರಿಸರದಲ್ಲಿದ್ದ ದೇವಸ್ಥಾನ ಪ್ರವೇಶ ಕೂಡ ಮಾಡಿಸಿದರು. ಇದಾದ ಮೇಲೆ ಯಾವ ಅಸ್ಪೃಶ್ಯರು ಗಾಂಧೀಜಿಯೊಂದಿಗೆ ಯಾವ ಬಾವಿ ಪ್ರವೇಶ ಮಾಡಿದ್ದರೋ, ಆಮೇಲೆ ಆ ಬಾವಿಯನ್ನು ಯಾರೂ ಮುಟ್ಟಲಿಲ್ಲ. ಕೊನೆಗೆ ಬಾವಿಯನ್ನೇ ಅಸ್ಪೃಶ್ಯರಂತೆ ಮುಟ್ಟದೆ ಹಾಳುಗೆಡವಿದರು. ಇನ್ನು ದೇವಾಲಯ ಪ್ರವೇಶ ಮಾಡಿದ್ದರಲ್ಲ. ಮರುದಿವಸ ಗುಡಿಯನ್ನು ಶುಚಿಗೊಳಿಸಿ ದಲಿತರು ಪೂಜೆಗೆ ಬರದಂತೆ ನೋಡಿಕೊಂಡರು.

ಇಲ್ಲಿ ಗಾಂಧೀಜಿಯವರ ಈ ಚಳವಳಿಯಿಂದ ನಮಗೆ ಎದ್ದು ಕಾಣುವ ಮುಖ್ಯವಾದ ಮೂರು ಕಾರಣಗಳ ಮೇಲೆ ಬೆಳಕು ಚೆಲಬೇಕಾಗಿದೆ. ಬಾವಿ ಪ್ರವೇಶ ಮಾಡಿದ್ದು ಅದು ಸಾಮಾಜಿಕ ಪರಿವರ್ತನೆಯ ಕಾರ್ಯ ಆದರೂ ಯಶಸ್ವಿಯಾಗಲಿಲ್ಲ. ಗುಡಿ ಪ್ರವೇಶ ಇದು ಧಾರ್ಮಿಕ ಕಾರ್ಯ ಆದರೂ ಗುಡಿ ಪ್ರವೇಶ ಮತ್ತೆ ನಿಂತು ಹೋಯಿತು. ಮೂರನೆಯ ಕಾರಣ ರಾಜಕೀಯ ಕಾರಣ. ಈ ಎರಡೂ ಕಾರಣಗಳನ್ನು ರಾಜಕೀಯಕ್ಕೆ ಬಳಸಿಕೊಂಡವರು ಸಂಸ್ಥಾನದವರು. ಮಹಾತ್ಮಾ ಗಾಂಧೀಜಿಯವರು ಉಳಿದುಕೊಂಡಿದ್ದು ಒಬ್ಬ ಬ್ರಾಹ್ಮಣ ವ್ಯಕ್ತಿ ಮನೆಯಲ್ಲಿ ಎಂಬುದನ್ನು ಗಮನಿಸಿದ ಘೋರ್ಪಡೆ ಸಂಸ್ಥಾನದ ಆಡಳಿತಗಾರರು ರಾಜಕೀಯ ನೆಲೆಯಲ್ಲಿ ರೂಪಕೊಟ್ಟು ಲಾಭ ಪಡೆಯಲು ಮುಂದಾದಾಗ ಗಾಂಧೀಜಿಯನ್ನು ಉಳಿಸಿಕೊಂಡಿದ್ದ ಬ್ರಾಹ್ಮಣ ವ್ಯಕ್ತಿಗೆ ಸಂಸ್ಥಾನದಲ್ಲಿ ಮಂತ್ರಿಯನ್ನಾಗಿ ಮಾಡಿದರು. ಇಲ್ಲಿ ಗಾಂಧೀಜಿಯವರ ಹೋರಾಟದಿಂದ ಲಾಭವಾದದ್ದು ಯಾರಿಗೆ ಎಂದರೆ ಮತ್ತದೆ ಬ್ರಾಹ್ಮಣ ವರ್ಗಕ್ಕೆ. ಬಾವಿ, ಗುಡಿ ಪ್ರವೇಶದಿಂದಾಗಲಿ ದಲಿತರಿಗೆ ಧಾರ್ಮಿಕ ಲಾಭವೂ ಆಗಲಿಲ್ಲ. ಸಾಮಾಜಿಕ ರಾಜಕೀಯ ಲಾಭವಂತೂ ಕನಸಿನ ಮಾತಾಗಿಯೇ ಉಳಿಯಿತು. ಹೀಗೆ ಈ ದೇಶದಲ್ಲಿ ತೋರಿಕೆಗೆ ಮಾತ್ರ ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರ್ಯಗಳು ನಡೆಯುತ್ತವೆ ಎನ್ನುವುದು ನಾವು ಮನಗಾಣಬೇಕು. ಪೇಜಾವರ ಶ್ರೀಗಳು ಅಸ್ಪೃಶ್ಯರ ಕೇರಿಗೆ ಹೋಗಿ ಬಂದರಷ್ಟೆ ಸಾಲದು. ಇವೆಲ್ಲ ಭೂಟಾಟಿಕೆಯ ಸನ್ನಿವೇಶಗಳಾಗಿ ಉಳಿಯುತ್ತವೆ. ಆದ್ದರಿಂದ ದಲಿತರು ಶಾಶ್ವತ ನೆಲೆಯಡೆಗೆ ಸಾಗಬೇಕಾದರೆ 'ಬುದ್ಧತ್ವದ' ದಾರಿಯನ್ನು ತುಳಿಯುವುದು ಅನಿವಾರ್ಯವೆಂದು ಭಾವಿಸಿದರೆ ತಪ್ಪಾಗಲಿಕ್ಕಿಲ್ಲ. ಪರಿಪೂರ್ಣವಾದ ಮತ್ತು ಭ್ರಾತೃತ್ವದ ನೆಲೆಗೆ ನಾವು ಸೇರಬೇಕಾದರೆ ಬುದ್ಧನ ಬೆಳಕಿನಲ್ಲಿ ಅಂಬೇಡ್ಕರ್ ದಾರಿಯಲ್ಲಿ ನಡೆಯುವುದು ಉಚಿತವಾಗಿ ಕಾಣುತ್ತಿದೆ. ಆ ಹಿನ್ನೆಲೆಯಲ್ಲಿ ಬುದ್ಧ ತೋರಿದ ಶುದ್ಧ ಮಾರ್ಗದ ವಿಷಯಗಳ ಮೇಲೆ ಬೆಳಕು ಚೆಲ್ಲುವುದು ಹಿತವೆಂದು ತೋರುತ್ತದೆ.

ಬುದ್ಧ ಸಮಾಜದಲ್ಲಿರುವ ದುಃಖವನ್ನು ಶಾಶ್ವತವಾಗಿ ತೊಡೆದು ಹಾಕಲು ಶ್ರಮಿಸಿದ. ಬುದ್ಧ ಕಾಡಿಗೆ ಹೋಗಲು ಕಾರಣ



ಗಳೇನಂಬುದನ್ನು ಅನೇಕರು ಅನೇಕ ರೀತಿಯಲ್ಲಿ ವಿವರಿಸುತ್ತಾರೆ. ಅತ್ಯಂತ ಶ್ರೇಷ್ಠ ಸಮಾಜವಾದಿ, ಪ್ರಗತಿಪರ ಚಿಂತಕರಾದ ಅಂಬೇಡ್ಕರ್ ಅವರು ವಿವರಿಸುವುದೇ ಬೇರೆ. ಬುದ್ಧ ಸನ್ಯಾಸತ್ವವನ್ನು ಆಯ್ಕೆ ಮಾಡಿಕೊಂಡ ಕಾರಣ ತನ್ನ ಸ್ವಾರ್ಥಕ್ಕಾಗಿ ಅಲ್ಲ, ಯುದ್ಧ ವಿರೋಧಿಸುವುದಕ್ಕಾಗಿ. ಮುಖ್ಯವಾಗಿ ಮಾನವ ಕಲ್ಯಾಣಕ್ಕಾಗಿ ಎನ್ನುವುದು ನಾವೆಲ್ಲ ಗಮನಿಸಬೇಕಾದ ಅಂಶವಾಗಿದೆ.

ಬುದ್ಧನ ಕಾಲದ ಸಂದರ್ಭದಲ್ಲಿ ಶಾಕ್ಯರ ಹಾಗೂ ಕೋಲಿ ರಾಜರ ನಡುವೆ ರೋಹಿಣಿ ನದಿ ನೀರಿನ ಹಂಚಿಕೆಯ ಸಲುವಾಗಿ ವೈಮನಸ್ಸು ಉಂಟಾಗಿ ಯುದ್ಧಕ್ಕೆ ಶಾಕ್ಯರು ಮುಂದಾಗುತ್ತಾರೆ. ಸಭೆಯಲ್ಲಿ ಈ ಕುರಿತು ನಿರ್ಣಯ ತೆಗೆದುಕೊಳ್ಳುವ ಸಂದರ್ಭದಲ್ಲಿ ಎಲ್ಲ ಸದಸ್ಯರ ಅಭಿಪ್ರಾಯಗಳನ್ನು ಕೇಳುತ್ತಾರೆ. ಆಗ ಬುದ್ಧ ನೀರಿನ ಹಂಚಿಕೆಗಾಗಿ ಯುದ್ಧ ಮಾಡುವುದರಿಂದ ಅಶಾಂತಿ ಉಂಟಾಗುತ್ತದೆ. ರಕ್ತ ಪಾತವಾಗುತ್ತದೆ. ಅನೇಕ ಮಹಿಳೆಯರು, ಮಕ್ಕಳು ಅನಾಥರಾಗುತ್ತಾರೆ. ಹೆಣ್ಣು ಮಕ್ಕಳನೇಕರು ಕುಂಕುಮ ಭಾಗ್ಯ ಕಳೆದುಕೊಳ್ಳುತ್ತಾರೆ. ಆದ್ದರಿಂದ ಯುದ್ಧ ಮಾಡುವುದು ನನಗೇಕೊ ಸರಿಕಾಣಿಸದು, ಮಾತುಕತೆ ಮೂಲಕ ನೀರಿನ ಹಂಚಿಕೆ ಸಮಸ್ಯೆ ಬಗೆಹರಿಸಿಕೊಳ್ಳೋಣ ಎಂದು ಸಭೆಗೆ ಸಲಹೆ ನೀಡುತ್ತಾನೆ. ಆಗ ಅಲ್ಲಿರುವ ಬುದ್ಧನ ಕುಟುಂಬದ ವಿರೋಧಿಗಳು ತಂತ್ರ ರೂಪಿಸಿ ಶಾಕ್ಯರ ದೊರೆಯಾಗಿದ್ದ ಬುದ್ಧನ ತಂದೆ ಶುದ್ಧೋಧನನನ್ನು ಅಧಿಕಾರದಿಂದ ಕೆಳಗಿಳಿಸುತ್ತಾರೆ. ಅಷ್ಟೇ ಅಲ್ಲದೆ ಬುದ್ಧನಿಗೆ ಕ್ಷತ್ರಿಯ ಧರ್ಮದ ಪ್ರಕಾರ ಕತ್ತಿ ಹಿಡಿದು ಯುದ್ಧ ಮಾಡಬೇಕೆಂದು ಒತ್ತಾಯಮಾಡುತ್ತಾರೆ.

ಬುದ್ಧ ಸಭೆಯಲ್ಲಿ ಎದ್ದು ನಿಂತು ಯುದ್ಧ ಮಾಡುವುದನ್ನು ಸುತಾರಾಂ ನಾನು ಒಪ್ಪುವುದಿಲ್ಲ. ಎನ್ನುವುದನ್ನು, ಆಗ ಬುದ್ಧನ ದಾಯಾದಿಗಳು ಕೆಲವು ಕಟ್ಟಳೆಗಳನ್ನು ಹಾಕುತ್ತಾರೆ. ಕ್ಷತ್ರಿಯ ಧರ್ಮದ ಪ್ರಕಾರ ಮಾಡಬೇಕು ಇಲ್ಲವೆ ನೀನು ಯುದ್ಧಕ್ಕೆ ಒಪ್ಪದಿದ್ದಲ್ಲಿ ನಿನ್ನ ತಂದೆಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ, ಮತ್ತೆ ಅವರನ್ನು ಸಮಾಜದಿಂದ ಹೊರಗಿಡುವುದಾಗಿ ಹೆದರಿಸುತ್ತಾರೆ. ಆ ಬುದ್ಧ ಸಭೆಯಲ್ಲಿ ವಿನಂತಿಸಿಕೊಳ್ಳುತ್ತಾ ಯುದ್ಧವನ್ನು ಸರ್ವತಹ ನಾನು ಮಾಡಲಾರೆ. ಹಾಗೆಯೇ ಎರಡನೆಯ ಮತ್ತು ಮೂರನೆಯ ಕಾರಣಗಳನ್ನು ವಿರೋಧಿಸುತ್ತಾನೆ. ಈ ಚರ್ಚೆ ನಡೆದ ಸಂದರ್ಭದಲ್ಲಿ ಅಲ್ಲಿಯವರು ಈ ಮೂರನ್ನು ಬಿಟ್ಟರೆ ಮತ್ತೇನು ಮಾಡಲು ಸಾಧ್ಯವೆಂದು ವಿಚಾರಿಸುತ್ತ ಕೋಸಲ ರಾಜನ ಅನುಮತಿಯಿಲ್ಲದೆ ಗಡಿಪಾರು ಅಥವಾ ಗಲ್ಲು ಶಿಕ್ಷೆಗೆ ಗುರಿಪಡಿಸುವಂತಿಲ್ಲ ಎಂದು ಚಿಂತಿತರಾಗುತ್ತಾರೆ.

ಬುದ್ಧ ಮುಂದುವರೆದು ಹೀಗೆ ವಿನಂತಿಸಿಕೊಳ್ಳುತ್ತಾನೆ. ಯುದ್ಧ ನಿಲ್ಲಿಸುವುದಕ್ಕಾಗಿ ತಾವೆಲ್ಲ ಒಪ್ಪಿದರೆ ನಾನು ಸನ್ಯಾಸವನ್ನು ಸ್ವೀಕರಿಸಿ ದೇಶವನ್ನು ತ್ಯಜಿಸಿ ಕಾಡಿಗೆ ಹೋಗುತ್ತೇನೆ ಎನ್ನುತ್ತಾನೆ. ಇದಕ್ಕೆ ನಿನ್ನ ಕುಟುಂಬದವರ ಒಪ್ಪಿಗೆ ಬೇಕಲ್ಲವೆಂದಾಗ ಅದು ನನ್ನ ಸಮಸ್ಯೆ ನಾನು ಬಗೆಹರಿಸಿಕೊಳ್ಳುವೆ ಎಂದು ಹೇಳುತ್ತಾನೆ. ಆಗಲೂ ಅವರಿಗೆ ಸಂಶಯ ಬಂದು ನೀನು ಕಾಡಿಗೆ ಹೋಗಿ ನಿನ್ನ ತಾಯಿ ಕುಟುಂಬದವರ ಸಹಾಯ ಪಡೆದು ಮುಂದೊಂದಿನ ನಮ್ಮ ಮೇಲೆ ನೀನು ಸೇಡು ತೀರಿಸಿಕೊಳ್ಳಲು ಮುಂದಾದರೆ ಎಂದು ಸಂಶಯ ವ್ಯಕ್ತಪಡಿಸುತ್ತಾರೆ. ಆಗ ಬುದ್ಧ ಹೀಗೆ ಹೇಳುತ್ತಾನೆ. ನನ್ನ ನೆಲಕ್ಕಾಗಲಿ, ಜಲಕ್ಕಾಗಲಿ, ಜನಕ್ಕಾಗಲಿ ನಾನು ಎಂದೂ ಮೋಸ ಮಾಡುವುದಿಲ್ಲ, ಹೀಗೆ

ಹೇಳಿ ಒಪ್ಪಿಗೆ ಪಡೆದು ತನ್ನ ಮನೆಗೆ ಹಿಂದಿರುಗುತ್ತಾನೆ. ಮನೆಯಲ್ಲಿ ತಾಯಿ, ತಂದೆ ಕಾಡಿಗೆ ಹೋಗುವುದನ್ನು ತಿಳಿದ ಎಲ್ಲರೂ ದುಃಖತಪ್ತರಾಗಿರುತ್ತಾರೆ. ಮಗನನ್ನು ಪರಿಪರಿಯಾಗಿ ಕೇಳುತ್ತಾರೆ. ಹೋಗಬೇಡವೆಂದು ಹೇಳುತ್ತಾರೆ. ಬುದ್ಧ ತಾಯಿ ತಂದೆಯನ್ನು ಸಂತೈಸುತ್ತ ಅಮ್ಮಾ ಒಂದು ವೇಳೆ ನಾನು ಯುದ್ಧದಲ್ಲಿ ಮಡಿದಿದ್ದರೆ ತಾವೂ ವೀರ ಮರಣವೆಂದು ಸುಮ್ಮನಾಗುತ್ತಾರೆ. ಮುಂದೆ ಹೆಂಡತಿ ಯಶೋಧರೆಯ ಹತ್ತಿರ ಬಂದಾಗ ನಾನು ಸನ್ಯಾಸವನ್ನು ಸ್ವೀಕರಸಿರುವ ಬಗ್ಗೆ ನಿನಗೇನು ಅನಿಸುತ್ತದೆ ಹೇಳು ಎಂದು ಕೇಳಿದನು. ತನ್ನಲ್ಲಿ ಉಂಟಾಗಿರುವ ಭಾವೋದ್ರೇಕಗಳನ್ನು ಸಂಪೂರ್ಣ ಹತೋಟಿಗೆ ತಂದುಕೊಂಡು ಯಶೋಧರೆ ಹೀಗೆ ಉತ್ತರಿಸುತ್ತಾಳೆ.

ನಾನು ನಿಮ್ಮ ಸ್ಥಿತಿಯಲ್ಲಿದ್ದಿದ್ದರೆ ನಾನೇನು ಮಾಡಬಹುದಾಗಿತ್ತು? ನಾನು ಖಂಡಿತವಾಗಿ ಕೋಲಿಯನ್ನರ ಮೇಲೆ ಯುದ್ಧ ಮಾಡಲು ಮುಂದಾದವರ ಪರ ಉಳಿಯುತ್ತಿರಲಿಲ್ಲ. ನಿಮ್ಮದು ಅತ್ಯುತ್ತಮ ತೀರ್ಮಾನ. ಅದಕ್ಕೆ ನನ್ನ ಅನುಮತಿ ಮಾತ್ರವಲ್ಲದೆ ಪೂರ್ಣ ಬೆಂಬಲವೂ ಇದೆ. ನಾನೂ ಸಹ ನಿಮ್ಮೊಡನೆ ಸನ್ಯಾಸ ಸ್ವೀಕರಿಸಬಹುದಿತ್ತು. ಆದರೆ ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ರಾಹುಲನ ಪೋಷಣೆ ಮತ್ತು ಬೆಳವಣಿಗೆ ಅವನನ್ನು ಸದ್ಗುಣವಂತನನ್ನಾಗಿಸುವ ಹೊಣೆ ನನಗಿರುವುದರಿಂದ ನಾನು ನಿಮ್ಮೊಂದಿಗೆ ಬರಲಾಗುವುದಿಲ್ಲ. ಈ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ನೀವು ಹೆದರದೆ ಹೋಗಿರಿ. ನಿಮ್ಮ ಮಾತಾ ಪಿತೃ, ಸಹೋದರ ಮತ್ತು ನಿಮ್ಮ ಮಗ ಎಲ್ಲರನ್ನು ಸಾಕುವ ಜವಾಬ್ದಾರಿ ನನ್ನದು ಎಂದಳು. ಒಬ್ಬ ಯಶಸ್ವಿ ಪುರುಷನ ಸಾಧನೆಯ ಹಿಂದೆ ಮಹಿಳೆಯ ಶ್ರಮ ಇರುತ್ತದೆ ಎನ್ನುವುದಕ್ಕೆ ಯಶೋಧರೆ ವ್ಯಕ್ತಿತ್ವ ಉತ್ತಮ ಉದಾಹರಣೆ. ಒಂದು ವೇಳೆ ಯಶೋಧರೆ ಸಹಕರಿಸದಿದ್ದರೆ ಏನಾಗುತಿತ್ತು ಎನ್ನುವುದು ಎಲ್ಲರೂ ಯೋಚಿಸಬೇಕಾದ ಸಂಗತಿಯಾಗಿದೆ.

ದಾಯದಿಗಳ ಕುತಂತ್ರಕ್ಕೆ ಬಲಿಯಾಗಿ ಬುದ್ಧ ಕಪಿಲ ವಸ್ತುವನ್ನು ತೊರೆದು ಸಿದ್ಧಾರ್ಥ ಮಗ ರಾಜ್ಯದ ರಾಜ್ಯಧಾನಿ ರಾಜ ಗ್ರಹರತ್ತ ತೆರಳುವನು. ಆತನಷ್ಟು ಸುಂದರ ಯಾರೂ ಇರಲಿಲ್ಲವೆನ್ನಲಾಗುತ್ತದೆ. ಶಾಂತ ಚಿತ್ತಸ್ವಭಾವ ಅವನಲ್ಲಿರುವ ಎಲ್ಲವನ್ನು ಜನ ಮೆಚ್ಚಿ ಬೆರಗಾಗುತ್ತಿದ್ದರು. ಬೇರೆಲ್ಲೋ ತೆರಳಬೇಕಾದವರು ಇತನನ್ನು ನೋಡಿ ನಿಲ್ಲುತ್ತಿದ್ದರು. ಈತನ ಹಾದಿಯನ್ನೇ ಹಿಂಬಾಲಿಸುತ್ತಿದ್ದರು. ಗಂಭೀರ ನಡುಗೆವುಳ್ಳವರು ವೇಗವಾಗಿ ನಡೆಯುತ್ತಿದ್ದರು.

ಬುದ್ಧ ಮತ್ತು ಯಶೋಧರೆ ಈ ಇಬ್ಬರಿಗೂ ಬಂದ ಸಂದರ್ಭವೊಂದು ಅಂಬೇಡ್ಕರ್ ಜೀವನದಲ್ಲಿಯೂ ಬಂದು ಹೋಗಿರುವುದನ್ನು ಹೋಲಿಕೆ ಮಾಡಿ ನೋಡಿದರೆ ಮೈರೋಮಾಂಚನಗೊಳ್ಳುತ್ತದೆ. ಸಮಾಜೋದ್ಧಾರಕ್ಕಾಗಿ ಸಮಾಜದ ಶಾಂತಿಗಾಗಿ ಬುದ್ಧ ಕಾಡಿಗೆ ಹೋದರೆ, ಅಂಬೇಡ್ಕರ್ ಅವರು ದೇಶ ಬಿಟ್ಟು ವಿದೇಶಕ್ಕೆ ಹೋದದ್ದು ಹೆಚ್ಚಿನ ವಿದ್ಯಾಭ್ಯಾಸಕೆಂದಾದರೂ, ಭಾರತದ ಬಹುಸಂಖ್ಯಾತ ದಲಿತ, ಶೋಷಿತರ ಬದುಕಿಗೆ ಬೆಳಕು ನೀಡುವಲ್ಲಿ ಅವರ ವಿದೇಶದ ಅಧ್ಯಯನ ಪೂರಕವಾಯಿತು. ಅಂಬೇಡ್ಕರ್ ಅವರು ಉಪಜೀವನಕ್ಕಾಗಿ ನೌಕರಿ ಹಿಡಿಯುವಷ್ಟು ವಿದ್ಯಾಭ್ಯಾಸ ಮಾಡಿದ್ದರು. ಕುಟುಂಬವನ್ನು ಸಲಹುದಕ್ಕಾಗಿ ಅದು ಸಾಕಾಗಿತ್ತು. ಆದರೂ, ಛಲ ಬಿಡದೆ ಅಂಬೇಡ್ಕರ್ ಅವರು ಸ್ನೇಹಿತರ, ಅರಸರ, ಸಹಾಯ ಸಹಕಾರದಿಂದ ವಿದೇಶಕ್ಕೆ ಹೋಗಿ ವಿಶ್ವದ ಜ್ಞಾನವನ್ನು ಸಂಪಾದನೆ ಮಾಡಿದರು.

ಸಮಾಜದಲ್ಲಿರುವ ಅಜ್ಞಾನವನ್ನು ಹೋಗಲಾಡಿಸುವ ಸಲುವಾಗಿ ಸಮಾಜೋಧಾರ್ಮಿಕ, ರಾಜಕೀಯ ಬದಲಾವಣೆಗಾಗಿ ವಿದ್ವತ್ತನ್ನು ಉಪಯೋಗಿಸಿಕೊಂಡರು. ವಿದೇಶಕ್ಕೆ ಓದಲು ಹೋಗುವಾಗ ಧರ್ಮ ಪತ್ನಿ ತಾಯಿ ರಮಾ ಎಂದೂ ಎದುರು ಮಾತಾಡಲಿಲ್ಲ. ನನ್ನನ್ನು ಬಿಟ್ಟು ನೀರು ದಾಟಿ ಹೋಗುವುದು ಬೇಡವೆಂದು ಒಂದು ವೇಳೆ ರಮಾ ತಾಯಿ ಹಟಹಿಡಿದಿದ್ದರೆ, ಶ್ರೇಷ್ಠ ಜ್ಞಾನಿ, ದಲಿತ ಚಿಂತಕ, ಹೋರಾಟಗಾರ, ಸಂವಿಧಾನ ಶಿಲ್ಪಿರೂಪದ ಅಂಬೇಡ್ಕರ್ ನಮಗೆ ಸಿಗಲಿಕ್ಕೆ ಸಾಧ್ಯವಿರಲಿಲ್ಲವೆನಿಸುತ್ತದೆ. ಜ್ಞಾನ ಸಂಪಾದನೆಗೆ ಬುದ್ಧ ಋಷಿ ಮುನಿಗಳನ್ನು ಹುಡುಕಿಕೊಂಡು ಹೋದರೆ, ಅಂಬೇಡ್ಕರ್ ವಿದೇಶಕ್ಕೆ ಹೋದರು. ಇವರಿಬ್ಬರೂ ಹೊತ್ತು ನಿಂತ ಕಾರಣ ಒಂದೆ ತೆರನಾದುದು. ಜನರಲ್ಲಿರುವ ತಪ್ಪು ತಿಳಿವಳಿಕೆ, ಅಂಧಕಾರ, ಅಸ್ಪೃಶ್ಯತೆ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿದರು. ಬುದ್ಧ-ಅಂಬೇಡ್ಕರ್ ಇಬ್ಬರಲ್ಲಿ ಕಾಲದ ದೃಷ್ಟಿಯಿಂದ ಎರಡುವರೆ ಸಾವಿರ ವರ್ಷಗಳ ಅಂತರವಿದ್ದರೂ ಬುದ್ಧನ ಜ್ಞಾನ, ಕರುಣೆ, ಭ್ರಾತೃತ್ವದ ಸಂಪೂರ್ಣ ಪ್ರಭಾವ ಅಂಬೇಡ್ಕರ್ ಮೇಲಾಗಿದೆ.

ಈ ಇಬ್ಬರು ಮಹಾನ್ ಸಾಧಕರ ಜೀವನದಲ್ಲಿ ಸಹಜವಾಗಿ ಒದಗಿಬಂದ ಕೆಲವು ಸಂದರ್ಭಗಳನ್ನು ಹೋಲಿಸಿ ನೋಡಿದರೆ ನಿಜಕ್ಕೂ ಎಂಥವರನ್ನು ಬೆರಗುಗೊಳಿಸುತ್ತದೆ. ಬುದ್ಧನು ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡವ, ಅಂಬೇಡ್ಕರ್ ಅವರೂ ಬಾಲ್ಯದಲ್ಲಿ ತಾಯಿಯನ್ನು ಕಳೆದು

ಕೂಂಡವರು. ಜನತೆಯ ಹಿತಕ್ಕಾಗಿ ರಾಜತ್ವವನ್ನು ಬುದ್ಧ ತ್ಯಾಗ ಮಾಡಿದರೆ. ಅಂಬೇಡ್ಕರ್ ಅವರು ಸಹ ಮಹಿಳಾ ಮೀಸಲಾತಿಗಾಗಿ, ದಲಿತರ ಹಕ್ಕಿಗಾಗಿ, ಮಂತ್ರಿ ಪದವಿ ನಗಣ್ಯವೆಂದು ತಿಳಿದು ಅಧಿಕಾರ ತ್ಯಜಿಸಿದವರು. ಹೀಗೆ ಅನೇಕ ವಿಷಯಗಳಲ್ಲಿ ಅವರಿಬ್ಬರಲ್ಲಿ ಹೋಲಿಕೆಯನ್ನು ಕಾಣಬಹುದಾಗಿದೆ. ಬುದ್ಧ-ಬಾಬಾ ಸಾಹೇಬ ಅಂಬೇಡ್ಕರ್ ಅವರಿಬ್ಬರ ಸಾರ್ಥಕ ಸಾಧನೆಯ ಹಿಂದೆ ಯಶೋಧರಾ-ರಮಾಬಾಯಿ ಇಬ್ಬರ ಕಠಿಣ ಪರಿಶ್ರಮ, ತ್ಯಾಗ ಇರುವುದು ಗಮನಾರ್ಹವಾದ ವಿಷಯವೆಂದು ಭಾವಿಸಬೇಕಾಗುತ್ತದೆ.

ದಾಯದಿಗಳ ಕುತಂತ್ರಕ್ಕೆ ಬಲಿಯಾಗಿ ಬುದ್ಧ ಕಪಿಲ ವಸ್ತುವನ್ನು ತೊರೆದು ಸಿದ್ಧಾರ್ಥ ಮಗ ರಾಜ್ಯದ ರಾಜ್ಯಧಾನಿ ರಾಜ ಗ್ರಹರತ್ತ ತೆರಳುವನು. ಆತನಷ್ಟು ಸುಂದರ ಯಾರೂ ಇರಲಿಲ್ಲವೆನ್ನಲಾಗುತ್ತದೆ. ಶಾಂತ ಚಿತ್ತ ಸ್ವಭಾವ ಅವನಲ್ಲಿರುವ ಎಲ್ಲವನ್ನು ಜನ ಮೆಚ್ಚಿ ಬೆರಗಾಗುತ್ತಿದ್ದರು. ಬೇರೆಲ್ಲೋ ತೆರಳಬೇಕಾದವರು ಇತನನ್ನು ನೋಡಿ ನಿಲ್ಲುತ್ತಿದ್ದರು. ಈತನ ಹಾದಿಯನ್ನೇ ಹಿಂಬಾಲಿಸುತ್ತಿದ್ದರು. ಗಂಭೀರ ನಡುಗೆವುಳ್ಳವರು ವೇಗವಾಗಿ ನಡೆಯುತ್ತಿದ್ದರು. ರಾಜಗ್ರಹದಲ್ಲಿ ಬುದ್ಧನನ್ನು ನೋಡಲು ಬರುತ್ತಿದ್ದ ಜನರಿಂದ ಸುದ್ದಿಯನ್ನು ತಿಳಿದ ಬಿಂಬಸಾರ ದೊರೆ ಬುದ್ಧನನ್ನು ಹಿಂಬಾಲಿಸಿದ. 'ನೀನು ರಾಜಕುಮಾರ ಕಾಡಿಗೆ ಹೋಗ ಬೇಡ ನಿನಗೆ ನನ್ನ ರಾಜ್ಯದ ಅರ್ಧಭಾಗವನ್ನು ಕೊಡುತ್ತೇನೆ, ಐಶ್ವರ್ಯವನ್ನು ಬೋಗಿಸು. ಸಂತೋಷವನ್ನು ಅನುಸರಿಸು, ಯೌವನದ ಎಲ್ಲ ಭೋಗಗಳನ್ನು ಪಡೆದು ಸುಖವಾಗಿರು. ಮತ ಧರ್ಮ ಪಾಲಿಸುವುದೇ ಮುಖ್ಯವಾದಲ್ಲಿ ನೀನು ಬಲಿಕೊಡುವುದನ್ನು ಆರಂಭಿಸು ಎಂದು ಪರಿಪರಿಯಾಗಿ ಆಸೆ ಹುಟ್ಟಿಸುತ್ತಾನೆ.

ಉತ್ತರವಾಗಿ ಬುದ್ಧ ಬಿಂಬಸಾರನಿಗೆ 'ನನಗೆ ನೀವು ತಿಳಿಸಿದ ವಿಷಯಗಳೆಲ್ಲವು ಅಪರೂಪವಾದವುಗಳೇನು ಅಲ್ಲ. ಸ್ನೇಹ ಯಾವುಗಲೂ ದುರ್ದೆಶೆಗಳಿಂದ ಕೂಡಿರಬಾರದು. ಅದು ಕೆಟ್ಟಕಾಲದಲ್ಲಿ ಮುಂದುವರೆಯಬೇಕು. ಪ್ರಪಂಚದಲ್ಲಿ ಸುಖಭೋಗಗಳು ಕ್ಷಣಿಕ ಎಂದು ಹೇಳುತ್ತಾ ಆಸೆಯೇ ದುಃಖಕ್ಕೆ ಮೂಲಕಾರಣವಾದುದು ಎನ್ನುವುದರ ಕುರಿತು ಉಪದೇಶ ಮಾಡುತ್ತಾನೆ. ಒಂದು ರಾಜ್ಯ ಗೆದ್ದು ಮತ್ತೊಂದರ ಮೇಲೆ ದಂಡೆತ್ತಿ ಹೋಗುತ್ತಾರೆ. ಸಮುದ್ರಕ್ಕೆ ಎಷ್ಟು ನೀರು ಸೇರಿದರೂ ಅದು ಬೇಡವೆಂದು ಹೇಳದು. ಆಸೆಯು ಹಾಗೆ. ಆಸೆಯು ಎಂದೂ ಸುಖ ಸಂತೋಷವನ್ನು ತಂದುಕೊಡುವುದಿಲ್ಲ. ಬಂಗಾರದ ಮಲೆಗಾರೆದರೂ ಆಸೆ ತೀರದು. ಈ ಮಂದ ಅರಸರಿಗೆ ಅದು ತಿಳಿಯದು ಎಂದಿದ್ದಾನೆ ಬುದ್ಧ. ಪ್ರಾಣಿ ಬಲಿ ಕೊಡುವುದರ ಕುರಿತು ಬಿಂಬಸಾರ ಆಡಿದ ಮಾತಿಗೆ ಬುದ್ಧ ಹೀಗೆ ಹೇಳುತ್ತಾನೆ. ಮೂಕ ಪ್ರಾಣಿಯನ್ನು ಬಲಿಕೊಡುವುದರಿಂದ ದೇವರು ಸಿಗುತ್ತಾನೆ ಎನ್ನುವುದಾದರೆ ನನ್ನನ್ನೇಕೆ ಬಲಿಕೊಡಬಾರದು ಎಂದು ಪ್ರಶ್ನಿಸುತ್ತಾನೆ.

ಮುಂದುವರೆದು ಬುದ್ಧನು ಆಡುವ ಮಾತುಗಳಲ್ಲಿ ನಿಜಕ್ಕೂ ಸಾಮಾಜಿಕ ತೊಡಕುಗಳಿಗೆ ನೇರವಾದ, ಸ್ಪಷ್ಟವಾದ ಉತ್ತರ ಸಿಗುತ್ತದೆ. ತೂಕಡಿಕೆ ಮನುಷ್ಯನ ದೇಹದ ಜಡಸ್ವಭಾವ ಅದರ ನಿವಾರಣೆಗೆ ಹಾಸಿಗೆ ಉತ್ತಮ. ಗಾಡಿಯು ಪ್ರಯಾಣದ ಆಯಾಸ ನಿವಾರಕ. ಆಸನ ನಿಂತಿರುವ ನೋವಿನ ನಿವಾರಕ. ಸ್ನಾನ, ಕೊಳೆ ತೊಳೆಯಲಿಕ್ಕೆ ಉತ್ತಮ ಆರೋಗ್ಯಕ್ಕೆ ಇವೆಲ್ಲ ನೋವು ನಿವಾರಕಗಳೇ ವಿನಃ ಸುಖ ಎಂದೂ ಕೊಡಲಾರವು ಎಂದು ವಿವರಿಸುವುದರ ಮೂಲಕ ಬಿಂಬಸಾರನಿಗೆ ತಿಳಿಹೇಳುತ್ತಾನೆ. ಹೀಗೆ

ಕೆಲವುದಿನಗಳು ಕಳೆದ ಮೇಲೆ ಬುದ್ಧನು ಉಳಿದು ಕೊಂಡ ಸ್ಥಳಕ್ಕೆ ಕಪಿಲ ವಸ್ತುವಿನಿಂದ ಬಂದ ನಾಲ್ಕು ಜನ ಸನ್ಯಾಸಿಗಳ ಬುದ್ಧನನ್ನು ಕಂಡು ಅಲ್ಲಿಯ ಸಮಾಚಾರ ತಿಳಿಸುತ್ತಾರೆ. ನೀವು ಬಂದ ಮೇಲೆ ಅಲ್ಲಿ ಶಾಂತಿ ನೆಲೆಸಿದೆ. ನೀರು ಹಂಚಿಕೆಗಾಗಿ ಎರಡೂ ರಾಜರಲ್ಲಿ ನ್ಯಾಯ ನಿರ್ಣಾಯಕರ ಸಮಿತಿ ರಚನೆಯಾಗಿದೆ. ಜನ ನಿಮ್ಮ ವಿಚಾರಗಳಿಗೆ ಗೌರವಿಸುತ್ತಿದ್ದಾರೆ. ಯುದ್ಧ ನಿಂತಿದೆ. ಇನ್ನು ನೀವು ಸನ್ಯಾಸ ರಚನೆಯಾಗಿದೆ.

ಎಲ್ಲವನ್ನು ತೊರೆದ ಬುದ್ಧ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಮುಂದೆ ಮುಂದೆ ಹೋಗುತ್ತಾನೆ.

ಕೆಲವುದಿನಗಳು ಕಳೆದ ಮೇಲೆ ಬುದ್ಧನು ಉಳಿದು ಕೊಂಡ ಸ್ಥಳಕ್ಕೆ ಕಪಿಲ ವಸ್ತುವಿನಿಂದ ಬಂದ ನಾಲ್ಕು ಜನ ಸನ್ಯಾಸಿಗಳ ಬುದ್ಧನನ್ನು ಕಂಡು ಅಲ್ಲಿಯ ಸಮಾಚಾರ ತಿಳಿಸುತ್ತಾರೆ. ನೀವು ಬಂದ ಮೇಲೆ ಅಲ್ಲಿ ಶಾಂತಿ ನೆಲೆಸಿದೆ. ನೀರು ಹಂಚಿಕೆಗಾಗಿ ಎರಡೂ ರಾಜರಲ್ಲಿ ನ್ಯಾಯ ನಿರ್ಣಾಯಕರ ಸಮಿತಿ ರಚನೆಯಾಗಿದೆ. ಜನ ನಿಮ್ಮ ವಿಚಾರಗಳಿಗೆ ಗೌರವಿಸುತ್ತಿದ್ದಾರೆ. ಯುದ್ಧ ನಿಂತಿದೆ. ಇನ್ನು ನೀವು ಸನ್ಯಾಸ ರಚನೆಯಾಗಿದೆ. ಜನ ನಿಮ್ಮ ವಿಚಾರಗಳಿಗೆ ಗೌರವಿಸುತ್ತಿದ್ದಾರೆ. ಯುದ್ಧ ನಿಂತಿದೆ. ಇನ್ನು ನೀವು ಸನ್ಯಾಸ ಮುಂದುವರೆಸುವುದು ವಿಹಿತವಲ್ಲವೆಂದು ಹೇಳುತ್ತಾರೆ. ಅಲ್ಲದೆ ತಾಯಿ, ತಂದೆ ಹೆಂಡತಿ ಮಕ್ಕಳನ್ನು ಸೇರಿ ಸುಖವಾಗಿ ಬದುಕಬಹುದಲ್ಲವೆನ್ನುತ್ತಾರೆ. ಸನ್ಯಾಸಿಗಳನ್ನುದ್ದೇಶಿಸಿ ಭಗವಾನ ಬುದ್ಧ ಹೀಗೆ ಹೇಳುತ್ತಾನೆ.

ಸಂಘರ್ಷ ಎನ್ನುವುದು ಕೇವಲ ರಾಜ-ಮಹಾರಾಜರೊಡನೆ ಮತ್ತು ರಾಷ್ಟ್ರಗಳೊಡನೆ ಮಾತ್ರವೆ ಅಲ್ಲ. ಶ್ರೇಷ್ಠ ಕನಿಷ್ಠರ ಮಧ್ಯ, ಗ್ರಹಸ್ಥರಲ್ಲೂ, ತಾಯಿ-ಮಗ-ತಂದೆ ಮಗನಲ್ಲೂ, ಸಹೋದರ ಸಹೋದರಿಯರಲ್ಲೂ, ಸಮಾಜದ ಆಂತರಿಕ ವಲಯದಲ್ಲಿ ಅಶಾಂತಿ ನೆಲೆಸಿದೆ. ಅದನ್ನು ಕಡಿಮೆಗೊಳಿಸುವ ಕಾರಣಕ್ಕಾಗಿ ನಾನು ನನ್ನ ಅಧ್ಯಯನದ ತಪಸ್ಸನ್ನು ಮುಂದುವರೆಸುತ್ತೇನೆ ಎಂದು ಹೇಳುವನು. ಇಂಥ ಉಧಾತ್ ವಿಚಾರಗಳಿಂದಾಗಿ ಬುದ್ಧ ನಮಗೆ ಆದರ್ಶವಾಗಿದ್ದರೆ. ಬುದ್ಧನಂತೆ ಅಂಬೇಡ್ಕರ್ ಅವರು ತಮ್ಮ ವಿದ್ಯಾಭ್ಯಾಸದ ಜೀವನದಲ್ಲಿ ವಿದೇಶದಲ್ಲಿದ್ದಾಗ ಯಾವ ಸುಖಭೋಗಗಳಿಗೂ ಬೆಲೆಕೊಡದೆ ಹಗಲಿರುಳು ದುಡಿದರು. ವಿದೇಶದಲ್ಲಿ ಓದುವಾಗ, ಗ್ರಂಥಾಲಯದಲ್ಲಿ ಸುಮಾರು ಹದಿನೆಂಟು ತಾಸುಗಳ ಕಾಲ ಅಧ್ಯಯನಕ್ಕಾಗಿ ಕಳೆಯುತ್ತಿದ್ದರು. ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಅನೇಕ ನಿಂದನೆಗಳಿಗೆ ಗುರಿಯಾಗಿ ನೊಂದುಕೊಂಡರೂ ಸಮಾಜಸೇವೆಯನ್ನು ಬಿಡಲಿಲ್ಲ. ಅಂಬೇಡ್ಕರ್ ಸ್ವಾರ್ಥಸಾಧನೆಗಾಗಿ ವಾಮಮಾರ್ಗ ಬಳಸಿದ್ದರೆ ಈ ದೇಶದ ಪ್ರಧಾನಿಯೂ ಆಗಬಹುದಿತ್ತು. ಆದರೆ, ಸ್ವಹಿತಕ್ಕಾಗಿ ಅಂಬೇಡ್ಕರ್ ಎಂದೂ ಹಾಗೆ ಮಾಡಲಿಲ್ಲ. ಆಸ್ತಿ ಅಂತಸ್ತು ಗಳಿಸಬೇಕೆಂದು ಎಂದೂ ವಿಚಾರಿಸಿದವರಲ್ಲ. ಅಧಿಕಾರಕ್ಕಾಗಿ ಎಂದೂ ಅಂಟಿಕೊಂಡು ಉಳಿದವರಲ್ಲ. ಜೀವಿತದುದ್ದಕ್ಕೂ ಸಮಾಜದ ಹಿತಕ್ಕಾಗಿ ದೇಶದ ಉನ್ನತಿಗಾಗಿ ದುಡಿದ ಅಂಬೇಡ್ಕರ್ ಅವರು ದಲಿತ, ಶೋಷಿತರ ಬಾಳಿಗೇ ಬೆಳಕಾಗಿ ಬದುಕಿದರು. ಹಿಂದೂ ಧರ್ಮದ ಕಂದಾಚಾರಗಳ ವಿರುದ್ಧ ಕೆಂಡಕಾರುತ್ತಿದ್ದರು. ಅಸಮಾನತೆಗೆ ಎಂದೂ ಸೊಪ್ಪು ಹಾಕುತ್ತಿರಲಿಲ್ಲ.

ಅಂಬೇಡ್ಕರ್ ಅವರು ತಮ್ಮ ಜೀಪಿತದ ಕೊನೆಗಾಲದಲ್ಲಿ ಬೌದ್ಧಧರ್ಮ ಸ್ವೀಕರಿಸುವುದರ ಮೂಲಕ ಮರುಹುಟ್ಟನ್ನು ಪಡೆದರು. ಆಗ ಅವರು ಹಿಂದೂ ದೇವರುಗಳನ್ನು ನಾನೆಂದೂ ಗೌರವಿಸುವುದಿಲ್ಲ ಎಂದು ಹೇಳುವುದರ ಮೂಲಕ ಬುದ್ಧನ ದಾರಿ ಹಿಡಿದರು. ದೇವರ ವಿಷಯದಲ್ಲಿ ಬುದ್ಧ ಮೌನವಹಿಸಿದ ಅನ್ನುವುದಕ್ಕಿಂತ ವ್ಯರ್ಥ ವಿಚಾರಗಳ ಬಗ್ಗೆ ಸಮಯವೇಕೆ ಹಾಳು ಮಾಡಬೇಕೆಂದಿದ್ದರು. ಭಾರತೀಯ ಹಿಂದೂಗಳು ಯಾವ ದೈವ ದೇವರ ಹೆಸರಿನಲ್ಲಿ ಅಮಾಯಕರನ್ನು, ಬಡವರನ್ನು ಮೋಸ, ವಂಚನೆಗೀಡು ಮಾಡುತ್ತಿದ್ದರು, ಅಂಥವರ ವಿಚಾರಗಳನ್ನು ಅಂಬೇಡ್ಕರ್ ಖಂಡಿಸಿದರು, ವಿರೋಧಿಸಿದರು. ಹೀಗೆ ಮಾಡುವುದರ ಮೂಲಕ ಬುದ್ಧನನ್ನು ಅಪ್ಪಿಕೊಂಡರು. ತಮ್ಮ ಬದುಕಿನ ದಾರಿಯನ್ನು ಬುದ್ಧನ ಬೆಳಕಲ್ಲಿ ರೂಪಿಸಿಕೊಂಡರು. ಇಂಥ ಸಮಾನತೆಯ ಶ್ರೇಷ್ಠ ಧಾರೆಗಳೆರಡು ನಮ್ಮೆದುರಿಗಿದ್ದರೂ ನಾವು ಅತ್ತ ವಿಚಾರಿಸುತ್ತಿಲ್ಲ. ಆ ನಿಟ್ಟಿನಲ್ಲಿ ಇಂದು ನಡೆಯುವುದು ಅನಿವಾರ್ಯವಾಗಬೇಕಾಗಿದೆ.

ಈ ಕುರಿತಾಗಿ ಇಲ್ಲೊಂದು ಚಿಕ್ಕ ಉದಾಹರಣೆಯನ್ನು ನೆನಪಿಸಿಕೊಳ್ಳುವುದು ಉಚಿತವೆಂದು ತೋರುತ್ತದೆ. 'ಟಾಂಗಾದ ಚಾಲಕನೊಬ್ಬ ಕುದುರೆಯ ಸಹಾಯದಿಂದ ಸವಾರಿಗಳನ್ನು ಸಾಗಿಸಿ ಉಪಜೀವನ ಮಾಡುತ್ತಿದ್ದ. ಒಂದಾನೊಂದು ದಿನ ಕುದುರೆ ಟಾಂಗಾಕ್ಕೆ ಹೆಗಲು ಕೊಡದೆ ಹಟ ಮಾಡಲು ಪ್ರಾರಂಭಿಸಿತು. ಮಾಲಿಕನಿಗೆ ಚಿಂತೆಯಾಯಿತು. ಟಾಂಗಾ ಹೊಡೆಯದಿದ್ದರೆ ಕುಟುಂಬದ ಎಲ್ಲರ ಹೊಟ್ಟೆ ತುಂಬುವುದಾದರು ಹೇಗೆ, ಏನು ಮಾಡಬೇಕು ಎಂದು ಯೋಚಿಸುತ್ತಿದ. ಯೋಚಿಸುತ್ತಾ ಕುಳಿತಾಗ ಸುಲಭವಾದ ವಿಚಾರ ಒಂದು ಹೊಳೆಯಿತು. ಟಾಂಗಾದ ಕುದುರೆಯ ಮುಖದ ಮುಂದೆ ಹುಲ್ಲಿನ ಹೊರೆಯೊಂದನ್ನು ಕಟ್ಟಿದ ಆ ಹೊರೆ ಕುದುರೆಯ ಬಾಯಿಗೆ ಬರುತ್ತಿರಲಿಲ್ಲ. ಹಾಗೆ ಕಟ್ಟಿದ ತಕ್ಷಣ ಹುಲ್ಲಿನ ಆಸೆಗಾಗಿ ಕುದುರೆ ಟಾಂಗಾಕ್ಕೆ ಹೆಗಲು ಕೊಟ್ಟಿತ್ತು. ಹುಲ್ಲು ಈಗ ಸಿಗುತ್ತೆ ಇನ್ನೇನು ಸಿಕ್ಕೆ ಬಿಟ್ಟಿತು ಎಂದು ಟಾಂಗಾ ಎಳೆದೂ ಎಳೆದೂ ಸುಸ್ತಾಗಿ ಕುದುರೆ ಸತ್ತೇ ಹೋಯಿತು. ಹಿಂದೂ ಧರ್ಮವೆಂದರೆ ಅದೊಂದು ಆಸೆಯ ಗೋಪುರ. ಕುದುರೆಯಂತೆ ಟಾಂಗಾ ಎಳೆದರೆ, ಹುಲ್ಲೂ ಸಿಗಲಾರದು ಹೊಟ್ಟೆಯೂ ತುಂಬಲಾರದು. ಹಿಂದೂ ಧರ್ಮದಲ್ಲಿ ಸಮಾನತೆ ಎಂಬುದು ಹುಲ್ಲಿನ ಹೊರೆ ಇದ್ದಂತೆ. ಸಮಾನತೆ ಎನ್ನುವುದು ಕನಸಿನ ಮಾತಾಗಿದೆ.

ಸಮಾನತೆ ಕೇಳಿ ಕೇಳಿ ಅಸಮಾನತೆಯಲ್ಲಿಯೇ ದಲಿತರು, ಶೋಷಿತರು ಯಾತನೆಯನ್ನೂ ಅಪಮಾನವನ್ನು ಅನುಭವಿಸುತ್ತಾ ಸಮಾನವಾದ, ಗೌರವಕ್ಕಾಗಿ ಪುಕ್ಕಟೆಯಾಗಿ ದುಡಿದು ದುಡಿದು ಕುದುರೆಯಂತೆ ಸಾಯಬೇಕಾಗುತ್ತದೆ. ಆದ್ದರಿಂದ ದಲಿತ ಶೋಷಿತರು ಸಮಾನ ಚಿತ್ತದಿಂದ ಆಲೋಚಿಸಿ ಹಿಂದೂ ಧರ್ಮವನ್ನು ತ್ಯಜಿಸುವುದರ ಮೂಲಕ ಬುದ್ಧನ ಬೆಳಕಿನಲ್ಲಿ ಅಂಬೇಡ್ಕರ್ ಅವರು ಹೇಗೆ ಬದುಕು ರೂಪಿಸಿಕೊಂಡರು, ಹಾಗೆ ದಲಿತರೆಲ್ಲರೂ ಹಿಂದೂ ಧರ್ಮವೆಂಬ ಕಾರ್ಗತ್ತಲೆಯ ಕಣಿವೆಯಿಂದ ಬುದ್ಧತ್ವದ-ಅಂಬೇಡ್ಕರ್ ಪ್ರಜ್ಞೆಯ ಬೆಳಕಿನೆಡೆಗೆ ನಡೆದರೆ ಒಳಿತಲ್ಲವೆ? □

ನೆಲದ ಗಾಸ್ಟೃತ್ತು

ನಿತ್ಯ
ನೆಲ ಮುಟ್ಟಿ ಕಣ್ಣಿಗೊತ್ತಿಕೊಂಡಾಗ
ನನ್ನೊಳಗಿನ ಹೊತ್ತು ಹುಟ್ಟುತ್ತಿತ್ತು
ನೀ ಬಿರಿದಾಗ ಹಸನಿಸಿದೆ
ಅತ್ತಾಗ ನೀರುಣಿಸಿದೆ
ಆದರೆ,
ನನ್ನ ಒಕ್ಕಲೆಬ್ಬಿಸಿದಾಗ
ನೀ ಎಚ್ಚರವಿಲ್ಲದೆ ಮಲಗಿರುವೆ
ಇಲ್ಲಿಯವರೆಗೆ
ಗಿರಿಜನ–ಹಿರಿಜನವೆಂಬ
ಹಣೆ ಫಲಕಗಳ ಭಾರ
ಈಗ
ನಿರಾಶ್ರಿತನೆಂಬ ಪ್ರಶಸ್ತಿಪತ್ರ!
ತಮ್ಮ ತಮ್ಮ ನೆಲಗಳನ್ನು
ಭದ್ರಪಡಿಸಿಕೊಂಡ
ಭೂಮಿತಾಯಿ ನಮ್ಮವ್ವ ಎಂದ್ಹಾಡುವ
ಮಹಾನೀಯರೇ,
ಈ ನೆಲ
ನನಗೆ ನನ್ನವ್ವನಂತೆ
ಗೋಚರಿಸುವುದೇ ಇಲ್ಲ.
ಅವಳೆಂದು
ನನ್ನ ಮೇಲಾದ ಆಕ್ರಮಣಗಳ ನೋಡಿ
ಸುಮ್ಮನೆ ಕೂತದ್ದಿಲ್ಲ
ಆದರೆ, ನೀನು
ಇಂದು ನನ್ನೊಂದಿಗೆ
ಕರಾರು ಬದಲಿಯಾದರೆ
ನಾಳೆ ಯಾರದೋ ಮಡಿಲಿಗೆ!
ಪಕ್ಕ ಆದರಗಿತ್ತಿ!
ನನ್ನಪ್ಪ ಸತ್ತಾಗ
ಹೆಣವಿಟ್ಟು ದುಃಖಿಸಲು
ನೆಲವಿರಲಿಲ್ಲ



ನನ್ನಪ್ಪನ ಗೇರು
ಸಾವಿನೊಂದಿಗೆ ಅನುಸಂಧಾನಿಸುತ್ತಿರುವಾಗ
ನೀರುಣಿಸುವುದಕ್ಕಿಂತ
ನೆಲ ಹುಡುಕುವ ತಳಮಳವೇ ಹೆಚ್ಚಾಗಿತ್ತು.
ಸಾಯುವ ಮುನ್ನ
ಉಳುವ ನೆಲ
ಖಾತ್ರಿ ಮಾಡಿಕೊಂಡೇ ಸಾಯಬೇಕಿದೆ
ಅಥವಾ
ಪ್ರಾಣಿ ಪಕ್ಷಿಗಳ ಪ್ರಯೋಗಾಲಯಕ್ಕೆ
ಒಪ್ಪಿಸಿಬಿಡಬೇಕು.
ಇಲ್ಲವಾದರೆ
ಸತ್ತವರ ಸಮಾಧಿಗಳಿಂದೆಬ್ಬಿಸಿ
ಎಬ್ಬಿಸಿ ಸಾಯಿಸುತ್ತಾರೆ
ನೆಲದ ಹಂಗಿಲ್ಲದೆ
ಆಕಾಶದುದ್ದಕ್ಕೂ ವಿಹರಿಸುವ
ಹಕ್ಕಿಗಳೇ
ನನಗೂ ರೆಕ್ಕೆ ಹಚ್ಚಿ ಬಿಡಿ
ತ್ರಾಣವಿರುವವರೆಗೂ ಹಾರುತ್ತೇನೆ.
ಕೊನೆಗೊಂದು ದಿನ
ಚಂದ್ರನಂತೆ ಅಲ್ಲೊಂದು
ಸಮಾಧಿ ಕಟ್ಟಿಸಿಕೊಳ್ಳುತ್ತೇನೆ

○ ಕೈದಾಳ್ ಕೃಷ್ಣಮೂರ್ತಿ

ಜನದ್ರೋಹಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಗೋಧಿ ಆಮದು. ನಮ್ಮ ದೇಶದ ಒಟ್ಟಾರೆ ಗೋಧಿ ಬಳಕೆ ೬೫-೭೦ ಮಿಲಿಯನ್ ಟನ್. ಆದರೆ ಈ ವರ್ಷ ದೇಶದ ರೈತರು ದಾಖಲೆ ಪ್ರಮಾಣದಲ್ಲಿ ಅಂದರೆ ೭೪ ಮಿಲಿಯನ್ ಟನ್ನಿನಷ್ಟು ಅಂದರೆ ಅಗತ್ಯಕ್ಕಿಂತ ೫-೧೦ ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ಅಧಿಕವಾಗಿಯೇ ಉತ್ಪಾದನೆ ಮಾಡಿದ್ದರು. ಆದರೂ ಸರ್ಕಾರ ಒಂದು ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ಆಸ್ಟ್ರೇಲಿಯಾ ಮತ್ತು ಅಮೆರಿಕಗಳಿಂದ ಆಮದು ಮಾಡಿಕೊಂಡಿತು. ಅದು ಯಾವ ಬೆಲೆಯಲ್ಲಿ? ನಮ್ಮ ರೈತರು ಕ್ವಿಂಟಾಲಿಗೆ ೮೫೦ ರೂ. ಬೆಂಬಲ ಬೆಲೆಯನ್ನು ಆಗ್ರಹಿಸಿದರೆ ನಿರಾಕರಿಸಿದ ಸರ್ಕಾರ ಆಸ್ಟ್ರೇಲಿಯಾದಿಂದ ಕ್ವಿಂಟಾಲಿಗೆ ೧೬೫೦ ರೂ. ಬೆಲೆ ತೆತ್ತು ಆಮದು ಮಾಡಿಕೊಂಡಿತು. ಏಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯ ದರ ಹೆಚ್ಚಿತ್ತು!

ಶಿವಸುಂದರ್

ಕಳೆದ ಮೂರು ವಾರಗಳಿಂದ ಜನತೆಯ ನಿತ್ಯ ಬಳಕೆಯ ಆಹಾರ ಧಾನ್ಯಗಳ ಬೆಲೆಯು ಒಂದೇ ಸಮನೆ ಏರುತ್ತಿದೆ. ಒಂದು ಅಂದಾಜಿನ ಪ್ರಕಾರ ೧೯೭೧ರಲ್ಲಿ ಬಿಟ್ಟರೆ ಈ ವೇಗದಲ್ಲಿ ಬೆಲೆಗಳು ಏರುತ್ತಿರುವುದು ಈಗಲೇ. ಗೋಧಿ, ಅಕ್ಕಿ, ದ್ವಿದಳ ಧಾನ್ಯಗಳು, ಎಣ್ಣೆ ಇತ್ಯಾದಿಗಳ ಬೆಲೆಗಳು ಕಳೆದ ಮೂರು ತಿಂಗಳಲ್ಲಿ ಹೆಚ್ಚು ಕಡಿಮೆ ಒಂದೂವರೆ ಪಟ್ಟು ಹೆಚ್ಚಿದೆ. ಹಣದುಬ್ಬರದ ಪ್ರಮಾಣ ಮೂರು ವಾರಗಳ ಕೆಳಗೆ ಶೇ.೭ ರಷ್ಟಿದ್ದದ್ದು ಈಗ ಶೇ.೭.೪೩ಕ್ಕೇ ಏರಿದೆ. ಅಂದರೆ ಅಷ್ಟರ ಮಟ್ಟಿಗೆ ಎಲ್ಲಾ ವಸ್ತುಗಳ ಬೆಲೆ ಅದರಲ್ಲೂ ಆಹಾರ ಧಾನ್ಯಗಳ ಬೆಲೆ ತುಟ್ಟಿಯಾಗಿದೆ. ಮತ್ತೊಂದು ಕಡೆ ಅಗ್ಗದ ದರದಲ್ಲಿ ಕನಿಷ್ಟ ಪ್ರಮಾಣದ ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದ ಪಡಿತರ ಪದ್ಧತಿಯಿಂದ ಕೋಟ್ಯಾಂತರ ಬಡಜನರನ್ನು ಹೊರಗಿಟ್ಟಿರುವುದರಿಂದ ದೇಶದಲ್ಲೂ ಮತ್ತು ಕರ್ನಾಟಕದಲ್ಲೂ ಈ ಬೆಲೆ ಏರಿಕೆಯ ಬಿಸಿಯಿಂದ ಬಡಜನತೆ ತತ್ತರಿಸುತ್ತಿದ್ದಾರೆ.

ಆದರೆ ಚುನಾವಣೆಯ ಬಿಸಿಯಲ್ಲಿ ಓಟನ್ನು ಬೇಯಿಸಿಕೊಳ್ಳಲು ಹುನ್ನಾರ ನಡೆಸಿರುವ ಚುನಾವಣಾ ಪಕ್ಷಗಳು ಬಡ ಜನತೆಯ ಈ ಸಂಕಷ್ಟವನ್ನೂ ತಮ್ಮ ವೋಟಿನ ಬೇಟೆಗೆ ಬಳಸಿಕೊಳ್ಳುತ್ತಿವೆ. ಉದಾಹರಣೆಗೆ ಈವರೆಗೆ ಎಂದೂ ಬೆಲೆ ಏರಿಕೆಯ ಬಗ್ಗೆ ಮಾತನಾಡದಿದ್ದ ಬಿಜೆಪಿ ಪಕ್ಷ ತಮ್ಮ ಚುನಾವಣಾ ಪ್ರಚಾರದಲ್ಲಿ ಬೆಲೆ ಏರಿಕೆಯನ್ನೇ ಪ್ರಮುಖ ವಿಷಯವನ್ನಾಗಿ ಮಾಡಿಕೊಳ್ಳುವುದಾಗಿ ಹೇಳಿದೆ. ಅದರ ರಾಷ್ಟ್ರೀಯ ಕಾರ್ಯದರ್ಶಿ ಅರುಣ್ ಜೈಟ್ಲಿ ಪಕ್ಷದ ಚುನಾವಣಾ ಪ್ರಚಾರದ ಬಗ್ಗೆ ಮಾತನಾಡುತ್ತಾ "ಜೆಡಿಎಸ್ ನ ವಿಶ್ವಾಸದ್ರೋಹ ಚುನಾವಣೆಯಲ್ಲಿ ಒಂದು ವಿಷಯವೇ ಹೊರತು ಅದೇ ಪ್ರಮುಖವಲ್ಲ. ಬೆಲೆ ಏರಿಕೆ ಮತ್ತು ಹಣದುಬ್ಬರ ಪ್ರಮುಖ ವಿಷಯಗಳಾಗಲಿವೆ." ಎಂದು ಘೋಷಿಸಿದ್ದಾರೆ. ಮತ್ತೊಂದೆಡೆ ಯುಪಿಎ ಸರ್ಕಾರ ಬೆಲೆ ಏರಿಕೆ ನಿಯಂತ್ರಣಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳುತ್ತಿದೆ. ಆದರೆ ಅದೇ ಸಮಯದಲ್ಲಿ "ಈ ಬಗೆಯ ಹಣದುಬ್ಬರಗಳು ಎಲ್ಲಾ ಪ್ರಗತಿಶೀಲ ದೇಶಗಳಲ್ಲು ಸಂಭವಿಸುತ್ತಿದೆ. ಉದಾಹರಣೆಗೆ ಚೀನಾದಲ್ಲಿ ಹಣದುಬ್ಬರವು ಶೇ.೮.೭ರ ದರದಲ್ಲೂ, ರಷಿಯಾದಲ್ಲಿ ಶೇ.೧೧.೯ರ ದರದಲ್ಲೂ, ಟರ್ಕಿಯಲ್ಲಿ ಶೆ.೮.೧ರ ದರಲ್ಲೂ ಬೆಳೆಯುತ್ತಿದೆ. ಹಾಗೆ ನೋಡಿದರೆ ಭಾರತದಲ್ಲಿ ಅದು ಕೇವಲ ಶೇ.೭.೪೪ ಮಾತ್ರ ಇದೆ" ಎಂದು ಹಣದುಬ್ಬರವೂ ಅಭಿವೃದ್ಧಿಯ ಸಂಕೇತವೇನೋ ಎಂಬಂತೆ ಕೇಂದ್ರ ಮಂತ್ರಿ ಕಪಿಲ್ ಸಿಬಾಲ್ ಬಣ್ಣಿಸಿದ್ದಾರೆ. ಮಾತ್ರವಲ್ಲ ಅಂತಾರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಸತತವಾಗಿ ಏರುತ್ತಿರುವುದೇ ಅದಕ್ಕೆ ಪ್ರಧಾನ ಕಾರಣವೆಂದೂ ಹೇಳಿದ್ದಾರೆ. ವಿಶ್ವ ಬ್ಯಾಂಕಿನ ವರದಿಯ ಪ್ರಕಾರವೂ ೨೦೦೭ರ ಆಗಸ್ಟ್ ಮತ್ತು ೨೦೦೮ರ ಮಾರ್ಚ್ ನಡುವೆ ಕೃಷಿ ವಸ್ತುಗಳ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.೭೩ರಷ್ಟು ಏರಿದೆ. ಇದರಲ್ಲಿ ಗೋಧಿಯ ಬೆಲೆ ಶೇ.೭೪ ರಷ್ಟು ಏರಿದ್ದರೆ ಅಕ್ಕಿಯ ಬೆಲೆ ಶೇ.೭೨ರಷ್ಟು ಮತ್ತು ಅಡುಗೆ ಎಣ್ಣೆಯ ಬೆಲೆ ಶೇ.೭೧ರಷ್ಟು ಏರಿದೆ. ಸಕ್ಕರೆಯ ಬೆಲೆಯೂ ಶೇ.೩೫ರಷ್ಟು ಏರಿದ್ದರೆ ಉಳಿದ ಆಹಾರ ಧಾನ್ಯಗಳ ಬೆಲೆ ಶೇ.೮೮ರಷ್ಟು ಏರಿಕೆ ಕಂಡಿದೆ. ಇವ್ಯಾವುದನ್ನೂ ನಿರಾಕರಿಸದ ಯುಪಿಎ ಸರ್ಕಾರ ವಾಸ್ತವವಾಗಿ ಈಗ ಆಗಿರುವ ಬೆಲೆ ಏರಿಕೆಯು ಆಹಾರ ವಸ್ತುಗಳನ್ನು ಅಂತರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಂಡಿದ್ದರಿಂದಲೇ ಆಗಿದೆ ಎಂದೂ ಒಪ್ಪುತ್ತಾರೆ. ಸಿಬಲ್ ಪ್ರಕಾರ ಇದು ಹಣದುಬ್ಬರದ ಆಮದೇ ಆಗಿದೆ. ಹಾಗಿದ್ದಲ್ಲಿ ಹಣದುಬ್ಬರವನ್ನು ನಿಯಂತ್ರಿಸಬೇಕೆಂದರೆ ಆಹಾರ ಧಾನ್ಯಗಳ ಆಮದನ್ನು ನಿಯಂತ್ರಿಸಬೇಕಲ್ಲವೇ? ಅದರ ಬಗ್ಗೆ ಮಾತ್ರ ಸರ್ಕಾರ ಯಾವುದೇ ಕ್ರಮಗಳನ್ನು ಪ್ರಕಟಿಸುತ್ತಿಲ್ಲವೇಕೆ? ಅಥವಾ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಅದಕ್ಕಾಗಿ ಆಗ್ರಹಿಸುತ್ತಿಲ್ಲವೇಕೆ?



ಹಣದುಬ್ಬರ, ಬೆಲೆ ಏರಿಕೆ ಮತ್ತು ಪ್ರಜಾ 'ಸತ್ತೆ'?

ಆದ್ದರಿಂದ ಅಸಲು ಪ್ರಶ್ನೆಯೆಂದರೆ ನಾವು ಜಾಗತಿಕ ಮಾರುಕಟ್ಟೆಯಿಂದ ಆಹಾರ ಧಾನ್ಯಗಳನ್ನು ಏಕೆ ಆಮದು ಮಾಡಿಕೊಳ್ಳಬೇಕು ಎಂಬುದು. ಕೇಂದ್ರ ಸರ್ಕಾರದ ಪ್ರಕಾರ ಈ ಬಾರಿ ಆಹಾರ ಧಾನಗಳ ಉತ್ಪಾದನೆ ಕುಸಿದಿರುವುದರಿಂದ ಹೆಚ್ಚಿನ ಬೆಲೆ ತೆತ್ತಾದರೂ ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳಲೇ ಬೇಕಿದೆ. ಆದರೆ ಇದು ಅಪ್ಪಟ ಸುಳ್ಳು. ಅಕ್ಕಿ,ಗೋಧಿ, ಸಕ್ಕರೆ ಈ ಎಲ್ಲದರ ಉತ್ಪಾದನೆಯು ಅಗತ್ಯಕ್ಕಿಂತ ಹೆಚ್ಚೇ ಆಗಿದೆ. ವಾಸ್ತವವಾಗಿ ಭಾರತದಲ್ಲಿ ಏರುತ್ತಿರುವ ಹಣದುಬ್ಬರದ ಲಕ್ಷಣವೇನು? ಆಹಾರದ ದಾಸ್ತಾನೂ ಏರುತ್ತಿದೆ. ಹಾಗೆಯೇ ಬಡಜನತೆಯ ಹಸಿವೂ ಏರುತ್ತಿದೆ. ಏಕಕಾಲದಲ್ಲಿ ಮತ್ತು ಪೈಪೋಟಿಯಲ್ಲಿ! ಅಂಗಡಿಯಲ್ಲಿ ಮೂಟೆಗಟ್ಟಲೆ ಆಹಾರ ಧಾನ್ಯಗಳ ದಾಸ್ತಾನಿದ್ದರೂ ಅದನ್ನು ಕೊಳ್ಳುವ ಶಕ್ತಿ ಇಲ್ಲದೆ ಹಸಿವಿನಿಂದ ಸಾಯುತ್ತಿರುವುದು. ಇದೇ ಅಭಿವೃದ್ಧಿಯ ವಿಲಕ್ಷಣ.

ಸರ್ಕಾರದ ಈ ಬಗೆಯ ಜನದ್ರೋಹಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಗೋಧಿ ಆಮದು. ನಮ್ಮ ದೇಶದ ಒಟ್ಟಾರೆ ಗೋಧಿ ಬಳಕೆ ೬೫-೭೦ ಮಿಲಿಯನ್ ಟನ್. ಆದರೆ ಈ ವರ್ಷ ದೇಶದ ರೈತರು ದಾಖಲೆ ಪ್ರಮಾಣದಲ್ಲಿ ಅಂದರೆ ೭೩ ಮಿಲಿಯನ್ ಟನ್ನಿನಷ್ಟು ಅಂದರೆ ಅಗತ್ಯಕ್ಕಿಂತ ೫-೧೦ ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ಅಧಿಕವಾಗಿಯೇ ಉತ್ಪಾದನೆ ಮಾಡಿದ್ದರು. ಆದರೂ ಸರ್ಕಾರ ಒಂದು ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ಆಸ್ಟ್ರೇಲಿಯಾ ಮತ್ತು ಅಮೆರಿಕಗಳಿಂದ ಆಮದು ಮಾಡಿಕೊಂಡಿತು. ಅದು ಯಾವ ಬೆಲೆಯಲ್ಲಿ? ನಮ್ಮ ರೈತರು ಕ್ವಿಂಟಾಲಿಗೆ ೮೫೦ ರೂ. ಬೆಂಬಲ ಬೆಲೆಯನ್ನು ಆಗ್ರಹಿಸಿದರೆ ನಿರಾಕರಿಸಿದ ಸರ್ಕಾರ ಆಸ್ಟ್ರೇಲಿಯಾದಿಂದ ಕ್ವಿಂಟಾಲಿಗೆ ೧೬೫೦ ರೂ. ಬೆಲೆ ತೆತ್ತು ಆಮದು ಮಾಡಿಕೊಂಡಿತು. ಏಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯ ದರ ಹೆಚ್ಚಿತ್ತು! ಆದರೆ ಗೋಧಿಯ ವಿಷಯದಲ್ಲಿ ನಾವು ಸಂಪೂರ್ಣ ಸ್ವಾವಲಂಬಿಗಳಾಗಿದ್ದರೂ ವಿದೇಶದಿಂದ ಅಧಿಕ ಬೆಲೆಗೆ ಗೋಧಿಯನ್ನು ಆಮದು ಮಾಡಿಕೊಂಡಿದ್ದೇಕೆ ಎಂದು, ಇಂದು ಹಣದುಬ್ಬರವನ್ನು ಟೀಕಿಸುತ್ತಿರುವ ಯಾವ ಪಕ್ಷಗಳೂ ಅದರಲ್ಲೂ ಮುಖ್ಯ ವಿರೋಧ ಪಕ್ಷವಾಗಿದ್ದ ಬಿಜೆಪಿ ಪ್ರಶ್ನಿಸಲೇ ಇಲ್ಲ. ಏಕೆಂದರೆ ಈ ಬಗೆಯ ೨೭ ಅತ್ಯಗತ್ಯ ಆಹಾರ ವಸ್ತುಗಳನ್ನು ಮುಕ್ತ ಆಮದು ಪಟ್ಟಿಯಲ್ಲಿ ಇರಿಸಿದ್ದೇ ಆಗಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ!

ಅಂದರೆ ಆಹಾರ ಧಾನ್ಯದ ಉತ್ಪಾದನೆಯಲ್ಲಿ ಕುಸಿತವಿಲ್ಲ. ಆದರೂ ಆಹಾರ ಧಾನ್ಯಗಳ ಆಮದು ಆಗುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಏರಿರುವುದರಿಂದ ಭಾರತದಲ್ಲಿ ಬೆಲೆ ಏರುತ್ತಾ ಹಣದುಬ್ಬರ ಆಗುತ್ತಿದೆ. ಆದ್ದರಿಂದ ಹಣದುಬ್ಬರದ ನಿಯಂತ್ರಣಕ್ಕೆ ಮತ್ತು ಬೆಲೆ ಏರಿಕೆ ನಿಯಂತ್ರಣಕ್ಕೆ ಇರುವ ಪರಿಣಾಮಕಾರಿ ಮಾರ್ಗ ಅನಗತ್ಯ ಆಹಾರ ಧಾನ್ಯಗಳ ಆಮದನ್ನು ತಡೆಯುವುದೇ ಅಲ್ಲವೇ? ಆದರೆ "ಹಣದುಬ್ಬರ ಉಂಟಾಗಿದೆ ಎಂದು ನಾವು ಕುರುಡು ನಿಯಂತ್ರಣವನ್ನು ಹೇರುವುದಾಗಲೀ, ಕೃಷಿ ಉತ್ಪನ್ನದ ಮಾರಾಟಗಳ ಮೇಲೆ ನಿಯಂತ್ರಣ ಹೇರುವುದನ್ನಾಗಲೀ ಮಾಡಲು ಸಾಧ್ಯವಿಲ್ಲ." ಎಂದು ಸಾಕ್ಷಾತ್ ಪ್ರಧಾನ ಮಂತ್ರಿಯೇ ಹೇಳಿದ್ದಾರೆ. ಮತ್ತೊಂದೆಡೆ ಕೇಂದ್ರ ಮಂತ್ರಿ ಸಿಬಾಲ್ ಹಣದುಬ್ಬರವನ್ನು ತಡೆಯಲು ಬಡಜನರಿಗೆ ಮತ್ತು ರೈತರಿಗೆ ಸಬ್ಸಿಡಿಗಳನ್ನು ಹೆಚ್ಚಿಸುವ ಯಾವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲವೆಂದು ಗಂಟಾಘೋಷವಾಗಿ ಸಾರಿದ್ದಾರೆ. ಆದರೆ ವಿದೇಶಿ ಆಹಾರ ವಸ್ತುಗಳ ಮೇಲಿನ ಆಮದು ಸುಂಕವನ್ನು ಬೇಕಿದ್ದಲ್ಲಿ ಕಡಿತಗೊಳಿಸುವುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ. ಅಮದಿನ ಮೇಲಿನ ಸುಂಕವನ್ನು ಕಡಿಮೆ ಮಾಡುವ ಕ್ರಮ ಆಮದನ್ನು ಹೆಚ್ಚಿಸುವ ಕ್ರಮವೇ ಹೊರತು ಆಮದನ್ನು ನಿಯಂತ್ರಿಸಿ ಬೆಲೆ ಏರಿಕೆಯನ್ನು ಹತೋಟಿಯಲ್ಲಿ ಇಡುವ ಕ್ರಮವಲ್ಲ. ಹೆಚ್ಚೆಂದರೆ ಅದು ಈಗಾಗಲೇ ಹೆಚ್ಚಿರುವ ವಿದೇಶಿ ಆಹಾರ ಧಾನ್ಯಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಸುಂಕದ ದೆಸೆಯಿಂದ ಮತ್ತಷ್ಟು ಹೆಚ್ಚಾಗುವುದನ್ನು ತಡೆಯಬಹುದಷ್ಟೇ! ಅದೇ ರೀತಿ ಹಣದುಬ್ಬರವನ್ನು ಮತ್ತು ಬೆಲೆ ಏರಿಕೆಯನ್ನೂ ಚುನಾವಣಾ ವಿಷಯವನ್ನಾಗಿ ಮಾಡಿಕೊಳ್ಳುತ್ತೇವೆ ಎನ್ನುತ್ತಿರುವ ಬಿಜೆಪಿಯು ಸಹ ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆಯೇ ವಿನಃ ಹಣದುಬ್ಬರವನ್ನು ಯಾವ ರೀತಿಯಿಂದಲೂ ಕಡಿಮೆ ಮಾಡದ ಯುಪಿಎ ಸರ್ಕಾರದ ಈ ಅರೆಮನಸ್ಸಿನ ಕ್ರಮಗಳ ಬಗ್ಗೆ ಯಾವುದೇ ಚಕಾರವೆತ್ತುತ್ತಿಲ್ಲ. ಏಕೆಂದರೆ ಇವೆಲ್ಲವೂ ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳ ಪ್ರತಿಫಲವೇ ಆಗಿದ್ದು ಕಾಂಗ್ರೆಸ್ ಮತ್ತು ಬಿಜೆಪಿ ಎರಡು ಸಹ ದೇಶದ ಜನತೆಯ ಬದುಕನ್ನು ವಿದೇಶಿ ಕಂಪನಿಗಳಿಗೆ ಮಾರಿಕೊಳ್ಳುವ ಈ ಹುನ್ನಾರದಲ್ಲಿ ಸಹ ಪಾಲುದಾರರೇ ಆಗಿದ್ದಾರೆ.

ಈಗಾಗಲೇ ಈ ಹಣದುಬ್ಬರದ ಪ್ರತಿಫಲವನ್ನು ಜಗತ್ತಿನಾದ್ಯಂತ ಜನತೆ ಅನುಭವಿಸುತ್ತಿದ್ದಾರೆ. ಭಾರತವನ್ನೂ ಒಳಗೊಂಡಂತೆ, ಬಾಂಗ್ಲಾದೇಶ, ಯೆಮನ್, ಬೊಲಿವಿಯಾ ಇನ್ನಿತ್ಯಾದಿ ದೇಶಗಳಲ್ಲಿ ಬಡ ಜನತೆಯ ದುಡಿಮೆಯಿಂದ ಎರಡು ಹೊತ್ತಿನ ಊಟವೂ ದೊರೆಯದಂತ ಭೀಕರ ಪರಿಸ್ಥಿತಿ ಎದುರಾಗಿದೆ. ಹೀಗಾಗಿಯೇ ಜಗತ್ತಿನೆಲ್ಲೆಡೆ ಬಡಜನರು ಆಳುವ ಸರ್ಕಾರಗಳ ವಿರುದ್ಧ ಬೀದಿ ಕಾಳಗದಲ್ಲಿ ತೊಡಗಿದ್ದಾರೆ. ಕಳೆದ ಎರಡು ಮೂರು ವಾರಗಳಲ್ಲಿ ಬೆಲೆ ಏರಿಕೆಯ ವಿರುದ್ಧ ಜಗತ್ತಿನಾದ್ಯಂತ ನಡೆದ ಹೋರಾಟಗಳಲ್ಲಿ ಹಲವಾರು ಜನ ಪೋಲಿಸರ ಗುಂಡಿಗೆ ಬಲಿಯಾಗಿದ್ದಾರೆ. ಕಳೆದ ವಾರ ಹೈಟಿಯಲ್ಲಿ ನಡೆದ ಗಲಭೆಗಳಲ್ಲಿ ನಾಲ್ಕು ಜನ ಸತ್ತಿದ್ದಾರೆ. ಕ್ಯಾಮರೂನ್ ದೇಶದಲ್ಲಿ ನಡೆದ ಬೆಲೆಏರಿಕೆ ವಿರುದ್ಧದ ಸಮರದಲ್ಲಿ ೪೦ ಜನ ಸತ್ತಿದ್ದಾರೆ. ಮಾರಿಟಿಯಾನ, ಮೊಜಾಂಬಿಕ್, ಇಂಡೋನೇಷಿಯಾ, ಸೆನೆಗಲ್, ಉಜ್ಬೆಕಿಸ್ತಾನ್, ಯೆಮೆನ್, ಬೊಲಿವಿಯಾ ದೇಶಗಳಲ್ಲಿ ಸರ್ಕಾರದ ವಿರುದ್ಧ ಬಡ ಜನತೆಯ ಬೀದಿ ಸಮರಗಳು ಹೆಚ್ಚುತ್ತಿವೆ.

ಭಾರತದಲ್ಲೂ ಬೆಲೆ ಏರಿಕೆ ಮತ್ತು ಬಡಜನತೆಯ ಬವಣೆಗಳು ಆಫ್ರಿಕಾ ದೇಶಗಳಲ್ಲಿನ ಪರಿಸ್ಥಿತಿಯಂತೇ ಬಿಗಡಾಯಿಸುತ್ತಿದೆ. ಜನತೆಯ ನಿರೀಕ್ಷೆಗಳು ಹುಸಿಯಾಗಿ ತಾಳ್ಮೆಗೆಟ್ಟು ಜನ ಬೀದಿಗಿಳಿಯುತ್ತಿದ್ದಾರೆ. ಆದರೆ ಆಫ್ರಿಕಾ ದೇಶಗಳಲ್ಲಿ ಆಳುವ ಸರ್ಕಾರಗಳು ಜನತೆಯ ಪ್ರತಿರೋಧವನ್ನು ಹತ್ತಿಕ್ಕಲು ಬಂದೂಕಿನ ಗುಂಡುಗಳನ್ನು ಬಳಸಿದರೆ ಇಲ್ಲಿ "ಪ್ರಜಾಪ್ರಭುತ್ವ" ನೆಲೆಗೊಂಡಿರುವುದರಿಂದ ಭರವಸೆಯ ಗುಂಡುಗಳನ್ನು ಮತ್ತು ಚುನಾವಣೆಯೆಂಬ ಅನಸ್ತೇಷಿಯಾವನ್ನು ಬಳಸಲಾಗುತ್ತದೆ. ಆಗಲೂ ಬಡಜನ ಸಾಯುವುದು ಸರ್ಕಾರದ ದಮನದಿಂದಲೇ!. ಆದರೆ ಪ್ರಜಾಪ್ರಭುತ್ವದ ಅಮಲಿನಲ್ಲಿ ಜನರಿಗೆ ತಮ್ಮನ್ನು ಸಾಯಿಸಿದವರು ಯಾರೆಂದು ತಿಳಿಯುವುದೇ ಇಲ್ಲ. ಇದೇ ಅಸ್ತಿತ್ವದಲ್ಲಿರುವ ಪ್ರಜಾ "ಸತ್ತೆ"ಯ ಗಮ್ಮತ್ತು! □

ನಂಬಿಕೆ



ಮನುಷ್ಯ ನಂಬಿದನೆಂದು
ದೇವರು ದೊಡ್ಡವನಾದ!
ಮನುಷ್ಯ ಮುಟ್ಟಿದನೆಂದು
ದೇವರ ಪಾದ ಪವಿತ್ರವಾದವು!

ದೇವಾಲಯದ ಮೇಲೆ ಬಾಂಬು!
ಒಳಗಿದ್ದಾನೆ ಶಂಭು!!
ಸುಮ್ಮನೆ ನಂಬು!!!

○ ಅಲ್ಲಮಪ್ರಭು ಬೆಟ್ಟದೂರು

ಮತಾಂತರ ತಡೆ ಕಾಯ್ದೆ, ಜಾತ್ಯತೀತತೆ ಮತ್ತು ಮೂಲಭೂತ ಹಕ್ಕುಗಳು

ಸತ್ಯಪ್ರಕಾಶ್ ಎಂ. ಆರ್

೨೦೦೬ರ ಡಿಸೆಂಬರ್ ೧೯ರಂದು ಹಿಮಾಚಲಪ್ರದೇಶ ರಾಜ್ಯದ ವಿಧಾನಸಭೆ ಧಾರ್ಮಿಕ ಸ್ವಾತಂತ್ರ್ಯ ಮಸೂದೆ-೨೦೦೬ನ್ನು ಮಂಡಿಸಿತು. ಒತ್ತಡ ಹೇರಿಕೆ, ಪ್ರಲೋಭನೆ, ಅಥವಾ ಮೋಸದ ಮೂಲಕ ನಡೆಯುತ್ತಿರುವ ಧಾರ್ಮಿಕ "ಮತಾಂತರ"ಗಳನ್ನು ತಡೆಯುವ ಉದ್ದೇಶದಿಂದ ಮಸೂದೆಯನ್ನು ಮಂಡಿಸಲಾಯಿತು ಎಂದು ರಾಜ್ಯ ಸರ್ಕಾರ ಹೇಳಿಕೆ ನೀಡಿದೆ. ೨೦೦೭ರ ಫೆಬ್ರವರಿ ೧೯ರಂದು ಕಾಯ್ದೆಯಾಗಿ ಅಂಗೀಕೃತವಾದ ಈ ಮಸೂದೆಗೆ ಭಾರತದ ಇತರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಮತಾಂತರ ತಡೆ ಕಾಯ್ದೆಗಳೇ ಮಾದರಿಯಾಗಿದೆ. ಸದಾಕಾಲ "ಜಾತ್ಯತೀತೆ"ಯ ಬಗ್ಗೆ ಏರುದನಿಯಲ್ಲಿ ಮಾತನಾಡುವ ಕಾಂಗ್ರೆಸ್ ಪಕ್ಷ ಹಿಮಾಚಲಪ್ರದೇಶ ರಾಜ್ಯದಲ್ಲಿ ಆಳ್ವಿಕೆಯಲ್ಲಿರುವುದು ಪರಿಸ್ಥಿತಿಯ ವ್ಯಂಗ್ಯ.

ಇದೇ ಮಾದರಿಯ ಕಾಯ್ದೆಗಳು ಒರಿಸ್ಸಾ, ಮಧ್ಯಪ್ರದೇಶ, ಚತ್ತೀಸ್‌ಗಢ, ಅರುಣಾಚಲಪ್ರದೇಶ, ಮತ್ತು ಗುಜರಾತ್ ರಾಜ್ಯಗಳಲ್ಲಿಯೂ ಇವೆ. ಇವುಗಳಲ್ಲಿ ಒರಿಸ್ಸಾ ಮತ್ತು ಮಧ್ಯಪ್ರದೇಶ ರಾಜ್ಯಗಳು ತಂತಮ್ಮ ರಾಜ್ಯಗಳ ಕಾಯ್ದೆಗಳ ಅನುಸಾರ ನಿಬಂಧನೆಗಳನ್ನು ಹಾಕಿಕೊಂಡಿವೆ. ಹಿಮಾಚಲಪ್ರದೇಶದ ಕ್ಯಾಬಿನೆಟ್ ಕೂಡ ಈಗಾಗಲೇ ಈ ಪ್ರಕ್ರಿಯೆಗೆ ಸಮ್ಮತಿ ನೀಡಿದೆ. ೨೦೦೦ ವರ್ಷದಲ್ಲಿ ಹೊಸ ರಾಜ್ಯವಾಗಿ ಉದಯಿಸಿದ ಚತ್ತೀಸ್‌ಗಢ, ತನ್ನ ಮಾತೃ ರಾಜ್ಯ ಮಧ್ಯಪ್ರದೇಶದ ಕಾಯ್ದೆ ಮತ್ತು ನಿಬಂಧನೆಗಳನ್ನು ಪಡೆದುಕೊಂಡು, ೨೦೦೬ರಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡಿಕೊಂಡಿದೆ. ೨೦೦೬ರ ಆರಂಭದಲ್ಲಿ ರಾಜಸ್ಥಾನ ರಾಜ್ಯ ಕೂಡ ರಾಜಸ್ಥಾನ ಧಾರ್ಮಿಕ ಸ್ವಾತಂತ್ರ್ಯ ಮಸೂದೆ-೨೦೦೬ ಮಂಡಿಸಿತು. ಆದರೆ ಅಂಗೀಕೃತವಾದ ಮಸೂದೆಯನ್ನು ಅಂದಿನ ರಾಜ್ಯಪಾಲರಾಗಿದ್ದ ಪ್ರತಿಭಾ ಪಾಟೀಲ್ ತಡೆಹಿಡಿದಿದ್ದರು. ಒಂದು ವರ್ಷ ನೆನೆಗುದಿಗೆ ಬಿದ್ದಿದ್ದ ಮಸೂದೆಯನ್ನು ೨೦೦೭ರ ಜೂನ್ ತಿಂಗಳಲ್ಲಿ ಮಸೂದೆಯ ಅಂಗೀಕಾರಕ್ಕಾಗಿ ಅಂದಿನ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್‌ಕಲಾಂ ಅವರಿಗೆ ಸಲ್ಲಿಸಲಾಯಿತು. ಇದೇ ಮಾದರಿಯ ಒಂದು ಕಾಯ್ದೆಯನ್ನು ೨೦೦೪ರಲ್ಲಿ ತಮಿಳುನಾಡಿನಲ್ಲಿ ಅನೂರ್ಜಿತಗೊಳಿಸಲಾಯಿತು. ಜಾರ್ಖಂಡ್ ರಾಜ್ಯದ ಕಾಯ್ದೆಗೂ ಇದೇ ಪರಿಸ್ಥಿತಿ ಎದುರಾಗಬಹುದು.

೧. ಅಸ್ಪಷ್ಟ ಮತ್ತು ಅನಿಶ್ಚಿತ ಪದಪ್ರಯೋಗ

ಹಿಂಸೆ ಅಥವಾ ಇತರ ಕಾನೂನು ಬಾಹಿರ ತಂತ್ರಗಳ ಮೂಲಕ ಬಲ ವಂತವಾಗಿ ಮತಾಂತರಕ್ಕೆ ಒತ್ತಾಯಿಸುವುದನ್ನು ಯಾವುದೇ ನೆಲೆಯಲ್ಲಿ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಅಂತರರಾಷ್ಟ್ರೀಯ ಮಾನವ ಹಕ್ಕುಗಳ ನೀತಿ ಹಾಗೂ ಭಾರತೀಯ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ಇದು ಧಕ್ಕೆ ತರುತ್ತದೆ. ಆದರೆ, ಮತಾಂತರ ತಡೆ ಕಾಯ್ದೆಗಳಲ್ಲಿ ಬಳಕೆಯಾಗಿರುವ ಭಾಷೆ ಬೇರೆಯದೇ ಅರ್ಥ ಪಡೆದು ಕೊಳ್ಳುತ್ತದೆ. ಈ ಕಾಯ್ದೆಗಳು ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯ ಉದ್ದೇಶವನ್ನೂ ಹೊಂದಿಲ್ಲವೆಂಬುದು ಸ್ಪಷ್ಟವಾಗುತ್ತದೆ. "ಕಾಯ್ದೆಗಳ ಅನುಷ್ಠಾನದಲ್ಲಿ ತಾರತಮ್ಯ" ನಡೆಸುವ ಅಪಾಯ ಇಲ್ಲಿ ಖಂಡಿತ ಇದ್ದೇ ಇದೆ. ಈ ಕಾಯ್ದೆಗಳಲ್ಲಿ ಬಳಕೆಯಾಗಿರುವ ಪದಗಳು ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ಬದಲು, ಅವುಗಳ ಉಲ್ಲಂಘನೆ ಮಾಡುತ್ತಿರುವುದೇ ಹೆಚ್ಚು.

ಅಂತರ-ಧರ್ಮೀಯ ಸಂಘರ್ಷದ ಈ ಕಾಲಘಟ್ಟದಲ್ಲಿ ಸಂವಿಧಾನದಲ್ಲಿ ಉಲ್ಲೇಖಿಸಲಾಗಿರುವ ಜಾತ್ಯತೀತತೆಯನ್ನು ಉಳಿಸಿಕೊಳ್ಳಲು ಹೆಣಗಾಡುವ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಮತಾಂತರ ತಡೆ ಕಾಯ್ದೆಗಳನ್ನು ಈ ಪ್ರಬಂಧದಲ್ಲಿ ಪರಾಮರ್ಶೆಗೊಳಪಡಿಸುವುದು ಅತ್ಯಂತ ಅಗತ್ಯವಾದ ಕೆಲಸ.

೧.೧ 'ಮತಾಂತರ' ಪದದ ವ್ಯಾಖ್ಯಾನ

ಹಿಮಾಚಲ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಚತ್ತೀಸ್‌ಗಢ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಕಾಯ್ದೆಗಳ ಪ್ರಕಾರ "ಮತಾಂತರ' ಎಂದರೆ ಒಂದು ಧರ್ಮವನ್ನು ತೊರೆದು, ಮತ್ತೊಂದು ಧರ್ಮವನ್ನು ಒಪ್ಪಿಕೊಳ್ಳುವುದು" ಎಂಬ ಅರ್ಥವಿದೆ.

ಗುಜರಾತ್ ರಾಜ್ಯದ ಕಾಯ್ದೆಯಲ್ಲಿನ ಪದಪ್ರಯೋಗ ಸ್ವಲ್ಪ ಭಿನ್ನವಾಗಿದೆ. "ಮತಾಂತರಿಸುವುದು' ಎಂದರೆ ಓರ್ವ ವ್ಯಕ್ತಿ ಒಂದು ಧರ್ಮವನ್ನು ತೊರೆಯುವಂತೆ ಮಾಡಿ, ಇನ್ನೊಂದು ಧರ್ಮವನ್ನು ಒಪ್ಪಿಕೊಳ್ಳುವಂತೆ ಮಾಡುವುದು" ಎಂಬ ಅರ್ಥವಿದೆ.

ಈ ವ್ಯಾಖ್ಯೆಗಳ ವ್ಯಾಪ್ತಿಯಲ್ಲಿಯೇ, ಒಂದು ಗುಂಪಿನಿಂದ ಇನ್ನೊಂದು ಗುಂಪಿನ ವಿಚಾರದಲ್ಲಿ 'ಮತಾಂತರ'ವನ್ನು ಪ್ರತ್ಯೇಕಿಸಿ ನೋಡುವಂತೆ ತಿದ್ದುಪಡಿ ತರಲು ಇತ್ತೀಚೆಗೆ ಗುಜರಾತ್ ವಿಧಾನಸಭೆ ನಡೆಸಿದ ಪ್ರಯತ್ನವನ್ನು ಅಲ್ಲಿನ ರಾಜ್ಯಪಾಲ ನವಲ್ ಕಿಶೋರ್ ಶರ್ಮ ತಡೆಹಿಡಿದಿದ್ದಾರೆ. ತಿದ್ದುಪಡಿ ಮಸೂದೆಯನ್ನು ಹಿಂದಿರುಗಿಸುತ್ತಾ ರಾಜ್ಯಪಾಲರು, "ಜೈನರು ಮತ್ತು ಬೌದ್ಧರು ಹಿಂದೂ ಧರ್ಮದ ಗುಂಪಿಗೆ ಸೇರಿದವರೆಂದು, ಶಿಯಾ ಗಳು ಮತ್ತು ಸುನ್ನಿಗಳು ಮುಸ್ಲಿಂ ಧರ್ಮಕ್ಕೆ ಸೇರಿದವ ರೆಂದು, ಕ್ಯಾಥೋಲಿಕ್ಕರು ಮತ್ತು ಪ್ರಾಟೆಸ್ಟೆಂಟರು ಕ್ರೈಸ್ತ ಧರ್ಮಕ್ಕೆ ಸೇರಿದವರೆಂದು



ಬಲವಂತದ ಮತಾಂತರಕ್ಕೆ ಸಂಬಂಧಿಸಿದಂತೆ, ಎಲ್ಲ ಕಾಯ್ದೆಗಳಲ್ಲಿ 'ಬಲವಂತ' ಅಥವಾ 'ಒತ್ತಡ' ಪದದ ಸಮಾನವಾದ ವ್ಯಾಖ್ಯಾನ ಕಂಡುಬರುತ್ತದೆ. "'ಬಲವಂತ' ಅಥವಾ 'ಒತ್ತಡ' ಎಂದರೆ ಬಲಪ್ರಯೋಗ ಅಥವಾ ಭೌತಿಕವಾಗಿ ಘಾಸಿಗೊಳಿಸುವಂತೆ ಹೆದರಿಸುವುದು ಅಥವಾ ದೇವರ ಅವಕೃಪೆಗೆ ಒಳಗಾಗುವುದಾಗಿ ಭೀತಿ ಹುಟ್ಟಿಸುವುದು ಅಥವಾ ಸಾಮಾಜಿಕ ಬಹಿಷ್ಕಾರದ ಭಯ ಹುಟ್ಟಿಸುವುದು" ಎಂಬಂತಹ ಅರ್ಥ ಬರುತ್ತದೆ. ಆದರೆ, ಈ ವ್ಯಾಖ್ಯಾನವನ್ನು ಯಾವ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುವುದು ಎಂಬುದು ಯಾವುದೇ ಕಾಯ್ದೆಗಳಲ್ಲಿ ಸ್ಪಷ್ಟವಾಗಿಲ್ಲ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ನೀಡುವುದಾದರೆ, ತಮ್ಮ ಧರ್ಮವನ್ನು ಅನುಸರಿಸದವರು ದೇವರ ಅವಕೃಪೆಗೆ ಒಳಗಾಗುವುದಾಗಿ ಬೋಧಿಸಿದರೆ ಮತಾಂತರ ತಡೆ ಕಾಯ್ದೆ ಪ್ರಕಾರ 'ಒತ್ತಡ' ಹೇರಿದಂತಾಗುತ್ತದೆ. ಹೀಗೆ ಮಾಡಿದರೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿಬಂದಂತಾಗುತ್ತದೆ.

"ಅರ್ಥೈಸಿಕೊಳ್ಳುವುದು" ಎಂಬ ಕಾಯ್ದೆಯಲ್ಲಿನ ವಿವರಣೆ ಆಕ್ಷೇಪಾರ್ಹ ಎಂದು ಹೇಳಿಕೆ ನೀಡಿದ್ದಾರೆ. ತಿದ್ದುಪಡಿಯ ಮೂಲಕ ತಮ್ಮನ್ನು ಹಿಂದೂ ಗಳ ಗುಂಪಿಗೆ ಸೇರಿಸುವ ಪ್ರಯತ್ನವನ್ನು ಜೈನ ಸಮುದಾ ಯದವರು ಪ್ರಬಲವಾಗಿ ವಿರೋಧಿಸಿದ್ದಾರೆ.

ರಾಜಸ್ಥಾನ, ಅರುಣಾಚಲಪ್ರದೇಶ ಮತ್ತು ಚತ್ತೀಸ್‌ಗಢದ ಕಾಯ್ದೆಗಳಲ್ಲಿನ 'ಮತಾಂತರ' ಪದದ ವ್ಯಾಖ್ಯಾನಗಳಲ್ಲಿ ತಮ್ಮ ಹಿಂದಿನ ಧರ್ಮಕ್ಕೆ ಮರು ಮತಾಂತರ ಹೊಂದುವುದನ್ನು 'ಮತಾಂತರ'ವೆಂದು ಪರಿಗಣಿಸದಿರುವುದು ಕಂಡುಬರುತ್ತದೆ. ರಾಜಸ್ಥಾನ ರಾಜ್ಯದ ಮಸೂದೆ 'ಮೂಲ ಧರ್ಮ'ದ ಬಗ್ಗೆ ಮಾತ್ರ ಗಮನಹರಿಸುತ್ತದೆ. ಮಸೂದೆಯ ಪ್ರಕಾರ ಮತಾಂತರ ಎಂದರೆ: "... ಮೂಲ ಧರ್ಮವನ್ನು ತ್ಯಜಿಸಿ ಮತ್ತೊಂದು ಧರ್ಮವನ್ನು ಒಪ್ಪಿಕೊಳ್ಳುವುದು." ಇದರ ಜೊತೆಗೆ ಸಂಬಂಧಿತ ವಿವರಣೆಯೊಂದಿದೆ. ಅದೇನೆಂದರೆ, "ಮೂಲ ಧರ್ಮ" ಎಂದರೆ "ಹಿಂದಿನ ತಲೆಮಾರಿನವರು" ಅನುಸರಿಸಿಕೊಂಡು ಬಂದ ಧರ್ಮ."

ಅರುಣಾಚಲಪ್ರದೇಶ ರಾಜ್ಯದ ಕಾಯ್ದೆಯಲ್ಲಿಯೂ ಇದೇ ರೀತಿಯ ವ್ಯಾಖ್ಯಾನ ಕಂಡುಬರುತ್ತದೆ. ಮತಾಂತರ ಎಂದರೆ, "ಮೂಲ ಧರ್ಮವನ್ನು ತೊರೆದು ಮತ್ತೊಂದು ಮತ ಅಥವಾ ಧರ್ಮವನ್ನು ಅಳವಡಿಸಿಕೊಳ್ಳುವುದು." ಇಲ್ಲಿ "ಮೂಲ ಧರ್ಮ" ಎಂದರೆ, ಅರುಣಾಚಲಪ್ರದೇಶದ ಮೂಲ ನಿವಾಸಿಗಳು ಬೆಳಕಿಗೆ ಬಂದಾಗಿನಿಂದ ಅಸ್ತಿತ್ವದಲ್ಲಿರುವ, ಒಪ್ಪಿತವಾದ ಹಾಗೂ ಕಾರ್ಯರೂಪದಲ್ಲಿರುವ ಧರ್ಮ, ನಂಬಿಕೆಗಳು ಮತ್ತು ಹಬ್ಬಹರಿದಿನಗಳು, ವ್ರತಗಳು, ಕರ್ಮಕ್ರಿಯಾದಿಗಳಂತಹ ಆಚರಣೆಗಳು."

ಅದೇ ರೀತಿ, ತಿದ್ದುಪಡಿಗೊಳಗಾದ ಚತ್ತೀಸ್‌ಗಢ ರಾಜ್ಯದ ಕಾಯ್ದೆ ಕೂಡ, "ಓರ್ವ ವ್ಯಕ್ತಿ ತನ್ನ ಮೂಲ ಧರ್ಮ ಅಥವಾ ಹಿಂದಿನ ತಲೆಮಾರಿನ ಧರ್ಮಕ್ಕೆ ಹಿಂದಿರುಗುವುದನ್ನು" ಮತಾಂತರವೆಂದು ಪರಿಗಣಿಸುವುದಿಲ್ಲ. ಅಲ್ಲಿನ ರಾಜ್ಯಪಾಲರಾದ ಇ ಎಸ್ ಎಲ್ ನರಸಿಂಹನ್ ಈ ವಿವರಣೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಜೊತೆಗೆ ಮತಾಂತರ ಹೊಂದಬಯಸುವವರು ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಮತಿ ಪಡೆಯಬೇಕೆಂಬ ಅಂಶಕ್ಕೆ ಕೂಡ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಭಾರತದ ಶೇ. ೮೦ರಷ್ಟು ಜನರು ಹಿಂದೂಗಳೇ ಆಗಿರುವುದರಿಂದ, "ಹಿಂದಿನ ತಲೆಮಾರಿನವರ ಧರ್ಮ" ಎಂದರೆ ಬಹಳಷ್ಟು ಸಂದರ್ಭಗಳಲ್ಲಿ ಹಿಂದೂ ಧರ್ಮ ಎಂಬ ನಿರ್ಧಾರಕ್ಕೆ ಬರಬಹುದಾಗಿದೆ. ಮೂಲ ಧರ್ಮಕ್ಕೆ ಮರು ಮತಾಂತರಗೊಳ್ಳುವುಕ್ಕೆ ಒಪ್ಪಿಗೆ ನೀಡುವ ಮೂಲಕ ಈ ಕಾಯ್ದೆಗಳು ತಮ್ಮ ಕಾರ್ಯಸೂಚಿಯನ್ನು ಸ್ಪಷ್ಟಪಡಿಸಿವೆ. ಮೂಲಭೂತವಾಗಿ ಮತಾಂತರ ತಡೆಗೆ ರಚಿಸಲಾಗಿರುವ ಈ ಶಾಸನಗಳು ಹಿಂದೂಗಳ ಮರು ಮತಾಂತರವನ್ನು ಒಪ್ಪಿಕೊಳ್ಳುತ್ತದೆ, ಮತ್ತದನ್ನೇ ಅಪೇಕ್ಷಿಸುತ್ತದೆ.

೧.೨ ಮತಾಂತರಕ್ಕೆ ನಿಷೇಧ

ಪ್ರಸ್ತುತ ಅಸ್ತಿತ್ವದಲ್ಲಿರುವ ಎಲ್ಲ ಮತಾಂತರ ತಡೆ ಕಾಯ್ದೆಗಳು ಈ ಮುಂದಿನ ವಿವರಣೆಯಂತೆ ಮತಾಂತರಕ್ಕೆ ನಿಷೇಧ ಹೇರುತ್ತವೆ: "ಯಾವುದೇ ವ್ಯಕ್ತಿ, ಮತ್ತೋರ್ವ ವ್ಯಕ್ತಿಯನ್ನು ಬಲವಂತವಾಗಿ ಅಥವಾ ಪ್ರಲೋಭನೆಯ ಮೂಲಕ ಅಥವಾ ಮೋಸದ ಮೂಲಕ ಮತಾಂತರಗೊಳಿಸುವುದು ಅಥವಾ ಮತಾಂತರಗೊಳಿಸಲು ಯತ್ನಿಸುವುದು, ಅಥವಾ ಅಂತಹ ಮತಾಂತರಕ್ಕೆ ಸಹಾಯ ಮಾಡುವುದನ್ನು ನಿಷೇಧಿಸಲಾಗಿದೆ."

ಒತ್ತಡ ತಂತ್ರ, ಪ್ರಲೋಭನೆ, ಮತ್ತು ಮೋಸದ ಮೂಲಕ ಮತಾಂತರಕ್ಕೆ ಯತ್ನಿಸುವುದನ್ನು ತಡೆಗಟ್ಟುವ ಸಲುವಾಗಿ, ಮತಾಂತರ ತಡೆ ಕಾಯ್ದೆಗಳು ಬಳಕೆಯಾಗುತ್ತವೆ ಎಂದು 'ಸಂಘ ಪರಿವಾರ'ದವರು ಇವುಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಮತಾಂತರ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಈ ಕಾಯ್ದೆಗಳು ಮತಾಂತರ ಯತ್ನಗಳನ್ನು ಅಪರಾಧವೆಂದು ಪರಿಗಣಿಸುತ್ತವೆ ಎಂದೂ 'ಸಂಘ ಪರಿವಾರ'ದವರು ವಾದಿಸುತ್ತಾರೆ. ಭಾರತೀಯ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಹಾಗೂ ಅಂತರರಾಷ್ಟ್ರೀಯ ಮಾನವ ಹಕ್ಕುಗಳಲ್ಲಿ ನೀಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗಾಗಿಯೇ ಮತಾಂತರ ತಡೆ ಕಾಯ್ದೆಗಳನ್ನು ರಚಿಸಲಾಗಿದೆ ಎಂಬ ವಾದವನ್ನು ಮುಂದಿಡುತ್ತಾರೆ.

ಭಾರತೀಯ ಜನತಾಪಕ್ಷ (ಬಿಜೆಪಿ), ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ಗಳನ್ನೊಳಗೊಂಡ 'ಸಂಘ ಪರಿವಾರ' ಈ ಶಾಸನಗಳಿಗೆ ರಾಜಕೀಯ ಬೆಂಬಲ ನೀಡುತ್ತಾ ಬಂದಿವೆ. ಬಿಜೆಪಿಯ ಅಧ್ಯಕ್ಷ ರಾಜನಾಥ್ ಸಿಂಗ್‌ರಂತೂ ಒಂದ ಹೆಜ್ಜೆ ಮುಂದುವರೆದು, ಬಿಜೆಪಿ ಆಡಳಿತದ ಎಲ್ಲ ರಾಜ್ಯಗಳಲ್ಲಿ ಇಂತಹ ಕಾಯ್ದೆಗಳನ್ನು ಜಾರಿಗೆ ತರಬೇಕೆಂದು ಸೂಚನೆ ನೀಡಿದ್ದಾರೆ.

ಒತ್ತಡ ತಂತ್ರ, ಪ್ರಲೋಭನೆ, ಮತ್ತು ಮೋಸದ ಮೂಲಕ ಮತಾಂತರಕ್ಕೆ ಯತ್ನಿಸುವುದನ್ನು ತಡೆಗಟ್ಟುವ ಸಲುವಾಗಿ, ಮತಾಂತರ ತಡೆ ಕಾಯ್ದೆಗಳು ಬಳಕೆಯಾಗುತ್ತವೆ ಎಂದು 'ಸಂಘ ಪರಿವಾರ'ದವರು ಇವುಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಮತಾಂತರ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಈ ಕಾಯ್ದೆಗಳು ಮತಾಂತರ ಯತ್ನಗಳನ್ನು ಅಪರಾಧವೆಂದು ಪರಿಗಣಿಸುತ್ತವೆ ಎಂದೂ 'ಸಂಘ ಪರಿವಾರ'ದವರು ವಾದಿಸುತ್ತಾರೆ. ಭಾರತೀಯ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಹಾಗೂ ಅಂತರರಾಷ್ಟ್ರೀಯ ಮಾನವ ಹಕ್ಕುಗಳಲ್ಲಿ ನೀಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗಾಗಿಯೇ ಮತಾಂತರ ತಡೆ ಕಾಯ್ದೆಗಳನ್ನು ರಚಿಸಲಾಗಿದೆ ಎಂಬ ವಾದವನ್ನು ಮುಂದಿಡುತ್ತಾರೆ.

ಆದರೆ, ಧಾರ್ಮಿಕ ಅಲ್ಪಸಂಖ್ಯಾತರನ್ನು ವಿರೋಧಿಸುವ ಹಿಂದೂ ರಾಷ್ಟ್ರೀಯವಾದಿಗಳ ಪ್ರೇರಣೆ ಈ ಕಾಯ್ದೆಗಳಿಗಿವೆ ಎಂಬ ಟೀಕೆಗಳು ಕೂಡ ಕೇಳಿ ಬರುತ್ತಲೇ ಇವೆ. ಈ ಶಾಸನಗಳಲ್ಲಿ ಬಳಕೆಯಾಗಿರುವ ಭಾಷೆಯಲ್ಲಿ ಯಾವ ರೀತಿಯ ಚಟುವಟಿಕೆಗಳು ನಿಷೇಧಿತವಾಗಿವೆ ಎಂಬ ಬಗ್ಗೆ ಸ್ಪಷ್ಟತೆ ಕಂಡುಬರುವುದಿಲ್ಲ. ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಈ ಕಾಯ್ದೆಗಳನ್ನು ದುರ್ಬಳಕೆ ಮಾಡಲು ಅಧಿಕಾರಿಗಳು ಈ ಅಸ್ಪಷ್ಟ ಪದಪ್ರಯೋಗಗಳನ್ನು ಬಳಸಿಕೊಳ್ಳಬಹುದು ಎಂಬ ಆತಂಕ ಕೂಡ ಖಂಡಿತ ಗಂಭೀರವಾದುದು.

ಅದೇನೆ ಇರಲಿ, ಒಂದಂತೂ ಸ್ಪಷ್ಟ: ಮತಾಂತರ ತಡೆ ಕಾಯ್ದೆಗಳ ಸಮರ್ಥಕರು ಹಾಗೂ ವಿರೋಧಿಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯ ಕಾರಣವನ್ನು ನೀಡುತ್ತಾರೆ. ಸಮಕಾಲೀನ ಸಂದರ್ಭದಲ್ಲಿ ನಡೆಯುತ್ತಿರುವ ಧರ್ಮಪ್ರೇರಿತ ಹಿಂಸಾಚಾರದ ಹಿನ್ನೆಲೆಯಲ್ಲಿ ಮತಾಂತರ ತಡೆ ಕಾಯ್ದೆಗಳ ಬಗೆಗಿನ ಚರ್ಚೆ ಇಲ್ಲಿ ಈ ಹಿನ್ನೆಲೆಯಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

೧.೩ 'ಒತ್ತಡ' ಅಥವಾ 'ಬಲವಂತ' ಪದದ ವ್ಯಾಖ್ಯಾನ

ಬಲವಂತದ ಮತಾಂತರಕ್ಕೆ ಸಂಬಂಧಿಸಿದಂತೆ, ಎಲ್ಲ ಕಾಯ್ದೆಗಳಲ್ಲಿ 'ಬಲವಂತ' ಅಥವಾ 'ಒತ್ತಡ' ಪದದ ಸಮಾನವಾದ ವ್ಯಾಖ್ಯಾನ ಕಂಡುಬರುತ್ತದೆ. "'ಬಲವಂತ' ಅಥವಾ 'ಒತ್ತಡ' ಎಂದರೆ ಬಲಪ್ರಯೋಗ ಅಥವಾ ಭೌತಿಕವಾಗಿ ಘಾಸಿಗೊಳಿಸುವಂತೆ ಹೆದರಿಸುವುದು ಅಥವಾ ದೇವರ ಅವಕೃಪೆಗೆ ಒಳಗಾಗುವುದಗಿ ಭೀತಿ ಹುಟ್ಟಿಸುವುದು ಅಥವಾ ಸಾಮಾಜಿಕ ಬಹಿಷ್ಕಾರದ ಭಯ ಹುಟ್ಟಿಸುವುದು" ಎಂಬಂತಹ ಅರ್ಥ ಬರುತ್ತದೆ.

ಆದರೆ, ಈ ವ್ಯಾಖ್ಯಾನವನ್ನು ಯಾವ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುವುದು ಎಂಬುದು ಯಾವುದೇ ಕಾಯ್ದೆಗಳಲ್ಲಿ ಸ್ಪಷ್ಟವಾಗಿಲ್ಲ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ನೀಡುವುದಾದರೆ, ತಮ್ಮ ಧರ್ಮವನ್ನು ಅನುಸರಿಸದವರು ದೇವರ ಅವಕೃಪೆಗೆ ಒಳಗಾಗುವುದಾಗಿ ಧರ್ಮವೊಂದು ಬೋಧಿಸಿದರೆ (ಕ್ರೈಸ್ತಧರ್ಮ, ಇಸ್ಲಾಂ ಧರ್ಮ) ಮತಾಂತರ ತಡೆ ಕಾಯ್ದೆಗಳ ಪ್ರಕಾರ ಇದು 'ಒತ್ತಡ' ಹೇರಿದಂತಾಗುತ್ತದೆ. ಹೀಗೆ ಮಾಡಿದರೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿಬಂದಂತಾಗುತ್ತದೆ. ಖ್ಯಾತ ಕಾನೂನು ತಜ್ಞ ಕೆ ಎಂ ಶೀರ್ವಾಯ್ ಅವರು, ಧಾರ್ಮಿಕ ಪ್ರತಿಪಾದನೆ ಮತ್ತು ಪ್ರಚಾರರ ಹಕ್ಕುಗಳನ್ನು ಕುರಿತ ಚರ್ಚೆಯಲ್ಲಿ, "ಓರ್ವ ವ್ಯಕ್ತಿ ತನಗೆ ಯಾವ ಆಯ್ಕೆಗಳಿವೆ ಎಂದು ತಿಳಿಯದೆ ಆಯ್ಕೆ ಮಾಡಿಕೊಳ್ಳಲಾಗುವುದಿಲ್ಲ" ಎಂದಿದ್ದಾರೆ. 'ಬಲವಂತ' ಅಥವಾ 'ಒತ್ತಡ' ಪದದ ಅಸ್ಪಷ್ಟ ವ್ಯಾಖ್ಯಾನದಿಂದಾಗಿ ಮತಾಂತರ ಹೊಂದಬಯಸುವವರು ಹಾಗೂ ಮತಾಂತರ ನಡೆಸುವವರ ಹಕ್ಕುಗಳಿಗೆ ಧಕ್ಕೆ ಉಂಟಾಗುತ್ತದೆ. ಮತಾಂತರ ಪ್ರಕ್ರಿಯೆ ಕೈಗೊಳ್ಳುವ ಧರ್ಮ ಪ್ರಚಾರಕರು ತಮ್ಮ ಧರ್ಮದ ಬಗ್ಗೆ ಮತಾಂತರ ಹೊಂದಬಯಸುವವರಿಗೆ ಸೂಕ್ತವಾದ ಮಾಹಿತಿ ನೀಡಲಾಗುವುದಿಲ್ಲ. ಇದರಿಂದಾಗಿ, ಒಂದು ಅರ್ಥಪೂರ್ಣವಾದ ಧಾರ್ಮಿಕ ಸಂವಾದ ನಡೆಯದೆ, ಒಟ್ಟಾರೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದಂತಾಗುತ್ತದೆ.

ಓಲೈಕೆ ಮತ್ತು ಪ್ರಲೋಭನೆ

ರಾಜಸ್ಥಾನ ರಾಜ್ಯದ ಮಸೂದೆಯ ಪ್ರಕಾರ "ಓಲೈಕೆ ಎಂದರೆ (೧) ಹಣ ಅಥವಾ ಇನ್ನಿತರ ಯಾವುದೇ ಉಡುಗೊರೆ ನೀಡುವುದು; (೨) ಹಣಕಾಸು ಅಥವಾ ಇನ್ನಿತರ ಯಾವುದೇ ರೀತಿಯ ಸಹಾಯ ಮಾಡುವುದು." ಎಂದಾಗುತ್ತದೆ. ಮಧ್ಯಪ್ರದೇಶ, ಚತ್ತೀಸ್‌ಗಢ ಮತ್ತು ಗುಜರಾತ್ ರಾಜ್ಯದ ಕಾಯ್ದೆಗಳಲ್ಲಿಯೂ 'ಓಲೈಕೆ' ಇದೇ ರೀತಿಯ

ವ್ಯಾಖ್ಯಾನಕ್ಕೆ ಒಳಪಡುತ್ತವೆ

ಹಿಮಾಚಲ ಪ್ರದೇಶ, ಒರಿಸ್ಸಾ ಮತ್ತು ಅರುಣಾಚಲ ಪ್ರದೇಶ ಕಾಯ್ದೆಗಳು, ಇದಕ್ಕೆ ವ್ಯತಿರಿಕ್ತವಾಗಿ, 'ಪ್ರಲೋಭನೆ' ಪದವನ್ನು ವ್ಯಾಖ್ಯಾನಿಸುತ್ತದೆ. ಈ ಕಾಯ್ದೆಗಳ ಪ್ರಕಾರ, "ಪ್ರಲೋಭನೆ ಎಂದರೆ ಹಣ ಅಥವಾ ಇತರ ಯಾವುದೇ ರೂಪದಲ್ಲಿ ಉಡುಗೊರೆ ನೀಡುವುದು ಅಥವಾ ಸಹಾಯ ಮಾಡುವುದು ಮತ್ತು ಭೌತಿಕವಾದ ಅಥವಾ ಇತರ ಯಾವುದೇ ರೀತಿಯ ಸಹಾಯ ಮಾಡುವುದು."

ಯುಲಿಥಾ ಹಾಗೂ ಒರಿಸ್ಸಾ ರಾಜ್ಯದ ಮೊಕದ್ದಮೆಯಲ್ಲಿ ಈ ಮೇಲಿನ ಎರಡನೆಯ ವ್ಯಾಖ್ಯಾನದ ಸಮಸ್ಯೆಗಳನ್ನು ರಾಜ್ಯದ ಉಚ್ಚ ನ್ಯಾಯಾಲಯ ಗಮನಿಸಿತ್ತು. ಈ ವ್ಯಾಖ್ಯಾನ ಅಸ್ಪಷ್ಟವಾಗಿದ್ದು, ವಿಶಾಲ ವ್ಯಾಪ್ತಿಯನ್ನು ಹೊಂದಿರುವುದರಿಂದ, ಶಾಸನಬದ್ಧವಾದ ಧರ್ಮ ಪ್ರಚಾರ ಕಾರ್ಯಗಳಿಗೆ ಇದು ಧಕ್ಕೆ ತರುತ್ತದೆ ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಈ ತೀರ್ಪನ್ನು ಸುಪ್ರೀಂ ಕೋರ್ಟ್, ಸ್ಟೇನಿಸ್ಲಾಸ್ ಹಾಗೂ ಮಧ್ಯಪ್ರದೇಶ ರಾಜ್ಯದ ಮೊಕದ್ದಮೆಯಲ್ಲಿ ತಳ್ಳಿಹಾಕಿ, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಕಾಯ್ದೆಗಳನ್ನು ಎತ್ತಿಹಿಡಿಯಿತು.

ಆದರೆ, ಈ ಎರಡು ರಾಜ್ಯಗಳಲ್ಲಿನ ಮತಾಂತರ ತಡೆ ಕಾಯ್ದೆಗಳ ವಿಶಾಲ ವ್ಯಾಪ್ತಿ ತಂದೊಡ್ಡಿರುವ ಸಮಸ್ಯೆಗಳು ಈಗಲೂ ಹಾಗೆ ಉಳಿದಿವೆ. ಉದಾಹರಣೆಗೆ ದಾನ ನೀಡುವುದು ಕೆಲವು ಧರ್ಮದ ಅವಿಭಾಜ್ಯ ಅಂಗವಾಗಿರುವುದರಿಂದ, ಈ ಕಾಯ್ದೆಯಡಿ ಕೆಲವು ಧಾರ್ಮಿಕ ನಂಬಿಕೆಗಳನ್ನು ಮತ್ತು ಚಟುವಟಿಕೆಗಳನ್ನು ನಡೆಸುವುದು ಕಷ್ಟಕರವಾಗುತ್ತದೆ. ಧಾರ್ಮಿಕ ಸಂಘಟನೆಗಳು ಶಿಕ್ಷಣ ಮತ್ತು ಆರೋಗ್ಯ ಸೇವೆ ನೀಡುವುದನ್ನೂ ಕೂಡ ಮತಾಂತರದ ಉದ್ದೇಶದಿಂದ ನಡೆಸುವ 'ಒಲೈಕೆ' ಅಥವಾ 'ಪ್ರಲೋಭನೆ' ಎಂದು ಪರಿಗಣಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಯಾವ ಚಟುವಟಿಕೆಗಳು ನಿಷೇಧಿಸಲ್ಪಟ್ಟಿವೆ, ಯಾವ ಚಟುವಟಿಕೆಗಳನ್ನು ನಡೆಸಲು ಅನುಮತಿ ಇದೆ ಎಂದು ಈ ವ್ಯಾಖ್ಯಾನಗಳು ಸ್ಪಷ್ಟಪಡಿಸಿಲ್ಲ.

ಶಾಸನಬದ್ಧ ಹಾಗೂ ಶಾಸನಬದ್ಧವಲ್ಲದ ಮತಾಂತರದ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸದ ಹಿನ್ನೆಲೆಯಲ್ಲಿ ಕಾನೂನು ಅನುಷ್ಠಾನಗೊಳಿಸುವವರು ಹಾಗೂ ಮಿಷನರಿಗಳು, ಇಬ್ಬರಲ್ಲೂ ಗೊಂದಲವೇರ್ಪಟ್ಟಿದೆ. ಇದರಿಂದಾಗಿ ಧರ್ಮ ಪ್ರತಿಪಾದನೆ, ಧರ್ಮ ಪ್ರಚಾರ ಹಾಗೂ ಮತಾಂತರಗೊಳಿಸುವ ಪ್ರಕ್ರಿಯೆಯಲ್ಲಿರುವ ಜನ ಮುಕ್ತವಾಗಿ ತಮ್ಮ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದಿಲ್ಲ.

೧. 'ಮೋಸ' ಪದದ ವ್ಯಾಖ್ಯಾನ

ರಾಜಸ್ಥಾನ ರಾಜ್ಯದ ಮಸೂದೆ ಹಾಗೂ ಗುಜರಾತ್ ರಾಜ್ಯದ ಕಾಯ್ದೆಯ ಪ್ರಕಾರ 'ಮೋಸ' ಎಂದರೆ, "ಮೋಸದ ಮಾರ್ಗ ಮತ್ತು ತಪ್ಪು ಪ್ರಾತಿನಿಧಿಕೆ ಅಥವಾ ಇತರ ಮೋಸದ ಚಟುವಟಿಕೆ". ಹಿಮಾಚಲಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ, ಅರುಣಾಚಲಪ್ರದೇಶ ಮತ್ತು ಚತ್ತೀಸ್‌ಗಢ ರಾಜ್ಯಗಳ ಕಾಯ್ದೆಗಳ ಪ್ರಕಾರ, "ಮೋಸ ಎಂದರೆ ತಪ್ಪು ಪ್ರಾತಿನಿಧಿಕೆ ಅಥವಾ ಇತರ ಯಾವುದೇ ಮೋಸದ ಚಟುವಟಿಕೆ".

ಈ ವ್ಯಾಖ್ಯೆಯಲ್ಲಿ ಕೂಡ ಅಸ್ಪಷ್ಟತೆ ಕಂಡುಬರುತ್ತದೆ. ಉದಾಹರಣೆಗೆ, ಮತಾಂತರ ಹೊಂದಿದರೆ ದೇವರಿಗೆ ಹತ್ತಿರವಾಗುವುದಾಗಿ ತಿಳಿಸಿ, ಮತಾಂತರ ಹೊಂದಿದ ಬಳಿಕ ಆತನಿಗೆ ಇಂತಹ ಯಾವುದೇ ಆಧ್ಯಾತ್ಮಿಕ ಅನುಭವವಾಗದಿದ್ದರೆ, ಅದು "ತಪ್ಪು ಪ್ರಾತಿನಿಧಿಕೆ"ಯಾಗುತ್ತದೆಯೇ? ಈ ಸಂಬಂಧ ಯಾವ ಚಟುವಟಿಕೆ ಮೋಸ ಎಂದು ಕರೆಸಿಕೊಳ್ಳುತ್ತದೆ? ಎಂಬ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ಕಾಯ್ದೆಗಳಲ್ಲಿ ಕಂಡುಬರುವುದಿಲ್ಲ.

ಜೊತೆಗೆ, ವ್ಯಾಖ್ಯೆಯಲ್ಲಿ ಅಸ್ಪಷ್ಟತೆಯಿರುವುದರಿಂದ ಸರ್ಕಾರಿ ಅಧಿಕಾರಿಗಳು ತಮಗೆ ಬೇಕಾದ ಹಾಗೆ ಕಾಯ್ದೆಯನ್ನು ವಿಶ್ಲೇಷಿಸಬಹುದಾಗಿದೆ. ಜೊತೆಗೆ, ಯಾವ ಚಟುವಟಿಕೆಯನ್ನು ನಿಷೇಧಿಸಬೇಕು, ಯಾರನ್ನು ಕಾನೂನಿಗೆ ಗುರಿಪಡಿಸಬೇಕು ಎಂದೂ ಕೂಡ ಅಧಿಕಾರಿಗಳು ನಿರ್ಧರಿಸುವ ಹಾಗಾಗುತ್ತದೆ. ಇಲ್ಲಿ ಬಹಳಷ್ಟು ಹಕ್ಕುಗಳು ಬೆರೆತುಕೊಂಡಿರುವುದರಿಂದ, ಶಾಸನಬದ್ಧವಾದ ಮತಾಂತರ, ಶಾಸನವನ್ನು ಉಲ್ಲಂಘಿಸುವ ಮತಾಂತರದ ನಡುವೆ ಗೆರೆ ಎಳೆಯುವುದು ತೀರ ಕಷ್ಟಕರವಾದ ಕೆಲಸ. ಮತಾಂತರ ತಡೆ ಕಾಯ್ದೆಗಳು ಈ ರೀತಿ ಅಸ್ಪಷ್ಟವಾಗಿರುವುದರಿಂದ, ಮತಾಂತರ ಚಟುವಟಿಕೆಗಳ ಮೇಲೆ ಒಟ್ಟಾರೆಯಾಗಿ ನಿಷೇಧ ಹೇರಿದಂತಾಗುತ್ತದೆ. ಇದರಿಂದಾಗಿ ಈ ಕೆಳಗೆ ಚರ್ಚಿಸುವ ಎಲ್ಲ ಹಕ್ಕುಗಳನ್ನೂ ಉಲ್ಲಂಘಿಸಿದಂತಾಗುತ್ತದೆ.

೨. ಸಾಂವಿಧಾನಿಕ ರಕ್ಷಣೆಯ ವ್ಯಾಪ್ತಿ

ಭಾರತೀಯ ಸಂವಿಧಾನದ ೨೫ನೇ ವಿಧಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ೧೯೪೮ರಲ್ಲಿ ಮಾನವ ಹಕ್ಕುಗಳ ಜಾಗತಿಕ ಘೋಷಣೆಯ ೧೮ನೇ ವಿಧಿ ಕೂಡ ಇದನ್ನು ಕುರಿತದ್ದೇ ಆಗಿದೆ. ಈ ಹಕ್ಕುಗಳ ಪ್ರಮುಖ ಅಂಶಗಳು ಹೀಗಿವೆ:

ರಾಜಸ್ಥಾನ ರಾಜ್ಯದ ಮಸೂದೆ ಹಾಗೂ ಗುಜರಾತ್ ರಾಜ್ಯದ ಕಾಯ್ದೆಯ ಪ್ರಕಾರ 'ಮೋಸ' ಎಂದರೆ, "ಮೋಸದ ಮಾರ್ಗ ಮತ್ತು ತಪ್ಪು ಪ್ರಾತಿನಿಧಿಕೆ ಅಥವಾ ಇತರ ಮೋಸದ ಚಟುವಟಿಕೆ". ಹಿಮಾಚಲ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ, ಅರುಣಾಚಲಪ್ರದೇಶ ಮತ್ತು ಚತ್ತೀಸ್‌ಗಢ ರಾಜ್ಯಗಳ ಕಾಯ್ದೆಗಳ ಪ್ರಕಾರ, "ಮೋಸ ಎಂದರೆ ತಪ್ಪು ಪ್ರಾತಿನಿಧಿಕೆ ಅಥವಾ ಇತರ ಯಾವುದೇ ಮೋಸದ ಚಟುವಟಿಕೆ". ಈ ವ್ಯಾಖ್ಯೆಯಲ್ಲಿ ಕೂಡ ಅಸ್ಪಷ್ಟತೆ ಕಂಡುಬರುತ್ತದೆ. ಉದಾಹರಣೆಗೆ, ಮತಾಂತರ ಹೊಂದಿದರೆ ದೇವರಿಗೆ ಹತ್ತಿರವಾಗುವುದಾಗಿ ತಿಳಿಸಿ, ಮತಾಂತರ ಹೊಂದಿದ ಬಳಿಕ ಆತನಿಗೆ ಇಂತಹ ಯಾವುದೇ ಆಧ್ಯಾತ್ಮಿಕ ಅನುಭವವಾಗದಿದ್ದರೆ, ಅದು "ತಪ್ಪು ಪ್ರಾತಿನಿಧಿಕೆ"ಯಾಗುತ್ತದೆಯೇ? ಈ ಸಂಬಂಧ ಯಾವ ಚಟುವಟಿಕೆ ಮೋಸ ಎಂದು ಕರೆಸಿಕೊಳ್ಳುತ್ತದೆ? ಎಂಬ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ಕಾಯ್ದೆಗಳಲ್ಲಿ ಕಂಡುಬರುವುದಿಲ್ಲ.

೨೫ನೇ ವಿಧಿ: ಆತ್ಮಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮದ ಅನುಸರಣೆ, ಪ್ರತಿಪಾದನೆ ಮತ್ತು ಪ್ರಚಾರದ ಸ್ವಾತಂತ್ರ್ಯ. (೧) ಸಾರ್ವಜನಿಕ ಶಾಂತಿ, ನೈತಿಕತೆ ಮತ್ತು ಆರೋಗ್ಯದ ಜೊತೆಗೆ ಈ ಭಾಗದ ಇತರ ನಿಬಂಧನೆಗಳೊಂದಿಗೆ, ಎಲ್ಲ ಜನರಿಗೂ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದ್ದು, ಯಾವುದೇ ಧರ್ಮವನ್ನು ಅನುಸರಿಸಲು, ಪ್ರತಿಪಾದಿಸಲು, ಪ್ರಚಾರ ಮಾಡಲು ಸ್ವಾತಂತ್ರ್ಯವಿದೆ.

(೨) ಈ ವಿಧಿಯಲ್ಲಿರುವ ಯಾವ ಅಂಶಗಳೂ ಈಗ ಅಸ್ತಿತ್ವದಲ್ಲಿರುವ ಯಾವುದೇ ಶಾಸನದ ಅನುಷ್ಠಾನಕ್ಕೆ ಹಾಗೂ ಹೊಸ ಕಾಯ್ದೆಯ ರಚನೆಗೆ ಧಕ್ಕೆ ತರುವುವಂತಹುದಲ್ಲ– (ಎ) ಧಾರ್ಮಿಕ ಆಚರಣೆಗೆ ಸಂಬಂಧಿಸಿರಬಹುದಾದ, ಆರ್ಥಿಕ, ವಿತ್ತೀಯ, ರಾಜಕೀಯ ಮತ್ತಿತರ ಸಮರ್ಪಕ ಚಟುವಟಿಕೆಗಳನ್ನು ನಿಯಂತ್ರಿಸುವುದು ಅಥವಾ ತಡೆಗಟ್ಟುವುದು; (ಬಿ) ಸಮಾಜ ಕಲ್ಯಾಣ ಮತ್ತು ಸುಧಾರಣೆ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲಿ ಎಲ್ಲ ವರ್ಗಗಳ ಹಿಂದೂಗಳಿಗೆ ಅವಕಾಶ ಕಲ್ಪಿಸುವುದು;

ವಿವರಣೆ ೧: ಕಿರ್ಪನ್‌ಗಳನ್ನು ಒಯ್ಯುವುದನ್ನು ಸಿಖ್ ಧರ್ಮದ ಆಚರಣೆಯ ಭಾಗವಾಗಿ ಪರಿಗಣಿಸುವುದು.

ವಿವರಣೆ ೨: ಕಲಂ ೨ರ ಉಪವಿಧಿ (ಬಿ)ಯ ಪ್ರಕಾರ, ಹಿಂದೂಗಳು ಎಂದರೆ, ಸಿಖ್, ಜೈನ ಅಥವಾ ಬೌದ್ಧ ಧರ್ಮವನ್ನು ಅನುಸರಿಸುತ್ತಿರುವವರೆಂದು, ಹಾಗೂ ಹಿಂದೂ ಧಾರ್ಮಿಕ ಸಂಸ್ಥೆಗಳೆಂದರೆ, ಈ ಎಲ್ಲ ಧರ್ಮಗಳ ಧಾರ್ಮಿಕ ಸಂಸ್ಥೆಗಳೆಂದು ಅರ್ಥೈಸುವುದು.

ಧಾರ್ಮಿಕ ಸ್ವಾತಂತ್ರ್ಯದ ಈ ಸಾಂವಿಧಾನಿಕ ಹಕ್ಕಿನ ವ್ಯಾಪ್ತಿಯನ್ನು ವಿಶ್ಲೇಷಿಸುತ್ತಾ ಸುಪ್ರೀಂಕೋರ್ಟ್ ಈ ಕೆಳಗಿನ ಸ್ಪಷ್ಟನೆ ನೀಡಿದೆ; ಓರ್ವ ವ್ಯಕ್ತಿಯ "ಧಾರ್ಮಿಕ ನಂಬಿಕೆಗಳು ಅವನದ್ದೇ ಆಗಿರುತ್ತದೆ ಮತ್ತು ಆ ನಂಬಿಕೆಗಳನ್ನು ಹೊಂದಲು ಆತನಿಗೆ ಸಂಪೂರ್ಣವಾದ ಹಕ್ಕು ಇರುತ್ತದೆ. ಆದರೆ ಆತ ತನಗೆ ಇಷ್ಟ ಬಂದ ಹಾಗೆ ತನ್ನ ಧಾರ್ಮಿಕ ನಂಬಿಕೆಗಳನ್ನು ಅನುಸರಿಸಲು ಹಕ್ಕು ಇರುವುದಿಲ್ಲ." ಸಾಂವಿಧಾನಿಕ ರಕ್ಷಣೆಯ ವಿಷಯದಲ್ಲಿ, ಸುಪ್ರೀಂ ಕೋರ್ಟ್, ಧಾರ್ಮಿಕ ನಂಬಿಕೆಗಳನ್ನು ಹೊಂದುವುದು ಮತ್ತದನ್ನು ಆಚರಿಸುವುದರ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿದೆ. ಸಂವಿಧಾನದ ೨೫ನೇ ವಿಧಿಯ ಪ್ರಕಾರ, "ಯಾವುದೇ ಧಾರ್ಮಿಕ ನಂಬಿಕೆಗಳನ್ನು ಮತ್ತು ಧರ್ಮವನ್ನು ಅನುಸರಿಸಲು ಓರ್ವ ವ್ಯಕ್ತಿಗಿರುವ ಹಕ್ಕಿನ ವಿರುದ್ಧ ಯಾರೂ ಒತ್ತಡ ಹೇರುವಂತಿಲ್ಲ... ಓರ್ವ ವ್ಯಕ್ತಿ ತನ್ನ ಮನಃಸಾಕ್ಷಿಗೆ ತೋಚಿದಂತೆ ಯಾವುದೇ ದೇವರನ್ನು ಪೂಜಿಸಲು ಸಂಪೂರ್ಣವಾದ ಹಕ್ಕಿದೆ." ಇನ್ನು ಧರ್ಮದ ಅನುಸರಣೆ ಮತ್ತು ಪ್ರಚಾರದ ಹಕ್ಕು ಕುರಿತ ಸಾಂವಿಧಾನಿಕ ನಿಬಂಧನೆಗಳು ಕೂಡ ಅದೇ ೨೫ನೇ ವಿಧಿಯ ವ್ಯಾಪ್ತಿಯೊಳಗೆ ಬರುತ್ತದೆ.

ಹೀಗಾಗಿ, ಸಾರ್ವಜನಿಕ ಶಾಂತಿ, ನೈತಿಕತೆ ಮತ್ತು ಆರೋಗ್ಯಕ್ಕೆ ಧಕ್ಕೆ ತರುವ ಹಾಗಿದ್ದರೆ (೨೫ ನೇ ವಿಧಿಯ (೧)ನೇ ಕಲಂನಲ್ಲಿ ಅನುಮತಿ ನೀಡಿರುವಂತೆ) ಮಾತ್ರ ಯಾವುದೇ ಧರ್ಮವನ್ನು ಆಚರಿಸುವ ಮತ್ತದನ್ನು ಪ್ರಚಾರ ಮಾಡುವ ಹಕ್ಕನ್ನು ಶಾಸನಾತ್ಮಕವಾಗಿ ನಿಬಂಧನೆಗೊಳ್ಳಪಡಿಸಬಹುದು. ಹಾಗೂ, ಧಾರ್ಮಿಕ ಚಟುವಟಿಕೆಗಳು, ಸಾಮಾಜಿಕ ಕಲ್ಯಾಣ ಮತ್ತು ಸುಧಾರಣೆಗೆ ಸಂಬಂಧಿಸಿದ ಯಾವುದೇ ಜಾತ್ಯತೀತ ಚಟುವಟಿಕೆಗಳನ್ನು ಕೂಡ ಸಂವಿಧಾನದ ೨೫ನೇ ವಿಧಿಯ (೨)ನೇ ಕಲಂನ (ಎ) ಮತ್ತು

(ಬಿ) ಉಪವಿಧಿಯ ಅನ್ವಯ ಮಾತ್ರ ನಿಬಂಧನೆಗೊಳಪಡಿಸಬಹುದು.

೨.೧ ಸ್ಟೇನಿಸ್ಲಾಸ್ ತೀರ್ಪು

೧೯೭೭ರಲ್ಲಿ ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಮತಾಂತರ ತಡೆ ಕಾಯ್ದೆಗಳ ಸಾಂವಿಧಾನಿಕ ಸಂಗತತೆಯನ್ನು ನಿರ್ಧರಿಸಿದ ರೆವರೆಂಡ್ ಸ್ಟೇನಿಸ್ಲಾಸ್ ಮತ್ತು ಮಧ್ಯಪ್ರದೇಶ ರಾಜ್ಯದ ಮೊಕದ್ದಮೆಯ ಸುಪ್ರೀಂಕೋರ್ಟ್ ತೀರ್ಪು, ಮತಾಂತರ ತಡೆ ಕಾಯ್ದೆಗಳ ಸಂಗತತೆಯನ್ನು ನಿರ್ಧರಿಸಲು ಇಂದಿಗೂ ಬೆಳಕಿಂಡಿಯಾಗಿದೆ.

ಒರಿಸ್ಸಾ ಮತ್ತು ಮಧ್ಯಪ್ರದೇಶ ರಾಜ್ಯಗಳ ಹೈಕೋರ್ಟ್‌ಗಳು ನೀಡಿದ ವ್ಯತಿರಿಕ್ತ ತೀರ್ಪುಗಳ ಫಲವಾಗಿ ಸ್ಟೇನಿಸ್ಲಾಸ್ ಮೊಕದ್ದಮೆ ಸುಪ್ರೀಂಕೋರ್ಟ್‌ಗೆ ಬಂತು. ಈ ಎರಡೂ ಕೋರ್ಟ್‌ಗಳು ಆಯಾ ರಾಜ್ಯದ ಮತಾಂತರ ತಡೆ ಕಾಯ್ದೆಗಳ ಸಾಂವಿಧಾನಿಕ ಸಂಗತತೆಯನ್ನು ನಿರ್ಧರಿಸುವಲ್ಲಿ ಒಂದೇ ರೀತಿಯ ಸವಾಲುಗಳನ್ನು ಎದುರಿಸಿತ್ತು.

ಈ ಕಾಯ್ದೆಗಳು ಸಂವಿಧಾನದ ೨೫ನೇ ವಿಧಿಯನ್ನು ಉಲ್ಲಂಘಿಸಿತ್ತು ಹಾಗೂ ರಾಜ್ಯ ಸರ್ಕಾರಗಳು ಈ ಕಾಯ್ದೆಗಳನ್ನು ರಚಿಸಲು ಶಾಸನಾತ್ಮಕ ಸಾಮರ್ಥ್ಯ ಇರುವುದಿಲ್ಲ (ಧರ್ಮ ರಾಜ್ಯ ಪಟ್ಟಿಯಲ್ಲಿಲ್ಲದಿರುವುದರಿಂದ, ರಾಜ್ಯಗಳು ಈ ವಿಷಯದ ಮೇಲೆ ಶಾಸನಗಳನ್ನು ರಚಿಸುವಂತಿಲ್ಲ. ಈ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುವುದು). ಎರಡೂ ಕೋರ್ಟ್‌ಗಳು ಒತ್ತಡ ಮತ್ತು ಮೋಸದ ಮೂಲಕ ಮತಾಂತರ ಕೈಗೊಳ್ಳುವ ಪ್ರಕ್ರಿಯೆಯ ನಿಷೇಧವನ್ನು ಎತ್ತಿಹಿಡಿದಿರುವುದಷ್ಟೇ ಅಲ್ಲದೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ ಪೂರಕವಾಗಿದೆ ಎಂಬ ಕಾರಣ ನೀಡಿ, ಮಧ್ಯಪ್ರದೇಶದ ಹೈಕೋರ್ಟ್ "ಓಲೈಸುವಿಕೆ"ಯ ಮೂಲಕ ಮತಾಂತರ ನಡೆಸುವ ಪ್ರಯತ್ನದ ನಿಷೇಧವನ್ನು ಕೂಡ ಎತ್ತಿಹಿಡಿದಿದೆ.

ಇದಕ್ಕೆ ವ್ಯತಿರಿಕ್ತವಾಗಿ ಸಂವಿಧಾನದಲ್ಲಿ ನೀಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ಭಾಗವಾಗಿ ಓರ್ವ ವ್ಯಕ್ತಿಯ ಮತಾಂತರ ಹೊಂದುವ ಹಕ್ಕನ್ನು ಎತ್ತಿಹಿಡಿದ ಒರಿಸ್ಸಾ ಹೈಕೋರ್ಟ್, ಒರಿಸ್ಸಾ ರಾಜ್ಯದ ಧಾರ್ಮಿಕ ಸ್ವಾತಂತ್ರ್ಯದ ಕಾಯ್ದೆಯ ೨ನೇ (ಡಿ) ವಿಧಿಯಲ್ಲಿ ಬಳಸಲಾಗಿರುವ "ಪ್ರಲೋಭನೆ"ಯ ವ್ಯಾಖ್ಯೆ ತೀರ ಅಸ್ಪಷ್ಟವಾಗಿದೆ ಎಂದು ತೀರ್ಪು ನೀಡಿತು. ಹೀಗಾಗಿ, ಸಂವಿಧಾನದ ೨೫ನೇ ವಿಧಿಯ (೧)ನೇ ಕಲಂ ನೀಡಿರುವ ಧರ್ಮ ಪ್ರಚಾರದ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಕಾಯ್ದೆಯನ್ನು ಅನೂರ್ಜಿತಗೊಳಿಸಬಹುದಾಗಿತ್ತು. ಒರಿಸ್ಸಾ ರಾಜ್ಯದ ಮತಾಂತರ ತಡೆ ಕಾಯ್ದೆ ಶಾಸನಾತ್ಮಕ ಪರೀಕ್ಷೆಯಲ್ಲಿ ನಪಾಸಾದ ಕಾರಣ ಅನೂರ್ಜಿತಗೊಂಡಿತು. ಆದರೆ ಮಧ್ಯಪ್ರದೇಶದ ಹೈಕೋರ್ಟ್, ರಾಜ್ಯ ಪಟ್ಟಿಯಲ್ಲಿರುವ "ಸಾರ್ವಜನಿಕ ಶಾಂತಿ-ಸುವ್ಯವಸ್ಥೆ"ಯ ವಿಭಾಗದಡಿ ರಾಜ್ಯ ಸರ್ಕಾರ ಧಾರ್ಮಿಕ ವಿಚಾರಗಳಲ್ಲಿ ಶಾಸನ ರಚಿಸಬಹುದೆಂದು ತೀರ್ಪು ನೀಡಿತು.

ಸ್ಟೇನಿಸ್ಲಾಸ್ ಮೊಕದ್ದಮೆಯಲ್ಲಿ ಮತಾಂತರ, ಸಾಂವಿಧಾನಿಕ ರಕ್ಷಣೆಗೆ ಅರ್ಹವಾದ ಧಾರ್ಮಿಕ ಚಟುವಟಿಕೆ ಎಂಬ ಒರಿಸ್ಸಾ ಹೈಕೋರ್ಟ್‌ನ ತೀರ್ಪನ್ನು ತಳ್ಳಿಹಾಕಿದ ಸುಪ್ರೀಂಕೋರ್ಟ್, ಮಧ್ಯಪ್ರದೇಶ ಹೈಕೋರ್ಟ್‌ನ ತೀರ್ಪನ್ನು ಎತ್ತಿಹಿಡಿಯಿತು. ಧರ್ಮ ಪ್ರಚಾರದ ಭಾಗವಾಗಿ ಮತಾಂತರದ ಸ್ವಾತಂತ್ರ್ಯವನ್ನು ಸುಪ್ರೀಂಕೋರ್ಟ್ ಪರಿಭಾವಿಸಿಕೊಳ್ಳಲಿಲ್ಲ. ಇದರ ಬದಲಿಗೆ, ಸಂವಿಧಾನದ ೨೫ನೇ ವಿಧಿ ಕೇವಲ "ಯಾವುದೇ ಒಂದು ಧರ್ಮದ ವಿಚಾರಗಳನ್ನು ಪ್ರಸರಣ ಮಾಡುವ" ಹಕ್ಕನ್ನು ಮಾತ್ರ ನೀಡುತ್ತದೆ ಎಂಬ ತೀರ್ಪು ನೀಡಿತು. ತನ್ನ ಧರ್ಮದ ಪ್ರಸರಣದ ಪ್ರಯತ್ನದಲ್ಲಿ ಉದ್ದೇಶಪೂರ್ವಕವಾಗಿ ಓರ್ವ ವ್ಯಕ್ತಿ ಮತ್ತೋರ್ವ ವ್ಯಕ್ತಿಯನ್ನು ತನ್ನ ಧರ್ಮಕ್ಕೆ ಮತಾಂತರಗೊಳಿಸಲು ಯತ್ನಿಸುವುದರಿಂದ, ಸಂವಿಧಾನದಲ್ಲಿ ದೇಶದ ಎಲ್ಲ ನಾಗರಿಕರಿಗೆ ನೀಡಿರುವ "ಆತ್ಮಸಾಕ್ಷಿಯ ಸ್ವಾತಂತ್ರ್ಯ"ಕ್ಕೆ ಧಕ್ಕೆ ತಂದಂತಾಗುತ್ತದೆ ಎಂದು ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿತು.

> **ರಾಜ್ಯಸರ್ಕಾರಗಳು ಮತಾಂತರ ತಡೆ ಕಾಯ್ದೆಗಳನ್ನು ರಚಿಸಬಹುದೇ, ಇಲ್ಲವೇ ಎಂಬ ಅಂಶವನ್ನು ಪರೀಕ್ಷಿಸಿದ ಸುಪ್ರೀಂಕೋರ್ಟ್, 'ಸಾರ್ವಜನಿಕ ಶಾಂತಿ- ಸುವ್ಯವಸ್ಥೆ'ಯ ವಿಭಾಗದಡಿ ರಾಜ್ಯಸರ್ಕಾರಗಳು ಈ ವಿಚಾರದಲ್ಲಿ ಶಾಸನ ರಚಿಸಬಹುದೆಂಬ ಮಧ್ಯಪ್ರದೇಶ ಹೈಕೋರ್ಟ್‌ನ ತೀರ್ಪಿಗೆ ಸಮ್ಮತಿ ಸೂಚಿಸಿತು. "ಆಂತರಿಕ ಕಾನೂನುಗಳನ್ನು ಸರ್ಕಾರ ಅನುಷ್ಠಾನಗೊಳಿಸಿರುವುದರಿಂದ ಸಮಾಜದ ಸದಸ್ಯರ ನಡುವೆ ಇರುವ ಶಾಂತಿಯ ವಾತಾವರಣ"ವನ್ನು ಸುಪ್ರೀಂಕೋರ್ಟ್ 'ಶಾಂತಿ-ಸುವ್ಯವಸ್ಥೆ' ಎಂದು ವಿಶ್ಲೇಷಣೆ ಮಾಡಿದೆ**

ರಾಜ್ಯಸರ್ಕಾರಗಳು ಮತಾಂತರ ತಡೆ ಕಾಯ್ದೆಗಳನ್ನು ರಚಿಸಬಹುದೇ, ಇಲ್ಲವೇ ಎಂಬ ಅಂಶವನ್ನು ಪರೀಕ್ಷಿಸಿದ ಸುಪ್ರೀಂಕೋರ್ಟ್, 'ಸಾರ್ವಜನಿಕ ಶಾಂತಿ-ಸುವ್ಯವಸ್ಥೆ'ಯ ವಿಭಾಗದಡಿ ರಾಜ್ಯಸರ್ಕಾರಗಳು ಈ ವಿಚಾರದಲ್ಲಿ ಶಾಸನ ರಚಿಸಬಹುದೆಂಬ ಮಧ್ಯಪ್ರದೇಶ ಹೈಕೋರ್ಟ್‌ನ ತೀರ್ಪಿಗೆ ಸಮ್ಮತಿ ಸೂಚಿಸಿತು. "ಆಂತರಿಕ ಕಾನೂನುಗಳನ್ನು ಸರ್ಕಾರ ಅನುಷ್ಠಾನಗೊಳಿಸಿರುವುದರಿಂದ ಸಮಾಜದ ಸದಸ್ಯರ ನಡುವೆ ಇರುವ ಶಾಂತಿಯ ವಾತಾವರಣ"ವನ್ನು ಸುಪ್ರೀಂಕೋರ್ಟ್ 'ಶಾಂತಿ-ಸುವ್ಯವಸ್ಥೆ' ಎಂದು ವಿಶ್ಲೇಷಣೆ ಮಾಡಿದೆ. ಹೀಗಾಗಿ, "ಯಾವುದಾದರೂ ಅಂಶ ಓರ್ವ ವ್ಯಕ್ತಿಗೆ ಮಾತ್ರವಲ್ಲದೆ, ಇಡೀ ಸಮುದಾಯಕ್ಕೆ ಧಕ್ಕೆ ತರುವಂತಿದ್ದರೆ ಅದು ಸಮಾಜದ ಶಾಂತಿ-ಸುವ್ಯವಸ್ಥೆ ಕದಡುವಂತಹುದಾಗಿರುತ್ತದೆ." ಈ ಹಿನ್ನೆಲೆಯಲ್ಲಿ ಈ ಎರಡೂ ಕಾಯ್ದೆಗಳು "ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ, ಯಾವುದೇ ಒಂದು ಸಮುದಾಯಕ್ಕೆ ತೊಡಕಾಗದ ಹಾಗೆ, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದುವುದನ್ನು ನಿಷೇಧಿಸಿವೆ." ಆದ್ದರಿಂದ, ರಾಜ್ಯ ಸರ್ಕಾರ ಸಮಾಜದ ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಕಾಯ್ದೆಯನ್ನು ಜಾರಿಗೆ ತಂದಿರುವುದು ಅಸಾಂವಿಧಾನಿಕವಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

(ಸೌಜನ್ಯ: ಮೂಲ: ದಕ್ಷಿಣ ಏಷ್ಯಾ ಮಾನವ ಹಕ್ಕುಗಳ ಸಂಶೋಧನಾ ಕೇಂದ್ರ)

(ಮುಂದುವರೆಯುವುದು...)



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

‘ಸತ್ತ’ ಜಾತಿಯ ಶಾಶ್ವತ ಅಸ್ತಿತ್ವ...!?

ಜಿ.ಪಿ ದೇಶಪಾಂಡೆ
ಅನು: ಎನ್.ಕೆ. ಪದ್ಮನಾಭ

ಚಿತ್ಪಾವನ ಬ್ರಾಹ್ಮಣರು ಸಮಾವೇಶಗೊಳ್ಳುವ ಪ್ರಕ್ರಿಯೆ ಇಂದು ನಿನ್ನೆಯದಲ್ಲ. ವೀರ್ ಸಾವರ್ಕರ್ ಸಂಬಂಧಿತ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಬಹುದು. ಚಿತ್ಪಾವನ್ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಸಾವರ್ಕರ್ ಆ ಜಾತಿಯ ಸಮಾವೇಶಕ್ಕೆ ಆಹ್ವಾನಿತ ರಾಗಿದ್ದರು. ಒಬ್ಬ ಹಿಂದು ರಾಷ್ಟ್ರೀಯ ವಾದಿ ಹೇಗೆ ಒಂದು ಜಾತಿ ಅದರಲ್ಲೂ ಉಪ ಜಾತಿಯೊಂದರ ಸಮಾವೇಶದಲ್ಲಿ ಭಾಗಿಯಾಗುವುದರ ಕುರಿತು ಖುದ್ದು ಸಾವರ್ಕರ್ ಸ್ಪಷ್ಟ ಪಡಿಸಿಕೊಂಡಿರಲಿಲ್ಲ. ಸಾವರ್ಕರ್ ಹುಟ್ಟಾ ಚಿತ್ಪಾವನ ಬ್ರಾಹ್ಮಣರಾಗಿದ್ದರು. ಪ್ರಜ್ಞಾಪೂರ್ವಕವಾಗಿ ಹಿಂದೂ ಆಗಿದ್ದರು. ಸಾವರ್ಕರ್ ಕಾಲದಲ್ಲಿ ಜಾತಿ ಸಮಾವೇಶ ಸಂಘಟನೆ ಅಸಂಬದ್ಧವೆನಿಸಿತ್ತು. ಇವತ್ತು ಹಾಗೆನಿಸುತ್ತಿಲ್ಲ. ಈ ಬಗೆಯ ಸಮಾವೇಶ ಸಿಲಿಕಾನ್ ವ್ಯಾಲಿಗೆ ವಿಸ್ತೃತವಾಗಿದೆ ಮತ್ತು ಅಲ್ಲಿಯವರು ಭಾರತಕ್ಕೆ ಈ ಕಾರಣಕ್ಕಾಗಿಯೇ ಅನೇಕ ಸಂಖ್ಯೆಯಲ್ಲಿ ಧಾವಿಸಿ ಬರುತ್ತಾರೆ.

ನಾವು ‘ಜಾತಿ’ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ. ಮಹಾಭಾರತದ ನಿದರ್ಶನವನ್ನು ನಾವು ನಂಬುವುದಾದರೆ ಜಾತಿವರ್ಗಗಳ (ಸಂಕರತ್ ಸರ್ವವರ್ಣಂ) ಮಧ್ಯೆ ವ್ಯಕ್ತಿಯೊಬ್ಬನ ಜಾತಿಮೂಲವನ್ನು ಗುರುತಿಸುವುದು ಕ್ಲಿಷ್ಟಕರ. ಜಾತಿಮೂಲದ ಕಂಡುಕೊಳ್ಳುವಿಕೆಯ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ಇದು ಪಾಂಡವರಲ್ಲಿ ಹಿರಿಯನಾದ ಧರ್ಮರಾಜನ ಆಲೋಚನೆ. (ಮಹಾಭಾರತ ಕಾವ್ಯದ ‘ಅರಣ್ಯ ಪರ್ವ’ದಲ್ಲಿ ಇದು ಉಲ್ಲೇಖಿತ. ಕಥೆ ಇಲ್ಲಿ ಅಮುಖ್ಯ). ಒಂದು ಐತಿಹಾಸಿಕ, ಪೌರಾಣಿಕ ಹಾಗೂ ಧಾರ್ಮಿಕ ಕೃತಿಯೊಂದು ಆ ಆಲೋಚನೆಯನ್ನು, ಭಿನ್ನ ಸಂದರ್ಭದಲ್ಲಿ ತನ್ನ ಅಭಿವ್ಯಕ್ತಿಗೆ ಬಳಸಿಕೊಂಡಿದ್ದು ಇಲ್ಲಿ ನಮಗೆ ಮುಖ್ಯವಾಗುತ್ತದೆ.

ಸಾಮಾನ್ಯ ಸಂದರ್ಭಗಳಲ್ಲಿ ಮಹಾಭಾರತ ಕಾವ್ಯದ ಸರಳ ಉಲ್ಲೇಖ ಸಾಕೆನಿಸುತ್ತದೆ. ಆದರೆ, ಈಗ ಅದನ್ನೇ ಸಮಕಾಲೀನ ಸಂದರ್ಭದಲ್ಲಿ ಪೂರಕ ಉಲ್ಲೇಖವಾಗಿ ಪ್ರಸ್ತಾಪಿಸುವುದು ಪ್ರಮಾದವಾಗಿ ಹಲವರಿಗೆ ಗೋಚರಿಸಬಹುದು. ಎಂ ಕರುಣಾನಿಧಿ ಮತ್ತವರ ಬಣ ಇದನ್ನು ಹುಚ್ಚುತನ ಎನ್ನಬಹುದು. ಬುದ್ಧದೇವ ಭಟ್ಟಾಚಾರ್ಯ ಮತ್ತವರ ಗುಂಪು ಇದನ್ನು ‘ಭ್ರಮಾತ್ಮಕ’ ಎಂದು ಗುರುತಿಸಬಹುದು. ನರೇಂದ್ರ ಮೋದಿ ಮತ್ತವರ ಪಡೆ ಹಿಂದುಗಳ ಮಹತ್ವದ, ಪವಿತ್ರವಾದ ಕೃತಿಯೊಂದರ ಉದ್ದೇಶಪೂರ್ವಕ ಹದಗೆಡಿಸುವಿಕೆಯ ಹುನ್ನಾರವಾಗಿ ನೋಡಬಹುದು. ಆದ್ದರಿಂದ, ಪೂರಕ ಸಮರ್ಥನಾಂಶಗಳಿಂದ ಕೂಡಿದ ಸಮಗ್ರ ಚಿತ್ರಣ ಕೊಡುವ ನಮ್ಮ ವ್ಯಾಖ್ಯಾನ, ಅನ್ವಯಿಕ ವಿಚಾರಗಳನ್ನು ವಿವಿಧ ಕಾರಣಗಳಿಗಾಗಿ ಅನುಮಾನದಿಂದ ನೋಡುವವರಿಗೆ ಸಮರ್ಪಕ ಉತ್ತರ ನೀಡಲು ಸಹಾಯಕವಾಗಬಲ್ಲದು.

ಜಾತಿಯ ಪ್ರಶ್ನೆ ಎದ್ದಾಗಲೆಲ್ಲಾ ಪ್ರಾಚೀನ ಕಾಲದಲ್ಲಿ ಜನರು ಮುಕ್ತವಾಗಿ ತಮ್ಮನ್ನು ಗುರುತಿಸಿಕೊಂಡಿದ್ದರು. ಈಗ ಕಾಲ ಬದಲಾಗಿದೆ. ಜಾತಿ ನೆಲೆಗಟ್ಟಿನಲ್ಲಿ ನಾವು ಯಾರು? ಎಂಬುದನ್ನು ಸ್ಪಷ್ಟಪಡಿಸಿಕೊಂಡ ಕಾಲಘಟ್ಟವಿದು. ಜಾತಿ ನೆಲೆಗಟ್ಟಿನ ಗುರುತಿಸಿಕೊಳ್ಳುವಿಕೆ ಧರ್ಮರಾಜನ ದೃಷ್ಟಿಯಲ್ಲಿ ‘ದುಷ್ಪರೀಕ್ಷೆ’ಯಾಗುತ್ತದೆ, ಆದರೆ, ‘ಆಧುನಿಕ ಧರ್ಮರಾಜ’ರ ದೃಷ್ಟಿಯಲ್ಲಿ ಸುಪರೀಕ್ಷೆಯಾಗುತ್ತದೆ (ಸರಳ ರೀತಿಯಲ್ಲಿ ನಿರ್ಧರಿಸುವಿಕೆ).

ಆಧುನಿಕ ಪೇಶ್ವೆಗಳು

ಕಳೆದ ವಾರ ಪುಣೆಯಲ್ಲಿ ಚಿತ್ಪಾವನ ಬ್ರಾಹ್ಮಣರ ಬೃಹತ್ ಸಮಾವೇಶವೊಂದು ನಡೆಯಿತು. ಪೇಶ್ವೆಗಳ ನಗರದಲ್ಲಿ ಲಕ್ಷದಷ್ಟು ಚಿತ್ಪಾವನ ಬ್ರಾಹ್ಮಣರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಎಲ್ಲ ವಿಚಾರಗಳೂ ಜಾಗತೀಕರಣಗೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಇದೂ ಕೂಡ ಅವರ ಪಾಲಿಗೆ ಒಂದು ಜಾಗತಿಕ ಸಮಾವೇಶವೇ ಆಗಿತ್ತು! ತಾವು ಯಾರು? ಮತ್ತು ತಮ್ಮ ಐತಿಹಾಸಿಕ ಪಾತ್ರ ಏನು ಎಂಬುದರ ಎಚ್ಚರ ಅವರಿಗಿದೆ. ಎಲ್ಲ ಚಿತ್ಪಾವನ ಬ್ರಾಹ್ಮಣರು ೧೦೦ ವಿವಿಧ ಗುಂಪುಗಳಾಗಿ ವಿಭಜಿಸಲ್ಪಟ್ಟಿದ್ದಷ್ಟೇ ಅಲ್ಲದೇ ಪ್ರತಿಯೊಂದು ಗುಂಪಿಗೂ ಪ್ರತ್ಯೇಕ ಅಡ್ಡ ಹೆಸರು. ತಮ್ಮ ಜಾತಿಯವರ ಕೊಡುಗೆಗಳ ಪ್ರಸ್ತಾಪವಿಲ್ಲದೇ ಮಹಾರಾಷ್ಟ್ರದ ಆಧುನಿಕ ಇತಿಹಾಸ ಪೂರ್ಣಗೊಳ್ಳುವುದಿಲ್ಲ ಎಂಬುದನ್ನು ಅವರು ತಮ್ಮ ಜಾತಿ ಸಮಾವೇಶದ ಮುಖಾಂತರ ನಿರೂಪಿಸಿದರು. ಒಂದು ವ್ಯಂಗ್ಯದ ಉದಾಹರಣೆ ಎಂದರೆ, ರಾಜೇಂದ್ರ ಸಿಂಗ್ ಆಲಿಯಾಸ್ ರಾಜು ಭೈಯ್ಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥನಾದಾಗ ದೆಹಲಿಯ ಬಹಳಷ್ಟು ಸುದ್ದಿ ಪತ್ರಿಕೆಗಳು ಆತ ಚಿತ್ಪಾವನ ಬ್ರಾಹ್ಮಣನಲ್ಲದ ಮೊದಲ ಮುಖ್ಯಸ್ಥ ಎಂದೇ ಬಿಂಬಿಸಿದ್ದವು. ದೆಹಲಿಯ ಆ ಪತ್ರಕರ್ತರ ಪ್ರಕಾರ, ಮೊದಲ ಮೂವರು ಆರ್‌ಎಸ್‌ಎಸ್ ಮುಖ್ಯಸ್ಥರು ಚಿತ್ಪಾವನ ಬ್ರಾಹ್ಮಣ ಜಾತಿಗೆ ಸೇರಿದವರು. ಆದರೆ, ವಾಸ್ತವದಲ್ಲಿ ಯಾವೊಬ್ಬ ಆರ್‌ಎಸ್‌ಎಸ್ ಮುಖ್ಯಸ್ಥರೂ ಚಿತ್ಪಾವನ ಬ್ರಾಹ್ಮಣರಲ್ಲ.

ಚಿತ್ಪಾವನ ಬ್ರಾಹ್ಮಣರು ಸಮಾವೇಶಗೊಳ್ಳುವ ಪ್ರಕ್ರಿಯೆ ಇಂದು ನಿನ್ನೆಯದಲ್ಲ. ವೀರ್ ಸಾವರ್ಕರ್ ಸಂಬಂಧಿತ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಬಹುದು. ಚಿತ್ಪಾವನ್ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಸಾವರ್ಕರ್ ಆ ಜಾತಿಯ ಸಮಾವೇಶಕ್ಕೆ ಆಹ್ವಾನಿತರಾಗಿದ್ದರು. ಒಬ್ಬ ಹಿಂದು ರಾಷ್ಟ್ರೀಯವಾದಿ ಹೇಗೆ ಒಂದು ಜಾತಿ ಅದರಲ್ಲೂ ಉಪಜಾತಿಯೊಂದರ ಸಮಾವೇಶದಲ್ಲಿ ಭಾಗಿಯಾಗುವುದರ ಕುರಿತು ಖುದ್ದು ಸಾವರ್ಕರ್ ಸ್ಪಷ್ಟಪಡಿಸಿಕೊಂಡಿರಲಿಲ್ಲ. ಸಾವರ್ಕರ್ ಹುಟ್ಟಾ ಚಿತ್ಪಾವನ ಬ್ರಾಹ್ಮಣರಾಗಿದ್ದರು. ಪ್ರಜ್ಞಾಪೂರ್ವಕವಾಗಿ ಹಿಂದೂ ಆಗಿದ್ದರು. ಸಾವರ್ಕರ್ ಕಾಲದಲ್ಲಿ ಜಾತಿ ಸಮಾವೇಶ ಸಂಘಟನೆ ಅಸಂಬದ್ಧವೆನಿಸಿತ್ತು. ಇವತ್ತು ಹಾಗೆನಿಸುತ್ತಿಲ್ಲ. ಈ ಬಗೆಯ ಸಮಾವೇಶ ಸಿಲಿಕಾನ್ ವ್ಯಾಲಿಗೆ ವಿಸ್ತೃತವಾಗಿದೆ ಮತ್ತು ಅಲ್ಲಿಯವರು ಭಾರತಕ್ಕೆ ಈ ಕಾರಣಕ್ಕಾಗಿಯೇ ಅನೇಕ ಸಂಖ್ಯೆಯಲ್ಲಿ ಧಾವಿಸಿ ಬರುತ್ತಾರೆ. ಈ ರಾಜ್ಯದಲ್ಲಿ ಜಾತಿ ಸಮಾವೇಶ ಅಥವಾ ಧಾರ್ಮಿಕ ಕಾರ್ಯಕ್ರಮದ ಕಾರಣಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಲು ರೈಲ್ವೇ ಟಿಕೆಟ್ ಕೊಳ್ಳುವುದು ಅನಗತ್ಯ.

‘ಜಾತಿ’ಯ ದೃಢೀಕರಣ

ಈ ಜಾತಿ ಸಮಾವೇಶದಿಂದ ಹೇಳಿಕೊಳ್ಳುವಂಥದ್ದೇನೂ ಆಗಲಿಲ್ಲ. ಆ ಜಾತಿಯವರ ನಡುವೆ ಸಂವಹನ ಸಂಪರ್ಕ ಬೆಳೆಸುವ ಉದ್ದೇಶಕ್ಕಷ್ಟೇ ಈ ಸಮಾವೇಶ ಸೀಮಿತವಾಯಿತು. ಈ ಸಮಾವೇ

ಸಾಮಾನ್ಯ ಸಂದರ್ಭಗಳಲ್ಲಿ ಮಹಾಭಾರತ ಕಾವ್ಯದ ಸರಳ ಉಲ್ಲೇಖ ಸಾಕೆನಿಸುತ್ತದೆ. ಆದರೆ, ಈಗ ಅದನ್ನೇ ಸಮಕಾಲೀನ ಸಂದರ್ಭದಲ್ಲಿ ಪೂರಕ ಉಲ್ಲೇಖವಾಗಿ ಪ್ರಸ್ತಾಪಿಸುವುದು ಪ್ರಮಾದವಾಗಿ ಹಲವರಿಗೆ ಗೋಚರಿಸಬಹುದು. ಕರುಣಾನಿಧಿ ಮತ್ತವರ ಬಣ ಇದನ್ನು ಹುಚ್ಚುತನ ಎನ್ನಬಹುದು. ಬುದ್ಧದೇವ ಭಟ್ಟಾಚಾರ್ಯ ಮತ್ತವರ ಗುಂಪು ಇದನ್ನು 'ಭ್ರಮಾತ್ಮಕ' ಎಂದು ಗುರುತಿಸಬಹುದು. ನರೇಂದ್ರ ಮೋದಿ ಮತ್ತವರ ಪಡೆ ಹಿಂದುಗಳ ಮಹತ್ವದ, ಪವಿತ್ರವಾದ ಕೃತಿಯೊಂದರ ಉದ್ದೇಶಪೂರ್ವಕ ಹದಗೆಡಿಸುವಿಕೆಯ ಹುನ್ನಾರವಾಗಿ ನೋಡಬಹುದು.

ಶದ ಆರಂಭಕ್ಕೆ ಪ್ರಾಸ್ತಾವಿಕವಾಗಿ ಮಾತನಾಡಿದ ಈ ಜಾತಿಯ ವಿಶ್ವ ಶಾಖೆಯ ಕಾರ್ಯದರ್ಶಿ 'ಬ್ರಿಟಿಷ್ ಸಾಮ್ರಾಜ್ಯದಲ್ಲಿ ಯಾವತ್ತೂ ಸೂರ್ಯಾಸ್ತದ ಪ್ರಶ್ನೆಯೇ ಇಲ್ಲ" ಎಂಬ ಹೇಳಿಕೆಗೆ ತನ್ನದನ್ನೂ ಸೇರಿಸಿದ. ಆತನ ಪ್ರಕಾರ, ಚಿತ್ಪಾವನ ಬ್ರಾಹ್ಮಣ ಇರುವ ಕಡೆ ಸೂರ್ಯಾಸ್ತಮಾನವಿಲ್ಲ. ಚಿತ್ಪಾವನ ಬ್ರಾಹ್ಮಣರು ಭಾವಿಸಿರುವಂತೆ ಅವರು ಪರಶುರಾಮನಿಂದ ಈ ಲೋಕಕ್ಕೆ ಬಂದವರು. ಉಳಿದ ಜಾತಿ, ಸಮೂಹಗಳಿಗಿಂತ ತಾವು ಹೇಗೆ ಭಿನ್ನ ಎಂಬುದಕ್ಕೆ ಅವರು ಈ 'ಪರಶುರಾಮ ಮೂಲ'ದ ಕಾರಣವನ್ನು ಮುಂದಿಡುತ್ತಾರೆ. ಜ್ಯೋತಿ ಬಾ ಫುಲೆ ಅವರು ಇವರನ್ನು ಆಕ್ರಮಣಕಾರ ವಿದೇಶಿಗರು ಎಂದೇ ಕರೆದಿದ್ದಾರೆ. ಫುಲೆ ಸಮಕಾಲೀನರಾದ, ಚಿತ್ಪಾವನ ಬ್ರಾಹ್ಮಣರಾದ ವಿಷ್ಣುಕೃಷ್ಣ ಚಿಪ್ಲಂಕರ್ ಈ ಕಾರಣಕ್ಕಾಗಿಯೇ ಫುಲೆ ಅವರನ್ನು ಯಾವತ್ತೂ ಮನ್ನಿಸಲೇ ಇಲ್ಲ.

ಚಿಪ್ಲಂಕರ್‌ರಂಥ ಚಿತ್ಪಾವನ ಬ್ರಾಹ್ಮಣರು ಮತ್ತು ಫುಲೆ ಅವರ ನಡುವಿನ ವಾದವು ಈ ಹೊತ್ತಿಗೂ ಸಾಮಾಜಿಕ ಆಯಾಮದೊಂದಿಗೆ ತಳಕು ಹಾಕಿಕೊಂಡಿದೆ. ಇದು ಕಟ್ಟಾ ಸಂಪ್ರದಾಯವಾದಿಗಳು ಮತ್ತು ಸುಧಾರಣಾವಾದಿಗಳ ನಡುವಿನ ಬಹಿರಂಗ ಸಂಘರ್ಷವಾಗಿ ಕಾಣುತ್ತದೆ. ಫುಲೆ ಅವರು ಒಬ್ಬ ಸಾಮಾಜಿಕ ಕ್ರಾಂತಿಕಾರಿಯಾಗಿ ಗಮನ ಸೆಳೆದಿದ್ದರು. ಚಿಪ್ಲಂಕರ್ ಥರದವರು ಆಧುನಿಕ 'ಹಿಂದು'ಗಳಾಗಿದ್ದರು. ಇನ್ನೂ ಅಂತ್ಯವಾಗದ ಮೇಲಿನ ತರ್ಕವನ್ನು ಜಾತಿ ಸಂಘರ್ಷದ ಕಾರಣಕ್ಕಾಗಿ ತಳ್ಳಿ ಹಾಕುವಂತಿಲ್ಲ. ಆ ಕಾಲದ ಚಿಪ್ಲಂಕರ್‌ಗಳು ತಮ್ಮನ್ನು ತಾವು ಆರ್ಯ ಸಂಸ್ಕೃತಿಯ ಪ್ರತಿನಿಧಿಗಳೆಂದೇ ಭಾವಿಸಿಕೊಂಡು ಆ ಸಿಂಡ್ರೋಮ್‌ನಿಂದ ಹೊರಬರಲೇ ಇಲ್ಲ.

ತಮ್ಮ ಜಾತಿ ಸ್ಥಾನಮಾನ ಮತ್ತು ಅದರ ಗತ್ತು–ಅಧಿಕಾರವನ್ನು ಅಭಿವೃದ್ಧಿಕೇಂದ್ರಿತ ಮತ್ತು ಜಾಗತೀಕರಣ ಪ್ರಕ್ರಿಯೆಗೊಳಪಟ್ಟ ಆರ್ಥಿಕ ವ್ಯವಸ್ಥೆಯಲ್ಲಿ ವಿಸ್ತರಿಸುವ ನಿಟ್ಟಿನಲ್ಲಿ ಈ 'ಆಧುನಿಕ ಅವತಾರಗಳು' ಕಾರ್ಯೋನ್ಮುಖವಾದವು. ಮಿಶ್ರ ಸಂಸ್ಕೃತಿಯನ್ನು ಸಂಕುಚಿತ ಉದ್ದೇಶಕ್ಕಾಗಿ ಬಳಸಿಕೊಳ್ಳುವ ಹುನ್ನಾರವಾಗಿ ಇದು ಕಾಣುತ್ತದೆ. ಯಾವೊಬ್ಬ ಚಿತ್ಪಾವನ ಬ್ರಾಹ್ಮಣರೂ ತಮ್ಮ ಸಾಂಪ್ರದಾಯಿಕ ಮೌಲ್ಯಗಳ ಬಗ್ಗೆ ಅಷ್ಟಾಗಿ ಆದ್ಯತೆ ನೀಡಲಿಲ್ಲ. ಬಹುಕಾಲದ ಹಿಂದೆ ಅವರಲ್ಲಿ ಕೆಲವರು ಪಕ್ಕಾ ಅಮೆರಿಕನ್ನರಂತೆ ಅಥವಾ ಪಕ್ಕಾ ಇಂಗ್ಲಿಷ್ ವಾಕ್ಚತುರರಂತೆ ಗುರುತಿಸಿಕೊಂಡಿದ್ದರು.

ಕಾಲ್ಪನಿಕ ಯುದ್ಧ...

ಇದು ಕೇವಲ ಡಿಸೆಂಬರ್ ತಿಂಗಳ ಕಥೆಯಷ್ಟೇ ಅಲ್ಲ. ಈ ಸಮಾವೇಶದ ಮುಂಚೆ ಮರಾಠರ ಸಮಾವೇಶವೊಂದು ನಡೆಯಿತು. ಅದರ ಮುಖ್ಯ ಉದ್ದೇಶ ಮೀಸಲಾತಿಗಾಗಿ ಬೇಡಿಕೆ ಮುಂದಿಡುವುದು. ಒಂದು ಕಾಲಕ್ಕೆ ಭಾಷಾ ಅನನ್ಯತೆಯನ್ನು ಗುರುತಿಸಿಕೊಳ್ಳುವ ಶಕ್ತಿಯಾಗಿ ಮರಾಠಾ ಅಸ್ತಿತ್ವ ಗಮನ ಸೆಳೆದಿತ್ತು. ಅದು ಫುಲೆ ಕಾಲಘಟ್ಟ. ಅಂತಹ ಅನನ್ಯತೆಯ ಮರಾಠಾ ಅಸ್ತಿತ್ವ ಇದೀಗ 'ಜಾತಿ'ಯ ಸ್ಪರ್ಶ ಪಡೆದಿದೆ. ಐವತ್ತು ವರ್ಷಗಳ ಹಿಂದೆ ಮಹರ್ಷಿ ಶಿಂಧೆ ವ್ಯಾಖ್ಯಾನಿಸಿದ 'ಬಹುಜನ' ಪರಿಕಲ್ಪನೆಗೂ ಮತ್ತು ಕಾನ್ಶಿರಾಂ ಅಥವಾ ಮಾಯಾವತಿ ಅದನ್ನು ಬಳಸಿದ ರೀತಿಗೂ ವ್ಯತ್ಯಾಸವಿದೆ. ವಸಾಹತು ವಿರೋಧಿ ಹೋರಾಟ ಸೇರಿದಂತೆ ಎಲ್ಲ ಬಗೆಯ ಚಳವಳಿಗಳೊಂದಿಗೆ ಸಕ್ರಿಯವಾಗಿ ಗುರುತಿಸಿಕೊಳ್ಳಲು ಶಿಂಧೆಯವರಿಗೆ 'ಬಹುಜನ' ಪರಿಕಲ್ಪನೆ ಪೂರಕವಾಯಿತು.

ಈ ಹೊಸ ಮರಾಠಾ ಬಲವರ್ಧನೆಯ ಪ್ರಕ್ರಿಯೆ ಜಾತಿ ಬಲವರ್ಧನೆಯಂತೆ ಅನ್ನಿಸುತ್ತಿಲ್ಲ. ಸುಧಾರಣಾವಾದಿಗಳಿಗೆ ಪ್ರಿಯವೆನಿಸುವ 'ಪರಿವರ್ತನೆ' ಮತ್ತಿತರ ಸುಧಾರಣಾಪರ ಪದಗಳನ್ನು ಬಳಸಿಕೊಳ್ಳಲಾಗುತ್ತಿದೆ. ಬ್ರಾಹ್ಮಣರ ಕ್ರಿಯಾತ್ಮಕ ಸಂಪ್ರದಾಯಗಳನ್ನು ಚರ್ಚೆಗೆತ್ತಿಕೊಳ್ಳಲಾಗುತ್ತಿದೆ. ಉದಾಹರಣೆಗೆ, ಮರಾಠಿ ಭಾಷೆ ಮತ್ತು ಸಾಹಿತ್ಯದಲ್ಲಿ ಉಲ್ಲೇಖಿತ ವಿಷಯಗಳು ಪ್ರಸ್ತಾಪವಾಗುತ್ತವೆ. ಇದಕ್ಕೆ ಸರಳ ಕಾರಣವೆಂದರೆ, ಶಿಂಧೆ ಅವರು ಬ್ರಾಹ್ಮಣರನ್ನು ಮಹಾರಾಷ್ಟ್ರ ಸಮಾಜದ ಭಾಗವಾಗಿ ಗುರುತಿಸಿದ್ದಾರೆ.

ಈಗ ಹೊಸ ಮರಾಠವಾದದಿಂದ ಬ್ರಾಹ್ಮಣ್ಯ ಮತ್ತು ಬ್ರಾಹ್ಮಣರ ತಾರ್ಕಿಕ ಸ್ಪಷ್ಟತೆಯನ್ನು ಗುರುತಿಸಲಾಗಿಲ್ಲ. ಮುಕ್ತ ಜಾಗತಿಕ ಸಂದರ್ಭದ ಅವಕಾಶಗಳು ವ್ಯಾಪಕವಾಗಿರುವಾಗ ಮರಾಠಾ ಸಂಘಟನೆ ಇನ್ನೂ ಎಚ್ಚೆತ್ತುಕೊಂಡಿಲ್ಲ. ಉದ್ಯೋಗಾವಕಾಶ ಪಡೆಯುತ್ತಿರುವ ದಲಿತರೊಂದಿಗಿನ ಸ್ಪರ್ಧೆಯೇ ಇದಕ್ಕೆ ಮುಖ್ಯವಾಗಿದೆ.ಪ್ರಬಲ ಬ್ರಾಹ್ಮಣರು ಮತ್ತು ಶೋಷಿತ ದುಡಿಯುವ ವರ್ಗದ ನಡುವಿನ ಕಾಲ್ಪನಿಕ ಯುದ್ಧಕ್ಕಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡಿದೆ. ಪರಿವರ್ತನೆಯ ನಿಜ ಅರ್ಥದ ಗ್ರಹಿಕೆಯಲ್ಲಿಯೇ ಎಡವಿದ್ದು ಈ ಸಂಘಟನೆಯ ಮಿತಿಯಾಗಿ ಕಾಣುತ್ತದೆ.

ಪುಣೆ ನಗರ ಎರಡು ಜಾತಿ ಸಮಾವೇಶಗಳಿಗೆ ವೇದಿಕೆಯಾಯಿತು. ಈ ಎರಡು ಸಮಾವೇಶಗಳ ರಾಜಕೀಯ ಎರಡು ನೆಲೆಗಳಲ್ಲಿ ವ್ಯಕ್ತವಾಯಿತು.ಈ ರಾಜಕೀಯ ಚಿತ್ಪಾವನ ಸಮಾವೇಶದಲ್ಲಿ ಬಹುಜನ ಸಮಾಜ ಪಕ್ಷದ ಪೋಸ್ಟರುಗಳ ಮೂಲಕ ಅನಾವರಣಗೊಂಡಿತು. ಇನ್ನೊಂದು ಸಮಾವೇಶವು ತನ್ನದೇ ಆದ 'ಸುಧಾರಣಾ'ವಾದವನ್ನು ಮಂಡಿಸಿತು.ಈಸಮಾವೇಶಗಳ ಮುಖ್ಯ ಆಶಯಗಳನ್ನು ಈ ಮೂಲಕ ಹಿಡಿದಿಡಬಹುದು. ಸತ್ತ ಜಾತಿಯ ಶಾಶ್ವತ ಅಸ್ತಿತ್ವದ ದೃಢೀಕರಣ....!? □

(ಸೌಜನ್ಯ: ಇಪಿಡಬ್ಲ್ಯೂ)

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕರ್ನಾಟಕದ ರಾಜಕೀಯ ಹಿಂದೆಂದೂ ಕಾಣದಷ್ಟು ಅಧಃಪತನವನ್ನು ಈಗ ಕಂಡಿದೆ. ಬಹುತೇಕ ಎಲ್ಲ ಪ್ರಮುಖ ಪಕ್ಷಗಳೂ ಯಾವುದೇ ರಾಜಕೀಯ ತತ್ವ-ಸಿದ್ಧಾಂತಗಳಿಗೂ ಬದ್ಧವಾಗದೇ ಅಧಿಕಾರ ಲಾಭಕೋರತನವನ್ನೇ ಗುರಿಯಾಗಿಸಿಕೊಂಡಿವೆ. ಹಾಗಾಗಿ ರಾಜ್ಯದ ರಾಜಕೀಯ ನಗೆಪಾಟಲಿಗೆ ಗುರಿಯಾಗಿದೆ. ಸುಳ್ಳರ ಸಂತೆಯಾಗಿದೆ. ಪ್ರಾಮಾಣಿಕ ಮತ್ತು ಪ್ರಜ್ಞಾವಂತ ರಾಜಕೀಯ ಇಲ್ಲಿ ಸಾಧ್ಯವೇ ಇಲ್ಲ ಎಂಬ ಹತಾಶೆ ಜನರಲ್ಲಿ ಮೂಡಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಸ್ಥಿತಿ-ಗತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಉಳಿದವುಗಳನ್ನು ಮುಂದೆ ಪ್ರಕಟಿಸಲಾಗುವುದು. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಕರ್ನಾಟಕದ ಸದ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ನಿಂತಿದೆ. ಇಂಥ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

೨. ಜಾತ್ಯತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

೪. ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ, ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಮುಂಗಾಣುತ್ತೀರಿ?

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದು ನೀವು ಬಯಸುತ್ತೀರಿ?

ಅನುಕಂಪದ ಅಲೆ: ಮಾಧ್ಯಮಗಳ ಸೃಷ್ಟಿ

ಜಿ. ರಾಜಶೇಖರ್

ಸಾಹಿತಿ, ಚಿಂತಕ

ರಾಜಕಾರಣ ಚರ್ಚೆ

೧. ಕರ್ನಾಟಕದ ರಾಜಕೀಯ ದುಃಸ್ಥಿತಿಯ ಕುರಿತಾಗಿನ್ನು ರಾಜ್ಯದ ಜನರೆಲ್ಲರು ಈಗ ಎದುರಿಸುತ್ತಿರುವ ನೈತಿಕ ಮತ್ತು ಆರ್ಥಿಕ ಸಮಸ್ಯೆಗಳು ಕಂಡುಕೊಳ್ಳಬೇಕಾಗಿದೆ "ಅಧಃಪತನ" ಎಂದು ನೀವು ರಾಜ್ಯದ ಸ್ಥಿತಿಯನ್ನು ಬಣ್ಣಿಸುತ್ತಿರುವುದರ ಬಗ್ಗೆ ನನ್ನ ಆಕ್ಷೇಪವಿದೆ. ಅದು ಜಾತಿ ಮೂಢರು ಮತ್ತು ಮತ ಪ್ರಚಾರಕರು ಬಳಸುವ ಮಾತುಗಳು. ನಮ್ಮ ಸದ್ಯದ ಕಾಲದೇಶ ಸ್ಥಿತಿಗಳಿಂದ ನಮ್ಮನ್ನು ಪ್ರತ್ಯೇಕಿಸಿಕೊಂಡು ನೋಡಿದಾಗ ಮಾತ್ರ ಅದು ಅಧಃಪತನವೆಂದು ಕಂಡೀತು ರಾಜ್ಯದ ರಾಜಕೀಯ ನಮ್ಮಿಂದ ಬೇರೆಯಾಗಿ, ತನ್ನದೇ ಆದ ಅಸ್ತಿತ್ವ ಪಡೆದುಕೊಂಡಿರುವಂತಹದ್ದಲ್ಲ. ಅದು ನಮ್ಮ ಸ್ವಂತದ ಸ್ಥಿತಿಯೂ ಹೌದು. ನಿಮಗೆ ನೆನಪಿರಬಹುದು; ದಿ. ಕೆ.ವಿ ಸುಬ್ಬಣ್ಣನವರ ಕೊನೆಯ ಬರಹ ಗುಜರಾತ್ ಹಿಂಸೆಯ ಕುರಿತು ಅವರು ಬರೆದದ್ದು. ಸುಬ್ಬಣ್ಣ, ಅಹಿಂಸೆಗೆ ತಾನು, ದೂರದಲ್ಲಿರುವವನು, ಪ್ರತ್ಯೇಕವಾಗಿರುವವನು ಮತ್ತು ಮೂರನೆಯವನಾಗಿ ತಾನು ಹಿಂಸೆ ಎಸಗಿದವರು ಮತ್ತು ಹಿಂಸೆ ಅನುಭವಿಸಿದವರನ್ನು ನೋಡುತ್ತಿರುವವನು ಎಂಬ ಸುಲಭ ಸಾಧ್ಯವಾದ ನಿಲುವನ್ನು ಪೂರ್ತ ಬಿಟ್ಟು ಕೊಟ್ಟು ಆ ಬಗೆಯ ಹಿಂಸೆ ತನಗೂ ಸಾಧ್ಯ; ಕಡೆಯ ಪಕ್ಷ ಸಂಕಲ್ಪದ ಮಟ್ಟದಲ್ಲಾದರೂ ಸಾಧ್ಯ ಎಂಬ ವಿಷಾದದ ಅರಿವಿನಲ್ಲಿ ಬರೆದರು.

ಅವರ ಪ್ರಬಂಧದ ಶೀರ್ಷಿಕೆಯೇ ಹಿಂಸೆ ಕುರಿತ ಅವರ ನಿಲುವನ್ನು ಹೇಳುತ್ತದೆ-'ಗುಜರಾತ್ ಸ್ವಗತ' ಗುಜರಾತ್ ಮಾತ್ರವಲ್ಲ ನಮ್ಮ ಕಾಲದ ರಾಜಕೀಯದ ಸಮಸ್ತವೂ ನಮ್ಮ ಸ್ವಗತವೇ. ರಾಜಕೀಯವನ್ನು ಹಾಗೆ ಪರಿಭಾವಿಸದಿದ್ದರೆ, ರಾಜಕಾರಣಿಗಳು ಮಾತ್ರ ಮಹಾನೀಚರು, ಉಳಿದವರೆಲ್ಲರೂ, –ನಾವೂ ಸೇರಿದಂತೆ-ಸಂಭಾವಿತರು ಎಂದು ಭಾವಿಸಿದಂತಾಗುತ್ತದೆ. ಕನ್ನಡದ ಮಾಧ್ಯಮಗಳಂತೂ ಈಗಾಗಲೇ ಜನರನ್ನು ಹಾಗೆಂದು ನಂಬಿಸಿಯಾಗಿದೆ. ಹಾಗಾಗಿ ಅಧಃಪತನ (ಅದು ನೈತಿಕ ಅಧಃಪತನವಲ್ಲದೆ ಇನ್ನೇನು ತಾನೆ ಆಗಿರಲು ಸಾಧ್ಯ?) ಎಂದು ಮುಂತಾಗಿ ಯೋಚಿಸುವ ಬದಲು ರಾಜ್ಯದ ಭೂಸುಧಾರಣೆ ಮತ್ತು ಭೂಮಿ ಹಂಚಿಕೆಯ ಶಿಕ್ಷಣ ವಸ್ತು ವೈದ್ಯಕೀಯ ಸೌಲಭ್ಯಗಳ ಹಂಚಿಕೆ ನಮ್ಮ ಕೃಷಿ ಮತ್ತು ಕಸುಬುಗಳ ಆರ್ಥಿಕತೆ, ಈ ನಾಡಿನ ಖನಿಜ ಸಂಪತ್ತಿನ ನಿರ್ವಹಣೆ, ಉತ್ತರ ಕರ್ನಾಟಕದ ಸಮಸ್ಯೆಗಳು-ಹೀಗೆ ನಿರ್ದಿಷ್ಟ ಸಂಗತಿಗಳನ್ನು ಎದುರಿಗೆ ಇಟ್ಟುಕೊಂಡು ರಾಜ್ಯದ ಸದ್ಯದ ಸ್ಥಿತಿಯನ್ನು ಗ್ರಹಿಸಲು ಯತ್ನಿಸುವುದೇ ಸರಿಯಾದ ವಿಧಾನ. ಕರ್ನಾಟಕದ ಸದ್ಯದ ಸ್ಥಿತಿ, ದೇಶದ ಹೊಸ ಆರ್ಥಿಕತೆಯ ಜೊತೆ ತಳಕು ಹಾಕಿಕೊಂಡಿರುವುದನ್ನು ನಾವು ಗಮನದಲ್ಲಿ ಇರಿಸಿಕೊಂಡು ಯೋಚಿಸಬೇಕಾಗಿದೆ.

೨. ಜೆ.ಡಿ.ಎಸ್. ಎಂದೂ, ರಾಜ್ಯದಲ್ಲಿ ತೃತೀಯ ಶಕ್ತಿಯಾಗಿರಲಿಲ್ಲ. ಜೆ.ಡಿ.ಎಸ್. ನಾಯಕ ದೇವೇಗೌಡ ಮತ್ತು ಬಿ.ಜೆ.ಪಿ. ನಾಯಕ ಯಡಿಯೂರಪ್ಪನವರ ನಡುವೆ ಈಗಲೂ ಇರುವ ವ್ಯತ್ಯಾಸಗಳನ್ನು ಸುಲಭವಾಗಿ ಗುರುತಿಸಬಹುದು ಅನ್ಯ ಮತ ದ್ವೇಷ ಮತ್ತು ಯಾವ ಪ್ರಮಾಣದ ಹಿಂಸೆಗಾದರೂ ಸೈ ಎಂಬ ಸಂಕಲ್ಪ- ಬಿ.ಜೆ.ಪಿಯ ಈ ಎರಡು ಗುಣಗಳು ಬೇರೆ ಯಾವ ರಾಜಕೀಯ ಪಕ್ಷದವರಲ್ಲಿಯೂ ಇಲ್ಲ. ಆದರೆ ದೇವೇಗೌಡ, ಎಸ್.ಎಂ ಕೃಷ್ಣ, ಸಿದ್ಧಾರಾಮಯ್ಯ, ಪಿ.ಜಿ.ಆರ್.ಸಿಂಧ್ಯ- ಇವರ ನಡುವೆ ಏನು ವ್ಯತ್ಯಾಸವಿದೆ? ಯಾವ ಸೈದ್ಧಾಂತಿಕ ಭಿನ್ನಮತ ಇವರನ್ನು ಬೇರೆ ಬೇರೆಯಾಗಿಸಿದೆ? ನಿಮ್ಮ ಪ್ರಶ್ನೆಯ 'ನೈತಿಕ ಕುಸಿತ' ಎಂಬ ಪದ ಪ್ರಯೋಗ ಬಗೆಗೂ ನನ್ನ ಆಕ್ಷೇಪ ಇದೆ. ನೀವು "ಕುಮಾರಣ್ಣನ ವಚನ ಭ್ರಷ್ಟತೆ"ಯ ಕುರಿತು ಹೇಳುತ್ತಿದ್ದೀರಲ್ಲವೆ? ಈ ವಚನಭ್ರಷ್ಟತೆ ಮತ್ತು ಅದರ ಬಾಲಂಗೋಚಿಯಾಗಿರುವ ಬಿ.ಜೆ.ಪಿಗೆ "ಅನುಕಂಪದ ಅಲೆ" ಕನ್ನಡ ಮಾಧ್ಯಮಗಳ ಸೃಷ್ಟಿ. ರಾಜ್ಯದ ಆಡಳಿತವೆಂಬುದು ಯಡಿಯೂರಪ್ಪ ಮತ್ತು ಕುಮಾರಣ್ಣನ ನಡುವಿನ ಕೈ ಸಾಲದ ವ್ಯವಹಾರವೆಂಬಂತೆ ನಮ್ಮ ಮಾಧ್ಯಮಗಳು ಚಿತ್ರಿಸಿವೆ. ಪ್ರಜಾಪ್ರಭುತ್ವದಲ್ಲಿ ಆಳುವವರು, ಯಾರಿಗೆ ಕೊಟ್ಟ ಮಾತನ್ನು ಪಾಲಿಸಬೇಕು? ಕರ್ನಾಟಕಕ್ಕೆ ಕಳಂಕಪ್ರಾಯವಾದ ಬಳ್ಳಾರಿ ಜಿಲ್ಲೆಯ ಕಬ್ಬಿಣದ ಅದಿರಿನ ಗಣಿಗಾರಿಕೆ ಮತ್ತು ಇತರೆಡೆ ನಡೆದಿರುವ ಗ್ರಾನೈಟುದಂಧೆಗಳು ವಚನ ಭ್ರಷ್ಟತೆಗೆ ಉದಾಹರಣೆಗಳಲ್ಲವೂ? ಈ ಪಾಪದ ಹಣದಲ್ಲಿ ಬಿ.ಜೆ.ಪಿಗಳಿಗೂ ಪಾಲು ಇಲ್ಲವೋ? ಇತರ ರಾಜಕಾರಣಿಗಳ ಜೊತೆ ಈ ದೇಶಭಕ್ತ ಬಿ.ಜೆ.ಪಿಗಳೂ ಸೇರಿಕೊಂಡು ನಡೆಸಿರುವ ಭೂಗಳ್ಳತನ ವಚನಭ್ರಷ್ಟತೆ ಅಲ್ಲವೋ?

ಕರ್ನಾಟಕದ ಬಡರೈತರು, ನೇಕಾರರು, ಮೀನುದಾರರು ಮತ್ತು ಇತರ ಕಸುಬುಗಾರರು ಈಗ ಎದುರಿಸುತ್ತಿರುವ ಕಷ್ಟಗಳ ಬಗ್ಗೆ ಕನ್ನಡದ ಪತ್ರಿಕೆಗಳಲ್ಲಿ ಒಂದು ಒಳ್ಳೆಯ ವರದಿ ಕಾಣಿಸುವುದಿಲ್ಲ. ಕರ್ನಾಟಕದ ಜನರಲ್ಲಿ

ಎಷ್ಟು ಜನ ಕನಿಷ್ಠ ವೈದ್ಯಕೀಯ ಶುಶ್ರೂಷೆಯಿಂದ ವಂಚಿತರಾಗಿದ್ದಾರೆ ಎಂಬ ಅಂದಾಜು ಕೂಡ ದೊರೆಯುವುದಿಲ್ಲ. ಈ ಹತ್ತು ವರ್ಷಗಳಲ್ಲಿ ಕರ್ನಾಟಕದ ಶಿಕ್ಷಣ ಕ್ಷೇತ್ರ ಖಾಸಗಿಯವರ ಧಗಲ್‌ಬಾಜಿ ವ್ಯವಹಾರದ ಅಡ್ಡೆಯಾಗಿ ಪರಿವರ್ತನೆಗೊಂಡಿರುವ ಬಗ್ಗೆ ಕನ್ನಡದ ಯಾವ ಮಾಧ್ಯಮವೂ ವರದಿ ಮಾಡುವ ತೊಂದರೆ ತೆಗೆದುಕೊಂಡಿಲ್ಲ. ಕರ್ನಾಟಕದ ಬಡವರ ಬಗ್ಗೆ ಕನ್ನಡ ಮಾಧ್ಯಮಗಳು ಯಾವತ್ತೂ ತೋರಿಸುವ ಸಹಾನುಭೂತಿ, ಈಗ ಯಡಿಯೂರಪ್ಪವರಿಗೆ ಸಲ್ಲುತ್ತಿದೆ. ಪಾಪ! ಮುಖ್ಯಮಂತ್ರಿ ಪದವಿ ಕೈ ತಪ್ಪಿಹೋಗಿ ಅವರಿಗೆ ಈಗ ಎರಡು ಹೊತ್ತಿನ ಊಟಕ್ಕೂ ತತ್ವಾರವಾಗಿದೆ ಎಂದು ಈ ಸಹಾನೂಭೂತಿಯೋ?

ಜೆ.ಡಿ.ಎಸ್. ನಾಯಕರು ದಗಾಖೋರರು ನಿಜ; ಅಧಿಕಾರ ಹಸ್ತಾಂತರದ ವಿಷಯದಲ್ಲಿ ಅವರ ಮೂರ್ಖತನದಿಂದ ನಡೆದುಕೊಂಡಿರುವುದೂ ನಿಜ. ಆದರೆ ಅದು ನೈತಿಕ ಕುಸಿತ ಎಂದು ನಾನು ಭಾವಿಸುವುದಿಲ್ಲ. ಬರುವ ಚುನಾವಣೆಗಳಲ್ಲಿ ಜೆ.ಡಿ.ಎಸ್ ಜಾಗ ಖಾಲಿ ಮಾಡಿ, ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳು ಮಾತ್ರ ಕಣದಲ್ಲಿ ಉಳಿಯುತ್ತವೆ ಎಂದೂ ನನಗೆ ಅನ್ನಿಸುವುದಿಲ್ಲ.

೩. ಕರ್ನಾಟಕದ ಎಡ ಪಕ್ಷಗಳು ಎಂದರೆ ಯಾವುವು? ಸಿ.ಪಿ.ಐ ಮತ್ತು ಸಿ.ಪಿ.ಎಂಗಳನ್ನು ಬಿಟ್ಟು ಕರ್ನಾಟಕದಲ್ಲಿ ಇನ್ನು ಯಾವ ಎಡಪಕ್ಷವಿದೆ? ಸಿ.ಪಿ.ಎಂ ಬಗ್ಗೆ ಹೇಳುವುದಾದರೆ ಹಠಮಾರಿತನ ಮತ್ತು ತಾನು ಎಂದೂ ತಪ್ಪು ಮಾಡಲಾರೆ ಎಂಬ ಅದರ ಅಹಮಿಕೆಗಳಿಂದಾಗಿ ಇತರ ಎಡ ಪ್ರಜಾಸತ್ತಾತ್ಮಕ ಸಂಘಟನೆಗಳಿಗೆ ಅದರ ಜೊತೆ ಕೈ ಜೋಡಿಸಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ಈಗೀಗ ಸಿ.ಪಿ.ಎಂ, ಆಳುವ ವರ್ಗದ ಬಿ.ಟೀಮ್‌ನಂತೆ ವರ್ತಿಸತೊಡಗಿದೆ. ಉದಾಹರಣೆಗೆ ರಾಜ್ಯದ ತಥಾಕಥಿತ ನಕ್ಸಲೀಯರ ಬಗ್ಗೆ ಸರಕಾರ, ರಾಜ್ಯ ಪೊಲೀಸು ಖಾತೆ, ಮಾಧ್ಯಮಗಳು ಬಿ.ಜೆ.ಪಿ ಹಾಗೂ ಸಿ.ಪಿ.ಎಮ್‌ಗಳ ನಿರೂಪಣೆಗಳಲ್ಲಿ ಹೇಳಿಕೊಳ್ಳುವ ಯಾವ ವ್ಯತ್ಯಾಸವೂ ಇಲ್ಲ. (ಬಿ.ಜೆ.ಪಿ ಮತ್ತು ಅದರ ಕರಪತ್ರಗಳಾಗಿರುವ ಉದಯವಾಣಿ ಹಾಗೂ ವಿಜಯ ಕರ್ನಾಟಕ, ಒಮ್ಮೊಮ್ಮೆ ಸಿ.ಪಿ.ಎಮ್ ಸಹಿತ ಎಡ ಪಂಥೀಯರನ್ನೂ ನಕ್ಸಲೀಯರ ಪಟ್ಟಿಗೆ ಸೇರಿಸಿ ಬಿಡುವುದುಂಟು ಆ ಮಾತು ಬೇರೆ).

ಇತ್ತೀಚೆಗೆ ಕರ್ನಾಟಕದ ಸಿ.ಪಿ.ಎಮ್ ರಾಜ್ಯದಲ್ಲಿ ಮುಸ್ಲಿಮ್ ಕೋಮುವಾದವೂ ಇರುವುದನ್ನು ಕಂಡು ಹಿಡಿದಿದೆ! ಅದರ ಪ್ರಕಾರ ರಾಜ್ಯದಲ್ಲಿ ಹಿಂದು ಕೋಮುವಾದದಷ್ಟೆ ಮುಸ್ಲಿಮ್ ಕೋಮುವಾದವೂ ಅಪಾಯಕಾರಿಯಾಗಿ ಬೆಳೆಯುತ್ತಿದೆ. ಕರಾವಳಿಯ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಂತೂ ಹಿಂದು ಹಾಗೂ ಮುಸ್ಲಿಮ್ ಕೋಮುವಾದಿಗಳು ಸಮಬಲವಾಗಿ ಕಾದಾಡುತ್ತಿದ್ದಾರೆ ಎಂಬುದು ಅದರ ಇತ್ತೀಚೆಗಿನ ಸುಳ್ಳು. ಕರ್ನಾಟಕದ ಮುಸ್ಲಿಮ್ ಸಂಘಟನೆಗಳಲ್ಲಿ ಗೆಲುವು ಇಸ್ಲಾಮಿಕ್ ಮೂಲಭೂತವಾದವನ್ನು ಪ್ರತಿಪಾದಿಸುವಂತಹವು ಎಂಬುದು ನಿಜ. ಆದರೆ ರಾಜ್ಯದ ಯಾವ ಮುಸ್ಲಿಮ್ ಸಂಘಟನೆಯೂ, ತಮ್ಮದಲ್ಲದ ಮತ ಧರ್ಮಗಳ ವಿರುದ್ಧ ಅಪಪ್ರಚಾರ, ದ್ವೇಷ, ಹಿಂಸೆಗಳಲ್ಲಿ ತೊಡಗಿಲ್ಲ. ಸಂಘಪರಿವಾರಕ್ಕೆ ಇರುವ ಹಾಗೆ ಮುಸ್ಲಿಮ್ ಸಂಘಟನೆಗಳಿಗೆ ವಿಸ್ತಾರವಾದ ಜಾಲವೂ ಇಲ್ಲ; ಸುದೀರ್ಘ ಇತಿಹಾಸವೂ ಇಲ್ಲ. ಸಂಘಪರಿವಾರಕ್ಕೆ ಹಿಂದುಗಳ ನಡುವೆ ಇರುವ ಜನಪ್ರಿಯತೆ ಈ ಮುಸ್ಲಿಮ್ ಸಂಘಟನೆಗಳಿಗೆ ಮುಸ್ಲಿಮ್ ಸಮುದಾಯದಲ್ಲಿ ಇಲ್ಲ. ಕೋಮು ರಾಜಕೀಯದ ಇನ್ನೊಂದು ಸೂಕ್ಷ್ಮ ಸಂಗತಿಯನ್ನು ನಾವು ಗಮನಿಸಬೇಕು. ದೇಶದಲ್ಲಿ ಪ್ರತಿಯೊಂದು ಮುಸ್ಲಿಮ್ ಭಯೋತ್ಪಾದಕ ಕೃತ್ಯಕ್ಕೂ ಈಗ ಮುಸ್ಲಿಮ್ ಸಮುದಾಯವನ್ನು ಹೊಣೆಗಾರರನ್ನಾಗಿ ಮಾಡುವುದರಲ್ಲಿ ಕೇವಲ ಸಂಘಪರಿವಾರ ಮಾತ್ರವಲ್ಲ ಈ ದೇಶದ ಮಾಧ್ಯಮಗಳು ಮತ್ತು ಒಟ್ಟು ಹಿಂದು ಸಮುದಾಯವೇ ಭಾಗಿಯಾಗಿವೆ. ಈ ಭಾವನೆ ಈಗ ಜನ ಸಾಮಾನ್ಯರ ಕಾಮನ್‌ಸೆನ್ಸ್‌ನ ಭಾಗವೇ ಆಗಿಬಿಟ್ಟಿದೆ.

ಆದರೆ ೧೯೮೯ರ ಭಾಗಲ್ಪುರ ಹಿಂಸಾಕಾಂಡ ೧೯೯೨-೯೩ರ ಮುಂಬಯಿ ಗಲಭೆಗಳು ಮತ್ತು ೨೦೦೨ರ ಗುಜರಾತ್ ನರಮೇಧಗಳ ಹೊಣೆಗಾರಿಕೆಯನ್ನು ಕೂಡ ಇವತ್ತಿಗೂ ಈ ದೇಶದ ಮುಸ್ಲಿಮ್ ಸಮುದಾಯವಾಗಲೀ ಮುಸ್ಲಿಮ್ ಸಂಘಟನೆಗಳಾಗಲೀ, ಸಾರಾಸಗಟಾಗಿ ಹಿಂದುಗಳ ತಲೆಗೆ ಕಟ್ಟುತ್ತಿಲ್ಲ; (ಹಾಗೆ ಮಾಡಲು ಅದಕ್ಕೆ ಬಹಳ ಒಳ್ಳೆಯ ಕಾರಣಗಳು ಇದ್ದವು ಕೂಡ). ಈ ಎಲ್ಲ ವಾಸ್ತವಗಳನ್ನೂ ಅಲಕ್ಷಿಸಿ, ಕರ್ನಾಟಕದ ಸಿ.ಪಿ.ಎಮ್ ಹಿಂದು ಕೋಮುವಾದವನ್ನು ಮುಸ್ಲಿಮ್ ಸಂಘಟನೆಗಳನ್ನೂ ಒಂದೇ ತಕ್ಕಡಿಯಲ್ಲಿಟ್ಟು, ಸಂಘಪರಿವಾರದಷ್ಟ ರಾಜಕೀಯವನ್ನು ಎದುರಿಸುವ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದೆ. ಅಷ್ಟು ಮಾತ್ರವಲ್ಲ; ಕರ್ನಾಟಕದಲ್ಲಿ ಸಂಘಪರಿವಾರವನ್ನು ದಿಟ್ಟವಾಗಿ ಎದರಿಸುತ್ತಿರುವ ಕೋಮುಸೌಹರ್ದ ವೇದಿಕೆ"ಯಂತಹ ಸಂಘಟನೆಗಳ ವಿರುದ್ಧ ಅಪಪ್ರಚಾರ ನಡೆಸುತ್ತ ತನ್ನ ನಿಷ್ಕ್ರಿಯತೆಯನ್ನು ಮುಚ್ಚಿ ಹಾಕಲು ಹವಣಿಸುತ್ತಿದೆ.

ಕರ್ನಾಟಕದ ಎಡ ಪಕ್ಷಗಳು ಎಂದರೆ ಯಾವುವು? ಸಿ.ಪಿ.ಐ ಮತ್ತು ಸಿ.ಪಿ.ಎಂಗಳನ್ನು ಬಿಟ್ಟು ಕರ್ನಾಟಕದಲ್ಲಿ ಇನ್ನು ಯಾವ ಎಡಪಕ್ಷವಿದೆ? ಸಿ.ಪಿ.ಎಂ ಬಗ್ಗೆ ಹೇಳುವುದಾದರೆ ಹಠಮಾರಿತನ ಮತ್ತು ತಾನು ಎಂದೂ ತಪ್ಪು ಮಾಡಲಾರೆ ಎಂಬ ಅದರ ಅಹಮಿಕೆಗಳಿಂದಾಗಿ ಇತರ ಎಡ ಪ್ರಜಾಸತ್ತಾತ್ಮಕ ಸಂಘಟನೆಗಳಿಗೆ ಅದರ ಜೊತೆ ಕೈ ಜೋಡಿಸಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ಈಗೀಗ ಸಿ.ಪಿ.ಎಂ, ಆಳುವ ವರ್ಗದ ಬಿ.ಟೀಮ್‌ನಂತೆ ವರ್ತಿಸತೊಡಗಿದೆ. ಉದಾಹರಣೆಗೆ ರಾಜ್ಯದ ತಥಾಕಥಿತ ನಕ್ಸಲೀಯರ ಬಗ್ಗೆ ಸರಕಾರ, ರಾಜ್ಯ ಪೊಲೀಸು ಖಾತೆ, ಮಾಧ್ಯಮಗಳು ಬಿ.ಜೆ.ಪಿ ಹಾಗೂ ಸಿ.ಪಿ.ಎಮ್‌ಗಳ ನಿರೂಪಣೆಗಳಲ್ಲಿ ಹೇಳಿಕೊಳ್ಳುವ ಯಾವ ವ್ಯತ್ಯಾಸವೂ ಇಲ್ಲ.

೪. ಅಧಿಕಾರ ರಾಜಕಾರಣದಲ್ಲಿ ಜನಪರ ಚಳವಳಿಗಳು ಪಾತ್ರವಹಿಸುವುದು ಎಷ್ಟು ಮಾತ್ರಕ್ಕೂ ಅಪೇಕ್ಷಣೀಯವಲ್ಲ. ಅಧಿಕಾರವನ್ನು ಹಿಡಿಯುವುದೇ ಎಲ್ಲ ರಾಜಕೀಯ ಚಟುವಟಿಕೆಗಳ ಅಂತಿಮ ಉದ್ದೇಶ ಎಂಬ ತಪ್ಪು ತಿಳುವಳಿಕೆಯಿಂದ ಹುಟ್ಟುಕೊಂಡಿರುವ ಭಾವನೆ ಅದು. ಯಾವ ವ್ಯವಸ್ಥೆಯಲ್ಲೂ ಜನರು, ಒಳ್ಳೆಯವರಾಗಿರಬೇಕಾದ ಹೊಣೆಗಾರಿಕೆಯಿಂದ ಮುಕ್ತರಾಗುವುದು ಸಾಧ್ಯವಿಲ್ಲ. ಹಾಗೆಯೇ ಯಾವುದೇ ಸರಕಾರವಿದ್ದರೂ ಚಳವಳಿಗಳು, ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳು ಮುಂದುವರಿಯಲೇಬೇಕು. ಯಾವ ಪಕ್ಷದ ಸರಕಾರವಿದ್ದರೂ, ಸರಕಾರದ ಹೊರಗೆ ಪ್ರಜೆಗಳ ಸಮಸ್ಯೆಗಳಿಗೆ ದನಿ ಕೊಡುವವರು ಇರಬೇಕು. ಅಧಿಕಾರದಲ್ಲಿ ಇರುವವರಿಗೆ ಸತ್ಯವನ್ನು ಹೇಳಿ ಅವರನ್ನು ಸರಿದಾರಿಗೆ ತರುವುದು ಜನಪರ ಚಳವಳಿಗಳ ಮೊದಲ ಆದ್ಯತೆಯ ಕೆಲಸ. ಇದರಲ್ಲಿ ನಮ್ಮ ಜನಪರ ಚಳವಳಿಗಳು ಸೋಲುತ್ತಿವೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ದೇಶಾದ್ಯಂತ ವಿಶೇಷ ಆರ್ಥಿಕ ವಲಯಗಳೆಂಬ ಅಭಿನವ ವಸಾಹತುಶಾಹಿಯ ವಿರುದ್ಧ ನಡೆಯುತ್ತಿರುವ ಚಳವಳಿಗಳ ಜನರ ಸಹಾನುಭೂತಿಯನ್ನು ಗಳಿಸಿವೆ, ಸರಕಾರ ಈಗ ಆ ಚಳವಳಿಗಳನ್ನು ಅಲಕ್ಷಿಸಿ ಮುಂದುವರಿಯುವಂತೆಯೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ತು ವರ್ಷಗಳ ಹಿಂದೆಯೇ ಜನಪರ ಚಳವಳಿಯಿಂದಾಗಿ ಕೊಜೆಂಟ್ರಿಕ್ಸ್ ಎಂಬ ಪರಿಸರ ವಿನಾಶಕಾರಿಯಾದ ವಿದ್ಯುತ್ ಸ್ಥಾವರ ಪ್ರಾರಂಭವಾಗುವುದು ತಪ್ಪಿತು. ಜನಪರ ಚಳವಳಿಯಿಂದಾಗಿ ಈಗ ಯಾವ ಜನವಿರೋಧಿ ಉದ್ಯಮವನ್ನೂ ಸರಕಾರ ದಮನ ಮಾರ್ಗವನ್ನು ಅನುಸರಿಸದೆ ಪ್ರಾರಂಭಿಸುವುದು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಇದೆ. ಇದರಷ್ಟಕ್ಕೆ ಇದು ಸಣ್ಣ ಸಾಧನೆ ಏನೂ ಇಲ್ಲ.

೫. ಇವತ್ತು ದ.ಸಂ.ಸ ಹಲವು ಚೂರುಗಳಾಗಿ, ಅವು ಹಾಗೆ ಚೂರಾಗುವುದಕ್ಕೆ ಇರುವ ತಾತ್ವಿಕ ಕಾರಣಗಳಾದರೂ ಯಾವುವು ಎಂಬುದು ಯಾರಿಗೂ ಗೊತ್ತಿಲ್ಲದೆ, ಸಂಘಟನೆಯ ಸದಸ್ಯರು ಮುಂದಿನ ದಾರಿ ಯಾವುದು ಎಂದು ಸಹ ತಿಳಿಯದೆ ದಿಕ್ಕಾಪಾಲಾಗಿ ಚೆದುರಿ ಹೋಗಿರುವುದು ತಳಸಮುದಾಯಗಳು ಸದ್ಯದ ರಾಜಕೀಯದಲ್ಲಿ ಕಷ್ಟದ ದಿನಗಳನ್ನು ಎದುರಿಸುತ್ತಿರುವುದನ್ನೇ ಸಂಕೇತಿಸುತ್ತದೆ. ದ.ಸಂ.ಸದ ಭೀಮವಾದಿ ಮತ್ತು ಅಂಬೇಡ್ಕರ್‌ವಾದೀ ಬಣಗಳ ನಡುವೆ ವಾದದ ವ್ಯತ್ಯಾಸವೇನು ಎಂಬುದು ಸ್ವತಃ ಆ ಬಣಗಳ ನಾಯಕರಿಗೇ ಗೊತ್ತಿಲ್ಲದ ಸ್ಥಿತಿಯಲ್ಲಿ ಅಂಬೇಡ್ಕರ್ ವಿಚಾರ ಮತ್ತು ಹೋರಾಟಗಳ ಬಳುವಳಿಯಲ್ಲಿ ಇವರಿಗೆ ದಕ್ಕುವುದಾದರೂ ಏನು?

ಇನ್ನು ತಳಸಮುದಾಯಗಳನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ಬಿ.ಎಸ್.ಪಿ. ಬಗೆಗೆ ಹೇಳುವುದಾದರೆ, ಅದು ತಳಸಮುದಾಯದ ಬಗ್ಗೆಯಾಗಲೀ, ಇತರ ಯಾವುದೇ ಸಮುದಾಯದ ಬಗ್ಗೆಯಾಗಲೀ, ಯಾವ ಆಶೋತ್ತರವೂ ಇಲ್ಲದ ಸಿನಿಕರ ಒಂದು ಕೂಟ. ಖ್ಯಾತ ದಲಿತ ಚಿಂತಕ ಸುಹಾಸ್ ಪಾಳ್ಶಿಕರ್ ಹೇಳುವಂತೆ "ಭಾರತೀಯ ಸಮಾಜವನ್ನು ಸಮಾನತೆ ಮತ್ತು ನ್ಯಾಯಗಳ ತಳಹದಿಯಲ್ಲಿ ಪುನರ್ ರೂಪಿಸುವುದು ಅಂಬೇಡ್ಕರ್ ಅವರ ರಾಜಕೀಯ ಕಾರ್ಯಕ್ರಮವಾಗಿದ್ದಿತು. ಆದರೆ ಬಿ.ಎಸ್.ಪಿಗೆ ಈ ಕಣ್ಣೋಟವೇ ಇಲ್ಲ. ಬಿ.ಎಸ್.ಪಿ ಅಂಬೇಡ್ಕರ್ ಅವರ ಉದಾತ್ತ ವ್ಯಕ್ತಿತ್ವವನ್ನು ಮಾಮೂಲಿ ರಾಜಕಾರಣಿಯ ಮಟ್ಟಕ್ಕೆ ಇಳಿಸಿದೆ. "ಹಿಂದುತ್ವವಾದದ ಜೊತೆ ಸಮಯಸಾಧಕ ಮೈತ್ರಿ ಮಾಡಿಕೊಳ್ಳುವುದಕ್ಕೂ ಬಿ.ಎಸ್.ಪಿ. ಹೇಸು

[illegible] ರ್ನಾಟಕದಲ್ಲಂತೂ [illegible] ಚುನಾವಣೆಗಳಲ್ಲಿ [illegible] ಬಿದ್ದುದರಿಂದ ಬಿ.ಜೆ.ಪಿ.ಗೆ ಭಾರೀ ಅನು ಕೂಲವಾಗಿದೆ. [illegible] ಕರ್ನಾಟಕ ಪಕ್ಷ, [illegible] ಗಳ ಬಗ್ಗೆ [illegible] ತಿಳಿಯದು.

೬. ಕರ್ನಾಟಕದ ಬಹುಪಾಲುಜನ, ಸರಕಾರದಿಂದ [illegible] ನಿರೀಕ್ಷಿಸುವುದಿಲ್ಲ. ಸರಕಾರ ತನ್ನ ಕನಿಷ್ಟ ಜವಾಬ್ದಾರಿಗಳಿಂದ ಕೂಡ ಹಿಂದೆ ಸರಿಯುತ್ತಿರುವ ಈ ದಿನಗಳಲ್ಲಿ ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಜನರ ಸ್ಥಿತಿಗತಿಗಳಲ್ಲಿ ಹೇಳಿಕೊಳ್ಳುವ ಯಾವ ವ್ಯತ್ಯಾಸವೂ ಆಗುವುದಿಲ್ಲ. ಆಳುವವರು ಪ್ರಜಾಪೀಡಕರಾಗದಿದ್ದರೆ ಅದೇ ಒಂದು ದೊಡ್ಡ ಸೌಭಾಗ್ಯ. ದೇಶದ ಹಲವೆಡೆ ಪ್ರಜೆಗಳ ಬದುಕುವ ಹಕ್ಕನ್ನು ರಕ್ಷಿಸುವುದರಲ್ಲಿ ಕೂಡ ಸರಕಾರ ವಿಫಲವಾಗಿದೆ. ಉದಾ: ೧೯೮೪ರಲ್ಲಿ ಇಂದಿರಾಗಾಂಧಿಯವರ ಕೊಲೆಯ ನಂತರ ನಡೆದ ಸಿಖ್‌ಮುದಾಯದ ಸಾಮೂಹಿಕ ನರ ಹತ್ಯೆ, ೧೯೯೨-೯೩ರ ಮುಂಬಯಿ ಗಲಭೆ ಮತ್ತು ೨೦೦೨ರ ಗುಜರಾತ್ ನರಮೇಧಗಳ ಸಂದರ್ಭವಲ್ಲಿ ಸರಕಾರವೇ ಕೊಲೆಗಡುಕರ ಜೊತೆ ಶಾಮೀಲಾಗಿತ್ತು. ದೇಶದ ನ್ಯಾಯಾಲಯಗಳ ದೃಷ್ಟಿಯಲ್ಲಿ ಬಡರೈತರು, ಆದಿವಾಸಿಗಳು ಮತ್ತು ನಗರಗಳ ಸ್ಲಮ್ ನಿವಾಸಿಗಳು ದೇಶದ ಪ್ರಜೆಗಳೇ ಅಲ್ಲ. ಪ್ರಭುತ್ವದ ವಿವಿಧ ಸಂಸ್ಥೆಗಳು ಜನರಿಗೆ ಮಾಡುತ್ತಿರುವ ಮಹಾದ್ರೋಹಕ್ಕೆ ನರ್ಮದಾ ಯೋಜನೆಯ ನಿರಾಶ್ರಿತರ ಬಗ್ಗೆ ನಮ್ಮ ನ್ಯಾಯಾಲಯಗಳು, ರಾಜಕೀಯ ಪಕ್ಷಗಳು, ಪತ್ರಿಕೆಗಳು ಮತ್ತು ಸರಕಾರ ತಳೆದಿರುವ ಧೋರಣೆಯ ಒಂದು ಉದಾಹರಣೆಯೇ ಸಾಕು. ಪರಿಸ್ಥಿತಿಯಲ್ಲಿ ರಾಜಕಾರಣದಿಂದ ಏನನ್ನು ತಾನೇ ನಿರೀಕ್ಷಿಸಲಾದೀತು?

ಪ್ರಭುತ್ವ ಮತ್ತು ನಾಗರಿಕ ಸಮಾಜದ ವಿವಿಧ ಸಂಸ್ಥೆಗಳು, ತಮ್ಮ ಕರ್ತವ್ಯವನ್ನು ಪಾಲಿಸದೆ ಜನರಿಗೆ ವಿಶ್ವಾಸ ದ್ರೋಹ ಎಸಗುತ್ತಿರುವ ಪ್ರಸ್ತುತ ಸನ್ನಿವೇಶ, ಬಸವಣ್ಣನ ಬಹು ಉಲ್ಲೇಖಿತವಾದ ವಚನವೊಂದನ್ನು ಮತ್ತೆ ನೆನಪಿಗೆ ತರುತ್ತಿದೆ.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ ಬೇಲಿಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿಕೊಲುವಡೆ
ಇನ್ನಾರಿಗೆ ದೂರಲಿ ಕೂಡಲ ಸಂಗಮದೇವಾ.

ಕರ್ನಾಟಕದಲ್ಲಿ ಅಧಿಕಾರ ಹಿಡಿಯಲು ಫ್ಯಾಸಿಸ್ಟರು ತುದಿಗಾಲಲ್ಲಿ ನಿಂತಿರುವಾಗಲೇ, ಇಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದ ಸಂಸ್ಥೆಗಳು ಅದರ ವಿರುದ್ಧ ಸಂಚು ನಡೆಸಿವೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಾದ ಮಾಧ್ಯಮಗಳು ಸ್ವತಃ ತಾವೇ ಭಿನ್ನ ಮತವನ್ನು ಹೊಸಕಿ ಹಾಕುತ್ತಿವೆ. ಇತ್ತೀಚೆಗೆ ದಿ. ಎ.ಕೆ. ರಾಮಾನುಜನ್‌ರ "ವಿವಾದಿತ" ಪ್ರಬಂಧ-ತ್ರೀಹಂಡ್ರೆಟ್ ರಾಮಾಯಣಸ್-ಬಗ್ಗೆ ಕನ್ನಡದ ಪ್ರತಿಷ್ಠಿತ ದಿನ ಪತ್ರಿಕೆಗಳು ತಳೆದ ಉದ್ದೇಶ ಪೂರ್ವಕ ನಿರ್ಲಕ್ಷ್ಯದ ಉದಾಹರಣೆ ನಮ್ಮ ಕಣ್ಣೆದುರಿಗೇ ಇದೆ. ಈ ಪರಿಸ್ಥಿತಿಯಲ್ಲಿ ಫ್ಯಾಸಿಸ್ಟರ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟ ರೂಪುಗೊಂಡೀತೆ? ಅಥವಾ ಅಧಿಕಾರದ ಪಂದ್ಯದಲ್ಲಿ ಅವರಿಗೆ ವಾಕ್ ಓವರ್ ದೊರೆಯುತ್ತದೆಯೆ? ಇದೇ ಸದ್ಯಕ್ಕೆ ಕರ್ನಾಟಕದ ರಾಜಕಾರಣದ ಎದುರು ಇರುವ ಅತಿದೊಡ್ಡ ಮತ್ತು ಅತಿ ತುರ್ತಿನ ಸವಾಲು. □

ಬರಬಂದಿದೆ ನೀರಿಗೆ, ನೀತಿಗೆ ಮತ ಮಾರಲ್ಪಡುತ್ತಿದೆ ಅಗ್ಗದ ರೇಟಿಗೆ

ಜಂಬಣ್ಣ ಅಮರಚಿಂತ
ಸಾಹಿತಿ, ಚಿಂತಕ

ರಾಜಕಾರಣ ಚರ್ಚೆ

ಜನರ ಸೇವೆಗೆಂದು ಆರಿಸಿ ಕಳಿಸಲ್ಪಟ್ಟ ಶಾಸಕರು ಅಧಿಕಾರದ ಅಮಲೇರಿದಂತೆ ಜನರಿಗೆ ನೀಡಿದ ಆಶ್ವಾಸನೆಗಳನ್ನು ಮರೆತು ಜನರ ಕೊರಳ ಧ್ವನಿ ಕೊಯ್ಯುವ ಧಣಿಗಳಾಗುತ್ತಿದ್ದಾರೆ. ನಾಡಿನ ಸಾಮಾನ್ಯ ಜನರಲ್ಲಿರುವ ರಾಜಕೀಯ ಪ್ರಜ್ಞೆಯ ಅಭಾವವನ್ನು ಕಂಡುಕೊಂಡ ರಾಜಕೀಯ ದುರಂಧರರು ಜಾತಿ, ಹಣ, ಮತಗಳೆಂಬ ತ್ರಿಶೂಲಗಳನ್ನು ಹಿಡಿದು ದಬ್ಬಾಳಿಕೆಯಿಂದ ವಂಚನೆಯಿಂದ ಚುನಾವಣೆ ಗೆಲ್ಲುವ ತಂತ್ರಗಳನ್ನು ಮೈಗೂಡಿಸಿಕೊಂಡಿದ್ದಾರೆ. ವಿಚಾರ ಕ್ಕೊಂದು ನೀತಿ, ಆಚಾರ ಇನ್ನೊಂದು ರೀತಿ, ನೀತಿಯಲ್ಲದ ರಾಜ ನೀತಿಯ ವಾರಸುದಾರರಾಗಿದ್ದಾರೆ. ಬೇಕಾದಾಗ ಹೊಗುಳುವ, ಸಾಕಾದಾಗ ತೆಗುಳುವ, ಮಾತು-ಮಾತಿಗೆ ಬಣ್ಣ ಬದಲಿಸುವ ರಾಜಕೀಯಾಂಬರಧಾರಿಗಳ ಗೋಸುಂಬೆತನ ಎಲ್ಲೆಡೆ ವಿಜೃಂಭಿಸುತ್ತಿದೆ.

೧. ಎರಡು ಮೂರು ಚಿಲ್ಲರೆ ವರ್ಷಗಳ ಹಿಂದೆ ಎರಡು ಪಕ್ಷಗಳ ನವ ವಧುವರರು ಗುತ್ತಿಗೆಯ ಆಧಾರದ ಮೇಲೆ ರಾಜಕೀಯ ಮದುವೆ ಮಂಟಪದಲ್ಲಿ ಸಂಲಗ್ನಗೊಂಡಿದ್ದರು. ಅಂತು ಇಂತು ಪರಸ್ಪರ ಅಪ್ಪುಗೆಯಲ್ಲಿ ಹಗೆಯಲ್ಲವೆಂಬಂತೆ ನಗೆಯಲ್ಲದ ನಗು ನಗುತ ರಾಜಕೀಯ ಸಂಸಾರ ನಡೆಸಿದರು. ಕೂಡಿಕೆಯ ಫಲವೆಂಬಂತೆ ಸಡನ್ನಾಗಿ ಅಕರಾಳ, ವಿಕರಾಳದ ಕೂಸೊಂದು ಜನಿಸಿತು. ಕೈಯಿರುವಲ್ಲಿ ಕಾಲು, ಕಾಲುಯಿರುವಲ್ಲಿ ಕೈ, ಕಿವಿಯಿರುವಲ್ಲಿ ಕಣ್ಣು, ಕಣ್ಣುಯಿರುವಲ್ಲಿ ಕಿವಿ, ಹೊಟ್ಟೆ ತುಂಬಾ ಬಾಯಿ, ಮತ್ತೊಂದು ವಿಚಿತ್ರ ಸಂಗತಿ ಎಂದರೆ ಅದರ ತಲೆಯೊಳಗೆ ಮೆದುಳೇ ಇರಲಿಲ್ಲ- ಅದಲ್ಲದೆ ಆ ಕೂಸು ಅಧಿಕಾರ ಲಾಲಸೆ ಎಂಬ ವಿಚಿತ್ರ ವಾದ ಅನುವಂಶಿಕ ಏಡ್ಸ್ ರೋಗದಿಂದ ನರಳುತ್ತಿತ್ತು. ಇದಕ್ಕೆ ತಾಯಿಯೋ ಕಾರಣವೆಂದು ತಂದೆಯ ಬಳಗದವರು ಅಲ್ಲ ಅದಕ್ಕೆ ತಂದೆಯೇ ಕಾರಣವೆಂದು ತಾಯಿಯ ಬಣದವರು ಸಡಕಿಗೆ ನಿಂತು ರದ್ದಿ ಬಿದ್ದಿ ಜಗಳಕ್ಕೆ ತಯಾರಾದರು. ಅಧಿಕಾರ ಲಾಲಸೆ ಎಂಬ ಏಡ್ಸ್ ರೋಗಾಣುಗಳ ಆಗರವಾಗಿದ್ದ ತಂದೆ ತಾಯಿಗಳೇ ಇದಕ್ಕೆ ಕಾರಣವೆಂದು ಜನತಾ ನ್ಯಾಯಾಲಯ ತೀರ್ಪು ನೀಡಿತು. ಕೂಸು ಸತ್ತು ಹೋಯಿತು. ವಿವಾಹ ವಿಚ್ಛೇದನೆಗೊಂಡಿತು.

ಇದೊಂದು ರೂಪಕ ಕಥಾನಕ ಈ ಕಥಾನಕವನ್ನು ಅರ್ಥೈಸಿದರೆ ಪತನಗೊಂಡ ಕರ್ನಾಟಕದ ನೀತಿಗೆಟ್ಟ ರಾಜಕೀಯ ಅಧಃಪತನದ ಬೇರುಗಳನ್ನು ಕಾಣಬಹುದು. ಜನರ ಸೇವೆಗೆಂದು ಆರಿಸಿ ಕಳಿಸಲ್ಪಟ್ಟ ಶಾಸಕರು ಅಧಿಕಾರದ ಅಮಲೇರಿದಂತೆ ಜನರಿಗೆ ನೀಡಿದ ಆಶ್ವಾಸನೆಗಳನ್ನು ಮರೆತು ಜನರ ಕೊರಳ ಧ್ವನಿ ಕೊಯ್ಯುವ ಧಣಿಗಳಾಗುತ್ತಿದ್ದಾರೆ. ನಾಡಿನ ಸಾಮಾನ್ಯ ಜನರಲ್ಲಿರುವ ರಾಜಕೀಯ ಪ್ರಜ್ಞೆಯ ಅಭಾವವನ್ನು ಕಂಡುಕೊಂಡ ರಾಜಕೀಯ ದುರಂಧರರು ಜಾತಿ, ಹಣ, ಮತಗಳೆಂಬ ತ್ರಿಶೂಲಗಳನ್ನು ಹಿಡಿದು ದಬ್ಬಾಳಿಕೆಯಿಂದ ವಂಚನೆಯಿಂದ ಚುನಾವಣೆ ಗೆಲ್ಲುವ ತಂತ್ರಗಳನ್ನು ಮೈಗೂಡಿಸಿಕೊಂಡಿದ್ದಾರೆ. ವಿಚಾರಕ್ಕೊಂದು ನೀತಿ, ಆಚಾರ ಇನ್ನೊಂದು ರೀತಿ, ನೀತಿಯಲ್ಲದ ರಾಜ ನೀತಿಯ ವಾರಸುದಾರರಾಗಿದ್ದಾರೆ. ಬೇಕಾದಾಗ ಹೊಗುಳುವ, ಸಾಕಾದಾಗ ತೆಗುಳುವ, ಮಾತು-ಮಾತಿಗೆ ಬಣ್ಣ ಬದಲಿಸುವ ರಾಜಕೀಯಾಂಬರ ಧಾರಿಗಳ ಗೋಸುಂಬೆತನ ಎಲ್ಲೆಡೆ ವಿಜೃಂಭಿಸುತ್ತಿದೆ. ಕಾರಣವಿರಲಿ, ಅಕಾರಣವಿರಲಿ ಎಲ್ಲಕ್ಕೂ ಕೀಳು ರಾಜಕಾರಣ ಮಾಡುವ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅಂತಃಕರಣದ ರಾಜಕಾರಣಕ್ಕೆ ನೆಲೆಯಿಲ್ಲದಾಗಿದೆ. ಜೀವನ ಮೌಲ್ಯಗಳ ಪುಂಜಿಯಿಲ್ಲ. ನೀಡುವ ಜೀವನ ಮೌಲ್ಯಗಳ ಚೆಕ್ಕುಗಳೆಲ್ಲಾ ಬೌನ್ಸು Bounce ಆಗುತ್ತಿವೆ. ರಂಗ ಭೂಮಿ ಅದೇ, ನಾಟಕ ಅದೇ, ವೇಷಧಾರಿಗಳು ಮಾತ್ರ ಅದಲು ಬದಲಾಗುತ್ತಿದ್ದಾರೆ. ಮೌಲ್ಯಗಳು ತಲೆಕೆಳಗಾಗುತ್ತಿವೆ. ಕೇಳುವವರು ಕಿವುಡರಾಗುತ್ತಿದ್ದಾರೆ. ಹೇಳುವವರು ಮೂಕರಾಗುತ್ತಿದ್ದಾರೆ. ಹೇಳುವವರು ಕೇಳುವವರಿಲ್ಲದೆ ಆಳುವವರು ಬಲಾಢ್ಯರಾಗುತ್ತಿದ್ದಾರೆ. ಸಿನಿಕರ ಈ ರಾಜಕೀಯ ಯುಗದಲ್ಲಿ ನೀತಿ,

ನಿಯಮ, ಆದರ್ಶ, ಬದ್ಧತೆ, ಜೀವನ ಮೌಲ್ಯಗಳಿಗೆ ಬೆಲೆಯಿಲ್ಲ. ಮುಖ್ಯವಾಗಿ ವರ್ತಮಾನ ರಾಜಕೀಯವನ್ನು ಅರ್ಥೈಸುವ ಪರಿಜ್ಞಾನ ನಮ್ಮ ಜನರಿಗಿಲ್ಲ. ಯುವ ಜನರ ಆಸಕ್ತಿ ಬೇರೆ ಬೇರೆರಂಗಗಳಲ್ಲಿ ಹಂಚಿ ಹೋಗಿದೆ. ಒಂದು ರೀತಿಯ ವಿಚಾರ ಶೂನ್ಯ ವಾತಾವರಣ ನಿರ್ಮಾಣಗೊಂಡಿದೆ. ಅನೀತಿ ಎಂಬ ರಾಜಕೀಯ ಮೃಗ ಜಲದ ಬೆನ್ನಟ್ಟಿದರೆ ನೀತಿ ಎಂಬ ಜೀವ ಜಲಸಿಗುವುದೇ ಅನೀತಿಗೆ ಪಟ್ಟಕಟ್ಟಿ ದೇಶ– ಪತನಗೊಂಡರು ಗದ್ದುಗೆಯ ಧ್ಯಾನ ಮಾತ್ರ ದಿನದಿನಕ್ಕೆ ಹೆಚ್ಚುತ್ತಿದೆ.

ಬರಬಂದಿದೆ ನೀರಿಗೆ, ನೀತಿಗೆ
ಕರ ಹೇರಿದೆ ವಿಚಾರದ ಮಾಲೆಗೆ
ಕಿರೀಟ ಬಂದಿದೆ ತಲೆಯಿಲ್ಲದ ತಲೆಗೆ
ಮತ ಮಾರಲ್ಪಡುತ್ತಿದೆ ಅಗ್ಗದ ರೇಟಿಗೆ

೨. ಜಾತ್ಯತೀತವೆಂಬುದು ಜನತಾದಳ ಧರಿಸಿದ ಆಕರ್ಷಕ ಮುಖವಾಡವಾಗಿದೆ. ಮುಖ ಬೇರೆ, ಮುಖವಾಡ ಬೇರೆ. ದುರ್ಮುಖದ ಮೇಲೆ ಸುಮುಖದ ಮುಖವಾಡ, ಜಾತ್ಯಾತೀತ ಜನತಾದಳದಲ್ಲಿರುವವರೇ ಜಾತ್ಯತೀತ ಅಂದರೇನು? ಎಂದು ತಮ್ಮ ತಮ್ಮೊಳಗೆ ಪ್ರಶ್ನಿಸಿಕೊಳ್ಳುತ್ತಿದ್ದಾರೆ. ಯಾಕೆಂದರೆ ಅವರು ಹೆಚ್ಚಾಗಿ ಜಾತಿ, ಮತ, ಹಣ ಮತ್ತು ಮಠಾಧಿಪತಿಗಳ ಆಶೀರ್ವಾದದಿಂದ ಆರಿಸಿ ಬಂದವರು. ಜಾತ್ಯತೀತರಲ್ಲ ಇವರು ಜಾತಿ, ಮತಗಳ ಅತಿಥಿಗಳು. ಶತಮಾನಗಳಿಂದ ಈ ನಾಡನ್ನು ಆಳಿದ ಸವರ್ಣೀಯ ಆಳರಸರ ಜೀವಂತ ಪಳೆಯುಳಿಕೆಗಳು ಪ್ರಬಲ ಕೋಮಿನ ವಂಶಸ್ಥರಾದ ಇವರು ವೇಷ ಬದಲಿಸಿ ನಾಡಿನ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ.

ಅವಕಾಶವಾದಿ ರಾಜಕಾರಣದಲ್ಲಿ ಪಳಗಿದವರು. ಎಲ್ಲಾ ಪಕ್ಷಗಳಲ್ಲಿ ಇಂಥವರು ತುಂಬಿ ಹೋಗಿದ್ದಾರೆ. ಗೆದ್ದೆತ್ತಿನ ಬಾಲ ಹಿಡಿಯುವ ಪಕ್ಷದಿಂದ ಪಕ್ಷಕ್ಕೆ ಮಂಗಗಳದಂತೆ ಜಿಗಿಯುವ ಇವರಿಗೆ ನೈತಿಕತೆ ಎಂಬುದಿಲ್ಲ. ಜಾತಿ, ಮತ, ಧನಬಲ, ತೋಳು ಬಲ ಇವರ ಅನೈತಿಕತೆಯ ಅಸ್ತ್ರಗಳು, ಇನ್ನೂ ಜಾತ್ಯತೀತ ಎಂಬ ಮಾತು ಎಲ್ಲಿಂದ ಬಂತು? ರಾಮ ನಾಮ ಜಪಿಸುವ ರಾಮಗಿಳಿಯನ್ನು ಪಂಜರದಲ್ಲಿಟ್ಟುಕೊಂಡು ನಾಡು ಭವಿಷ್ಯ ಹೇಳುವ ಗಿಳಿಪಂಚಾಂಗದವರಂತಿರುವ ಪಕ್ಷದವರ ಜೊತೆ ಹೊಂದಾಣಿಕೆ ಮಾಡಿಕೊಂಡು ಜನರ ಆಶಯಗಳನ್ನು ಅಧಿಕಾರದ ರೋಡು ರೋಲರ್ ಮುಖಾಂತರ ರೋಡಿನ ಮೇಲೆ ಸಪಾಟುಗೊಳಿಸಿ ತಮ್ಮ ಪಕ್ಷ ಸಮಾನತೆ ತಂದಿದೆ ಎಂದು ಸಾರಿಕೊಳ್ಳುತ್ತಿರುವ, ಹೊಂದಾಣಿಕೆ ಮೈತ್ರಿಯಿಂದ ಜಾರಿಕೊಳ್ಳುತ್ತಿರುವ ಇವರು ಬೇರೆ ಪಕ್ಷಗಳ ಜೊತೆ ಶಾಶ್ವತ ಮೈತ್ರಿ ಉಳಿಸಿಕೊಳ್ಳುತ್ತಾರೆಂಬ ಭರವಸೆಯಿಲ್ಲ. ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಅಧಿಕಾರ ಹಸ್ತಾಂತರ ಮಾಡುವ ವಂಶಪಾರಂಪರ್ಯದ ಕುಟಿಲ ರಾಜಕಾರಣವಿರುವವರೆಗೆ ಡೋಲಾಯಮಾನ ಸ್ಥಿತಿ ಮುಂದುವರೆಯುವ ಲಕ್ಷಣಗಳಿವೆ.

ಚುನಾವಣೆ ಸಮೀಪಿಸುತ್ತಿದ್ದಂತೆ ವಲಸೆ ಹೊಲಸು ರಾಜಕೀಯ ಪ್ರಾರಂಭವಾಗುತ್ತದೆ. ಕೋಮುವಾದಿ, ಜಾತ್ಯತೀತ ಪಕ್ಷಕ್ಕೆ, ಜಾತ್ಯತೀತ ಪಕ್ಷದವನ ಕೋಮುವಾದಿ ಪಕ್ಷಕ್ಕೆ ಜಿಗಿಯುತ್ತಾನೆ. ನಾಮ ಹಾಕಿಕೊಳ್ಳುತ್ತಾನೆ. ಪ್ರಜಾಸತ್ತಾತ್ಮಕ ಪಕ್ಷಗಳಿಗೂ ಈ ಸಾಂಕ್ರಾಮಿಕ ವಲಸೆ ರೋಗ ಅಂಟಿಕೊಂಡಿದೆ. ಇಲ್ಲಿ ಅಧಿಕಾರ ಗದ್ದುಗೆಗೆ ಮಹತ್ವ ಹೊರತು ಜನತಾಂತ್ರಿಕ ಮೌಲ್ಯಗಳಿಗಲ್ಲ. ಪ್ರಸ್ತುತ ರಾಜಕೀಯ ವಿದ್ಯಾಮಾನಗಳನ್ನು ಗಮನಿಸಿದರೆ ದ್ವಿಪಕ್ಷೀಯ ಪದ್ಧತಿ ದಾಟಿ

ಜನರ ಮನೋಭೂಮಿಕೆಯನ್ನು ಹದಗೊಳಿಸುವ ವೈಚಾರಿಕ ಬೀಜ ಬಿತ್ತುವ ಪತ್ರಿಕೆಗಳು ಬೆರಳೆಣಿಕೆಯ ಸಂಖ್ಯೆಯಲ್ಲಿವೆ. ಅವು ಸಾರ್ವಜನಿಕರಿಗೆ ವಿಚಾರವಂತರ ಮಧ್ಯೆ ಸುಳಿದಾಡುತ್ತಿವೆ. ಅಕ್ಷರಸ್ಥರನ್ನು ಅನಕ್ಷರಸ್ಥರನ್ನು ತಲುಪುವ, ಜನರ ನೋವಿಗೆ ಸ್ಪಂದಿಸುವ ವೈಚಾರಿಕತೆಯನ್ನು ಸಾರುವ ನಾಟಕಗಳು ಹಾಡುಗಳು ಜನರ ಮಧ್ಯೆ ಮತ್ತೆ ವಿಜೃಂಭಿಸಬೇಕು. ಹಳ್ಳಿಗಳಿಗೆ ತಲುಪಬೇಕು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ವಿಚಾರವಂತರು ಮತ್ತು ಚಳವಳಿಯ ಧುರೀಣರು ಒಂದುಗೂಡಿ, ಆಳುವ ಪಕ್ಷಗಳು ಮುಚ್ಚಿಟ್ಟು ಮಾಡುತ್ತಿರುವ ಮೋಸಗಳನ್ನು ಬಿಚ್ಚಿ ಜನರಿಗೆ ತೋರಿಸಿ, ಸಂಘಟಿಸಿ, ಅವುಗಳಿಗೆ ಕಡಿವಾಣ ಹಾಕಿ, ಪರ್ಯಾಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಇಲ್ಲಿತನಕ ಸಫಲಗೊಂಡಿಲ್ಲ ವಾದ್ದರಿಂದ ವಾದ ಬೆಳೆಯಿತೇ ಹೊರತು ಮಾನವೀಯ ಸಂವಾದ ಮೂಡಿ ಬರಲಿಲ್ಲ. ಆತ್ಮಾವಲೋಕನ ಮಾಡಿಕೊಳ್ಳುವ, ತಪ್ಪುಗಳನ್ನು ತಿದ್ದಿಕೊಳ್ಳುವ ಗುಣ ನಾಯಕರಲ್ಲಿ ಕಂಡು ಬರುವುದಿಲ್ಲ. ಸಾಮೂಹಿಕ ನಿಷ್ಠ, ಸಾಮೂಹಿಕ ನಾಯಕತ್ವಕ್ಕಿಂತ ವ್ಯಕ್ತಿನಿಷ್ಠೆ ಸ್ವಹಿತಾಸಕ್ತಿಗಳ ಕಡೆಗೆ ಒಲವು ತೋರುತ್ತವೆ. ಒಂದು ರೀತಿ ಜಾತೀಯ ಮುಸುಕಿನಲ್ಲಿ ಗುದ್ದಾಟ ನಡೆದಿದೆ. ಹಿಂದೆ ಬಂದರೆ ಕರೆದೊಯ್ಯುವೆ, ಮುಂದೆ ಹೋದರೆ ತುಳಿಯುವೆ ಎಂಬ ದಮನಕಾರಿ ಪ್ರವೃತ್ತಿ ಎಲ್ಲಾ ರಂಗಗಳಲ್ಲಿ ಬೆಳೆಯುತ್ತಿದೆ. ಜನಪರಸಂಘಟನೆಗಳು ತಾವು ಹಾಕಿಕೊಂಡ ವೃತ್ತಗಳಲ್ಲಿ ಗಾಣದೆತ್ತಿನಂತೆ ಸುತ್ತುತ್ತಿವೆ. ಗುಂಪಿನಿಂದ ಬೇರ್ಪಟ್ಟು ಒಂಟಿಯಾದ ಪ್ರಾಣಿಯನ್ನು ಬೇಟೆಯಾಡುವುದು ಸುಲಭ.

ಅದು, ಇದು, ಕಿದು, ಕದು ಎಲ್ಲ ಕೂಡಿ ಮಿಸಳ ಬಾಜಿ ಪದ್ಧತಿಗೆ ದಾರಿ ಮಾಡಬಹುದು.

೩. ಜನರ ಆಶಯಗಳನ್ನು ಅರ್ಥೈಸಿಕೊಂಡು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿದರೆ ಒಳ್ಳೆಯದು.

ವಾಸ್ತವದಲ್ಲಿ ಇದು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ದೇಶದ ಹಿತಕ್ಕಿಂತ ತಮ್ಮ ಪಕ್ಷದ ಹಿತವೇ ಮುಖ್ಯವೆಂದು ತಾವೇ ಶ್ರೇಷ್ಠರೆಂದು ಇತರರು ಕನಿಷ್ಠವೆಂದು ಭಾವಿಸಿರುವ ಈ ಶಕ್ತಿಗಳದು ಒಂದು ಪೂರ್ವದ ಕಡೆ ಮುಖ ಮಾಡಿದರೆ ಇನ್ನೊಂದು ಪಶ್ಚಿಮದ ಕಡೆ ಮುಖ ಮಾಡಿ ನಿಂತಿರುತ್ತವೆ. ದೂರಾಲೋಚನೆ, ದೂರದೃಷ್ಟಿ, ಇಚ್ಛಾಶಕ್ತಿಯ ಕೊರತೆ ಎರಡು ಶಕ್ತಿಗಳಲ್ಲಿ ಕಾಣುತ್ತೇವೆ. ದೇಶ ಉಳಿದರೆ ನಾವು ಉಳಿಯುತ್ತೇವೆ ಎಂಬ ಭಾವನೆ ಬೆಳೆದು ಬರಬೇಕು. 'ಇಡಿ'ಯನ್ನು ಬಿಗಡಾಯಿಸುವುದೇ ಆಳರಸರ ಕುತಂತ್ರವಾಗಿದೆ. 'ಬಿಡಿ'ಯನ್ನು 'ಇಡಿ'ಯಾಗಿಸುವ ಕ್ರಾಂತಿಕಾರಿಗಳ ಸೂತ್ರ ಎಲ್ಲರೂ ಮರೆತಂತಿದೆ. ಇತಿಹಾಸ ನಮಗೆ ಕಲಿಸಿದ ಕ್ರೂರ ಪಾಠಗಳನ್ನು ನಾವು ಸರಿಯಾಗಿ ಗ್ರಹಿಸಿಲ್ಲ. ಅರ್ಥೈಸಿಲ್ಲ ಎನಿಸುತ್ತದೆ.

೪. ಜನರು ವೈಚಾರಿಕವಾಗಿ ಜಾಗೃತಗೊಂಡು ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರವಹಿಸಿದಾಗ ಜನಪರ ಆಶಯಗಳಿಗೆ ಸ್ಪಂದಿಸುವ ಚಳವಳಿಗಳಿಗೆ ಸುಮುಖ ಪ್ರಾಪ್ತಿಯಾಗುವುದು.

ಜನರ ಮನೋಭೂಮಿಕೆಯನ್ನು ಹದಗೊಳಿಸುವ ವೈಚಾರಿಕ ಬೀಜ ಬಿತ್ತುವ ಪತ್ರಿಕೆಗಳು ಬೆರಳೆಣಿಕೆಯ ಸಂಖ್ಯೆಯಲ್ಲಿವೆ. ಅವು ಸಾರ್ವಜನಿಕರಿಗೆ ವಿಚಾರವಂತರ ಮಧ್ಯೆ ಸುಳಿದಾಡುತ್ತಿವೆ. ಅಕ್ಷರಸ್ಥರನ್ನು ಅನಕ್ಷರಸ್ಥರನ್ನು ತಲುಪುವ, ಜನರ ನೋವಿಗೆ ಸ್ಪಂದಿಸುವ ವೈಚಾರಿಕತೆಯನ್ನು ಸಾರುವ ನಾಟಕಗಳು ಹಾಡುಗಳು ಜನರ ಮಧ್ಯೆ ಮತ್ತೆ ವಿಜೃಂಭಿಸಬೇಕು. ಹಳ್ಳಿಗಳಿಗೆ ತಲುಪಬೇಕು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ವಿಚಾರವಂತರು ಮತ್ತು ಚಳವಳಿಯ ಧುರೀಣರು ಒಂದುಗೂಡಿ, ಆಳುವ ಪಕ್ಷಗಳು ಮುಚ್ಚಿಟ್ಟು ಮಾಡುತ್ತಿರುವ ಮೋಸಗಳನ್ನು ಬಿಚ್ಚಿ ಜನರಿಗೆ ತೋರಿಸಿ, ಸಂಘಟಿಸಿ, ಅವುಗಳಿಗೆ ಕಡಿವಾಣ ಹಾಕಿ, ಪರ್ಯಾಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಇಲ್ಲಿತನಕ ಸಫಲಗೊಂಡಿಲ್ಲ ವಾದರಿಂದ ವಾದ ಬೆಳೆಯಿತು ಹೊರತು ಮಾನವೀಯ ಸಂವಾದ ಮೂಡಿ ಬರಲಿಲ್ಲ. ಆತ್ಮಾವಲೋಕನ ಮಾಡಿಕೊಳ್ಳುವ, ತಪ್ಪುಗಳನ್ನು ತಿದ್ದಿಕೊಳ್ಳುವ ಗುಣ ನಾಯಕರಲ್ಲಿ ಕಂಡು ಬರುವುದಿಲ್ಲ. ಸಾಮೂಹಿಕ ನಿಷ್ಠ, ಸಾಮೂಹಿಕ ನಾಯಕತ್ವಕ್ಕಿಂತ ವ್ಯಕ್ತಿನಿಷ್ಠೆ ಸ್ವಹಿತಾಸಕ್ತಿಗಳ ಕಡೆಗೆ ಒಲವು ತೋರುತ್ತವೆ. ಒಂದು ರೀತಿ ಜಾತೀಯ ಮುಸುಕಿನಲ್ಲಿ ಗುದ್ದಾಟ ನಡೆದಿದೆ. ಹಿಂದೆ ಬಂದರೆ ಕರೆದೊಯ್ಯುವೆ, ಮುಂದೆ ಹೋದರೆ ತುಳಿಯುವೆ ಎಂಬ ದಮನಕಾರಿ ಪ್ರವೃತ್ತಿ ಎಲ್ಲಾ ರಂಗಗಳಲ್ಲಿ ಬೆಳೆಯುತ್ತಿದೆ. ಜನಪರಸಂಘಟನೆಗಳು ತಾವು ಹಾಕಿಕೊಂಡ ವೃತ್ತಗಳಲ್ಲಿ ಗಾಣದೆತ್ತಿನಂತೆ ಸುತ್ತುತ್ತಿವೆ. ಗುಂಪಿನಿಂದ ಬೇರ್ಪಟ್ಟು ಒಂಟಿಯಾದ ಪ್ರಾಣಿಯನ್ನು ಬೇಟೆಯಾಡುವುದು ಸುಲಭ.

ರಾಜಕೀಯ ಗೊಂಡಾರಣ್ಯದಲ್ಲಿ ಒಂಟಿಯಾದ ಅದೆಷ್ಟೋ ವಿಚಾರವಂತರನ್ನು, ಸಂಘಟನೆಗಳನ್ನು ಆಳರಸರೆಂಬ ಮೃಗರಾಜರು ಬೇಟೆಯಾಡುತ್ತಾರೆ. ಮೃಗಯಾಟ ಪರಂಪರೆ ಮುಂದುವರೆಯುತ್ತ ಹೋಗುತ್ತಿದೆ.

ಅಲ್ಲದೆ ಯಾವುದೋ ಭಯ ಎಲ್ಲರನ್ನು ಆಳುತ್ತಿದೆ. ನಿರ್ಭಯ ವಾತಾವರಣ ಮೂಡುವವರೆಗೆ ಜನರಪರ ಸಂಘಟನೆಗಳು ಜಯ ಶಾಲಿಯಾಗುವುದಿಲ್ಲ.

ತಳಸಮುದಾಯಗಳು ಅಧಿಕಾರ ರಾಜಕಾರಣ ನಿಯಂತ್ರಿಸುವ ಶಕ್ತಿಗಳಾಗಿ ಮಾರ್ಪಡುವ ಸಾಧ್ಯತೆ ಇದೆ. ಆದರೆ ಸಾವಿರಾರು ವರ್ಷಗಳಿಂದ ಆಳುವ ಮೇಲ್ಜಾತಿ ಜನ

(೩೩ನೇ ಪುಟಕ್ಕೆ)

ಅವಕಾಶವಾದಿ ಸಿದ್ಧಾಂತಕ್ಕೆ ಬಲಿ

ಕೆ.ಎಲ್. ಅಶೋಕ್
ಜನಪರ ಹೋರಾಟಗಾರ, ಚಿಂತಕ

ರಾಜಕಾರಣ ಚರ್ಚೆ

೧. ಕರ್ನಾಟಕದ ಇಂದಿನ ರಾಜಕಾರಣ ದಿವಾಳಿಕೋರತನದ ಉತ್ತುಂಗಕ್ಕೆ ಬಂದು ನಿಂತಿದೆ. ಪ್ರಧಾನವಾಗಿ ಗಣಿ ಹಣ ಮತ್ತು ರಿಯಲ್ ಎಸ್ಟೇಟ್ ಹಣ ಕರ್ನಾಟಕದ ರಾಜಕಾರಣವನ್ನು ನಿಯಂತ್ರಿಸುತ್ತಿದೆ. ಈ ಅಧಃಪತನಕ್ಕೆ ಕೆಲವು ವ್ಯಕ್ತಿಗಳನ್ನು ಅಥವಾ ಪಕ್ಷಗಳನ್ನು ಮಾತ್ರ ಕಾರಣವೆಂದು ಗುರುತಿಸಿದರೆ ನಾವು ಸಮಸ್ಯೆಯನ್ನು ಬಹಳ ಸರಳೀಕೃತಗೊಳಿಸಿದಂತಾಗುತ್ತದೆ. ವಾಸ್ತವದಲ್ಲಿ ಇದು ಪ್ರಜಾಪ್ರಭುತ್ವದ ಬಿಕ್ಕಟ್ಟಾಗಿದೆ. ಈ ಬಿಕ್ಕಟ್ಟಿನ ಬೀಜಗಳು ನಮ್ಮ ಪ್ರಜಾಪ್ರಭುತ್ವ ಕಟ್ಟಲ್ಪಟ್ಟ ಬಗೆಯಲ್ಲೇ ಅಡಕವಾಗಿದೆ. ಅಧಿಕಾರದಲ್ಲಿರುವ ಯಾವ ರಾಜಕೀಯ ಪಕ್ಷಗಳೂ ಇದನ್ನು ಬಗೆಹರಿಸುವ ಸಾಧ್ಯತೆ ಇಲ್ಲ. ಏಕೆಂದರೆ ಆ ಪಕ್ಷಗಳು ಪರಿಹಾರ ಒದಗಿಸುವ ಬದಲು ಅವೇ ಸಮಸ್ಯೆಗಳ ಮೂಲವಾಗಿವೆ. ಕಳೆದ ೬೦ ವರ್ಷಗಳಲ್ಲಿ ಮೂಡಿಬಂದ ವಿವಿಧ ಚಳವಳಿಗಳು ಸಮಾಜವನ್ನು ಪ್ರಜಾತಾಂತ್ರಿಕಗೊಳಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ಆದರೆ ಇಂದು ಚಳವಳಿಗಳು ದುರ್ಬಲಗೊಂಡಿರುವ ಸಂದರ್ಭದಲ್ಲಿದ್ದೇವೆ ಮತ್ತು ಜಾಗತೀಕರಣ ಹಾಗೂ ಕೋಮುವಾದಿ ಫ್ಯಾಸಿಸಂನ ಈ ಕಾಲಘಟ್ಟದಲ್ಲಿ ಹಳೆಯ ಪೊರೆಯನ್ನು ಕಳಚಿ ಹೊಸತನಕ್ಕೆ ತೆರೆದುಕೊಂಡು ಸಮಸ್ಯೆಗಳ ಜೊತೆ ಚಳುವಳಿಗಳು ಮುಖಾಮುಖಿಯಾಗಬೇಕಿತ್ತು. ಆದರೆ ಹಾಗಾಗದಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ.

೨. ಜನತಾದಳವು ತೃತೀಯ ಜಾತ್ಯತೀತ ರಾಜಕೀಯ ಶಕ್ತಿಯಾಗಿತ್ತು ಎಂದು ಕೆಲವರು ಭ್ರಮಿಸಿದ್ದರು. ಆದರೆ ಅದು ಯಾವತ್ತೂ ಹಾಗಿರಲಿಲ್ಲ. ಹಿಂದಿನಿಂದಲೂ ಅದು ಕಾಂಗ್ರೆಸ್ಸಿನ 'ಬಿ ಟೀಮ್' ರೀತಿಯೇ ಇತ್ತು. ವಿವಿಧ ಹಿತಾಸಕ್ತಿಗಳ ಕಾರಣದಿಂದ ವಿಘಟನೆ ಮತ್ತು ಜಾತಿ ರಾಜಕಾರಣ ರಾಜ್ಯದಲ್ಲಿ ಮತ್ತು ದೇಶದಲ್ಲಿ ಮುಖ್ಯ ವಿದ್ಯಮಾನವಾಗಿರುವಾಗ ಅವು ಎರಡು ಸದೃಢೀಕೃತ ಧ್ರುವಗಳಾಗಿ ಸೇರುವ ಸಾಧ್ಯತೆ ಕಡಿಮೆ. ಹಾಗಾಗಿ ಸದ್ಯದ ಭವಿಷ್ಯದಲ್ಲಿ ದ್ವಿಪಕ್ಷ ಪದ್ಧತಿಯ ಸಾಧ್ಯತೆ ಇಲ್ಲವೆಂದು ಹೇಳಬಹುದು.

೩. ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳ ಒಂದಾಗುವಿಕೆ ಆಶಯವಾಗಿಯೇ ಇರುವುದು ವಾಸ್ತವ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಾಚೆ ಸಾಧ್ಯವಿರುವ ಕಡೆಯಲ್ಲಿ ಚಳುವಳಿಗಳು ಒಂದಾಗಿ ಕೆಲಸ ಮಾಡುತ್ತಾ ಹೋಗುವುದು ಈ ದೇಶದಲ್ಲಿ ನಡೆಯಲಿಲ್ಲ. ಬದಲಿಗೆ ಪ್ರತ್ಯೇಕ ಮಠಗಳಾಗೇ ಉಳಿದುಕೊಂಡಿದ್ದು ಒಂದು ಸಮಸ್ಯೆಯೆನಿಸುತ್ತದೆ. ಅದರ ಜೊತೆಗೆ ಈ ಚಳುವಳಿಗಳು ಪ್ರಭುತ್ವವನ್ನು ನಿರ್ವಚಿಸಿಕೊಂಡಿರುವ ಮತ್ತು ಪ್ರಭುತ್ವ ಯಂತ್ರಾಂಗವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಕೆಲವು ಸಮಸ್ಯೆಗಳಿವೆ. ಆ ಕಾರಣದಿಂದ ಭ್ರಷ್ಟಗೊಂಡ ಮತ್ತು ಜನ ವಿರೋಧಿಯಾದ ಅಧಿಕಾರಸ್ಥ ಪಕ್ಷಗಳು ಮತ್ತು ಅಂತಹ ರಾಜಕೀಯದ ವಿರುದ್ಧ ಪರ್ಯಾಯವಾದ ಜನಪರ ಶಕ್ತಿಗಳ ಧ್ರುವೀಕರಣದ ಪ್ರಯತ್ನ ಇಲ್ಲಿ ನಡೆಯಲಿಲ್ಲ. ಬದಲಿಗೆ ಕೆಲವು ಸೀಮಿತ ಜನವರ್ಗಗಳ ಚಳುವಳಿಗಳಾಗಿ ಮಾತ್ರ ಪ್ರತ್ಯೇಕವಾಗಿ ಉಳಿದುಕೊಂಡಿದ್ದು ಮತ್ತು ಒಂದಲ್ಲಾ ಒಂದು ರೀತಿಯಲ್ಲಿ ಈ ಚಳುವಳಿಗಳ ನಾಯಕತ್ವ ಅದೇ ಭ್ರಷ್ಟ ಮತ್ತು ಜನವಿರೋಧಿ ರಾಜಕಾರಣದಲ್ಲೂ ಸಣ್ಣ ಮಟ್ಟದ ಪಾಲಿಗಾಗಿ ಸೀಮಿತಿಗೊಂಡಿದ್ದು ಇನ್ನೊಂದು ಕಾರಣವೆನಿಸುತ್ತದೆ.

> **ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳ ಒಂದಾಗುವಿಕೆ ಆಶಯವಾಗಿಯೇ ಇರುವುದು ವಾಸ್ತವ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಾಚೆ ಸಾಧ್ಯವಿರುವ ಕಡೆಯಲ್ಲಿ ಚಳುವಳಿಗಳು ಒಂದಾಗಿ ಕೆಲಸ ಮಾಡುತ್ತಾ ಹೋಗುವುದು ಈ ದೇಶದಲ್ಲಿ ನಡೆಯಲಿಲ್ಲ. ಬದಲಿಗೆ ಪ್ರತ್ಯೇಕ ಮಠಗಳಾಗೇ ಉಳಿದುಕೊಂಡಿದ್ದು ಒಂದು ಸಮಸ್ಯೆಯೆನಿಸುತ್ತದೆ. ಅದರ ಜೊತೆಗೆ ಈ ಚಳುವಳಿಗಳು ಪ್ರಭುತ್ವವನ್ನು ನಿರ್ವಚಿಸಿಕೊಂಡಿರುವ ಮತ್ತು ಪ್ರಭುತ್ವ ಯಂತ್ರಾಂಗವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಕೆಲವು ಸಮಸ್ಯೆಗಳಿವೆ. ಆ ಕಾರಣದಿಂದ ಭ್ರಷ್ಟಗೊಂಡ ಮತ್ತು ಜನ ವಿರೋಧಿಯಾದ ಅಧಿಕಾರಸ್ಥ ಪಕ್ಷಗಳು ಮತ್ತು ಅಂತಹ ರಾಜಕೀಯದ ವಿರುದ್ಧ ಪರ್ಯಾಯವಾದ ಜನಪರ ಶಕ್ತಿಗಳ ಧ್ರುವೀಕರಣದ ಪ್ರಯತ್ನ ಇಲ್ಲಿ ನಡೆಯಲಿಲ್ಲ.**

ಜನಪರ ರಾಜಕಾರಣದ ಭಾಗವಾಗಿ ನಿರಂತರವಾದ ಆತ್ಮವಿಮರ್ಶೆಯೊಂದಿಗೆ ಮುಂದೆ ಸಾಗಬೇಕಾದ ಎಚ್ಚರದ ಕೊರತೆಯೂ ಇದಕ್ಕೆ ತನ್ನ ಕೊಡುಗೆಯನ್ನು ನೀಡಿದೆ.

೪. ಮೊದಲನೆಯದಾಗಿ ಅಧಿಕಾರ ರಾಜಕಾರಣ ಮತ್ತು ಚಳುವಳಿ ರಾಜಕಾರಣವನ್ನು ಬೇರೆ ಬೇರೆಯೆಂದು ನೋಡುವುದೇ ಒಂದು ಕೃತಕ ವಿಭಜನೆಯಾಗಿದೆ. ಜೊತೆಗೆ ಇಲ್ಲಿನ ತೊಡಕೆಂದರೆ ಅಧಿಕಾರ ರಾಜಕಾರಣವೆಂದರೆ ಅದನ್ನು ಕೇವಲ ಚುನಾವಣೆಗೆ ನಿಲ್ಲುವುದು ಮತ್ತು ಗೆಲ್ಲುವುದಕ್ಕೆ ಮಾತ್ರ ಸೀಮಿತವಾಗಿಸುವುದು. ಜನಪರ ಚಳವಳಿಗಳು ನಡೆಸುವ ಎಲ್ಲಾ ಹೋರಾಟಗಳೂ ಜನರ ನಿಜವಾದ ಅಧಿಕಾರದೆಡೆಗೆ ಮಾಡುವ ಪ್ರಯತ್ನಗಳೇ ಆಗಿರಬೇಕು ಮತ್ತು ಅಂತಹ ನೈಜ ಪ್ರಜಾತಂತ್ರದ ಆಶಯದ ಸಾಕಾರಕ್ಕೆ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ನಿಲ್ಲುವುದು ಒಂದು ಮಾರ್ಗವೆಂದಾದರೆ ಅದರ ಬಗ್ಗೆ ಯಾವುದೇ ಮಡಿವಂತಿಕೆ ಇರಬಾರದು. ಇಲ್ಲಿ ಕೀಲಕ ಅಂಶವು ಆ ರೀತಿ ನೈಜ ಪ್ರಜಾತಂತ್ರದ ಸಾಕಾರದ ಪ್ರಶ್ನೆಯೇ ಆಗಿರಬೇಕು. ಆದರೆ ಇಂದು ಚುನಾವಣಾ ರಾಜಕಾರಣವೆನ್ನುವುದು ಯಾವುದೇ ಜನಪರ ಚಳವಳಿಗಳ ಅಖಾಡವಾಗಿರಲು ಸಾಧ್ಯವೇ ಇಲ್ಲ. ಅದು ಅತ್ಯಂತ ಅಸಹ್ಯ, ನಿರ್ಲಜ್ಜ ಹಣ, ಹೆಂಡ, ಜಾತಿ ಇತ್ಯಾದಿ ವಿಚಾರಗಳ ಮೇಲೆ ನಿಂತಿರುವ ಒಂದು ಪ್ರಹಸನವಾಗಿದೆ. ಒಂದು ವೇಳೆ ಈ ಸಂದರ್ಭದಲ್ಲಿ ಚಳುವಳಿಗಳು ತಾವೇ ಅದರಲ್ಲಿ ಅಭ್ಯರ್ಥಿಗಳಾಗಿ ಭಾಗವಹಿಸಬೇಕೆಂದು ನಿರ್ಧರಿಸುವುದಾದಲ್ಲಿ ಮೊದಲು ಚುನಾವಣೆಗಳು ನಡೆಯುತ್ತಿರುವ ರೀತಿಯನ್ನು ಬದಲಾಯಿಸಲು ಹೋರಾಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲ ಅಂತಹ ಬದಲಾವಣೆಗಳು ನಮ್ಮ ಪ್ರಜಾಪ್ರಭುತ್ವ ಕಟ್ಟಲ್ಪಟ್ಟ ಬಗೆಯಲ್ಲಿನ ರಾಚನಿಕ ಅಂಶಗಳ ಬದಲಾವಣೆ ಇಲ್ಲದೆ ಬರಲು ಸಾಧ್ಯವೇ ಎಂಬುದೂ ಸಹ ನನ್ನ ಪ್ರಶ್ನೆಯಾಗಿದೆ. ಚಳವಳಿಗಳು ಗುದ್ದಾಡಬೇಕಾದ ಅಖಾಡ ಇದು.

೫. ತಳಸಮುದಾಯಗಳು ಅಧಿಕಾರ ರಾಜಕಾರಣದಲ್ಲಿ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಖಂಡಿತಾ ಇದೆ. ಮಾತ್ರವಲ್ಲ ಶೋಷಿತ ಸಮುದಾಯಗಳು ಈ ಸಮಾಜದಲ್ಲಿ ನಿರ್ಣಾಯಕ ಶಕ್ತಿಗಳಾಗದೆ ಬೇರೆ ದಾರಿ ಇಲ್ಲ.

ಬಿಎಸ್‌ಪಿ ಬಗ್ಗೆ ಹೇಳುವುದಾದರೆ, ಅವಕಾಶವಾದವನ್ನೇ ತನ್ನ ಸಿದ್ಧಾಂತವನ್ನಾಗಿ ಮಾಡಿಕೊಂಡಿರುವ ಪಕ್ಷ ಅದು. ಬಿಎಸ್‌ಪಿಯ ಆರಂಭಿಕ ಕಾಲಘಟ್ಟದಲ್ಲಿ ದಲಿತ ಸಮುದಾಯದ ಬಗ್ಗೆ ಅದರ ಘೋಷಿತ ಕಾಳಜಿಗಳು ಮತ್ತು ಅಂತಿಮವಾಗಿ ಸಾಧಿಸುತ್ತೇವೆಂದು ಹೇಳುತ್ತಿರುವ ಗುರಿ ಏನೇ ಆಗಿದ್ದರೂ ಇಂದು ಅದು ಅವಕಾಶವಾದಿ ಸಿದ್ಧಾಂತಕ್ಕೆ ಬಲಿ ಬಿದ್ದಿದೆ. ಆದ್ದರಿಂದ ಅದರ ಹಾಲಿ ಮತ್ತು ಭವಿಷ್ಯದ ಪರಿಸ್ಥಿತಿಗಳು ಪ್ರಗತಿಪರವಾಗಿರುತ್ತವೆ ಎಂಬುದರ ಬಗ್ಗೆ ಗಾಢ ಅನುಮಾನಗಳಿವೆ. ಇನ್ನು ಸರ್ವೋದಯ ಕರ್ನಾಟಕ ಪಕ್ಷದ ಬಗ್ಗೆ ಹೇಳುವುದಾದರೆ ಅದು ಹುಟ್ಟಿದ ಸಂದರ್ಭವನ್ನು ಗಮನಿಸಬೇಕು. ಚಳವಳಿಗಳು ಉಛ್ರಾಯ ಸ್ಥಿತಿಯಲ್ಲಿದ್ದು, ಅಪಾರ ಜನಬೆಂಬಲ ಇದ್ದ ಸಂದರ್ಭದಲ್ಲಿ ಅವು ಒಂದುಗೂಡದಿದ್ದರೆ ಆಗ ನಿಯಂತ್ರಕ ಶಕ್ತಿಯಾಗಿಯಲ್ಲದಿದ್ದರೂ. ಆದರೆ ರೈತ, ದಲಿತ ಚಳವಳಿಗಳು ದುರ್ಬಲಗೊಂಡ ಹತಾಶ ಸಂದರ್ಭದಲ್ಲಿರುವಾಗ ಅದಕ್ಕೆ ಪರ್ಯಾಯವೆಂಬಂತೆ ಈ ರೂಪಾಂತರವನ್ನು ಪ್ರಯತ್ನಿಸಲಾಯಿತು. ಇನ್ನು ಅದರ ಭವಿಷ್ಯದ ಬಗ್ಗೆ ಹೆಚ್ಚೇನೂ ಹೇಳಲಾಗದು.

(ಮುಂದಿನ ಪುಟಕ್ಕೆ)

ರಾಜಕಾರಣ ಚರ್ಚೆ

ಎಡಪಕ್ಷಗಳ ಜಿಗುಟುತನ ಇತರರ ಅಹಂಕಾರ

ಕು.ಸ. ಮಧುಸೂದನ್
ಸಾಹಿತಿ, ಚಿಂತಕ



೧. ಕರ್ನಾಟಕದ ಸದ್ಯದ ರಾಜಕೀಯ ದುಃಸ್ಥಿತಿಗೆ ಕಳೆದ ಒಂದೆರಡು ವರ್ಷಗಳ ರಾಜಕೀಯ ಬೆಳವಣಿಗೆಗಳು ಮತ್ತು ರಾಜಕೀಯ ಪಕ್ಷಗಳೇ ಕಾರಣವೆಂದು ಹೇಳಿದರೆ ಅರ್ಧಸತ್ಯವನ್ನು ಹೇಳಿದಂತಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳಿಗಾಗಲಿ ಅಥವಾ ಮತದಾರರಿಗಾಗಲಿ ಯಾವುದೇ ಸೈದ್ಧಾಂತಿಕ ನೆಲೆಗಟ್ಟಿಲ್ಲದಿರುವುದೂ ಒಂದು ಕಾರಣ. ಒಂದು ರಾಜಕೀಯ ಪಕ್ಷಕ್ಕೆ ಮತ ನೀಡಬೇಕಾದರೆ ಆ ವ್ಯಕ್ತಿಯ ಆ ಪಕ್ಷದ ಆರ್ಥಿಕ, ಸಾಮಾಜಿಕ, ಧಾರ್ಮಿಕ ನೀತಿಗಳ ಬಗ್ಗೆ ವಿಶ್ಲೇಷಿಸದೆ, ಕೇವಲ ಜಾತಿ, ಧರ್ಮ, ಹಣಬಲ, ತೋಳ್ಬಲಗಳಿಂದ ಪ್ರಭಾವಿತರಾಗಿ ಮತ ನೀಡುವ ನಾವುಗಳೇ (ಮತದಾರರು) ಸದ್ಯದ ರಾಜಕೀಯ ದುಃಸ್ಥಿತಿಗೆ ಕಾರಣವೆಂದರೆ ತಪ್ಪಾಗಲಾರದು.

೨. ನೀವು ಹೇಳಿದ 'ಜಾತ್ಯತೀತ ತೃತೀಯ ರಾಜಕೀಯ ಶಕ್ತಿ ಅನ್ನೋದು ದಂತಗೋಪರದಲ್ಲಿ ಕುಳಿತು ರಾಜಕೀಯ ವಿಶ್ಲೇಷಣೆ ಮಾಡುವಂತ ಸ್ವಘೋಷಿತ ರಾಜಕೀಯ ಪಂಡಿತರ ಹುಸಿ–ಕಲ್ಪನೆಯಾಗಿದೆ.

ಇನ್ನು ದ್ವಿಪಕ್ಷ ಪದ್ಧತಿಯು ಸಾಧ್ಯವಾಗುತ್ತಿದೆಯೇ–ಇಲ್ಲವೇ ಎಂಬುದನ್ನು ನಿಖರವಾಗಿ ಹೇಳಲು ತಕ್ಷಣಕ್ಕಂತೂ ಸಾಧ್ಯವಿಲ್ಲ.

೩. 'ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಬೇಕೆಂಬ ಆಶಯ ಸದ್ಯಕ್ಕಂತೂ ಕನಸು ಅನಿಸುತ್ತಿದೆ.

ಇದಕ್ಕೆ ಕಾರಣ ಎಡಪಕ್ಷಗಳ ಅತಿಯಾದ ಸೈದ್ಧಾಂತಿಕ ಜಿಗುಟುತನ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅನಿಸಿಕೊಂಡವರಲ್ಲಿರುವ ಅಹಂಕಾರ ಅಧಿಕಾರದಾಹ, ಸರ್ವಾಧಿಕಾರಿ ಮನೋಭಾವ ನೀವಿವತ್ತು ಏನು ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಎನ್ನುತ್ತೀರೋ ಅವರೆಲ್ಲರೂ ಇವತ್ತಿಗೂ ತಾವು ಚುನಾವಣೆಯಲ್ಲಿ ಗೆಲ್ಲಲು ಅಥವಾ ತಮ್ಮವರನ್ನು ಗೆಲ್ಲಿಸಲು ಬಳಸುತ್ತಿರುವುದು ಮತ್ತದೇ ವೃತ್ತಿಪರ ರಾಜಕಾರಣಿಗಳ ಕುಟೀಲ ಕುತಂತ್ರಗಳನ್ನು! ಅದೂ ಅಲ್ಲದೇ ಪರಸ್ಪರರಲ್ಲಿರುವ ಅಪನಂಬಿಕೆ, ಅಹಂ ಈ ಶಕ್ತಿಗಳನ್ನು ಒಗ್ಗೂಡಿಸಲು ಅಡ್ಡಿಯಾಗಿವೆ.

ಉದಾಹರಣೆಗೆ ನೀವೇ ನೋಡಿ: ರೈತ ಸಂಘ (ಎರಡು ಬಣಗಳು) ಕನ್ನಡ ರಕ್ಷಣಾ ವೇದಿಕೆ (ಎರಡು ಬಣಗಳು) ದಲಿತ ಸಂಘರ್ಷ ಸಮಿತಿ (ಎಷ್ಟು ಬಣಗಳೂ? ನನಗಂತೂ ಗೊತ್ತಿಲ್ಲ!), ಎಡಪಕ್ಷಗಳು (ಎರಡು). ಇಂತಹ ಸಮಾನಮನಸ್ಕ ಪ್ರಗತಿಪರ ಸಂಘಟನೆಗಳೇ ಇನ್ನೂ ಒಂದಾಗಲು ಸಾಧ್ಯವಿಲ್ಲದಿರುವಾಗ, ಇನ್ನು ನೀವುಗಳು ಕೇಳಿದ ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಲು ಹೀಗೆ ಸಾಧ್ಯ? ಹೇಳಿ.

೪. ಇವತ್ತಿನ ಯಾವ ಜನಪರ ಶಕ್ತಿಗಳೂ ಸಶಕ್ತವಾಗಿಲ್ಲದಿರುವುದಕ್ಕೆ ಕಾರಣ ಅವು ಸಮಾಜದ ಎಲ್ಲ ವರ್ಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಲು ವಿಫಲವಾಗಿರುವುದೇ ಆಗಿದೆ. ಅದೂ ಅಲ್ಲದೆ ಬಹಳಷ್ಟು ಚಳವಳಿಗಳು, ಅವುಗಳ ನಾಯಕರುಗಳ ವೈಯಕ್ತಿಕ ಹಿತಾಸಕ್ತಿಗಳಿಂದಾಗಿ ಅಧಿಕಾರಸ್ಥರ ಬಾಲಂಗೋಚಿಗಳಾಗಿ ತಮ್ಮ ಮೊನಚು ಕಳೆದುಕೊಂಡಿವೆ. ಆಮೇಲೆ ನಮ್ಮ ಎಲ್ಲಾ ಚಳವಳಿಗಳೂ ದೀರ್ಘಕಾಲೀನ ಗುರಿಗಳನ್ನು ಹೊಂದದೇ ಇರುವುದು.

೫. ತಳ ಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗಲು ಸಾಧ್ಯವಿದೆ. ತಳ ಸಮುದಾಯಗಳು ನೇರ ಚುನಾವಣೆಗಳಲ್ಲಿ ಭಾಗವಹಿಸದೆ, ಒತ್ತಡ ಹೇರಬಲ್ಲಂತ ಒಂದು ವಿಶಾಲವಾದ ಸಂಘಟನೆಯಾಗಿ, ಅಧಿಕಾರಸ್ಥರು ನೀತಿ–ನಿಯಮ ರೂಪಿಸುವಲ್ಲಿ ತಮ್ಮ ಸಂಪೂರ್ಣ ಪ್ರಭಾವ ದಿಸೆಯಲ್ಲಿ ಮೊದಲು ಕೆಲಸ ಮಾಡಬೇಕಿದೆ. (ಸದ್ಯದ ಸನ್ನಿವೇಶದಲ್ಲಿ ಆರ್.ಎಸ್.ಎಸ್. ಬಿ.ಜೆ.ಪಿ.ಯನ್ನು ನಿಯಂತ್ರಿಸುವ ರೀತಿಯಲ್ಲಿ ಅನ್ನಬಹುದು)

ಇವತ್ತಿನ ಯಾವ ಜನಪರ ಶಕ್ತಿಗಳೂ ಸಶಕ್ತವಾಗಿಲ್ಲದಿರುವುದಕ್ಕೆ ಕಾರಣ ಅವು ಸಮಾಜದ ಎಲ್ಲ ವರ್ಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಲು ವಿಫಲವಾಗಿರುವುದೇ ಆಗಿದೆ. ಅದೂ ಅಲ್ಲದೆ ಬಹಳಷ್ಟು ಚಳವಳಿಗಳು, ಅವುಗಳ ನಾಯಕರುಗಳ ವೈಯಕ್ತಿಕ ಹಿತಾಸಕ್ತಿಗಳಿಂದಾಗಿ ಅಧಿಕಾರಸ್ಥರ ಬಾಲಂಗೋಚಿಗಳಾಗಿ ತಮ್ಮ ಮೊನಚು ಕಳೆದುಕೊಂಡಿವೆ. ಆಮೇಲೆ ನಮ್ಮ ಎಲ್ಲಾ ಚಳವಳಿಗಳೂ ದೀರ್ಘಕಾಲೀನ ಗುರಿಗಳನ್ನು ಹೊಂದದೇ ಇರುವುದು. ಇನ್ನು ನೀವು ಕೇಳಿದ ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಲು ಹೀಗೆ ಸಾಧ್ಯ?

೬. ಈಗಿರುವ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ದಲಿತ, ಹಿಂದುಳಿದ, ಮಹಿಳೆಯರ, ಅಲ್ಪಸಂಖ್ಯಾತರ ಹಿತ ಕಾಪಾಡುವಂತಹ ಒಂದು ವ್ಯವಸ್ಥೆಯನ್ನು ನಿರ್ಮಿಸಬೇಕಿದೆ. ಆ ದಿಸೆಯಲ್ಲಿ ನಮ್ಮ ರಾಜಕಾರಣ ಸಾಗಬೇಕಿದೆ. ಈ ದಾರಿ ದುರ್ಗಮವಾಗಿದೆ. ನಿಜ! ಆದರೆ ತಲುಪುವ ಗುರಿ ಸುಂದರವಾಗಿದೆ.

ಆದರೆ ಈ ದಾರಿಯಲ್ಲಿ ಹೇಗೆ ಸಾಗಬಹುದು ಎಂಬುದನ್ನು ನಾವೆಲ್ಲರೂ ಒಂದೆಡೆ ಕೂತು, ಯಾವುದೆ ತೆರನಾದ ಪೂರ್ವಾಗ್ರಹಗಳೂ ಇಲ್ಲದೆ. ಚಿಂತಿಸಿ–ನಿರ್ಧಾರ ತೆಗೆದುಕೊಳ್ಳಬೇಕಿದೆ.

ಈಗ ಸದ್ಯದ ಸಮಸ್ಯೆಯೇನೆಂದರೆ ಜನಪರ–ಜೀವನ್ಮುಖಿ ಕಾಳಜಿಗಳುಳ್ಳ ನಾವೆಲ್ಲರೂ ಹೇಗೆ ಮತ್ತು ಯಾವಾಗ ಯಾವ ವೇದಿಕೆಯ ಅಡಿಯಲ್ಲಿ ಸೇರಬೇಕೆಂಬುದೇ ಆಗಿದೆ.

ಅಂತದೊಂದು ದಿಕ್ಕೆಟ್ಟ ಸ್ಥಿತಿಯಲ್ಲಿ ಇವತ್ತು ನಾವೆಲ್ಲ ನಿಂತಿದ್ದೇವೆ.' □

ಅವಕಾಶವಾದಿ ಸಿದ್ಧಾಂತಕ್ಕೆ ಬಲಿ

(ಹಿಂದಿನ ಪುಟದಿಂದ)

೬ ಅಧಿಕಾರಸ್ಥ ರಾಜಕೀಯ ಪಕ್ಷಗಳ ಬಗ್ಗೆ ಏನನ್ನೂ ಹೇಳುವ ಹಾಗಿಲ್ಲ. ಮುಂದಿನ ರಾಜಕಾರಣದಲ್ಲಿ ಏನಾದರೂ ಸಕಾರಾತ್ಮಕ ಬದಲಾವಣೆಗಳ ನಿರೀಕ್ಷೆ ನಮಗೆ ಇರಬೇಕಾದರೆ ಅದು ಮುಂಬರುವ ಕಾಲದಲ್ಲಿ ಚಳವಳಿಗಳು ನಡೆಯಬೇಕಾದ ಹಾದಿಯಲ್ಲಿ ಪಡೆದುಕೊಳ್ಳಬೇಕಾದ ರೂಪಾಂತರದಲ್ಲೇ ಇದೆ ಎಂಬುದು ನನ್ನ ನಂಬಿಕೆ. ಯಾವ ಐಕ್ಯತೆಯನ್ನು ನಾವು ಚಳವಳಿಗಳ ನಡುವೆ ಬಯಸುತ್ತಿದ್ದೇವೆಯೋ, ಯಾವ ರೀತಿ ಅವು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗಬೇಕೆಂದು ನಾವು ಬಯಸುತ್ತಿದ್ದೇವೆಯೋ ಅದು ಆಗಬೇಕೆಂದರೆ ಕೆಲವು ಮೂಲಭೂತ ಅವಶ್ಯಕತೆಗಳಿವೆ. ಅ) ತಳಮಟ್ಟದಿಂದ ಕಟ್ಟಬೇಕಾದ ಹೋರಾಟ, ಆ) ಹೋರಾಟದಲ್ಲಿ ವಿವಿಧ ಶಕ್ತಿಗಳ ಐಕ್ಯತೆ, ಇ) ಜನರ ನಿತ್ಯದ ಸಮಸ್ಯೆಗಳು ಮತ್ತು ಇಡೀ ನಾಡಿನ ಭವಿಷ್ಯವನ್ನು ನಿರ್ಧರಿಸುತ್ತಿರುವ ಆಗುಹೋಗುಗಳಿಗೆ ಸಂಬಂಧಿಸಿದ ಹೋರಾಟಗಳ ನಡುವೆ ಸರಿಯಾದ ಐಕ್ಯತೆ. ಈ) ನಿರಂತರ ಎಚ್ಚರದ, ಆತ್ಮವಿಮರ್ಶೆಯ ಹೋರಾಟ ಮತ್ತು ಸಂವಾದ. □

ಕಪ್ಪು ಹಣ ಮತ್ತು ಜಾತಿವಾದಗಳೇ ನಿರ್ಣಾಯಕ

ವಿ.ಬಿ ವೀರಭದ್ರಪ್ಪ
ಸಂಸ್ಕೃತಿ ಚಿಂತಕರು

೧. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆಳುವ ಪಕ್ಷ ಮತ್ತು ವಿರೋಧ ಪಕ್ಷ ಎಂದು ಎರಡು ಪಕ್ಷಗಳು ಮುಖ್ಯವಾಗಿರಬೇಕು. ಅವುಗಳ ಬೆಂಬಲದಲ್ಲಿ ಸಣ್ಣ ಸಣ್ಣ ರಾಜಕೀಯ ಗುಂಪುಗಳು ಇರಬಹುದು. ಆ ಪಕ್ಷಗಳು ತತ್ವ, ಸಿದ್ಧಾಂತಗಳ ಆಧಾರದ ಮೇಲೆ ಕೆಲಸ ಮಾಡುತ್ತಿರಬೇಕು. ಆದರೆ ಇಂದು ಮುಖಂಡರ ಕಪ್ಪು ಹಣ ಮತ್ತು ಜಾತಿವಾದಗಳೇ ನಿರ್ಣಾಯಕ ಪಾತ್ರ ವಹಿಸುತ್ತವೆ. ಅದರ ಪರಿಣಾಮವೇ ಇಂದಿನ ರಾಜಕೀಯ ದುಸ್ಥಿತಿಗೆ ಕಾರಣ.

೨. ಇದೆ. ಆದರೆ ಅದು ಈಗ ಕಾಂಗ್ರೆಸ್ ಮತ್ತು ಬಿಜೆಪಿ ಎಂಬ ಎರಡು ಮುಖ್ಯ ಪಕ್ಷಗಳ ನಾಯಕತ್ವದ ಮೇಲೆ ಆಧರಿಸಿದೆ.

೩. ಸಮಾಜವಾದವನ್ನು ಆಧಾರವಾಗುಳ್ಳ ಎಡ ಮತ್ತು ಕಾಂಗ್ರೆಸ್ ಪಕ್ಷಗಳು ಒಂದುಗೂಡಬೇಕೆಂಬ ಬಯಕೆ ಬಹುಕಾಲದಿಂದ ಇದೆ. ಆದರೆ ಅವು ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳಲು ಸಿದ್ಧವಿಲ್ಲ. ನಾಯಕರ ಅಹಂ ಮತ್ತು ಅಧಿಕಾರ ದಾಹಗಳೇ ಇದಕ್ಕೆ ಕಾರಣ.



ರಾಜಕಾರಣ ಚರ್ಚೆ

೪. ಇಂದು ನಿಜವಾದ ಜನಪರ ಚಳವಳಿಗಳು ಎಲ್ಲೂ ಕಾಣುತ್ತಿಲ್ಲ. ಅವು ಒಂದಲ್ಲ ಒಂದು ರಾಜಕೀಯ ಪಕ್ಷದ ಆರ್ಥಿಕ ಬೆಂಬಲದಿಂದಲೇ ತಮ್ಮ ಚಳವಳಿಗಳಲ್ಲಿ ತೊಡಗಿವೆ. ಆದ್ದರಿಂದ ಅವು ಮಹತ್ವವಾಗಿ ಕಾಣುತ್ತಿಲ್ಲ.

೫. ತಳ ಸಮುದಾಯಗಳು ಸಮಾಜವಾದಿ ತತ್ವಗಳನ್ನು ನಂಬಿ ಆಚರಣೆಯಲ್ಲಿ ತರಲು ಸಿದ್ಧವಿರುವ ಯಾವುದಾದರೂ ಒಂದು ಪ್ರಬಲವಾದ ಪಕ್ಷಕ್ಕೆ ಬೆಂಬಲವಾಗಿ ನಿಂತು ಅದರಲ್ಲಿ ವಿಲೀನವಾಗಬೇಕು. ತಳ ಸಮುದಾಯದ ಒಂದು ಗುಂಪು ಇನ್ನೊಂದನ್ನು ಅಸೂಯೆಯಿಂದ ನೋಡುವುದನ್ನು ನಿಲ್ಲಿಸಿ, ಒಟ್ಟುಗೂಡಿ ಮೇಲುಮಟ್ಟವನ್ನೂ ತಲುಪಲು ಹೋರಾಡಬೇಕು.

೬. ರಾಜಕಾರಣದಲ್ಲಿ ಪ್ರಜಾಪ್ರಭುತ್ವ ಭದ್ರವಾಗಿ ಬೇರೂರಬೇಕಾದರೆ ಸಣ್ಣ ಸಣ್ಣ ಪಕ್ಷಗಳು ಒಂದಲ್ಲ ಒಂದು ಪ್ರಬಲಪಕ್ಷದಲ್ಲಿ ವಿಲೀನವಾಗಿ ಅಂತಿಮವಾಗಿ ಎರಡು ಪಕ್ಷಗಳು ಗಟ್ಟಿಗೊಳ್ಳಬೇಕು. ಆಗ ಮಾತ್ರ ಕರ್ನಾಟಕದ ರಾಜಕೀಯ ಸುಸ್ಥಿರವಾಗಿ ಜನಪರ ಕಾರ್ಯಗಳಲ್ಲಿ ತೊಡಗಲು ಸಾಧ್ಯವಾಗಬಹುದು. □

ಬರಬಂದಿದೆ ನೀರಿಗೆ, ನೀತಿಗೆ ಮತ ಮಾರಲ್ಪಡುತ್ತಿದೆ ಅಗ್ಗದ ರೇಟಿಗೆ

(೨೯ನೇ ಪುಟದಿಂದ)

ನಾಯಕರು, ತಳಸಮುದಾಯಗಳು ಒಗ್ಗಟ್ಟಾಗಿ ಶಕ್ತಿಯುತವಾಗಿ ಬೆಳೆದು ನಿಲ್ಲಲು ಬಿಡುವರೆ? ಅವರು ನಿರ್ಮಿಸಿದ ಜಾತಿ ಚಕ್ರವ್ಯೂಹದಿಂದ ತಳದ ಜನ ಇನ್ನೂ ಹೊರ ಬಂದಿಲ್ಲ. ಖೆಡ್ಡಾದೊಳಗೆ ಬಿದ್ದ ಸಲಗಗಳಂತೆ ಒದ್ದಾಡುತ್ತಿದ್ದಾರೆ. ಕೆಲವು ಚಿಲ್ಲರೆ ಆಸೆ ಆಮಿಷೆಗಳಿಗೆ ಬಲಿಯಾಗಿ ತಳದ ಜನರ ತಳಹದಿ ಹುದುಲಾಗುತ್ತಿದೆ. ಅಂಬೇಡ್ಕರರನ್ನು ಒಂದು ಜಾತಿ ಜನಾಂಗದ ನಾಯಕನನ್ನಾಗಿ ಪ್ರತಿಬಿಂಬಿಸಲಾಗಿದೆ. ಅವರು ನೋವುಂಡ ಎಲ್ಲಾ ಜಾತಿ ಜನಾಂಗದ ನಾಯಕನೆಂಬ ಭಾವನೆ ಎಲ್ಲರಲ್ಲಿ ಬರಬೇಕು.

ಹೆಣ್ಣು-ಗಂಡು ಬದುಕು ಬಂಡಿಯ ಎರಡು ಚಕ್ರಗಳಿದ್ದಂತೆ, ಅವು ಸದಾ ಚಾಲನೆಯಲ್ಲಿರಲು ಅವುಗಳನ್ನು ಒಂದೇ ಸೂತ್ರದಲ್ಲಿ ಬಂಧಿಸುವ ಕಡಾಣಿಯ ಇರುಸು ಭದ್ರವಾಗಿರಬೇಕು. ರಾಜಕೀಯರಂಗದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿಕೊಡಬೇಕು. ತುಟಿ ಹೊಲಿಯಲ್ಪಟ್ಟಿರುವ ಅವರಿಗೆ ತಮ್ಮ ನೋವನ್ನು ಅಭಿವ್ಯಕ್ತಿಗೊಳಿಸಲು, ಜನಪರ ಚಳವಳಿಗಳಲ್ಲಿ ಭಾಗವಹಿಸಲು ಪ್ರೇರೇಪಿಸಬೇಕು. ತಳಸಮುದಾಯಗಳು ನಿರಂತರವಾಗಿ ಒಗ್ಗೂಡಿ ದೇಶ ಕಟ್ಟುವ ಕೆಲಸದಲ್ಲಿ ಇನ್ನರ್‌ವ್ಹೀಲಿನಂತೆ ಶ್ರಮಿಸಬೇಕು. ಈ ಕೆಲಸ ಒಂದು ದಿನಕ್ಕೆ ಫಲಿಸುವುದೆಂಬ ಭ್ರಮೆಯಲ್ಲಿರಬಾರದು. ನೈತಿಕತೆಗೆ ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡಬೇಕು. ಫಲಕ್ಕಾಗಿ ಸಹನೆಯಿಂದ, ತೆರೆದ ಕಣ್ಣುಗಳಿಂದ, ಬಿಚ್ಚಿದ ಹೃದಯದಿಂದ ಶಬರಿಯಂತೆ ಕಾಯಬೇಕಾಗುತ್ತದೆ.

ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ.ಗೆ ಸಿಕ್ಕ ಜಯ ಕರ್ನಾಟಕದಲ್ಲಿ ಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ಕರ್ನಾಟಕ ಸರ್ವೋದಯಪಕ್ಷ ಈಗೀಗ ಕಣ್ಣು ತೆರೆದುಕೊಂಡಿದೆ.

ಅದರಂತೆ ಆರ್.ಪಿ.ಐ. ಇನ್ನು ತಾಯಿಯ ಗರ್ಭದಿಂದ ಹೊರಬಂದಿಲ್ಲ. ಇವುಗಳ ಕುರಿತು ಭವಿಷ್ಯ ಹೇಳಲು ಹೊರಟರೆ ಹುಟ್ಟುವ ಮುನ್ನ ಕೂಸಿಗೆ ಕುಲಾಯಿ ಹೊಲಿದಿಟ್ಟಂತಾಗುತ್ತದೆ. ಮುಂದಿನ ದಿನ ಮಾನಗಳಲ್ಲಿ ತಳ ಸಮುದಾಯಗಳು ಅಧಿಕಾರ ರಾಜಕಾರಣದ ನಿರ್ಣಾಯಕ ಶಕ್ತಿಗಳಾಗುತ್ತಾರೆ ಎಂದು ಆಸೆಯಿಂದ ನಿರೀಕ್ಷಿಸೋಣ. ಯಾಕೆಂದರೆ ಆಸೆಯ ಮೇಲೆ ಈ ಜಗ ನಿಂತಿದೆ. ಕೂಡಿಕೊಳ್ಳಲಿ ಜನಗಣಮನ ಕೂಡಲಸಂಗಮವಾಗಲು ಉಸಿರಾಡಲಿ ಜನರೆದೆತತ್ತಿ ಮೂಡಣಕುಲುಮೆ ಕೆಂಪಾಗಲು.

೬. ಆಳರಸರ ಕುತಂತ್ರಕ್ಕೆ ಬಲಿಯಾಗದೆ ಪ್ರಜಾತಂತ್ರವನ್ನು ಉಳಿಸಿ ಬೆಳೆಸುವ ದಲಿತರ, ಹಿಂದುಳಿದ ವರ್ಗಗಳ ಮಹಿಳೆಯರ ಹಿತಕ್ಕಾಗಿ ಶ್ರಮಿಸುವಂತಿರಬೇಕು. ಎಡಪಂಥೀಯ, ಜಾತ್ಯತೀತ ಮನೋಭಾವವುಳ್ಳವರು ಒಂದೇ ಸೂರಿನಡಿ ಬಂದು, ನಾಡನ್ನು ಭಾಷೆಯನ್ನು, ಸಂಸ್ಕೃತಿಯನ್ನು ರಕ್ಷಿಸುವ ಕಾರ್ಯದಲ್ಲಿ ನಿರಂತರಾಗಬೇಕು. ಕನ್ನಡಿಗರ ಶಾಂತ, ಸೌಹಾರ್ದತೆಯ ಸ್ವಭಾವವನ್ನು ದೌರ್ಬಲ್ಯವೆಂದು ತಿಳಿದಿರುವ ನಮ್ಮ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಸರಕಾರಗಳು ಇಲ್ಲಸಲ್ಲದ ಕ್ಯಾತೆ ತೆಗೆದು ನಮ್ಮ ನೆಲ, ಜಲ ನುಂಗಿ ಹಾಕಲು ಹುನ್ನಾರದ ಜಾಲಗಳನ್ನು ಹೆಣೆಯುತ್ತಿವೆ. ತಮಗಿರುವ ರಾಜಕೀಯ, ವರ್ಚಸ್ಸು ಸಾಮಾರ್ಥ್ಯವನ್ನು ಉಪಯೋಗಿಸಿಕೊಂಡು ಕೇಂದ್ರ ಸರಕಾರವನ್ನು ತಮ್ಮ ಕೈಗೊಂಬೆಯನ್ನಾಗಿಸಿ ಆಟವಾಡಿಸುತ್ತಿದ್ದಾರೆ.

ಅದಕ್ಕಾಗಿ ನಮ್ಮ ನೆಲ, ಜಲ ರಕ್ಷಿಸುವ ರಾಜ್ಯದ ಹಿತಾಸಕ್ತಿ ಕಾಪಾಡುವ ಇಚ್ಛಾಶಕ್ತಿಯುಳ್ಳ ತ್ಯಾಗದ ಮನೋಭಾವದ ಶಾಸಕರ ಪಡೆ ರಾಜ್ಯದಲ್ಲಿರಬೇಕು. ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ, ಗಾಂಧಿ ಚಿಂತನೆಗಳನ್ನು ನನಸಾಗಿಸುವ ಆಶಯವನ್ನು ಹೊಂದಿರಬೇಕು. ಪಕ್ಷಗಳು ದೇಶ ಕಟ್ಟಬೇಕೇ ಹೊರತು ಕೆಡವಬಾರದು. ಹೃದಯಗಳನ್ನು ಬೆಸೆಯಬೇಕೇ ಹೊರತು ಮುರಿಯಬಾರದು, ಕಣ್ಣು ತೆರಿಸಬೇಕೇ ಹೊರತು ಕುರುಡಾಗಿಸಬಾರದು. ನನ್ನ ಎರಡು ಕಣ್ಣು ಕುರುಡಾದರೂ ಪರವಾಯಿಲ್ಲ ಅವನ ಒಂದು ಕಣ್ಣು ಕುರುಡಾಗಿಸಬೇಕೆಂಬ ಮತ್ಸರದ ರಾಜಕೀಯ ದೂರ ಮಾಡಬೇಕು. ಮಾನವೀಯ ಅಂತಃಕರಣದ ರಾಜಕಾರಣ ಮೂಡಿಬರಬೇಕು.

ನಿಜ ಮಾನವತೆಯ ಮುಖ ಹೊತ್ತು ಒಳಹೊರಗೆ ಸಮಾನತೆ ಬಯಸುವ ಗುರಿ ಜನವಾದಿ ಪಕ್ಷಗಳು ಹೊಂದಿರಬೇಕು. ನಮ್ಮ ಮತ ಮಾನವತೆಯ ಅಭಿಮತವಾಗಬೇಕು. ನಾನಾ ಪ್ರಲೋಭನೆಗಳನ್ನೊ ಅಧಿಕಾರಕ್ಕೆ ಬರುವ ನಾಯಕರನ್ನು ದೂರವಿಡಬೇಕು. ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ಕಪ್ಪೆ ಆರ್ಭಟರನ್ನು ಮಟ್ಟಹಾಕುವ ಛಾತಿ ಮೂಡಿಬರಬೇಕು.

ಇವೆಲ್ಲಾ ಕನಸುಗಳು, ನನಸಾಗುತ್ತವೆ ಎಂದು ಹೇಳಲಾರೆ. ಕಂಗಳಿದ್ದವರು ಕನಸು ಕಾಣುವುದು ಸಹಜ ಹೂಬಿಡಲು ತವಕದಿಕಾಯುತಿದೆ ಈ ನಾಡ ಮಣ್ಣು ಇಂದಲ್ಲ, ನಾಳೆ ಅರಳಬಹುದು ಸುಗಂಧದ ಹೂಕಣ್ಣು. □

ಋತುಗಾನ

ಮಾಗಿಯ ಚಳಿ ಕಾಲ್ತೆಗೆಯಿತು
ಕಡು ಬೇಸಗೆಯ ಸೂರ್ಯೋದಯಕೆ
ರಾವು ಬಡಿದ ರಾತ್ರಿಗಳು ಬೆಳಕು
ಕಂಡವು ಚಂದಿರನುದಿಸಿದ ಇರುಳಿನಲಿ
ಮಾವಿನ ಎಲರಲಿ ಸುಗ್ಗಿ ಕಂಡು
ಕೋಗಿಲೆಗಳಿಗೂ ದನಿ ಬಂತು
ಬಯಲು ಹಸಿರು ತುಂಬಿ
ವಿಶ್ರಾಂತಿಗಿಳಿಯಿತು ಸುಗ್ಗಿಯ ನೆವದಲಿ
ವಸಂತದ ಪಲ್ಲಟಗಳು ಶ್ರುತಿಯಾದವು
ಋತುಗಾನದ ಪಲ್ಲವಿಗೆ
ಗಾಳಿ ನಾದ ತಪ್ಪಿ ಜೋಮು ಹಿಡಿದು
ಮರಮರಗಳ ಕೊನರುಗಳಲಿ
ಜೀವ ಹೂತಿಟ್ಟಿತು ಸೃಷ್ಟಿ
ಮುಸುಕಿತು ಮೋಡ ಕವಿಯಿತು ಮಂಕು
ಎತ್ತಲೋದರೂ ಕತ್ತಲು
ಕಟ್ಟಿತು ಗಬ್ಬ ತೊನೆಯಿತು ದೇಹ
ಮಿಂಚು ಮಿಂಚುಗಳ ಗೊಂಚಲು
ಧಡಭಡ ಗುಡಿಗಿಸಿ ಧರಧರ ನಡುಗಿಸಿ
ಆರ್ಭಟಿಸಿ ಕೂಗಿತು ಕಾರ್ಮುಗಿಲು
ಹುಣ್ಣಿಮೆ ಚಂದಿರ ಹಗಲಿನ ಸೂರ್ಯ
ಚಿಲಿಪಿಲಿ ಹಕ್ಕಿ ಬಾನಿನ ಚುಕ್ಕಿ
ಓಟಕಿತ್ತವು ಮೆಲ್ಲಗೆ
ಬಾನಲಿ ಗುಡುಗು ಬಣ್ಣದ ಬೆಡಗು
ವರ್ಣಸಲಸದಳ ಚಿತ್ತಾರ
ಉಸಿರು ಉಸಿರಿಗೂ ಮರಗಿಡ ಬಳ್ಳಿಗೆ
ವರ್ಷಧಾರೆಯ ಓಂಕಾರ
ಕಣ್ಣಿಗೆ ಹಬ್ಬ ಮಣ್ಣಿಗೆ ಸುಗ್ಗಿ
ನೆಲತಣಿಯಿತು ಮನದಣಿಯೆ
ಶರದೃತುವಿನ ವರ್ಷವಿಲಾಸ
ಹಾಡನು ಕಟ್ಟಿತು ಬಾನ್‌ಬುವಿಗೆ
ಉಗುರು ಬೆಚ್ಚಗಿನ ನೀರು
ಈ ಋತುವಿನಲಿ ಎಂಥಾ ಹಿತ!
ಮನಸು ಒಳಗೆ ಚಳಿ ಕೊರೆಗೆ

ಲಕಲಕನೆ ಹೊಳೆಯುತ್ತಿತ್ತು
ಗುಡಾರದ ಒಳಗೆ ಕಂಬಳಿ ಮುಚ್ಚಿಕೂತ
ಮುದುಕ ಬೀಡಿ ಸರಸರನೆ ಸೆಳೆದು
ಫಳಕ್ಕನೆ ಸೆಳೆದ ಕಾಫಿ ಲೋಟವ
ಏನು ಸೌಮ್ಯ ಹವಾಮಾನ
ಕಂಡ ಕಂಡಲೆಲ್ಲಾ ಏನೊ ಹೊಗೆ
ಜಗತ್ತೆ ನುಂಗುವ ಕವಳ
ಕಾರ್ತಿಕ ಮಾಸದ ಬೆಳಗು
ಸ್ವಲ್ಪ ನಿಧಾನ
ಸರಿಯುತ್ತಲೆ ಇರುಳು
ಮರಮರದ ಕುಡಿಗಳಿಗೆ
ಏನೊ ಸ್ಪರ್ಶಿಸುವ ತವಕ
ಕುದಿವ ನೀರ ಪಾತ್ರೆಯ
ಸುತ್ತ ಮಂಜುಗಟ್ಟಿದ ವಾತಾವರಣ
ಕಣ್ಣುಜ್ಜಿ ಏಳುವ ಮಗು
ಇಷ್ಟು ಬೇಗ ಯಾಕೆ ಎದ್ದಿ
ಅಮ್ಮನ ಒತ್ತಾಯಕ್ಕೆ
ಮತ್ತೆ ಮಲಗುವುದು
ಲಂಗು ಲಗಾಮಿಲ್ಲದ ಕುದುರೆ
ನಡುಬಗ್ಗಿಸಿ ಮಟಾಮಟಾ ಮಧ್ಯಾಹ್ನವಾದರೂ
ಈ ಋತುವಿಲಾಸದ ಪಲ್ಲವಿ
ಏನೂ ಕೇಳುವುದಿಲ್ಲ
ಏನೂ ಹಾಡುವುದಿಲ್ಲ
ಎರಡು ನಿಮಿಷದ ಮೌನವೊಂದನ್ನು ಬಿಟ್ಟು!

○ ಗುಂಡೀಗೆರೆ ವಿಶ್ವನಾಥ

ಯೋಜಿತ ನರಮೇಧ, ನಿರಾಕರಣೆ ಮತ್ತು ಸಂಭ್ರಮ

೨೦೦೨ರಲ್ಲಿ ಗುಜರಾತ್ ರಾಜ್ಯದಲ್ಲಿ ಮುಸ್ಲಿಂ ಸಮುದಾಯದವರ ನರಮೇಧ ನಡೆಯಿತು. ನರಮೇಧ ಎಂಬ ಪದವನ್ನ ಬುದ್ಧಿ ಪೂರ್ವಕವಾಗಿ ಹಾಗೂ ವಿಶ್ವಸಂಸ್ಥೆ ಒಡಂಬಡಿಕೆಯ ಆರ್ಟಿಕಲ್ ೨ರಲ್ಲಿ ನೀಡಿರುವ ಅರ್ಥ ವಿವರಣೆಯನ್ನು ನೆನಪಿಟ್ಟುಕೊಂಡು ಬಳಸುತ್ತಿದ್ದೇನೆ. ಈ ಒಡಂಬಡಿಕೆ ನರಮೇಧ ಎಂಬ ಅಪರಾಧದ ತಡೆ ಮತ್ತು ಶಿಕ್ಷೆಗೆ ಸಂಬಂಧಪಟ್ಟಿದ್ದು. ಬಗೆಹರಿಯದಿದ್ದ ಅಪರಾಧಕ್ಕೆ ಸಂಘಟಿತ ಶಿಕ್ಷೆಯ ರೂಪದಲ್ಲಿ ನರಮೇಧ ಪ್ರಾರಂಭವಾಯಿತು. ಬಗೆಹರಿಯದಿದ್ದ ಅಪರಾಧ ಯಾವುದೆಂದರೆ, ೫೯ ಹಿಂದೂ ಯಾತ್ರಾರ್ಥಿಗಳಿದ್ದ ರೈಲ್ವೆ ಬೋಗಿಯೊಂದಕ್ಕೆ ಬೆಂಕಿ ಹಚ್ಚಿ ಒಳಗಿದ್ದವರನ್ನು ಜೀವಂತವಾಗಿ ಸುಡಲಾಯಿತು, ಪ್ರತೀಕಾರವನ್ನು ಜಾಗರೂಕತೆಯಿಂದ ಯೋಜಿಸಿ ೨೦೦೦ ಮುಸಲ್ಮಾನರನ್ನು ಹಾಡುಹಗಲಲ್ಲೇ ಶಸ್ತ್ರಧಾರಿ ಕೊಲೆಗಡುಕರು ಕೊಚ್ಚಿ ಹಾಕಿದರು.

ಅರುಂಧತಿ ರಾಯ್
ಅನು: ದು. ಸರಸ್ವತಿ

ನಾನೆಂದೂ ಹ್ರಂಟ್ ಡಿಂಕ್ (Hrant Dink) ಅನ್ನು ಭೇಟಿಯಾಗಿಲ್ಲ. ಅದು ನನ್ನ ದೌರ್ಭಾಗ್ಯ. ನನಗೆ ಗೊತ್ತಿರುವಂತೆ ಅವನು ಬರೆದದ್ದು ತಾನು ಹೇಳಿದ್ದನ್ನ, ಮಾಡಿದ್ದನ್ನ ಮತ್ತು ಬದುಕಿದ್ದನ್ನ. ಅವನ ಶವಯಾತ್ರೆಯಲ್ಲಿ "ನಾವೆಲ್ಲರೂ ಅರ್ಮೇನಿಯರು", "ನಾವೆಲ್ಲರೂ ಹ್ರಂಟ್ ಡಿಂಕ್" ಎಂಬ ಬ್ಯಾನರ್‌ಗಳನ್ನು ಹಿಡಿದ ಒಂದು ಲಕ್ಷ ಜನ ಚಳಿಗಾಲದಲ್ಲಿ ತೋಯ್ದು, ಇಸ್ತಾನ್ ಬುಲ್‌ನ ಬೀದಿಗಳಲ್ಲಿ ನೀರವ ಮೌನವನ್ನೇ ಹೊದ್ದು ನಡೆಯುತ್ತಿದ್ದರು. ಒಂದು ವರ್ಷದ ಹಿಂದೆ ನಾನೇನಾದರೂ ಅಲ್ಲಿದ್ದಿದ್ದರೆ, ನಾನೂ ಅದರಲ್ಲಿ ಪಾಲ್ಗೊಂಡಿರುತ್ತಿದ್ದೆ 'ಒಂದೂವರೆ ಮಿಲಿಯನ್ + ಒಂದು '' ಎಂಬ ಬ್ಯಾನರ್ ಹಿಡಿದು...

ಅವನ ಶವದ ಪಕ್ಕ ನಡೆಯುತ್ತ ನನ್ನೊಳಗೆ ಯಾವ ಯೋಚನೆಗಳು ಗುಯ್‌ಗುಟ್ಟಿರುತ್ತಿದ್ದವೋ. ಬಹುಶಃ ಅರಾಕ್ಸಿ ಬರ್ಸಾಮಿಯನ್‌ಳ ದನಿಯಲ್ಲಿ ಅವಳ ಹಾಗೂ ಅವಳ ಕುಟುಂಬದವರೊಂದಿಗೆ ನಡೆದ ಕಥೆಯನ್ನ ಕೇಳಿರುತ್ತಿದ್ದೆ. ಅವಳು ನನ್ನ ಮಿತ್ರ ಡೇವಿಡ್ ಬರ್ಸಾಮಿಯನ್‌ನ ತಾಯಿ. ೧೯೧೫ರಲ್ಲಿ ಅವಳು ಹತ್ತು ವರ್ಷದ ಬಾಲೆ. ಅವಳು ಈಗ ದಿಯಾರ್‌ಬಕಿರ್ ಎಂದು ಕರೆಯುವ ಐತಿಹಾಸಿಕ ನಗರ ದಿಕ್ರನ್‌ಗರ್ಟ್‌ನ ಉತ್ತರಕ್ಕಿದ್ದ ದುಬ್ನೆ ಹಳ್ಳಿಯವಳು. ಅವಳ ಹಳ್ಳಿಯನ್ನು ಮುತ್ತಿದ ಮಿಡತೆಗಳ ಹಿಂಡು ಅವಳಿಗೆ ನೆನಪಿದೆ. ಹಳ್ಳಿಯ ಹಿರಿಯರು ಭೀತರಾಗಿದ್ದರು. ಮಿಡತೆಗಳು ಕೆಟ್ಟ ಶಕುನವೆಂದು ಅವರ ಮೂಳೆಯೊಳಗಿನ ಮಜ್ಜೆಗೆ ತಿಳಿದಿತ್ತು. ಅವರ ಭೀತಿ ಕೆಲವೇ ತಿಂಗಳುಗಳಲ್ಲಿ ನಿಜವಾಗಿತ್ತು. ಹೊಲದಲ್ಲಿ ಗೋಧಿ ತೆನೆಗಳು ಸುಗ್ಗಿಗೆ ಸಿದ್ಧವಾಗಿದ್ದವು.

ಅರಾಕ್ಸಿ ಬರ್ಸಾಮಿಯನ್ ಹೇಳಿದಳು: "ನಾವು ಹೊರಟಾಗ ನಮ್ಮ ಕುಟುಂಬದಲ್ಲಿ ೨೫ ಜನರಿದ್ದೆವು. ಎಲ್ಲ ಗಂಡಸರನ್ನೂ ಒಯ್ದರು. ನನ್ನ ತಂದೆಯನ್ನು ಎಲ್ಲಿ ನಿಮ್ಮ ಶಸ್ತ್ರಾಸ್ತ್ರಗಳು? ಎಂದು ಕೇಳಿದರು. ಮಾರಿದೆನೆಂದು ತಂದೆ ಹೇಳಿದರು. ಹೋಗಿ ತೆಗೆದುಕೊಂಡು ಬಾ ಎಂದರು. ತೆಗೆದುಕೊಂಡು ಬರಲು ಕರ್ದ್ ಪಟ್ಟಣಕ್ಕೆ ಹೊರಟ ಅವನನ್ನು ಹೊಡೆದು ಬಟ್ಟೆಯನ್ನೆಲ್ಲ ಕಳಚಿದರು. ನನ್ನ ತಾಯಿ ಹೇಳಿದರು; 'ಬೆತ್ತಲಾಗಿ ಅವನನ್ನು ಹಿಂತಿರುಗಿ ಬಂದಾಗ ಅವನನ್ನು ಜೈಲಿಗೆ ಹಾಕಿ ತೋಳುಗಳನ್ನು ಕತ್ತರಿಸಿದರು – ಅವನು ಜೈಲಿನಲ್ಲೇ ಸತ್ತ.' ಹೊಲದಲ್ಲಿದ್ದ ಎಲ್ಲ ಗಂಡಸರನ್ನೂ ಹಿಡಿದು ಕೈಗಳನ್ನು ಕಟ್ಟಿದರು, ಪ್ರತಿಯೊಬ್ಬರನ್ನೂ ಗುಂಡಿಕ್ಕಿ ಕೊಂದರು".

ಅರಾಕ್ಸಿ ಹಾಗೂ ಕುಟುಂಬದ ಇನ್ನಿತರ ಮಹಿಳೆಯರನ್ನು ಗಡಿಪಾರು ಮಾಡಿದರು. ಎಲ್ಲರೂ ಗತಿಸಿ ಹೋಗಿ ಬದುಕುಳಿದವಳು ಅರಾಕ್ಸಿಯೊಬ್ಬಳೆ. ಇತಿಹಾಸದ ಈ ಸತ್ಯ ಕಥೆಯನ್ನು ಟರ್ಕಿ ಸರ್ಕಾರ ಹಾಗೂ ಹಲವು ಟರ್ಕಿಯನ್ನರು ನಿರಾಕರಿಸುತ್ತಾರೆ.

ನಾನಿಲ್ಲಿ ಜಾಗತಿಕ ಬುದ್ಧಿಜೀವಿಯಾಗಿ ನಿಮಗೆ ಉಪನ್ಯಾಸ ನೀಡುತ್ತಿಲ್ಲ, ಅಥವ ೧೯೧೫ರಲ್ಲಿ ಅನಟೋಲಿಯದಲ್ಲಿ ನಡೆದ ಘಟನೆಗಳ ನೆನಪನ್ನು (ಅಥವ ಮರೆವು) ಆವರಿಸಿರುವ ಮೌನವನ್ನು ಕೆದಕುತ್ತಿಲ್ಲ. ಅದನ್ನು ಹ್ರಂಟ್ ಡಿಂಕ್ ಮಾಡಲು ಪ್ರಯತ್ನಿಸಿ ಪ್ರಾಣವನ್ನೇ ಬಲಿಯಾಗಿ ತೆತ್ತ. ಇಸ್ತಾನ್‌ಬುಲ್‌ಗೆ ಬಂದಿಳಿದ ದಿನ ಅಲ್ಲಿನ ಬೀದಿಗಳಲ್ಲಿ ಹಲವಾರು ಗಂಟೆಗಳು ಓಡಾಡಿದೆ. ಇಸ್ತಾನ್‌ಬುಲ್‌ನ ಜನ, ಅವರ ಸುಂದರ, ನಿಗೂಢ, ಪುಳಕಗೊಳಿಸುವ ನಗರವನ್ನು ನೋಡುತ್ತ ಹೊಟ್ಟೆಕಿಚ್ಚಾಯಿತು. ನಗರದಲ್ಲಿ ಇದ್ದಕ್ಕಿದ್ದಂತೆ ಗಂದೆ ಉಕ್ಕಿದಂತೆ

ಕಾಣುವ ಬಿಳಿ ಟೋಪಿ ತೊಟ್ಟ ಹುಡುಗರತ್ತ ನನ್ನ ಸ್ನೇಹಿತರೊಬ್ಬರು ಬೆರಳು ಮಾಡಿ ತೋರಿಸಿದರು. ಹ್ರಂಟ್‌ನನ್ನು ಕೊಲ್ಲುವಾಗ ಬಿಳಿ ಟೋಪಿ ಧರಿಸಿದ್ದ ಬಾಲ–ಕೊಲೆಗಾರನೊಂದಿಗೆ ತಮ್ಮ ಐಕ್ಯತೆಯನ್ನು ತೋರಲು ಆ ಹುಡುಗರು ಬಿಳಿ ಟೋಪಿ ಧರಿಸಿದ್ದಾರೆಂದು ಆತ ಹೇಳಿದ.

ಟರ್ಕಿಯ ಇಸ್ತಾನ್‌ಬುಲ್‌ನ ಟೋಪಿಧಾರರೊಂದಿಗಿನ ಯುದ್ಧ ನನ್ನದಲ್ಲ ನಿಮ್ಮದು. ನನ್ನ ದೇಶದ ಬೇರೆ ರೀತಿಯ ಟೋಪಿದಾರರ, ನೇತಾರರ ವಿರುದ್ಧ ಹೊಡೆದಾಡಲು ನನಗೆ ನನ್ನದೇ ಆದ ಯುದ್ಧವಿದೆ. ಈ ಯುದ್ಧಗಳಲ್ಲಿ ಅಂತಹ ವ್ಯತ್ಯಾಸವೇನಿಲ್ಲ. ಒಂದೇ ನಿರ್ಣಾಯಕ ವ್ಯತ್ಯಾಸವೆಂದರೆ, ಟರ್ಕಿಯಲ್ಲಿ ಮೌನ ಆವರಿಸಿದೆ; ಭಾರತದಲ್ಲಿ ಸಂಭ್ರಮವಿದೆ. ಯಾವುದು ಹೆಚ್ಚು ಕೆಟ್ಟದೆಂದು ನಿಜವಾಗಿಯೂ ನನಗೆ ಗೊತ್ತಿಲ್ಲ.

೨೦೦೨ರಲ್ಲಿ ಗುಜರಾತ್ ರಾಜ್ಯದಲ್ಲಿ ಮುಸ್ಲಿಂ ಸಮುದಾಯದವರ ನರಮೇಧ ನಡೆಯಿತು. ನರಮೇಧ ಎಂಬ ಪದವನ್ನ ಬುದ್ಧಿಪೂರ್ವಕವಾಗಿ ಹಾಗೂ ವಿಶ್ವಸಂಸ್ಥೆ ಒಡಂಬಡಿಕೆಯ ಆರ್ಟಿಕಲ್ ೨ರಲ್ಲಿ ನೀಡಿರುವ ಅರ್ಥ ವಿವರಣೆಯನ್ನು ನೆನಪಿಟ್ಟುಕೊಂಡು ಬಳಸುತ್ತಿದ್ದೇನೆ. ಈ ಒಡಂಬಡಿಕೆ ನರಮೇಧ ಎಂಬ ಅಪರಾಧದ ತಡೆ ಮತ್ತು ಶಿಕ್ಷೆಗೆ ಸಂಬಂಧಪಟ್ಟಿದ್ದು. ಬಗೆಹರಿಯದಿದ್ದ ಅಪರಾಧಕ್ಕೆ ಸಂಘಟಿತ ಶಿಕ್ಷೆಯ ರೂಪದಲ್ಲಿ ನರಮೇಧ ಪ್ರಾರಂಭವಾಯಿತು. ಬಗೆಹರಿಯದಿದ್ದ ಅಪರಾಧ ಯಾವುದೆಂದರೆ, ೫೯ ಹಿಂದೂ ಯಾತ್ರಾರ್ಥಿಗಳಿದ್ದ ರೈಲ್ವೆ ಬೋಗಿಯೊಂದಕ್ಕೆ ಬೆಂಕಿ ಹಚ್ಚಿ ಒಳಗಿದ್ದವರನ್ನು ಜೀವಂತವಾಗಿ ಸುಡಲಾಯಿತು, ಪ್ರತೀಕಾರವನ್ನು ಜಾಗರೂಕತೆಯಿಂದ ಯೋಜಿಸಿ ೨೦೦೦ ಮುಸಲ್ಮಾನರನ್ನು ಹಾಡುಹಗಲಲ್ಲೇ ಶಸ್ತ್ರಧಾರಿ ಕೊಲೆಗಡುಕರು ಕೊಚ್ಚಿಹಾಕಿದರು. ಫ್ಯಾಸಿಸ್ಟ್ ಪಡೆ ಸಂಘಟಿಸಿದ ಕೊಲೆಗಡುಕರಿಗೆ ಗುಜರಾತ್ ಸರ್ಕಾರ ಮತ್ತು ಆಡಳಿತಶಾಹಿ ಬೆಂಬಲವಾಗಿ ನಿಂತಿತು. ಮುಸ್ಲಿಂ ಮಹಿಳೆಯರ ಮೇಲೆ ಗುಂಪು ಅತ್ಯಾಚಾರವೆಸಗಿ ಜೀವಂತ ಸುಡಲಾಯಿತು. ಮುಸ್ಲಿಮರ ಅಂಗಡಿ ಗಳು, ಉದ್ದಿಮೆ, ಪವಿತ್ರ ಸ್ಥಳ ಮತ್ತು ಮಸೀದಿಗಳನ್ನು ವ್ಯವಸ್ಥಿತವಾಗಿ

ನಾಶಮಾಡಲಾಯಿತು. ೧೫೦೦೦೦ ಜನರು ಮನೆ ಕಳೆದುಕೊಂಡು ಬೀದಿ ಪಾಲಾದರು.

ಅವರಲ್ಲಿ ಬಹುಪಾಲು ಜನ ಇಂದಿಗೂ ಕಸದ ರಾಶಿಯ ಮೇಲೆ ನಿರ್ಮಿತವಾದ ಗೆಟ್ಟೋ (ಕೊಂಪೆ)ಗಳಲ್ಲಿ ವಾಸಿಸುತ್ತಿದ್ದಾರೆ. ನೀರು, ಚರಂಡಿ, ಬೀದಿ ದೀಪ, ಆರೋಗ್ಯ ಸೇವೆಗಳಿಲ್ಲದೇ. ಸಾಮಾಜಿಕವಾಗಿ, ಆರ್ಥಿಕವಾಗಿ ಬಹಿಷ್ಕೃತರಾಗಿ, ಎರಡನೇ ದರ್ಜೆ ಪ್ರಜೆಗಳಂತೆ ಬದುಕುತ್ತಿದ್ದಾರೆ. ಇದೇ ಹೊತ್ತಿನಲ್ಲಿ ಕೊಲೆಗಡುಕರನ್ನು ಪೊಲೀಸ್‌ರನ್ನು ಮತ್ತು ನಾಗರಿಕರನ್ನು ಸನ್ಮಾನಿಸಿ ಬಡ್ತಿ ನೀಡಲಾಗಿದೆ. ಈಗ ಎಲ್ಲವೂ ಸಹಜ ಸ್ಥಿತಿಗೆ ಮರಳಿದೆಯೆಂದು ಪರಿಗಣಿಸಲಾಗಿದೆ. ೨೦೦೮ರಲ್ಲಿ ರತನ್ ಟಾಟಾ ಮತ್ತು ಮುಕೇಶ್ ಅಂಬಾನಿ ಎಂಬ ಭಾರತದ ಬಹು ದೊಡ್ಡ ಉದ್ಯಮಿಗಳು ಗುಜರಾತ್ ರಾಜ್ಯವನ್ನು ಆರ್ಥಿಕ ಬಂಡವಾಳಕ್ಕೆ ಕನಸಿನ ಗಮ್ಯ ಸ್ಥಾನವೆಂದು ಘೋಷಿಸುವ ಮೂಲಕ 'ಸಹಜತೆ'ಯ ಮುದ್ರೆಯೊತ್ತಿದ್ದಾರೆ.

ರಾಷ್ಟ್ರೀಯ ಮಾಧ್ಯಮಗಳ ಪ್ರಾರಂಭದ ಅಬ್ಬರ ಈಗ ತಣ್ಣಗಾಗಿದೆ. ನರಮೇಧವನ್ನು ಗುಜರಾತಿಗಳ ಹೆಮ್ಮೆ, ಹಿಂದೂತನ, ಭಾರತೀಯತನದ ಪ್ರತೀಕವಾಗಿ ಲಜ್ಜೆಗೆಟ್ಟು ಸಂಭ್ರಮಿಸಲಾಯಿತು. ಈ ಸಂಚಿನ ವಿಷವನ್ನು ಕ್ರಮವಾಗಿ ಎರಡು ಚುನಾವಣೆಗಳಲ್ಲಿ, ಆಧುನಿಕತೆ, ಪ್ರಜಾತಂತ್ರದ ಭಾಷೆ ಮತ್ತು ಸಲಕರಣೆಗಳನ್ನು ಬಲು ಜಾಣತನದಿಂದ ಬಳಸಲಾದ ಪ್ರಚಾರಾಂದೋಲನದಲ್ಲಿ ಬಳಸಲಾಯಿತು. ಪ್ರಚಾರಾಂದೋಲನದಲ್ಲಿ ನರಮೇಧದ ಚುಕ್ಕಾಣಿ ಹಿಡಿದಿದ್ದ ನರೇಂದ್ರ ಮೋದಿ ಜನಪದ ನಾಯಕನಾಗಿದ್ದಾನೆ. ಬಿ.ಜೆ.ಪಿ ಪರವಾಗಿ ಇತರೆ ರಾಜ್ಯಗಳಲ್ಲೂ ಪ್ರಚಾರಮಾಡಲು ಆತನನ್ನು ಕರೆಯಲಾಗಿದೆ.

ನರಮೇಧಗಳು ಮುಂದುವರೆಯುತ್ತಿರುವಾಗ ಗುಜರಾತಿನ ನರಮೇಧವನ್ನು ಮಿಲಿಯಾಂತರ ಜನರ ಹತ್ಯೆಗೈದ ಕಾಂಗೊ, ರುವಾಂಡಾ ಮತ್ತು ಬೋಸ್ನಿಯಾದ ನರಮೇಧಗಳಿಗೆ ಹೋಲಿಸಲಾಗದು. ಈ ನರಮೇಧ ಭಾರತಕ್ಕೆ ಮೊದಲಿನದೇನೂ ಅಲ್ಲ (೧೯೮೪ರಲ್ಲಿ ೩೦೦೦ ಸಿಖ್ಖರನ್ನು ದೆಹಲಿಯ ಬೀದಿಗಳಲ್ಲಿ ಕೊಚ್ಚಿಹಾಕಲಾಯಿತು. ಕಾಂಗ್ರೆಸ್ ಪಕ್ಷದ ಶ್ರೀರಕ್ಷೆಯಿಂದ ಕೊಲೆಗಡುಕರು ದಂಡನೆಯಿಂದ ರಿಯಾಯ್ತಿ ಪಡೆದರು.) ಆದರೆ ಗುಜರಾತಿನ ನರಮೇಧ ಬಹು ದೊಡ್ಡ, ವಿಸ್ತಾರವಾದ, ವ್ಯವಸ್ಥಿತ ಕಾಣ್ಕೆಯ ಭಾಗವಾಗಿದೆ. ಇದು "ಗೋಧಿ ತೆನೆಗಳು ಮಾಗಿವೆ, ಭಾರತ ಭೂ ಖಂಡದಲ್ಲಿ ಮಿಡತೆಗಳು ಬಂದಿಳಿದಿವೆ" ಎಂಬುದನ್ನು ಹೇಳುತ್ತದೆ.

ನರಮೇಧ ಮಾನವನ ಪುರಾತನ ಚಾಳಿ. ನಾಗರಿಕತೆಯ ನಡಿಗೆಯಲ್ಲಿ ಇದರ ಪಾತ್ರ ಬಲು ಅಚ್ಚುಕಟ್ಟಿನದು. ದಾಖಲಾಗಿರುವ ಅತ್ಯಂತ ಪುರಾತನ ನರಮೇಧವೆಂದರೆ ಕ್ರಿಪೂ. ೧೪೯ರ ೩ನೇ ಪ್ಯೂನಿಕ್ ಯುದ್ಧದ ಕೊನೆಯಲ್ಲಿ ರೋಮನ್ ಸಾಮ್ರಾಜ್ಯ ಗ್ರೀಸ್ ದೇಶದ ಕಾರ್ಥೇಜ್‌ನ್ನು ಪೂರ್ತಿ ನಾಶ ಮಾಡಿದ್ದು. ನರಮೇಧ (Genocide) ಎಂಬ ಪದವನ್ನು ೧೯೪೪ರಲ್ಲಿ ರಾಫೆಲ್ ಲೆಮ್‌ಕಿನ್ ಬಳಕೆಗೆ ತಂದ. ನಾಜಿಗಳು ನಡೆಸಿದ ಹತ್ಯಾಕಾಂಡದ ನಂತರ ೧೯೪೮ರಲ್ಲಿ ವಿಶ್ವ ಸಂಸ್ಥೆಯು ಈ ಪದವನ್ನು ಬಳಸಿತು.



ನರಮೇಧ ಅಪರಾಧ ತಡೆ ಮತ್ತು ಶಿಕ್ಷೆಯನ್ನು ಕುರಿತ ವಿಶ್ವ ಸಂಸ್ಥೆಯ ಆರ್ಟಿಕಲ್ ೨ರಲ್ಲಿ ಅದನ್ನು ಈ ರೀತಿ ವಿವರಿಸಲಾಗಿದೆ:

"ಭಾಗಶಃವಾಗಿ ಅಥವ ಪೂರ್ತಿಯಾಗಿ ಯಾವುದೇ ರಾಷ್ಟ್ರೀಯ, ಸಾಂಪ್ರದಾಯಿಕ ಜನಾಂಗೀಯ ಅಥವ ಧಾರ್ಮಿಕ ಪಂಗಡಗಳನ್ನು ನಾಶಪಡಿಸುವ ಉದ್ದೇಶದಿಂದ ಈ ಕೆಳಗಿನ ಯಾವುದೇ ಕೃತ್ಯಗಳನ್ನು ಎಸಗುವುದು:

"ಗುಂಪಿನ ಸದಸ್ಯರುಗಳನ್ನು ಕೊಲೆಗೈಯ್ಯುವುದು; ಗುಂಪಿನ ಸದಸ್ಯರುಗಳ ಮೇಲೆ ತೀವ್ರವಾದ ದೈಹಿಕ ಅಥವ ಮಾನಸಿಕ ಹಾನಿಯನ್ನುಂಟುಮಾಡುವುದು; ಗುಂಪನ್ನು ಭೌತಿಕವಾಗಿ ಪೂರ್ತಿ ಅಥವ ಭಾಗಶಃ ನಾಶ ಮಾಡುವ ಪೂರ್ವಯೋಜಿತ ಉದ್ದೇಶದಿಂದ; ಗುಂಪಿನ ಜೀವನ ಪರಿಸ್ಥಿತಿಯ ಮೇಲೆ ಉದ್ದೇಶಪೂರ್ವಕವಾಗಿ ತೊಂದರೆಯನ್ನುಂಟುಮಾಡುವುದು; ಗುಂಪಿನೊಳಗಿನ ಜನರನ್ನು ತಡೆಯುವ ಉದ್ದೇಶದಿಂದ ನಿರ್ಬಂಧ ಹೇರುವುದು; (ಅಥವ) ಬಲವಂತವಾಗಿ ಗುಂಪಿನ ಮಕ್ಕಳನ್ನು ಮತ್ತೊಂದು ಗುಂಪಿಗೆ ವರ್ಗಾಯಿಸುವುದು."

ಈ ಅರ್ಥ ವಿವರಣೆಯು ನಿಜವಾದ ಅಥವ ಕಲ್ಪಿತ ರಾಜಕೀಯ ವಿರೋಧಿಗಳ ಮೇಲಿನ ಹಿಂಸೆಯನ್ನು ಕೈಬಿಟ್ಟಿರುವುದರಿಂದ ಇತಿಹಾಸದ ಕೆಲವು ಬಹು ದೊಡ್ಡ ಸಾಮೂಹಿಕ ಕೊಲೆಗಳನ್ನು ಒಳಗೊಂಡಿಲ್ಲ. 'ದಿ ಹಿಸ್ಟರಿ ಅಂಡ್ ಸೋಸಿಯಾಲಜಿ ಆಫ್ ಜೆನೋಸೈಡ್' ಪುಸ್ತಕದ ಕರ್ತೃಗಳಾದ ಫ್ರ್ಯಾಂಕ್ ಚಾಕ್ ಮತ್ತು ಜೋನಸೋಹ್ನ ನೀಡಿರುವ ಅರ್ಥ ವಿವರಣೆ ಸಮಂಜಸವಾಗಿದೆಯೆಂದು ನಾನು ವೈಯಕ್ತಿಕವಾಗಿ ಭಾವಿಸುತ್ತೇನೆ. ಅವರು ಹೇಳುವಂತೆ ನರಮೇಧವೆಂದರೆ: **"ಇದೊಂದು ಏಕಪಕ್ಷೀಯವಾಗಿ ಸಾಮೂಹಿಕ ಹತ್ಯೆ ನಡೆಸುವ ವಿಧಾನ, ಈ ವಿಧಾನದಲ್ಲಿ ಪ್ರಭುತ್ವ ಅಥವ ಅಧಿಕಾರ ಒಂದು ಗುಂಪನ್ನು ಸರ್ವನಾಶ ಮಾಡುವ ಉದ್ದೇಶದಿಂದ ಬಳಸುತ್ತದೆ. ಆ ಗುಂಪು ಅದರೊಳಗಿನ ಸದಸ್ಯತ್ವ ತೀರ್ಮಾನವಾಗುವುದು ಅಪರಾಧಿಗಳಿಂದ."** ಈ ರೀತಿಯ ಅರ್ಥ ವಿವರಣೆಯಲ್ಲಿ ಇಂಡೋನೇಷ್ಯಾದಲ್ಲಿ ಸುಹಾರ್ತೋ (ಒಂದು ಮಿಲಿಯನ್), ಕಾಂಬೋಡಿಯದಲ್ಲಿ ಪೋಲ್‌ಪಾಟ್ (ಒಂದೂವರೆ ಮಿಲಿಯನ್) ಸೋವಿಯತ್ ಯೂನಿಯನ್‌ನಲ್ಲಿ ಸ್ಟಾಲಿನ್ (ಅರವತ್ತು ಮಿಲಿಯನ್), ಚೈನಾದಲ್ಲಿ ಮಾವೋ (ಎಪ್ಪತ್ತು ಮಿಲಿಯನ್) ನಡೆಸಿದ ಇತಿಹಾಸ ಮರೆಯಲಾಗದ ಹತ್ಯಾಕಾಂಡಗಳನ್ನು ಒಳಗೊಳ್ಳಬಹುದು.

ಎಲ್ಲವನ್ನು ಪರಿಗಣಿಸಿಯೂ 'ನಿರ್ನಾಮ' ಎಂಬ ಪದ ಹೆಚ್ಚು ಪ್ರಾಮಾಣಿಕವಾಗಿದೆ ಮತ್ತು ಸೂಕ್ತವಾಗಿದೆ ಎನ್ನಬಹುದು. ಈ ಪದದೊಳಗೆ ಕಳೆ, ಕ್ರಿಮಿ, ಪೀಡೆಗಳ ಕುರಿತಂತೆ ಒರಟು ಪ್ರಚೋದನೆಯಿದೆ. ಅಂಕೆಯಿಲ್ಲದ ಕೊಲ್ಲುವವ್ಯಾಪಾರದ ಪ್ರಯುಕ್ತ ಅಪರಾಧಿಗಳು ತಮ್ಮ ಬಲಿಪಶುಗಳೊಂದಿಗೆ ಮುಖಾಮುಖಿಯಾದಾಗ ಮೊದಲಿಗೆ ಅವರೊಂದಿಗಿರುವ ಯಾವುದೇ ಮನುಷ್ಯ ಸಂಪರ್ಕವನ್ನು ಕಡಿದುಹಾಕಬೇಕು. ತನ್ನ ಬಲಿಪಶುಗಳನ್ನು ಕೀಳೆಂದು, ಪರೋಪಜೀವಿಗಳೆಂದು ಪರಿಗಣಿಸಿದಾಗ ಅವರುಗಳ ನಿರ್ಮೂಲನೆ ಸಮಾಜಕ್ಕೆ ಮಾಡುವ ಸೇವೆಯಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ೧೬೩೭ರಲ್ಲಿ ಜಾನ್ ಮೇಸನ್‌ನ ಮುಂದಾಳತ್ವದಲ್ಲಿ ಪರಿಶುದ್ಧ ಇಂಗ್ಲಿಷರು ನಡೆಸಿದ ಪೆಕೋಟ್ ಇಂಡಿಯನ್‌ರ ನರಮೇಧದ ಸಂದರ್ಭವನ್ನೇ ನೋಡಬಹುದು.

"ಬೆಂಕಿಯಿಂದ ತಪ್ಪಿಸಿಕೊಂಡವರನ್ನು ಖಡ್ಗದಲ್ಲಿ ತರಿದುಹಾಕಲಾಯಿತು; ಕೆಲವರನ್ನು ಕತ್ತರಿಸಿ ತುಂಡು ಮಾಡಲಾಯಿತು; ಇತರರನ್ನು ಇರಿಗತ್ತಿಗಳಲ್ಲಿ ಕೆತ್ತಿಹಾಕಿದರು, ಹಾಗಾಗಿ ಶೀಘ್ರವಾಗಿ ಕೊಲ್ಲಲು ಸಾಧ್ಯವಾಯಿತು. ಕೆಲವೇ ಕೆಲವರು ತಪ್ಪಿಸಿಕೊಂಡರು. ಒಂದೇ ಹೊತ್ತಿಗೆ ೪೦೦ ಜನರನ್ನು ಕೊಂದುಹಾಕಲಾಯಿತು. ಹೆಣಗಳು ಕರಕಲಾಗುತ್ತಿದ್ದ ಬೆಂಕಿಯನ್ನು ರಕ್ತದ ಕೋಡಿ ತಣಿಸುತ್ತಿದ್ದ ದೃಶ್ಯ ಭಯಾನಕವಾಗಿತ್ತು. ನಂತರ ಆವರಿಸಿಕೊಂಡ ದುರ್ನಾತ ಭೀಕರವಾಗಿತ್ತು. ಗೆಲುವಿಗೆ ಸಿಹಿಯಾದ ಬಲಿ...."

ಇಲ್ಲಿ, ನಾಲ್ಕು ಶತಮಾನಗಳ ನಂತರ ಗುಜರಾತ್ ನರಮೇಧದ ಪ್ರಮುಖ ಕೊಲೆಗಡುಕ ಬಾಬು ಬಜರಂಗಿ, ಕೆಲ ತಿಂಗಳ ಹಿಂದೆ ತೆಹಲ್ಕಾ ಪತ್ರಿಕೆಯವರು ನಡೆಸಿದ ಕುಟುಕು ಕಾರ್ಯಾಚರಣೆಯ ಸಂದರ್ಭದಲ್ಲಿ ಕ್ಯಾಮೆರಾದಲ್ಲಿ ದಾಖಲಾಸಿರುವ ಹೇಳಿಕೆ ಹೀಗಿದೆ: **"ಒಂದೇ ಒಂದನ್ನು ಬಿಡದಂತೆ ಮುಸ್ಲಿಮರ ಅಂಗಡಿಗಳನ್ನು ಧ್ವಂಸ ಮಾಡಿದೆವು, ಬೆಂಕಿಹಚ್ಚಿ ಸುಟ್ಟೆವು.... ಅವರನ್ನು ಸುಡಲೇಬೇಕೆಂದು ನಾವು ನಂಬುತ್ತೇವೆ, ಏಕೆಂದರೆ ಆ ಸೂಳೆ ಮಕ್ಕಳಿಗೆ ಸುಡುವುದು ಇಷ್ಟವಿಲ್ಲ, ಬೆಂಕಿ ಎಂದರೆ ಭಯ ಅವರಿಗೆ.... ನನ್ನದೊಂದು ಕೊನೆಯ ಆಸೆ ಇದೆ.... ನನಗೆ ಜೀವಾವಧಿ ಶಿಕ್ಷೆಯಾದರೂ ಪರವಾಗಿಲ್ಲ.... ನೇಣು ಹಾಕಿದರೂ ಚಿಂತೆ ಇಲ್ಲ.... ನೇಣಿಗೆ ಹಾಕುವ ಮುನ್ನ ಎರಡು ದಿನಗಳ ಕಾಲಾವಕಾಶ ನೀಡಿ, ಜುಹಾಪುರದಲ್ಲಿ ಆ ಜನ ಏಳೆಂಟು ಲಕ್ಷವಿದ್ದಾರೆ. ಅದನ್ನು ರಣರಂಗ ಮಾಡುತ್ತೇನೆ.... ಅವರನ್ನು ಮುಗಿಸಿಬಿಡುತ್ತೇನೆ.... ಇನ್ನೊಂದಷ್ಟು ಜನ ಸಾಯಲಿ.... ಕನಿಷ್ಠ ೨೫ರಿಂದ ೫೦ ಸಾವಿರದವರೆಗಾದರೂ ಸಾಯಬೇಕು."**

ಬಾಬು ಬಜರಂಗಿಗೆ ನರೇಂದ್ರ ಮೋದಿಯ ಆಶೀರ್ವಾದ, ಪೊಲೀಸ್‌ರ ರಕ್ಷಣೆ, ಮತ್ತವನ ಜನರ ಪ್ರೀತಿ ಇತ್ತೆಂದು ಹೇಳುವ ಅಗತ್ಯವಿಲ್ಲ. ಆತ ಸ್ವತಂತ್ರನಾಗಿ ಗುಜರಾತಿನಲ್ಲಿ ಕೆಲಸ ಮಾಡಿಕೊಂಡು, ಏಳಿಗೆಯಾಗುತ್ತಿದ್ದಾನೆ. ಒಂದು ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ದೋಷಮುಕ್ತಗೊಳಿಸಬಹುದು ಅದೆಂದರೆ ನರಮೇಧದ ನಿರಾಕರಣೆ.

ಹಳೆಯ ವರ್ಣಭೇದದ, ರಕ್ತದಾಹಿವಿಜಯೋತ್ಸವದ ವಿಷಯವು ಬದಲಾವಣೆಗೊಂಡು ನರಮೇಧ ನಿರಾಕರಣೆಯಾಗಿದೆ. ಈ ಬದಲಾವಣೆ ೧೯ನೇ ಶತಮಾನದಲ್ಲಿ ಹುಟ್ಟಿಕೊಂಡ ತೇಪೆ ಹಾಕುವ ದ್ವಂದ್ವ ನೈತಿಕತೆಗೆ ಉತ್ತರ

ಅರುಂಧತಿ ರಾಯ್
ಮಿಡತೆಗಳಿಗೆ
ಕಿವಿಯೊಡ್ಡಿ...

೧ ೧೯೧೫ರ ವಸಂತಕಾಲದಲ್ಲಿ ಒಟ್ಟಮನ್ ಸಾಮ್ರಾಜ್ಯವು ಅನಟೋಲಿಯ ಎಂಬಲ್ಲಿ ನಡೆಸಿದ ನರಮೇಧದಲ್ಲಿ ಹತ್ತೂವರೆ ಲಕ್ಷ ಅರ್ಮೇನಿಯನ್‌ರನ್ನು ವ್ಯವಸ್ಥಿತವಾಗಿ ಹತ್ಯೆ ಮಾಡಿತು. ಟರ್ಕಿ ಮುಸ್ಲಿಮ್‌ರ ಆಳ್ವಿಕೆಯಲ್ಲಿ ಬದುಕುತ್ತಿದ್ದ ಕ್ರಿಶ್ಚಿಯನ್ ಅಲ್ಪ ಸಂಖ್ಯಾತರಲ್ಲಿ ಅರ್ಮೇನಿಯರರು ಬಹುದೊಡ್ಡ ಸಂಖ್ಯೆ. ೨೫೦೦ ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಅವರು ಅನಟೋಲಿಯದಲ್ಲಿ ವಾಸಿಸುತ್ತಿದ್ದರು.

[illegible] ಈ ಸಂದರ್ಭದಲ್ಲಿ ಯುರೋಪು ತನ್ನ ನೆಲದಲ್ಲಿ ಸಮಾಧಾನವಾದ: ಆದರೆ ಹೊಸ ಮಾದರಿಯ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ಅಭಿವೃದ್ಧಿಪಡಿಸುತ್ತಲೇ ವಸಾಹತುಗಳಲ್ಲಿ ಕೋಟ್ಯಾಂತರ ಜನರನ್ನು ನಿರ್ನಾಮ ಮಾಡುತ್ತಿತ್ತು. ಇದ್ದಕ್ಕಿದ್ದಂತೆ ದೇಶಗಳು, ಸರ್ಕಾರಗಳು ತಾವು ಎಸಗಿದ ನರಮೇಧಗಳನ್ನು ನಿರಾಕರಿಸಲು, ಮುಚ್ಚಿಟ್ಟುಕೊಳ್ಳಲು ಪ್ರಾರಂಭಿಸಿದವು. "ನಿರಾಕರಣೆ ಎಂದರೆ: ಕೊಲೆಗಡುಕರು ಕೊಲೆ ಮಾಡಲಿಲ್ಲ, ಬಲಿಪಶುಗಳನ್ನು ಕೊಲ್ಲಲಿಲ್ಲ. ನಿರಾಕರಣೆಯ ನೇರ ಪರಿಣಾಮವೆಂದರೆ ಅದು ಭವಿಷ್ಯದಲ್ಲಿ ನರಮೇಧವನ್ನು ಆಹ್ವಾನಿಸುತ್ತದೆ ಎಂಬುದನ್ನು ಪರಿಣಾಮಕಾರಿಯಾಗಿ ಹೇಳುವುದು". ಎನ್ನುತ್ತಾರೆ 'ಹಿರೋಷಿಮ ಅಂಡ್ ಅಮೆರಿಕ: ಫಿಫ್ಟಿ ಇಯರ್ಸ್ ಆಫ್ ಡಿನೈಯಲ್'ನ ಕರ್ತೃ ಪ್ರೊ|| ರಾಬರ್ಟ್ ಜೆ. ಲಿಪ್ಟನ್.

ನರಮೇಧ ರಾಜಕಾರಣ ಮುಕ್ತ ಮಾರುಕಟ್ಟೆ ಸಂಧಿಸುವಾಗ ಹತ್ಯಾಕಾಂಡ, ನರಮೇಧಗಳ ಅಧಿಕೃತ ಸಮ್ಮತಿ ಅಥವ ನಿರಾಕರಣೆಯು ಬಹುರಾಷ್ಟ್ರೀಯ ಸಾಹಸೋದ್ಯಮವಾಗಿರುವುದು ಸತ್ಯ. ಇದಕ್ಕೂ ಐತಿಹಾಸಿಕ ಸತ್ಯ ಅಥವ ಫೊರೆನ್ಸಿಕ್ ಸಾಕ್ಷಿಗಳಿಗೂ ಏನಕೇನ ಸಂಬಂಧವಿಲ್ಲ. ನೈತಿಕತೆಯಂತು ಖಂಡಿತವಾಗಿಯೂ ಸುಳಿಯುವುದಿಲ್ಲ. ಇದು ದೊಡ್ಡಮಟ್ಟದ ಚೌಕಾಸಿಯ ಆಕ್ರಮಣಕಾರಿ ಪ್ರಕ್ರಿಯೆಯಾಗಿದ್ದು ವಿಶ್ವ ಸಂಸ್ಥೆಗಿಂತ ವಿಶ್ವ-ವ್ಯಾಪಾರ ಸಂಸ್ಥೆಗೆ ಸೇರುತ್ತದೆ. ನೈಸರ್ಗಿಕ ಸಂಪನ್ಮೂಲಗಳಿಗಾಗಿ ಏರಿಳಿವ ಮಾರುಕಟ್ಟೆ, ಭವಿಷ್ಯದ ವ್ಯಾಪಾರವೆಂಬ ಕುತೂಹಲಕಾರಿ ವಸ್ತು ಮತ್ತು ಅವೇ ಹಳೆಯ ಸಾದಾ ಆರ್ಥಿಕ, ಮಿಲಿಟರಿ ಬಲಗಳೇ ಚಲಾವಣೆಯ ನೋಟುಗಳು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನರಮೇಧಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಇರುವ ಕಾರಣಗಳೇ ನಿರಾಕರಣೆಗೆ ಬಳಕೆಯಾಗುತ್ತಿವೆ.

ಆರ್ಥಿಕ ನಿಯತಿವಾದವನ್ನು (ಯಾವುದೂ ಬದಲಾಗದು ಎಲ್ಲ ಪೂರ್ವನಿಶ್ಚಿತ ಎನ್ನುವ ವಾದ) ಜನಾಂಗೀಯ, ಸಾಂಪ್ರದಾಯಿಕ, ಧಾರ್ಮಿಕ, ರಾಷ್ಟ್ರೀಯ ತಾರತಮ್ಯದಲ್ಲಿ ಉಣಿ ಹಾಕಲಾಗಿದೆ. ಒರಟಾಗಿ ಹೇಳಬೇಕೆಂದರೆ ನರಮೇಧ ಜರುಗಿತೇ, ಇಲ್ಲವೇ ಅಥವ ಜರುಗುವುದೇ, ಇಲ್ಲವೇ, ಜರುಗಿದರೂ ವರದಿಯಾಗುವುದೇ, ಇಲ್ಲವೇ, ವರದಿಯಾದರೂ ಅದು ತೆಗೆದುಕೊಳ್ಳುವ ತಿರುವನ್ನು ಕುರಿತು ಸರ್ಕಾರಗಳು ಕೊಡುವ ತೀರ್ಪಿನಲ್ಲಿರುವ ನಿರ್ಣಾಯಕ ಅಂಶಗಳೆಂದರೆ ಎಣ್ಣೆ ಪೀಪಾಯಿ (ಅಥವ ಒಂದು ಟನ್ ಯುರೇನಿಯಂನ) ದರದ ಏರಿಳಿತ, ಮಿಲಿಟರಿ ನೆಲೆಯ ಸ್ಥಾಪನೆಗೆ ನೀಡುವ ಅನುಮತಿ ಅಥವ ದೇಶವೊಂದರ ಆರ್ಥಿಕತೆ ಮುಕ್ತವಾಗುವುದು. ಉದಾಹರಣೆಗೆ, ಕಾಂಗೊದಲ್ಲಿ ಸಾವಿಗೀಡಾದ ಎರಡು ಮಿಲಿಯನ್ ಜನರ ಕುರಿತ ವರದಿಗಳೇ ಇಲ್ಲ ಏಕೆ? ಅಮೆರಿಕದ ಆಕ್ರಮಣಕ್ಕೆ ಮೊದಲು ಆರ್ಥಿಕ ದಿಗ್ಬಂಧನದ ಸಂದರ್ಭದಲ್ಲಿ ಸಂಭವಿಸಿದ ಒಂದು ಮಿಲಿಯನ್ ಇರಾಕಿಗಳ ಸಾವು ನರಮೇಧವೇ? (ಹಾಗೆಂದು ವಿಶ್ವ ಸಂಸ್ಥೆಯ ಇರಾಕ್‌ನ ಪ್ರತಿನಿಧಿ ಡೆನಿಸ್ ಹಾಲ್ಲಿಡೆ ಹೇಳಿದ್ದಾರೆ.) ಅಥವ ವಿಶ್ವ ಸಂಸ್ಥೆಯ ಅಮೆರಿಕದ ಪ್ರತಿನಿಧಿ ಮ್ಯಾಡಲಿನ್ ಆಲ್‌ಬ್ರೈಟ್ ವಾದಿಸಿದಂತೆ ಅದು ಯೋಗ್ಯವಾದುದೇ? ಇದು ಯಾರು ನಿಯಮಗಳನ್ನು ಮಾಡುತ್ತಾರೆಂಬುದನ್ನು ಅವಲಂಭಿಸಿದೆ. ಬಿಲ್ ಕ್ಲಿಂಟನ್ನಾ? ಅಥವ ಮಗುವನ್ನು ಕಳೆದುಕೊಂಡ ಇರಾಕ್‌ನ ತಾಯಿಯೇ?

ಅಮೆರಿಕ ದೇಶ ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಹಾಗೂ ಪ್ರಬಲ ರಾಷ್ಟ್ರವಾಗಿರುವುದರಿಂದ ತನ್ನನ್ನು ತಾನೇ ನಂಬರ್ ಒನ್ ನರಮೇಧ ನಿರಾಕರಣಕಾರ ಎಂದು ಕಲ್ಪಿಸಿಕೊಳ್ಳುವ ವಿಶೇಷಾಧಿಕಾರ ಪಡೆದುಕೊಂಡಿದೆ. ಕ್ರಿಸ್ಟಫರ್ ಕೊಲಂಬಸ್ ಅಮೆರಿಕದಲ್ಲಿ ಕಾಲಿಟ್ಟ ದಿನವನ್ನು 'ಕೊಲಂಬಸ್ ದಿನ'ವಾಗಿ ಆಚರಿಸುವುದನ್ನು ಮುಂದುವರೆಸಿಕೊಂಡು ಬರಲಾಗಿದೆ. ಆ ದಿನ ಹತ್ಯಾಕಾಂಡಕ್ಕೆ ಮುನ್ನುಡಿ ಬರೆದ ದಿನ. ಮೂಲ ಜನಸಂಖ್ಯೆಯ ಶೇ. ೯೦ರಷ್ಟಿದ್ದ ಮಿಲಿಯಾಂತರ ರೆಡ್ ಇಂಡಿಯನ್‌ರನ್ನು ಮಾರಣಹೋಮ ಮಾಡಲಾಯಿತು (ಸಿಡುಬಿನ ವೈರಾಣು ತುಂಬಿದ ಕಂಬಳಿಗಳನ್ನು ರೆಡ್ ಇಂಡಿಯನ್‌ರಿಗೆ ಹಂಚುವ ಸಲಹೆ ನೀಡಿದ ಲಾರ್ಡ್ ಅಮ್‌ರೆಸ್ಟ್, ಮೆಸಾಚುಸೆಟ್ಸ್‌ನಲ್ಲಿ ವಿಶ್ವವಿದ್ಯಾಲಯ ಪಟ್ಟಣ ಹೊಂದಿದ್ದಾನೆ ಮತ್ತು ಪ್ರತಿಷ್ಠಿತ ಲಿಬರಲ್ ಆರ್ಟ್ಸ್ ಕಾಲೇಜಿಗೆ ಅವನ ಹೆಸರಿಡಲಾಗಿದೆ.)

ಅಮೆರಿಕದ ಎರಡನೇ ಹತ್ಯಾಕಾಂಡದಲ್ಲಿ ಮೂವತ್ತು ಮಿಲಿಯನ್ ಆಫ್ರಿಕನ್‌ರನ್ನು ಅಪಹರಿಸಿ, ಗುಲಾಮಗಿರಿಗೆ ಮಾರಲಾಯಿತು. ಅವರಲ್ಲಿ ಅರ್ಧದಷ್ಟು ಜನ ಸಾಗಿಸುವಾಗಲೇ ತೀರಿಕೊಂಡರು. ಆದರೆ ೨೦೦೨ರ ವರ್ಣಭೇದ ನೀತಿ ವಿರೋಧಿಸಿ ಡರ್ಬಾನ್‌ನಲ್ಲಿ ನಡೆದ ಜಾಗತಿಕ ಸಮಾವೇಶದಲ್ಲಿ ಅಮೆರಿಕದ ಪ್ರತಿನಿಧಿಗಳು "ಗುಲಾಮಗಿರಿ ಮತ್ತು ಗುಲಾಮರ ಮಾರಾಟ ಅಪರಾಧ" ಎಂಬುದನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು. ಗುಲಾಮಗಿರಿ ಆ ಕಾಲಕ್ಕೆ ನ್ಯಾಯಯುತವಾಗಿತ್ತೆಂದು ಆಗ್ರಹಿಸಿದರು. ಬಾಂಬ್ ಹಾಕುವ ಮೂಲಕ ಟೋಕಿಯೋ, ಹಿರೋಷಿಮಾ, ನಾಗಸಾಕಿ, ಡ್ರೆಸ್‌ಡೆನ್ ಮತ್ತು ಹಂಬರ್ಗ್‌ನಲ್ಲಿ ಲಕ್ಷಾಂತರ ಜನರನ್ನು ಕೊಂದುಹಾಕಿದ್ದನ್ನೂ ನರಮೇಧವಿರಲಿ, ಅಪರಾಧವೆಂದು ಒಪ್ಪಲು ಅಮೆರಿಕ ನಿರಾಕರಿಸಿತು. (ಇಲ್ಲಿರುವ ವಾದ ಏನೆಂದರೆ, ನಾಗರಿಕರನ್ನು ಕೊಲ್ಲುವುದು ಸರ್ಕಾರದ ಉದ್ದೇಶವಾಗಿರಲಿಲ್ಲ ಎಂದು. ಅಂದರೆ ಅದು ಯುದ್ಧದ ಪರಿಣಾಮದಿಂದಾದ ನಷ್ಟವೇ ಹೊರತು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ ಎಂದು. ಈ ತತ್ಸಂಬಂಧೀ ನಷ್ಟ [Collateral damage] ಎಂಬ ವಿಷಯ ಬೆಳವಣಿಗೆಯ ಪ್ರಾರಂಭದ ಹಂತವಿದು.)

ಅಮೆರಿಕದ ಎರಡನೇ ಹತ್ಯಾಕಾಂಡದಲ್ಲಿ ಮೂವತ್ತು ಮಿಲಿಯನ್ ಆಫ್ರಿಕನ್‌ರನ್ನು ಅಪಹರಿಸಿ, ಗುಲಾಮಗಿರಿಗೆ ಮಾರಲಾಯಿತು. ಅವರಲ್ಲಿ ಅರ್ಧದಷ್ಟು ಜನ ಸಾಗಿಸುವಾಗಲೇ ತೀರಿಕೊಂಡರು. ಆದರೆ ೨೦೦೨ರ ವರ್ಣಭೇದ ನೀತಿ ವಿರೋಧಿಸಿ ಡರ್ಬಾನ್‌ನಲ್ಲಿ ನಡೆದ ಜಾಗತಿಕ ಸಮಾವೇಶದಲ್ಲಿ ಅಮೆರಿಕದ ಪ್ರತಿನಿಧಿಗಳು "ಗುಲಾಮಗಿರಿ ಮತ್ತು ಗುಲಾಮರ ಮಾರಾಟ ಅಪರಾಧ" ಎಂಬುದನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು. ಗುಲಾಮಗಿರಿ ಆ ಕಾಲಕ್ಕೆ ನ್ಯಾಯಯುತವಾಗಿತ್ತೆಂದು ಆಗ್ರಹಿಸಿದರು. ಬಾಂಬ್ ಹಾಕುವ ಮೂಲಕ ಟೋಕಿಯೋ, ಹಿರೋಷಿಮಾ, ನಾಗಸಾಕಿ, ಡ್ರೆಸ್‌ಡೆನ್ ಮತ್ತು ಹಂಬರ್ಗ್‌ನಲ್ಲಿ ಲಕ್ಷಾಂತರ ಜನರನ್ನು ಕೊಂದುಹಾಕಿದ್ದನ್ನೂ ನರಮೇಧವಿರಲಿ, ಅಪರಾಧವೆಂದು ಒಪ್ಪಲು ಅಮೆರಿಕ ನಿರಾಕರಿಸಿತು. (ಇಲ್ಲಿರುವ ವಾದ ಏನೆಂದರೆ, ನಾಗರಿಕರನ್ನು ಕೊಲ್ಲುವುದು ಸರ್ಕಾರದ ಉದ್ದೇಶವಾಗಿರಲಿಲ್ಲ ಎಂದು. ಅಂದರೆ ಅದು ಯುದ್ಧದ ಪರಿಣಾಮದಿಂದಾದ ನಷ್ಟವೇ ಹೊರತು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ ಎಂದು. ಈ ತತ್ಸಂಬಂಧೀ ನಷ್ಟ [Collateral damage] ಎಂಬ ವಿಷಯ ಬೆಳವಣಿಗೆಯ ಪ್ರಾರಂಭದ ಹಂತವಿದು.)

ಎರಡನೇ ಜಾಗತಿಕ ಯುದ್ಧ ಕೊನೆಯಾದ ಮೇಲೆ ಅಮೆರಿಕ ಸರ್ಕಾರ ಬಹಿರಂಗವಾಗಿ, ಮಿಲಿಟರಿ ಮೂಲಕ ೧೦೦ ದೇಶಗಳಲ್ಲಿ ೪೦೦ಕ್ಕಿಂತಲೂ ಹೆಚ್ಚು ಬಾರಿ, ರಹಸ್ಯವಾಗಿ ೬೦೦೦ಕ್ಕೂ ಹೆಚ್ಚಿನ ಬಾರಿ ಮಧ್ಯೆ ಪ್ರವೇಶಿಸಿದೆ. ಇದರೊಳಗೆ ವಿಯೆಟ್ನಾಂ ದೇಶದ ಮೇಲಿನ ಆಕ್ರಮಣ ಮತ್ತು ಮೂರು ಮಿಲಿಯನ್ ವಿಯೆಟ್ನಾಮಿ ಜನತೆ (ಅಂದಾಜು ಒಟ್ಟು ಜನ ಸಂಖ್ಯೆಯ ಶೇ. ೧೦ ರಷ್ಟು ಜನ) ಯನ್ನು ನಿರ್ನಾಮ ಮಾಡಿದ ಪರಮ ಉದ್ದೇಶವೂ ಸೇರಿದೆ. ಈ ಯಾವುದನ್ನೂ ಯುದ್ಧ ಅಪರಾಧಗಳೆಂದೂ ಅಥವ ನರಮೇಧ ಕೃತ್ಯಗಳೆಂದೂ ಒಪ್ಪಿಕೊಂಡಿಲ್ಲ. "ಪ್ರಶ್ನೆ ಯಾವುದೆಂದರೆ ಒಳ್ಳೆಯದನ್ನು ಮಾಡಲು ನೀವು ಇನ್ನೆಷ್ಟು ಕೇಡನ್ನು ಮಾಡಬೇಕು?" ಎನ್ನುತ್ತಾನೆ ರಾಬರ್ಟ್ ಮ್ಯಾಕ್‌ನಮಾರ್. ಈ ಮಹಾಶಯನ ವೃತ್ತಿ ಜೀವನದ ನಕ್ಷೆ ೧೯೪೫ರಲ್ಲಿ ಟೋಕಿಯೋದ ಬಾಂಬ್ ದಾಳಿಯಿಂದ ಸಾಗಿ (ದಿನ ಬೆಳಗಾಗುವುದರೊಳಗೆ ಒಂದು ಲಕ್ಷ ಜನ ಹೆಣವಾದರು.) ವಿಯಟ್ನಾಂ ಯುದ್ಧದ ಶಿಲ್ಪಿಯಾಗಿ, ವಿಶ್ವ ಬ್ಯಾಂಕ್‌ನ ಅಧ್ಯಕ್ಷನಾಗಿ ಈಗ ಆರಾಮ ದೇಶದ ಆರಾಮ ಮನೆಯಲ್ಲಿನ ಆರಾಮ ಛೇರ್‌ನಲ್ಲಿ ಆಸೀನನಾಗಿದ್ದಾನೆ.

ಇದಕ್ಕಿಂತ ಹೆಚ್ಚಿನ ಸಮಗ್ರ ಚಿತ್ರಣ ಬೇಕೆ? ರಾಬರ್ಟ್ ಜೆ. ಲಿಪ್ಟನ್ ಸೂಚಿಸಿದ "ನರಮೇಧ ನಿರಾಕರಣೆ ಇನ್ನೂ ಹೆಚ್ಚಿನ ನರಮೇಧವನ್ನು ಆಹ್ವಾನಿಸುತ್ತದೆ" ಎಂಬ ಮಾತಿಗೆ.

ಬಲಿಪಶುಗಳೇ ಅಪರಾಧಿಗಳಾದರೆ ಏನಾಗುತ್ತದೆ? (ರುವಾಂಡಾದಲ್ಲಿ, ಕಾಂಗೋದಲ್ಲಾದಂತೆ) ಮನುಕುಲದ ಇತಿಹಾಸದಲ್ಲಿ ಅತ್ಯಂತ ಕ್ರೂರವಾದ ನರಮೇಧದ ಭಗ್ನಾವಶೇಷದ ಮೇಲೆ ಕಟ್ಟಿದ ಇಸ್ರೇಲ್‌ನ ಬಗ್ಗೆ ಹೇಳಲು ಏನು ಉಳಿದಿದೆ? ಅದು ಆಕ್ರಮಿಸಿಕೊಂಡಿರುವ ಪ್ರಾಂತ್ಯಗಳಲ್ಲಿ ನಡೆಸುತ್ತಿರುವ ಕೃತ್ಯಗಳ ಬಗ್ಗೆ ಏನು ಹೇಳಲು ಸಾಧ್ಯವಿದೆ? ವಸಾಹತುಗಳನ್ನು ಹೆಚ್ಚಿಸಿಕೊಳ್ಳುತ್ತಿದೆ, ನೀರನ್ನೂ ವಸಾಹತುಕರಿಸಿದೆ, ಪ್ಯಾಲೆಸ್ತೈನಿನ ಜನತೆಯನ್ನು ಅವರ ಹೊಲಗಳಿಂದ, ಅವರ ಉದ್ಯೋಗದಿಂದ, ಅವರ ಮಕ್ಕಳ ಶಾಲೆಗಳು, ಆಸ್ಪತ್ರೆಗಳು ಮತ್ತು ಆರೋಗ್ಯ ವ್ಯವಸ್ಥೆಯಿಂದ ದೂರ ಮಾಡಲು ಹೊಸ ಭದ್ರತಾ ಗೋಡೆಯನ್ನು ನಿರ್ಮಿ

ಸಲಾಗಿದೆ. ಇದು ಮೀನಿನ ಬೋಗುಣಿಯೊಳಗೆ ಮಂದಗತಿಯಲ್ಲಿ ನಡೆಸುತ್ತಿರುವ ನರಮೇಧವಾಗಿದ್ದು ವಿಶ್ವ ಸಂಸ್ಥೆಯ ಆರ್ಟಿಕಲ್ ೨ರಲ್ಲಿನ ವಿವರಣೆ "ಗುಂಪನ್ನು ಭೌತಿಕವಾಗಿ ಪೂರ್ತಿ ಅಥವ ಭಾಗಶಃ ನಾಶಮಾಡಲು ಗುಂಪಿನ ಜೀವನ ಪರಿಸ್ಥಿತಿಯ ಮೇಲೆ ಉದ್ದೇಶಪೂರ್ವಕವಾಗಿ ತೊಂದರೆಯುಂಟು ಮಾಡುವ ಯಾವುದೇ ಕೃತ್ಯ" ಎಂಬುದನ್ನು ಸಚಿತ್ರವಾಗಿ ವಿಶದ ಪಡಿಸುತ್ತದೆ.

ನರಮೇಧವು ಮನುಷ್ಯ ವ್ಯವಸ್ಥೆಯಲ್ಲಿನ ಬುದ್ಧಿ ಭ್ರಮಣೆಯೋ, ಅಕ್ರಮತೆಯೋ, ಚಿಕ್ಕ ಪ್ರಮಾದವೋ ಅಲ್ಲ ಎಂಬುದನ್ನು ನರಮೇಧದ ಇತಿಹಾಸವು ಹೇಳುತ್ತದೆ. ಪ್ರೀತಿ, ಕಲೆ, ಕೃಷಿಯಂತೆಯೇ ನರಮೇಧವು ಪುರಾತನ, ನಿರಂತರ ಸ್ವಭಾವವಾಗಿದೆ. ಮನುಷ್ಯನ ಪರಿಸ್ಥಿತಿಯ ಭಾಗವಾಗಿದೆ.

೧೯ನೇ ಶತಮಾನದಿಂದ ನಡೆದುಕೊಂಡು ಬಂದಿರುವ ನರಮೇಧಗಳು, ಐರೋಪ್ಯರ ಬದುಕುವ ಅವಕಾಶಗಳ ಹುಡುಕಾಟದ ಅತ್ಯಗತ್ಯ ಭಾಗವಾಗಿದೆ. ಇದನ್ನು ಜರ್ಮನ್‌ರು ಲೆಬೆನ್‌ಸ್ರಾಮ್ (Lebensraum) ಎಂದು ಜನಪ್ರಿಯಗೊಳಿಸಿದರು. ಈ ಪದವನ್ನು ಜರ್ಮನಿಯ ಭೂಗೋಳ ಮತ್ತು ಪ್ರಾಣಿ ಶಾಸ್ತ್ರಜ್ಞನಾಗಿದ್ದ ಫ್ರೆಡ್ರಿಕ್ ರ್ಯಾಟ್ಜೆಲ್ ಎಂಬುವವನು 'ಬದುಕುವ ಅವಕಾಶಕ್ಕಾಗಿ ಅಷ್ಟೇ ಅಲ್ಲದೆ ಪೋಷಣೆಗಾಗಿಯೂ ತನ್ನ ಗಡಿಯನ್ನು ವಿಸ್ತರಿಸಿಕೊಳ್ಳುವುದು ಪ್ರಬಲ ಮಾನವ ತಳಿಯ ನೈಸರ್ಗಿಕ ಪ್ರವೃತ್ತಿಯಾಗಿದೆ' ಎಂಬ ತನ್ನ ಯೋಚನೆಯನ್ನು ವಿವರಿಸಲು ಈ ಪದವನ್ನು ಬಳಸಿದ (ತಾನಷ್ಟೇ ಬದುಕುಳಿಯಬೇಕು, ತಾನೇ ಲೋಕ ಎಂಬ ದುರಾಸೆಯನ್ನೇ ನೈಸರ್ಗಿಕ ಎನ್ನುವ ಪರಿ!). ವಿಸ್ತರಣೆಯ ದಾಹವು ಸಹಜವಾಗಿಯೇ ದುರ್ಬಲರ ಬಲೆಯನ್ನು ಬೇಡುತ್ತದೆ. ಈ ದುರ್ಬಲ ಜೀವಿಗಳು ಪ್ರಬಲರಿಗೆ ದಾರಿ ಬಿಡಬೇಕು; ಇಲ್ಲ ಬಿಡುವಂತೆ ಮಾಡಬೇಕು ಎಂಬುದನ್ನೇ ನಾಜಿ ಸಿದ್ಧಾಂತಿಗಳು ನಂಬಿದ್ದು.

ಲೆಬೆನ್‌ಸ್ರಾಮ್ ಎಂಬ ವಿಚಾರವು ಖಚಿತ ರೂಪ ಪಡೆದುಕೊಂಡಿದ್ದು ೧೯೦೧ರಲ್ಲಿ. ಆದರೂ ನಾಲ್ಕು ನೂರು ವರ್ಷಗಳ ಹಿಂದೆಯೇ (ಕೊಲಂಬಸ್ ಅಮೆರಿಕದಲ್ಲಿ ಕಾಲಿಟ್ಟ ಗಳಿಗೆಯಿಂದಲೇ) ಯುರೋಪ್ ಲೆಬೆನ್‌ಸ್ರಾಮ್ ಕುರಿತ ತನ್ನ ಅನ್ವೇಷಣೆಯನ್ನು ಪ್ರಾರಂಭಿಸಿತ್ತು. ಈ ಅನ್ವೇಷಣೆಯು ಐರೋಪ್ಯರನ್ನು ಆಫ್ರಿಕಾಕ್ಕೂ ಒಯ್ಯಿತು, ಅನಿಯಂತ್ರಿತವಾಗಿ ಒಂದಾದ ಮೇಲೊಂದರಂತೆ ಹತ್ಯಾಕಾಂಡವನ್ನೆಸಗುತ್ತ. ಜರ್ಮನ್‌ರು ಆಫ್ರಿಕಾದ ವಾಯವ್ಯ ಭಾಗದಲ್ಲಿದ್ದ ಹೆರಿರೊ ಗುಂಪಿನ ಬಹುತೇಕ ಜನಸಂಖ್ಯೆಯನ್ನು ನಿರ್ನಾಮ ಮಾಡಿದರು. ಬೆಲ್ಜಿಯನ್‌ರು ಕಾಂಗೋದಲ್ಲಿನ ತಮ್ಮ 'ವಾಣಿಜ್ಯ ವಿಸ್ತರಣೆಯ ಪ್ರಯೋಗ'ಕ್ಕೆ ಹತ್ತು ಮಿಲಿಯನ್ ಜೀವಗಳನ್ನು ಚೆಂಡಾಡಿದರು. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಬ್ರಿಟಿಷ್‌ರು, ಟಸ್ಮಾನಿಯಾ ಹಾಗೂ ಆಸ್ಟ್ರೇಲಿಯಾದ ಬಹುಪಾಲು ಮೂಲ ನಿವಾಸಿಗಳನ್ನು ನಿರ್ನಾಮ ಮಾಡಿದರು.

'ಎಕ್ಸ್‌ಟರ್ಮಿನೇಟ್ ಬ್ರೂಟ್ಸ್' ಕೃತಿಯ ಕರ್ತೃ ಸ್ವೆನ್ ಲಿಂಡ್‌ಕ್ವಿಸ್ಟ್‌ನ ವಾದವೇನೆಂದರೆ, "ಹಿಟ್ಲರ್‌ನ ಲೆಬೆನ್‌ಸ್ರಾಮ್ ಅನ್ವೇಷಣೆಯನ್ನು ಈ ಮೊದಲೇ ಇತರ ಐರೋಪ್ಯ ರಾಷ್ಟ್ರಗಳು ರೂಪಿಸಿದ್ದವು. ಇದು ನಾಜಿಗಳನ್ನು ಪೂರ್ವ ಯೂರೋಪ್ ಮತ್ತು ರಷ್ಯಾದತ್ತ ಮುನ್ನುಗ್ಗಲು ಪ್ರೇರೇಪಿಸಿತು. ಹಿಟ್ಲರ್‌ನ ವಸಾಹತುಶಾಹಿ ಮಹತ್ವಾಕಾಂಕ್ಷೆಯ ದಾರಿಗೆ ಪೂರ್ವ ಯುರೋಪ್ ಮತ್ತು ಪಶ್ಚಿಮ ರಷ್ಯಾದ

ಯಹೂದಿಗಳು ಅಡ್ಡಿಯಾಗಿದ್ದರು. ಆದ್ದರಿಂದ ಆಫ್ರಿಕಾ, ಅಮೆರಿಕ ಮತ್ತು ಏಷಿಯಾದ ಮೂಲ ನಿವಾಸಿಗಳಂತೆ ಅವರನ್ನೂ ಗುಲಾಮರನ್ನಾಗಿಸಬೇಕಿತ್ತು, ಇಲ್ಲ ಮುಗಿಸಬೇಕಿತ್ತು. ಹಾಗಾಗಿ, ಯಹೂದಿಗಳ ವಿರುದ್ಧ ನಾಜಿಗಳು ನಡೆಸಿದ ಅಮಾನವೀಯ ವರ್ಣ ಭೇದವನ್ನು ಕೆಟ್ಟ ಹುಚ್ಚಿನ ರೋಗಚೇಷ್ಟೆ ಎಂದು ತಳ್ಳಿಹಾಕುವಂತಿಲ್ಲ" ಎಂದು ಲಿಂಡ್‌ಕ್ವಿಸ್ಟ್ ಹೇಳುತ್ತಾರೆ. ಮತ್ತೆ ಹೇಳಬೇಕೆಂದರೆ ಇದೊಂದು ಬಹು ಬಳಕೆಯ ಮಿಶ್ರಣ – ಬಹು ಹಳೆಯ ವರ್ಣಭೇದ ನೀತಿಯೊಳಗೆ ಉಣಿ ಹಾಕಿದ ಆರ್ಥಿಕ ನಿಯತಿವಾದದ ಉತ್ಪನ್ನ. ಇದು ಆ ಕಾಲದ ಐರೋಪ್ಯ ಸಂಪ್ರದಾಯವನ್ನೂ ಬಹಳ ಚೆನ್ನಾಗಿ ಪೋಷಿಸಿದೆ.

ಒಟ್ಟಮನ್ ಸಾಮ್ರಾಜ್ಯದಲ್ಲಿ ಅರ್ಮೇನಿಯರ ನರಮೇಧ ನಡೆಸಿದ ರಾಜಕೀಯ ಪಕ್ಷವನ್ನು ಐಕ್ಯತೆ ಮತ್ತು ಪ್ರಗತಿಗಾಗಿ ಇರುವ ಸಮಿತಿ ಎಂದು ಕರೆದಿದ್ದು ಕಾಕತಾಳೀಯವೇನಲ್ಲ. ಐಕ್ಯತೆ (ಜನಾಂಗ / ಸಾಂಪ್ರದಾಯಿಕ / ಧಾರ್ಮಿಕ/ ರಾಷ್ಟ್ರೀಯ) ಮತ್ತು ಪ್ರಗತಿ (ಆರ್ಥಿಕ ನಿಯತಿವಾದ)ಯು ನರಮೇಧದ ಅವಳಿ ಭುಜಗಳಾಗಿವೆ!

ಇತಿಹಾಸದ ಈ ಓದಿನೊಂದಿಗೆ ಸಜ್ಜಾಗಿ, 'ಪ್ರಗತಿ'ಯ ಹೊಸಿಲಿನ ಮೇಲೆ ತುದಿಗಾಲಲ್ಲಿ ನಿಂತಿರುವ ದೇಶವು ನರಮೇಧದ ಹೊಸಿಲಿನ ಮೇಲೂ ತುದಿಗಾಲಲ್ಲಿ ನಿಂತಿದೆಯೇ ಎಂದು ಚಿಂತಿಸುವುದು ಯುಕ್ತವೆ? ಭಾರತವನ್ನು ಜಗತ್ತಿನಾದ್ಯಂತ ಪ್ರಗತಿ ಮತ್ತು ಜನತಂತ್ರದ ಪವಾಡ ಎಂದು ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ಬಹುಶಃ ಅದೂ ಸಹ ನರಮೇಧ ಎಸಗುವ ಅಂಚಿನಲ್ಲಿ ನಿಂತಿದೆ ಎಂದು ಭಾವಿಸಬಹುದೆ? ಇಲ್ಲಿ ಕೇವಲ ಸಲಹೆಯೇ ವಿಲಕ್ಷಣವಾಗಿ ಧ್ವನಿಸಬಹುದು. ಈ ಸಮಯದಲ್ಲಿ ನರಮೇಧವೆಂಬ ಪದ ಬಳಕೆ ಅಸಮರ್ಥನೀಯ ಎನಿಸಬಹುದು. ಹಾಗಾದರೂ ಭವಿಷ್ಯದತ್ತ ಕಣ್ಣು ಹಾಯಿಸಿದಾಗ ಮತ್ತು ಪ್ರಗತಿಯ ದೊರೆಗಳು ತಮ್ಮದೇ ಪ್ರಚಾರವನ್ನೂ, ಅವರು ಆಯ್ಕೆ ಮಾಡಿಕೊಂಡಿರುವ ಪ್ರಗತಿಯ ಮಾದರಿಗೆ ಪರ್ಯಾಯವೇ ಇಲ್ಲವೆಂದು ನಂಬಿದರೆ ಅವರ ದಾರಿಯಲ್ಲಿ ನಡೆಯಲು ಅವರು ಅನಿವಾರ್ಯವಾಗಿ ಕೊಲ್ಲಲೇಬೇಕು, ಬಹಳ ಸಂಖ್ಯೆಯಲ್ಲಿ ಕೊಲ್ಲಬೇಕು.

ಅರುಂಧತಿ ರಾಯ್ ಮಿಡತೆಗಳಿಗೆ ಕಿವಿಯೊಡ್ಡಿ...

ಸುದ್ದಿಗಳು ಸ್ವಲ್ಪ ಸ್ವಲ್ಪವಾಗಿ, ತುಣುಕಾಗಿ ಜಿನುಗುತ್ತಿರುವಂತೆ, ಕೊಲೆ, ಸಾವು, ಈಗಾಗಲೇ ಪ್ರಾರಂಭವಾಗಿವೆ ಎಂಬುದು ಸ್ಪಷ್ಟವಾಗಿ ಭಾಸವಾಗುತ್ತದೆ. ೧೯೮೯ರಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡ ಕೂಡಲೇ ಭಾರತ ಸರ್ಕಾರವು ಅಲಿಪ್ತ ಚಳುವಳಿಯಿಂದ ತನ್ನ ಸದಸ್ಯತ್ವವನ್ನು ಹಿಂತೆಗೆದುಕೊಂಡು, ಏಕ ಪಕ್ಷೀಯ ಒಕ್ಕೂಟದ ಸದಸ್ಯತ್ವಕ್ಕೆ ಸಹಿ ಹಾಕಿ, ಇಸ್ರೇಲ್ ಮತ್ತು ಅಮೆರಿಕ ತನಗೆ ಸಹಜ ಸಂಬಂಧಿಗಳೆಂದು ಪದೇ ಪದೇ ಉಲ್ಲೇಖಿಸಿತು. ಮೂವರೊಳಗಿನ ಸಮಾನ ಅಂಶವೆಂದರೆ, ಮೂವರೂ ನವ ವಸಾಹತುಶಾಹಿ, ಮಿಲಿಟರಿ ಕಸುಬಿನಲ್ಲಿ ಬಹಿರಂಗವಾಗಿಯೇ ತೊಡಗಿರುವುದು (ಭಾರತ ಕಾಶ್ಮೀರದಲ್ಲಿ, ಇಸ್ರೇಲ್ ಪ್ಯಾಲೆಸ್ಟೈನ್‌ನಲ್ಲಿ, ಮತ್ತು ಅಮೆರಿಕ ಇರಾಕ್‌ನಲ್ಲಿ).

ಎರಡು ಮುಖ್ಯ ರಾಜಕೀಯ ಪಕ್ಷಗಳಾದ ಬಿ.ಜೆ.ಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕ್ರಮವಾಗಿ ಐಕ್ಯತೆ ಮತ್ತು ಪ್ರಗತಿಯ ಭಾರತೀಯ ಅವತರಣಿಕೆಯ ಉನ್ನತಿಗಾಗಿ ಜಂಟಿ ಕಾರ್ಯಕ್ರಮದ ಸಾಹಸ ಕಾರ್ಯದಲ್ಲಿ ತೊಡಗಿವೆ. ಇವರ ಆಧುನಿಕ ಉನ್ಮಾದವೆಂದರೆ ರಾಷ್ಟ್ರೀಯತೆ ಮತ್ತು ಅಭಿವೃದ್ಧಿ. ಆಗೀಗ, ವಿಶೇಷವಾಗಿ ಚುನಾವಣೆಯ ಸಂದರ್ಭದಲ್ಲಿ ಅವರು ಬಹು ಬಳಕೆಯ ಚಿಲ್ಲರೆ ಜಗಳ ಪ್ರದರ್ಶಿಸುತ್ತಾರೆ. ತಮ್ಮ ತೆಕ್ಕೆಗೆ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)ಗಳಂತಹ ಗೊಣಗಾಡುವ ಸಂಬಂಧಿಗಳನ್ನು ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಐಕ್ಯತೆ ಯೋಜನೆ ಹಿಂದೂ ರಾಷ್ಟ್ರೀಯತೆಯನ್ನು ಪ್ರಸ್ತಾಪಿಸುತ್ತದೆ. (ಇದು ಭಾರತದಂತಹ ಬೃಹತ್ ಪ್ರಜಾತಂತ್ರಕ್ಕೆ ಬಹು ಮುಖ್ಯವಾದ ಹಿಂದೂ ವೋಟುಗಳ ಐಕ್ಯತೆಗಾಗಿ ಪ್ರಯತ್ನಿಸುತ್ತದೆ.) ಪ್ರಗತಿ ಯೋಜನೆಯೂ ಶೇ. ೧೦ ವಾರ್ಷಿಕ ಅಭಿವೃದ್ಧಿ ದರವನ್ನು ಸಾಧಿಸುವ (೧೦% annual growth rate) ಗುರಿಯನ್ನು ಹೊಂದಿವೆ.

ಬಿ.ಜೆ.ಪಿ. ಮತ್ತದರ ದಂಡುಗಳಾದ ಕೋಮುವಾದಿ ಸಂಘಟನೆಗಳ ನಿಯಂತ್ರಕ ವ್ಯವಸ್ಥೆ ಮತ್ತು ಸೈದ್ಧಾಂತೀಯ ಹೃದಯವಾಗಿರುವುದು ಆರ್.ಎಸ್.ಎಸ್. ಇದು ಐಕ್ಯತೆ ಯೋಜನೆಯ ಜವಾಬ್ದಾರಿ ಹೊತ್ತಿದೆ. ಆರ್.ಎಸ್.ಎಸ್. ೧೯೨೫ರಲ್ಲಿ ಪ್ರಾರಂಭವಾಯಿತು. ೧೯೩೦ರ ಹೊತ್ತಿಗೆ ಅದನ್ನು ಅದರ ಸಂಸ್ಥಾಪಕರಾಗಿದ್ದ, ಬೆನಿಟೊ ಮುಸೋಲಿನಿಯ ಅಭಿಮಾನಿಯಾಗಿದ್ದ ಹೆಡ್ಗೆವಾರ್, ಇಟಲಿಯ ಫ್ಯಾಸಿಸಂನ ದಾರಿಯಲ್ಲಿ ರೂಪಿಸಲು ಪ್ರಾರಂಭಿಸಿದರು. ಹಿಟ್ಲರ್ ಕೂಡ ಸ್ಫೂರ್ತಿಯ ರೂಪವಾಗಿದ್ದ / ವಾಗಿದ್ದಾನೆ. ಆರ್.ಎಸ್.ಎಸ್. ಬೈಬಲ್‌ನಂತಿರುವ ಚಿಂತನಗಂಗಾದ ಕೆಲವು ತುಣುಕುಗಳಿವು. ಹೆಡ್ಗೆವಾರ್‌ರ ಉತ್ತರಾಧಿಕಾರಿಯಾಗಿ ಆರ್.ಎಸ್.ಎಸ್.ನ ಮುಖ್ಯಸ್ಥರಾದ ಎಮ್. ಎಸ್. ಗೋಲ್ವಾಲ್ಕರ್; ೧೯೪೦ರಲ್ಲಿ ನಾವು ಅಥವ ರಾಷ್ಟ್ರತ್ವ ಕುರಿತು ಹೇಳಿರುವ ಮಾತುಗಳು ಹೀಗಿವೆ:

"ಮೊತ್ತಮೊದಲು ಮುಸ್ಲಿಮರು ಹಿಂದೂಸ್ಥಾನಕ್ಕೆ ಕಾಲಿಟ್ಟ ಕೇಡಿನ ದಿನದಿಂದ ಹಿಡಿದು ಇಲ್ಲಿಯವರೆಗೆ ಆ ಲೂಟಿಕೋರರ ಮೇಲೆ ಹಿಂದೂ ರಾಷ್ಟ್ರ ಪರಾಕ್ರಮದಿಂದ ಹೋರಾಡುತ್ತಿದೆ. ಜನಾಂಗೀಯ ಚೈತನ್ಯ ಎಚ್ಚೆತ್ತುಕೊಳ್ಳುತ್ತಿದೆ... ಹಿಂದೂಗಳ ನೆಲವಾದ ಹಿಂದೂಸ್ಥಾನವು ಹಿಂದೂ ರಾಷ್ಟ್ರವಾಗಿ ಜೀವಿಸುತ್ತದೆ, ಜೀವಿಸಲೇ ಬೇಕು..... ಇನ್ನೆಲ್ಲರೂ ರಾಷ್ಟ್ರೀಯ ಧ್ಯೇಯದ ದ್ರೋಹಿಗಳು ಮತ್ತು ಶತ್ರುಗಳು ಅಥವ ಉದಾರ ದೃಷ್ಟಿಕೋನದಲ್ಲಿ ಬುದ್ಧಿ ಹೀನರು...... ಹಿಂದೂಸ್ಥಾನದಲ್ಲಿ ಪರದೇಶಿ ಜನಾಂಗಗಳು ಸಂಪೂರ್ಣವಾಗಿ ಹಿಂದೂ ರಾಷ್ಟ್ರಕ್ಕೆ ಅಡಿಯಾಳುಗಳಾಗಿ, ಯಾವ ಹಕ್ಕು

ಬಾಧ್ಯತೆಗಳಿಲ್ಲದೆ, ವಿಶೇಷ ಪ್ರಯೋಜನೆಗಳಿಗೆ ಅರ್ಹರಾಗದೆ, ವಿಶೇಷ ಉಪಚಾರವಿರಲಿ ನಾಗರಿಕ ಹಕ್ಕುಗಳೂ ಸಹ ಇಲ್ಲದೆ ನೆಲೆಸಬಹುದು...

ಮುಂದುವರೆದು ತನ್ನ ಜನಾಂಗ ಮತ್ತು ಸಂಸ್ಕೃತಿಯ ಪರಿಶುದ್ಧತೆಯನ್ನು ಎತ್ತಿ ಹಿಡಿಯುವ ಸಲುವಾಗಿ, ಸೆಮಿಟಿಕ್ ಜನಾಂಗವಾದ ಯಹೂದಿಗಳಿಂದ ತನ್ನ ದೇಶವನ್ನು ಶುದ್ಧಿಗೊಳಿಸುವ ಮೂಲಕ ಜರ್ಮನಿ ಜಗತ್ತನ್ನೆ ಬೆಚ್ಚಿ ಬೀಳಿಸಿತು. ಇಲ್ಲಿ ಜನಾಂಗ ಹೆಮ್ಮೆಯ ಪರಾಕಾಷ್ಠೆಯು ಪ್ರಕಟಗೊಂಡಿದೆ..... ಇದೊಂದು ಒಳ್ಳೆಯ ಪಾಠ. ಹಿಂದೂಸ್ಥಾನದಲ್ಲಿರುವ ನಾವು ಇದನ್ನು ಕಲಿಯಲು ಮತ್ತು ಲಾಭ ಮಾಡಿಕೊಳ್ಳಲು ಮುಂದಾಗಬೇಕು.

(ಇಂತಹ ಸಂಘಟಿತ ದ್ವೇಷವನ್ನು ಹೇಗೆ ಎದುರಾಗುವಿರಿ? ಖಂಡಿತವಾಗಿಯೂ ಜಾತ್ಯತೀತ ಪ್ರೀತಿಯ ಮೂರ್ಖ ಉಪದೇಶಗಳಿಂದಲ್ಲ.)

೨೦೦೦ದ ಹೊತ್ತಿಗೆ ಆರ್.ಎಸ್.ಎಸ್ ತನ್ನ ಧರ್ಮ ತತ್ವವನ್ನು ಬೋಧಿಸುವ ೪೫೦೦೦ಕ್ಕಿಂತಲೂ ಹೆಚ್ಚಿನ ಶಾಖೆಗಳನ್ನು ಏಳು ಮಿಲಿಯನ್ ಸ್ವಯಂ ಸೇವಕರ ಸೇನೆಯನ್ನು ಹೊಂದಿತ್ತು. ಇದರಲ್ಲಿ ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಮಾಜಿ ಗೃಹಮಂತ್ರಿ ಎಲ್. ಕೆ. ಅದ್ವಾನಿ ಹಾಗೂ ಗುಜರಾತ್‌ನ ಮುಖ್ಯ ಮಂತ್ರಿ ನರೇಂದ್ರ ಮೋದಿಯವರೂ ಸೇರಿದ್ದಾರೆ. ಜೊತೆಗೆ ಮಾಧ್ಯಮದಲ್ಲಿನ ಹಿರಿಯರು, ಪೊಲೀಸು, ಸೈನ್ಯ, ಗುಪ್ತಚರ ಇಲಾಖೆಗಳು, ನ್ಯಾಯಾಂಗ ಮತ್ತು ಆಡಳಿತ ವ್ಯವಸ್ಥೆಯಲ್ಲಿರುವ ಆರ್.ಎಸ್.ಎಸ್ ಸಿದ್ಧಾಂತ – ಆಚರಿಸುವವರು ಹಾಗೂ ಹಿಂದುತ್ವದ ಅನೌಪಚಾರಿಕ ಭಕ್ತರೂ ಸೇರಿದ್ದಾರೆ. ಈ ಜನ ಬಂದು ಹೋಗುವ ರಾಜಕಾರಣಿಗಳಂತಲ್ಲ. ಇವರು ಸರ್ಕಾರಿ ವ್ಯವಸ್ಥೆಯ ಖಾಯಂ ಸದಸ್ಯರು.

ಆರ್.ಎಸ್.ಎಸ್‌ನ ನಿಜವಾದ ಶಕ್ತಿ ಇರುವುದು ಹಲವು ದಶಕಗಳ ಕಠಿಣ ದುಡಿಮೆಯ ಮೂಲಕ ಸಮಾಜದ ಎಲ್ಲ ಸ್ತರಗಳಲ್ಲಿ ಸಂಘಗಳನ್ನು ಕಟ್ಟಿ ಬೆಳೆಸಿರುವುದರಲ್ಲಿ. ಇಂತಹುದನ್ನು ಬೇರೆ ಇನ್ನಾವ ಸಂಘವೂ ಮಾಡಿಲ್ಲ. ಬಿ.ಜೆ.ಪಿ. ಅದರ ರಾಜಕೀಯ ರಂಗವಾಗಿದೆ. ಕಾರ್ಮಿಕ ಸಂಘಟನೆಯ ಶಾಖೆ (ಭಾರತೀಯ ಮಜ್ದೂರ್ ಸಂಘ), ಮಹಿಳಾ ಶಾಖೆ (ರಾಷ್ಟ್ರೀಯ ಸೇವಿಕಾ ಸಂಘ), ವಿದ್ಯಾರ್ಥಿ ಶಾಖೆ (ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್), ಆರ್ಥಿಕ ಶಾಖೆ (ಸ್ವದೇಶಿ ಜಾಗರಣ್ ಮಂಚ್) ಗಳು ಅದಕ್ಕಿವೆ.

ಅದರ ಮುಂಚೂಣಿ ಸಂಘ, ವಿದ್ಯಾ ಭಾರತಿ ಸರ್ಕಾರೇತರ ವಲಯದಲ್ಲಿರುವ ಬಹು ದೊಡ್ಡ ಶೈಕ್ಷಣಿಕ ಸಂಸ್ಥೆಯಾಗಿದೆ. ಅದರಲ್ಲಿ ಸರಸ್ವತಿ ವಿದ್ಯಾ ಮಂದಿರ ಶಾಲೆಗಳೂ ಸೇರಿದಂತೆ ಇರುವ ೧೪೦೦೦ ಶೈಕ್ಷಣಿಕ ಸಂಸ್ಥೆಗಳಲ್ಲಿ ೭೦೦೦೦ ಉಪಾಧ್ಯಾಯರು, ೧.೭ ಮಿಲಿಯನ್ ವಿದ್ಯಾರ್ಥಿಗಳು ಇದ್ದಾರೆ. ಅದರಡಿ ಅನೇಕ ಸಂಘಗಳು ಕೆಲಸ ಮಾಡುತ್ತಿವೆ. ಆದಿವಾಸಿಗಳು (ವನವಾಸಿ ಕಲ್ಯಾಣ್ ಪರಿಷದ್) ಸಾಹಿತ್ಯ (ಅಖಿಲ ಭಾರತ ಸಾಹಿತ್ಯ ಪರಿಷದ್), ಬುದ್ಧಿಜೀವಿಗಳು (ಪ್ರಜ್ಞಾ ಭಾರತಿ, ದೀನ್ ದಯಾಳ್ ರಿಸರ್ಚ್ ಇನ್‌ಸ್ಟಿಟ್ಯೂಟ್), ಇತಿಹಾಸಜ್ಞರು (ಭಾರತೀಯ ಇತಿಹಾಸ್ ಸಂಕಲನ್ ಯೋಜನಾಲಯ್), ಭಾಷೆ (ಸಂಸ್ಕೃತ್ ಭಾರತಿ), ಕೊಳಗೇರಿ ಜನರು (ಸೇವಾ ಭಾರತಿ, ಹಿಂದೂ ಸೇವಾ ಪ್ರತಿಷ್ಠಾನ), ಆರೋಗ್ಯ (ಸ್ವಾಮಿ ವಿವೇಕಾನಂದ ಮೆಡಿಕಲ್ ಮಿಷನ್, ನ್ಯಾಶನಲ್ ಮೆಡಿಕೋಸ್ ಆರ್ಗನೈಜೇಶನ್), ಕುಷ್ಠ ರೋಗಿಗಳು (ಭಾರತೀಯ ಕುಷ್ಠ ನಿವಾರಣ್ ಸಂಘ), ಸಹಕಾರ ಸಂಘಗಳು (ಸಹಕಾರ್ ಭಾರತಿ), ವೃತ್ತ ಪತ್ರಿಕೆ ಮತ್ತು ಇತರ ವಸ್ತುಗಳ ಪ್ರಕಟಣೆ (ಭಾರತ್ ಪ್ರಕಾಶನ್, ಸುರುಚಿ ಪ್ರಕಾಶನ್, ಲೋಕಹಿತ್ ಪ್ರಕಾಶನ್, ಗ್ಯಾನ್‌ಗಂಗಾ ಪ್ರಕಾಶನ್, ಅರ್ಚನ ಪ್ರಕಾಶನ್, ಭಾರತೀಯ ವಿಚಾರ್ ಸಾಧನ, ಸಾಧನ ಪುಸ್ತಕ್ ಮತ್ತು ಅಕ್ಷವಾಣಿ ಸಾಧನ್), ಜಾತಿ ಸಂಘಟನೆ (ಸಾಮಾಜಿಕ್ ಸಮರಸ್ತಾ ಮಂಚ್), ಧರ್ಮ ಮತ್ತು ಮತಾಂತರ (ವಿವೇಕಾನಂದ ಕೇಂದ್ರ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ್ ಮಂಚ್, ಬಜರಂಗ್ ದಳ್)..... ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಕಾಂಗ್ರೆಸ್ ಪ್ರಧಾನಿ ರಾಜೀವ್ ಗಾಂಧಿಯವರು ೧೯೮೯ರ ಜೂನ್ ೧೧ರಂದು ಆರ್.ಎಸ್.ಎಸ್‌ನವರಿಗೊಂದು ಉಡುಗೊರೆ ನೀಡಿದರು. ಅವರು, ಆರ್.ಎಸ್. ಎಸ್‌ನವರು, ರಾಮನ ಜನ್ಮಸ್ಥಾನವೆಂದು ಸಾಧಿಸುತ್ತಿದ್ದ ಅಯೋಧ್ಯೆಯ ಬಾಬ್ರಿ ಮಸೀದಿಯ ಬೀಗವನ್ನು ತೆರೆಯುವ ಕೃಪೆ ತೋರಿದರು. ಬಿ.ಜೆ.ಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ, ಅಯೋಧ್ಯೆಯಲ್ಲಿರುವ ಮಸೀದಿಯನ್ನು ಕೆಡವಿ ಮಂದಿರವನ್ನು ಕಟ್ಟುವ ನಿರ್ಣಯವನ್ನು ಜಾರಿಗೊಳಿಸಲಾಯಿತು. ಈ ನಿರ್ಣಯವು ವೋಟುಗಳಾಗಿ ಪರಿವರ್ತಿತವಾಗುವುದರಲ್ಲಿ ಸಂಶಯವಿಲ್ಲವೆಂದು ಎಲ್. ಕೆ. ಅದ್ವಾನಿ ಹೇಳಿದರು. ಅವರು ೧೯೯೦ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವಬೇಕೆಂದು ಒತ್ತಾಯಿಸಿ ಬೆಂಕಿ ರಥದ ಮೇಲೆ ದೇಶದ ಉದ್ದಗಲಕ್ಕೂ ರಥಯಾತ್ರೆ ನಡೆಸಿದರು. ಸಾಗಿದ ಹಾದಿಯುದ್ದಕ್ಕೂ ಗಲಭೆ, ರಕ್ತಪಾತವನ್ನು ಚಿಮ್ಮಿಕ್ಕುತ್ತ ಸಾಗಿದರು. ಆ ಪಕ್ಷಕ್ಕೆ ೧೯೯೧ರಲ್ಲಿ ೧೨೦ ಸ್ಥಾನಗಳು ಲೋಕಸಭೆಯಲ್ಲಿ ದೊರಕಿದವು (೧೯೮೪ರಲ್ಲಿ ಆ ಪಕ್ಷಕ್ಕೆ ದೊರೆತಿದ್ದು ಎರಡು ಸ್ಥಾನಗಳು ಮಾತ್ರ). ಅದ್ವಾನಿ ರಚಿಸಿದ ಉನ್ಮಾದ ರಾಗ ಮೇಳವು ೧೯೯೨ರಲ್ಲಿ ದಾಳಿಕೋರ ಗುಂಪು ಮಸೀದಿಯನ್ನು ಧ್ವಂಸಗೊಳಿಸಿದಾಗ ತಾರಕಕ್ಕೇರಿತು.

೧೯೯೮ರ ಹೊತ್ತಿಗೆ ಕೇಂದ್ರದಲ್ಲಿ ಬಿ.ಜೆ.ಪಿ. ಅಧಿಕಾರ ಪಡೆದುಕೊಂಡಿತು. ಅಧಿಕಾರಕ್ಕೇರಿ ಮಾಡಿದ ಮೊಟ್ಟ ಮೊದಲ ಕೆಲಸವೆಂದರೆ ಅಣು ಬಾಂಬ್‌ಗಳ ಸರಣಿ ಪ್ರಯೋಗ. ದೇಶಾದ್ಯಂತ ಫ್ಯಾಸಿಸ್ಟರು, ಕಾರ್ಪೋರೇಟ್ ಜನ, ರಾಜಕುವರರು, ದಿವಾಳಿ ಎದ್ದವರೆಲ್ಲರೂ ಸಮನಾಗಿ ಭಾರತದ ಹಿಂದೂ ಬಾಂಬ್ ಕುರಿತು ಸಂಭ್ರಮಾಚರಣೆ ನಡೆಸಿದರು. ಹಿಂದುತ್ವ, ಕ್ಷುಲ್ಲಕ ಪಕ್ಷ ರಾಜಕಾರಣವನ್ನು ಮೀರಿತು.

೨೦೦೨ರಲ್ಲಿ ನರೇಂದ್ರ ಮೋದಿ ಸರ್ಕಾರವು ಗುಜರಾತ್‌ನ ನರಮೇಧವನ್ನು ಯೋಜಿಸಿ ಕಾರ್ಯಗತಗೊಳಿಸಿತು. ನರಮೇಧ ನಡೆದ ಕೆಲ ತಿಂಗಳ ನಂತರ ನಡೆದ ಚುನಾವಣೆಯಲ್ಲಿ ಅತಿ ಹೆಚ್ಚಿನ ಬಹುಮತದೊಂದಿಗೆ ಮೋದಿ ಅಧಿಕಾರಕ್ಕೆ ಬಂದರು. ಆತ ಹತ್ಯಾಕಾಂಡದಲ್ಲಿ ತೊಡಗಿದ್ದವರಿಗೆ ಸಂಪೂರ್ಣ ಅಭಯ ರಕ್ಷೆ ನೀಡುವ ಭರವಸೆ ನೀಡಿದರು. ಕೆಲವೇ ಕೆಲ ಅಪರಾಧಗಳು ಸಾಬೀತಾದವು. ಆ ಅಪರಾಧಿಗಳು ಕೆಳ ಹಂತದ ಕಾಲಾಳುಗಳು. ಮರೆಯಲ್ಲಿದ್ದ ಯೋಜನಾ ಚತುರರಲ್ಲ.

ನರಮೇಧ ಹತ್ಯೆಗೆ ಪೂರ್ವಾಪೇಕ್ಷಿತ ಅಗತ್ಯವೆಂದರೆ ಅಭಯರಕ್ಷೆ. ಕೊಲೆಗಡುಕರಿಗೆ ಅಭಯರಕ್ಷೆ ನೀಡುವ ಮಹಾನ್ ಸಂಪ್ರದಾಯ ಭಾರತಕ್ಕೆ ಇದೆ. ಇದರ ಬಗ್ಗೆ ವಿವರಗಳ ಸಂಪುಟಗಳನ್ನೇ ನಾನು ಒದಗಿಸಬಲ್ಲೆ.

ಪ್ರಜಾತಂತ್ರದಲ್ಲಿ ನರಮೇಧದ ನಂತರದ ಅಭಯ ರಕ್ಷೆಗೆ 'ಸೂಕ್ತ ವಾಹಕಗಳ' (Proper channel) ಮೂಲಕ ಮನವಿ ಮಾಡಿಕೊಳ್ಳಬೇಕು. ಇವೆಲ್ಲವೂ ಕಾರ್ಯವಿಧಾನಗಳೆ.

ಹಲವಾರು ಸಾಮೂಹಿಕ ಕಗ್ಗೊಲೆಗಳ ಪ್ರಕರಣಕ್ಕೆ ಗುಜರಾತ್ ಸರ್ಕಾರ ನೇಮಿಸಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಅದಾಗಲೇ ಅಪರಾಧಿಗಳ ಪರ ಹಾಜರಾಗಿದ್ದರು. ಅವರಲ್ಲಿ ಹಲವರು ಆರ್.ಎಸ್.ಎಸ್ ಅಥವ ವಿ.ಹೆಚ್.ಪಿಗೆ ಸೇರಿದವರಾಗಿದ್ದರು ಮತ್ತು ಪ್ರತಿನಿಧಿಸಬೇಕಾಗಿದ್ದವರ

ವಿರುದ್ಧ ಬಹಿರಂಗವಾಗಿಯೇ ವೈರತ್ವ ಹೊಂದಿದ್ದರು. ಬದುಕುಳಿದ ಸಾಕ್ಷಿಗಳು ಪ್ರಕರಣ ದಾಖಲಿಸಲು ಪೊಲೀಸ್ ಠಾಣೆಗೆ ಹೋದಾಗ, ಅವರ ಹೇಳಿಕೆಗಳನ್ನು ತಪ್ಪುತಪ್ಪಾಗಿ ದಾಖಲಿಸಲಾಗಿದೆ ಹಾಗೂ ಅಪರಾಧಿಗಳ ಹೆಸರನ್ನು ದಾಖಲಿಸಲು ನಿರಾಕರಿಸಲಾಗಿದೆ. ಇನ್ನೂ ಕೆಲವು ಪ್ರಕರಣಗಳಲ್ಲಿ ತಮ್ಮ ಕುಟುಂಬಗಳು ಕಗ್ಗೊಲೆಯಾದುದನ್ನು (ದೇಹಗಳು ದೊರೆಯದಂತೆ ಸುಟ್ಟು ಹಾಕಲಾಗಿತ್ತು.) ಕಣ್ಣಾರೆ ಕಂಡವರು ಹೇಳಿದರೂ ಪೊಲೀಸರು ಕೊಲೆ ಪ್ರಕರಣ ದಾಖಲಿಸಲು ನಿರಾಕರಿಸಿದ್ದಾರೆ.

ಕವಿ, ಕಾಂಗ್ರೆಸ್ ರಾಜಕಾರಣಿ ಇಹ್‌ಸಾನ್ ಜೆಫ್ರಿಯನ್ನು ರಾಜ್‌ಕೋಟ್ ಚುನಾವಣೆಯ ಸಮಯದಲ್ಲಿ ಮೋದಿ ವಿರುದ್ಧ ಪ್ರಚಾರ ಮಾಡಿದ ತಪ್ಪಿಗೆ ಸಾರ್ವಜನಿಕವಾಗಿ ಕೊಚ್ಚಿಹಾಕಲಾಯಿತು (ಆತನ ಸಹ ಕಾಂಗ್ರೆಸ್ಸಿಗನೆ ಮುಂದಾಳತ್ವ ವಹಿಸಿದ ಗುಂಪಿನಿಂದ ಹತನಾದ). "ಐದು ಜನ ಜೆಫ್ರಿಯನ್ನು ಹಿಡಿದುಕೊಂಡರು, ಒಬ್ಬ ಅವನತ್ತ ಕತ್ತಿ ಬೀಸಿದ..... ಆತನ ಕೈಗಳನ್ನು ತುಂಡರಿಸಿದರು, ನಂತರ ಆತನ ಕಾಲುಗಳನ್ನು..... ನಂತರ ಉಳಿದೆಲ್ಲವನ್ನು..... ತುಂಡು ತುಂಡಾಗಿ ಕತ್ತರಿಸಿದ ನಂತರ, ಅವರೇ ಸೇರಿಸಿದ್ದ ಕಟ್ಟಿಗೆ ಮೇಲಿಟ್ಟು ಬೆಂಕಿ ಹಚ್ಚಿ ಆತನನ್ನು ದಹಿಸಿದರು."

ಜೆಫ್ರಿಯನ್ನು ಭೀಕರವಾಗಿ ಕೊಂದು, ಎಪ್ಪತ್ತು ಜನರನ್ನು ಕಗ್ಗೊಲೆ ಮಾಡಿ, ಹನ್ನೆರಡು ಜನ ಮಹಿಳೆಯರ ಮೇಲೆ ಗುಂಪು ಅತ್ಯಾಚಾರ ಮಾಡಿ ಜೀವಂತವಾಗಿ ಸುಡುತ್ತಿದ್ದಾಗ ಅಹಮದಾಬಾದ್‌ನ ಪೊಲೀಸ್ ಕಮೀಷನರ್ ಪಿ. ಸಿ. ಪಾಂಡೆಯವರು ನೆರೆಯವರನ್ನು ಭೇಟಿ ಮಾಡುವಷ್ಟು ಮಾತ್ರ ಕರುಣೆ ತೋರಿದರು. ಮೋದಿ ಮರುಚುನಾಯಿತರಾದಾಗ ಪಾಂಡೆಯವರಿಗೆ ಬಡ್ತಿ ನೀಡಿ ಗುಜರಾತ್‌ನ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ ನೇಮಕ ಮಾಡಲಾಯಿತು. ಕೊಲೆಯ ಸಂಪೂರ್ಣ ಸಲಕರಣೆಗಳು ಸೂಕ್ತ ಜಾಗಗಳಲ್ಲಿ ಸುರಕ್ಷಿತವಾಗಿವೆ. ಸುಪ್ರೀಂ ಕೋರ್ಟ್ ಬೆದರಿಕೆ ಹುಟ್ಟಿಸುವ ದನಿ ಮಾಡಿ ನಂತರ ವಿಷಯವನ್ನು ಥಂಡಾ ಹೊಡೆಸಿತು. ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಕೂಗೆಬ್ಬಿಸಿದವು ಆದರೆ ಏನನ್ನು ಮಾಡಲಿಲ್ಲ.

ತೆಹಲ್ಕಾ ಪತ್ರಿಕೆಯು ನಡೆಸಿದ ಕುಟುಕು ಕಾರ್ಯಾಚರಣೆಯನ್ನು ಇತ್ತೀಚೆಗೆ ನ್ಯೂಸ್ ಚಾನೆಲ್ ಒಂದರಲ್ಲಿ ಬಿತ್ತರಿಸಲಾಯಿತು. ಬಾಬು ಬಜರಂಗಿಯಲ್ಲದೆ, ಒಬ್ಬ ಕೊಲೆಗಾರನ ನಂತರ ಮತ್ತೊಬ್ಬ ಹೇಗೆ ನರಮೇಧವನ್ನು ಮಾಡಬೇಕೆಂದು ಯೋಜಿಸಲಾಗಿತ್ತು, ವ್ಯವಸ್ಥಿತವಾಗಿ ಕಾರ್ಯಗತಗೊಳಿಸಲಾಯಿತು. ಹೇಗೆ ಮೋದಿ, ಹಿರಿಯ ರಾಜಕಾರಣಿಗಳು ಮತ್ತು ಪೊಲೀಸ್ ಅಧಿಕಾರಿಗಳು ವೈಯಕ್ತಿಕವಾಗಿ ಶಾಮೀಲಾಗಿದ್ದಾರೆ, ಎಂಬುದನ್ನು ಹೇಳಿದನು. ಈ ಯಾವ ಮಾಹಿತಿಯೂ ಹೊಸದಲ್ಲ. ಆದರೆ ಆ ಕೊಲೆಗಡುಕರು ನ್ಯೂಸ್ ನೆಟ್‌ವರ್ಕ್‌ನಲ್ಲಿ ಅಪರಾಧವನ್ನು ಒಪ್ಪಿಕೊಂಡದ್ದಷ್ಟೇ ಅಲ್ಲ ಆ ಬಗ್ಗೆ ಬಡಾಯಿ ಕೊಚ್ಚಿದರು. ಕುಟುಕು ಕಾರ್ಯಾಚರಣೆ ಕುರಿತ ಅತಿ ಉತ್ಸಾಹದ ಸಾರ್ವಜನಿಕ ಪ್ರತಿಕ್ರಿಯೆಯು ಕೋಪದ್ದಾಗಿರದೇ, ಸಮಯದ ಬಗ್ಗೆ ಅನುಮಾನ ವ್ಯಕ್ತಪಡಿಸಿತು. ಈ ರೀತಿ ಬಹಿರಂಗಗೊಂಡದ್ದು ಮೋದಿಗೆ ಚುನಾವಣೆ ಗೆಲ್ಲಲು ಅನುಕೂಲ ಮಾಡಿಕೊಡುತ್ತದೆ ಎಂದು ಬಹುಪಾಲು ಜನ ನಂಬಿದ್ದರು. ಇನ್ನೂ ಕೊಂಚ ಜನ ಕುಟುಕು ಕಾರ್ಯಾಚರಣೆಯನ್ನು ಮೋದಿಯೇ ಆಯೋಜಿಸಿದ್ದು ಎಂದು ನಂಬಿದ್ದು ವಿಲಕ್ಷಣವಾಗಿತ್ತು. ಆತ ಚುನಾವಣೆಯಲ್ಲಿ ಗೆದ್ದ,

"ಅರ್ಮೇನಿಯನ್ ಜೆನೋಸೈಡ್'ನ ಕರ್ತೃ ಪೀಟರ್ ಬಾಲ್ಕಿಯಾನ್ ಹೇಳುತ್ತಾನೆ: ನರಮೇಧ ನಡೆಸಲು ಒಂದು ಉಪ ಗುಂಪನ್ನು ದೀರ್ಘಕಾಲ ಅಂಚಿಗೆ ತಳ್ಳಬೇಕು (marginalize)." ಈ ಅಳತೆ ಗೋಲನ್ನು ಭಾರತದಲ್ಲಿ ಚೆನ್ನಾಗಿ ಮಾನ್ಯ ಮಾಡಲಾಗಿದೆ. ಭಾರತದ ಮುಸ್ಲಿಮ್‌ರನ್ನು ವ್ಯವಸ್ಥಿತವಾಗಿ ಅಂಚಿಗೆ ದೂಡಲಾಗುತ್ತಿದ್ದು ಅವರೀಗ ಜಾತೀಯತೆಯ ಹಿಂದೂ ಸಮಾಜ ಮತ್ತು ಧರ್ಮ ಗ್ರಂಥಗಳ ಮೂಲಕ ಶತಶತಮಾನಗಳಿಂದ ಅಂಚಿಗೆ ದೂಡಲ್ಪಟ್ಟಿರುವುದು ಅಲ್ಲದೆ, ಅಮಾನುಷಗೊಳಿಸಲಾಗಿರುವ ದಲಿತರು ಮತ್ತು ಆದಿವಾಸಿಗಳೊಂದಿಗೆ ಸೇರಿಸಲ್ಪಟ್ಟಿದ್ದಾರೆ.

ಈ ಬಾರಿ ಗೆದ್ದದ್ದು ಐಕ್ಯತೆ ಮತ್ತು ಪ್ರಗತಿಯ ಪ್ಲೇಟ್‌ನ ಮೇಲೆ. ತಾನೇ ಸರ್ವಸ್ವವಾಗಿ. ಈಗ ಬಿ.ಜೆ.ಪಿ ರ‍್ಯಾಲಿಗಳಲ್ಲಿ ಸಾವಿರಾರು ಅಭಿಮಾನಿಗಳು ಫ್ಯಾಸಿಸ್ಟ್ ಮೋದಿ ಮುಖವಾಡಗಳನ್ನು ತೊಟ್ಟು ಸಾವಿನ ಮಂತ್ರ ಘೋಷಣೆ ಮಾಡುತ್ತಿದ್ದಾರೆ. ಫ್ಯಾಸಿಸ್ಟ್ ಪ್ರಜಾತಾಂತ್ರಿಕನೊಬ್ಬ ಈಗ ಭೌತಿಕವಾಗಿ ಲಕ್ಷೋಪಲಕ್ಷ ಚಿಕ್ಕ ಚಿಕ್ಕ ಫ್ಯಾಸಿಸ್ಟ್‌ಗಳಾಗಿ ಮಾರ್ಪಾಡಾಗಿದ್ದಾನೆ. ಇವು ಪ್ರಜಾತಂತ್ರದ ಸಂತಸಗಳು! ನಾಜಿ ಜರ್ಮನಿಯಲ್ಲಿ ಹಿಟ್ಲರ್‌ನ ಮುಖವಾಡ ತೊಡುವ ಧೈರ್ಯವನ್ನು ಯಾರಾದರೂ ಮಾಡುತ್ತಿದ್ದರೇ!

'ಗುಜರಾತ್ ನೀಲಿನಕ್ಷೆ'ಯನ್ನು ಬಿ.ಜೆ.ಪಿ ಆಡಳಿತವಿರುವ ಒರಿಸ್ಸಾ, ಛತ್ತೀಸ್‌ಗಢ, ಜಾರ್ಖಂಡ್, ರಾಜಸ್ಥಾನ, ಮಧ್ಯಪ್ರದೇಶ ಮತು ಕರ್ನಾಟಕಗಳಲ್ಲಿ ಮರು ಸೃಷ್ಟಿಸುವ ತಯಾರಿಯು ಸದ್ಯ ನಡೆಯುತ್ತಿದೆ.

"ಅರ್ಮೇನಿಯನ್ ಜೆನೋಸೈಡ್'ನ ಕರ್ತೃ ಪೀಟರ್ ಬಾಲ್ಕಿಯಾನ್ ಹೇಳುತ್ತಾನೆ: ನರಮೇಧ ನಡೆಸಲು ಒಂದು ಉಪ ಗುಂಪನ್ನು ದೀರ್ಘಕಾಲ ಅಂಚಿಗೆ ತಳ್ಳಬೇಕು (marginalize)." ಈ ಅಳತೆಗೋಲನ್ನು ಭಾರತದಲ್ಲಿ ಚೆನ್ನಾಗಿ ಮಾನ್ಯ ಮಾಡಲಾಗಿದೆ. ಭಾರತದ ಮುಸ್ಲಿಮ್‌ರನ್ನು ವ್ಯವಸ್ಥಿತವಾಗಿ ಅಂಚಿಗೆ ದೂಡಲಾಗುತ್ತಿದ್ದು ಅವರೀಗ ಜಾತೀಯತೆಯ ಹಿಂದೂ ಸಮಾಜ ಮತ್ತು ಧರ್ಮಗ್ರಂಥಗಳ ಮೂಲಕ ಶತಶತಮಾನಗಳಿಂದ ಅಂಚಿಗೆ ದೂಡಲ್ಪಟ್ಟಿರುವುದು ಅಲ್ಲದೆ, ಅಮಾನುಷಗೊಳಿಸಲಾಗಿರುವ ದಲಿತರು ಮತ್ತು ಆದಿವಾಸಿಗಳೊಂದಿಗೆ ಸೇರಿಸಲ್ಪಟ್ಟಿದ್ದಾರೆ. (ಒಂದು ಕಾಲದಲ್ಲಿ ಸವರ್ಣೀಯರು ಮಾಡದಿದ್ದ ಕೆಲಸಗಳನ್ನು ಮಾಡಿಸಲು ದಲಿತರನ್ನು ಅಮಾನುಷಗೊಳಿಸಲಾಗಿತ್ತು. ಈಗ ಯಾಂತ್ರೀಕರಣದಿಂದಾಗಿ ಆ ಕೆಲಸವೂ ಅನಗತ್ಯವಾಗಿದೆ.) ದಲಿತರನ್ನು ಮುಸ್ಲಿಮರ ವಿರುದ್ಧ, ಆದಿವಾಸಿಗಳನ್ನು ದಲಿತರ ವಿರುದ್ಧ ತಿರುಗಿ ಬೀಳುವಂತೆ ಮಾಡುವುದು ಆರ್.ಎಸ್.ಎಸ್‌ನ ಕೆಲಸದ ಭಾಗವಾಗಿದೆ.

ಅರುಂಧತಿ ರಾಯ್
ಮಿಡಿತಗಳಿಗೆ
ಕಿವಿಯೊಡ್ಡಿ...

'ಜನರು' ಐಕ್ಯತೆಯ ಯೋಜನೆ ಮತ್ತದರ ದ್ವೇಷದ ತತ್ವದಲ್ಲಿ ತೊಡಗಿರುವಾಗ, ಭಾರತದ ಪ್ರಗತಿಯು ತ್ವರಿತವಾಗಿ ಮುನ್ನಡೆಯುತ್ತಿದೆ. ಖಾಸಗೀಕರಣ ಮತ್ತು ಉದಾರೀಕರಣದಂತ ಹೊಸ ಯುಗದ ಪರಿಣಾಮದಿಂದ ದೇಶದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಸಾರ್ವಜನಿಕ ಮೂಲಭೂತ ಸೌಕರ್ಯಗಳು ಖಾಸಗಿ ಕಾರ್ಪೋರೇಷನ್‌ಗಳಿಗೆ ಮಾರಾಟವಾಗಿವೆ. ಇದು ಊಹಿಸಲೂ ಸಾಧ್ಯವಿಲ್ಲದ ಶ್ರೀಮಂತ ವರ್ಗ ಮತ್ತು ಬೆಳೆಯುತ್ತಿರುವ ಮಧ್ಯಮ ವರ್ಗಗಳನ್ನು ಹುಟ್ಟು ಹಾಕಿದ್ದು, ಅವರು ಹೊಸ ದೈವಾಜ್ಞೆಯ ಕಟ್ಟಾ ಬೋಧಕರಾಗಿದ್ದಾರೆ.

ಪ್ರಗತಿ ಯೋಜನೆಗೆ ತನ್ನದೇ ಆದ ನಿರ್ಭಯತೆ ಮತ್ತು ತಂತ್ರಗಳ ಬಳಕೆಯ ಸಂಪ್ರದಾಯವಿದೆ. ಇದು ಭೀಕರತೆಯಲ್ಲಿ, ಐಕ್ಯತೆ ಯೋಜನೆಗಿರುವ ವಿಸ್ತಾರವಾದ ವ್ಯವಸ್ಥೆಗಿಂತ ಕಡಿಮೆ ಏನಿಲ್ಲ. ಅದರ ಹೃದಯ ಭಾಗದಲ್ಲಿ ಭಾರತದ ಅತ್ಯಂತ ಪ್ರಬಲ ಸಂಸ್ಥೆಯಾದ ಸುಪ್ರೀಂ ಕೋರ್ಟ್ ಇದೆ. ಸುಪ್ರೀಂ ಕೋರ್ಟ್ ತೀವ್ರಗತಿಯಲ್ಲಿ ಸಾಗುತ್ತ ಕಾರ್ಪೋರೇಟ್ ಶಕ್ತಿಯ ಆಧಾರಸ್ಥಂಭವಾಗುತ್ತಿದೆ. ಒಂದಾದಮೇಲೊಂದರಂತೆ ಅಣೆಕಟ್ಟು ಕಟ್ಟಲು, ನದಿಗಳನ್ನು ಜೋಡಿಸಲು, ವಿವೇಚನರಹಿತ ಗಣಿಗಾರಿಕೆಗೆ, ಅರಣ್ಯ ಮತ್ತು ಜಲ ಸಂಪನ್ಮೂಲದ ನಾಶಕ್ಕೆ ಆಜ್ಞೆ ನೀಡುತ್ತಿದೆ. ಇವೆಲ್ಲವನ್ನು ನರಮೇಧಕ್ಕೆ ಪೀಠಿಕೆಯಾದ ಪರಿಸರ ಮೇಧ ಎಂದು ವಿವರಿಸಬಹುದು. (ನ್ಯಾಯಾಲಯ ನಿಂದನೆಯು ಕ್ರಿಮಿನಲ್ ಅಪರಾಧವಾಗಿದ್ದು ಸೆರೆವಾಸದ ಶಿಕ್ಷೆ ನೀಡಬಹುದು.)

ವ್ಯಂಗ್ಯವೆಂದರೆ ಮುಕ್ತ ಮಾರುಕಟ್ಟೆ ಯುಗವು ಹಿಂದೆಂದೂ ಭಾರತದಲ್ಲಿ ಹೂಡದ ಅತ್ಯಂತ ಯಶಸ್ವಿ ವಿಘಟಿತ (Seccessionist) ಹೋರಾಟಕ್ಕೆ ಎಡೆ ಮಾಡಿಕೊಟ್ಟಿದೆ. ವಿಘಟಿತ ಮಧ್ಯಮ ಮತ್ತು ಮೇಲ್ವರ್ಗಗಳು ಶ್ರೇಣಿಯ ಉತ್ತುಂಗದಲ್ಲಿ ತಮ್ಮದೇ ಸಾಮ್ರಾಜ್ಯವನ್ನು ಹೊಂದಿದ್ದು ಅಲ್ಲಿ ಜಗತ್ತಿನ ಇತರ ಶ್ರೀಮಂತರೊಂದಿಗೆ ಬೆರೆತುಹೋಗಿದ್ದಾರೆ. ಈ ಆಕಾಶದ ಮೇಲಿನ ಸಾಮ್ರಾಜ್ಯವು ತಾನೇ ಒಂದು ವಿಶ್ವವಾಗಿದ್ದು ಉಳಿದ ಭಾರತದ ಗಾಳಿಯೂ ಆಡದಂತೆ ಮುಚ್ಚಲ್ಪಟ್ಟಿದೆ. ಈ ವಿಶ್ವಕ್ಕೆ ತನ್ನದೇ ಸುದ್ದಿ ಪತ್ರಿಕೆಗಳು, ಸಿನಿಮಾಗಳು, ಟಿ.ವಿ. ಕಾರ್ಯಕ್ರಮಗಳು, ನೈತಿಕತೆ ಆಟಗಳು, ಸಾರಿಗೆ ವ್ಯವಸ್ಥೆಗಳು, ಮಾಲ್‌ಗಳು, ಮತ್ತು ಬುದ್ಧಿಜೀವಿಗಳು ಇದ್ದಾರೆ. ನೀವೇನಾದರೂ ಅಲ್ಲಿ ಬರೀ ಸಂತೋಷವೇ ಸಂತೋಷವೆಂದು ಭಾವಿಸಲು ಪ್ರಾರಂಭಿಸಿದರೆ ತಪ್ಪಾಗುತ್ತದೆ. ಅದಕ್ಕೆ ತನ್ನದೇ ದುರಂತಗಳಿವೆ, ತನ್ನದೇ ಪರಿಸರ ಸಂಬಂಧಿ ಸಮಸ್ಯೆಗಳಿವೆ (ಪಾರ್ಕಿಂಗ್ ಸಮಸ್ಯೆ, ನಗರದ ವಾಯು ಮಾಲಿನ್ಯ), ತನ್ನದೇ ವರ್ಗ ಸಂಘರ್ಷವಿದೆ, ಉದಾಹರಣೆಗೆ: 'ಯೂತ್ ಫಾರ್ ಇಕ್ವಾಲಿಟಿ' ಎಂಬ ಸಂಸ್ಥೆಯು ಮೀಸಲಾತಿ ವಿಷಯವನ್ನು ಕೈಗೆತ್ತಿಕೊಂಡಿದೆ. ಕಾರಣ ಭಾರತದ ಧೂಳಾಗಿರುವ ಕೆಳ ಜಾತಿಗಳಿಂದ ಮೇಲ್ಜಾತಿಗಳು ತಾರತಮ್ಯಕ್ಕೆ ಒಳಗಾಗಿವೆ ಎಂದು ಅದು ಭಾವಿಸಿದೆ. ಅದಕ್ಕೆ ತನ್ನದೇ ಜನ ಚಳುವಳಿಗಳಿವೆ ಮತ್ತು ಮೇಣದ ಬತ್ತಿ ಜಾಗರಣೆಗಳಿವೆ. (ಬಾರ್ ಒಂದರಲ್ಲಿ ಗುಂಡೇಟಿನಿಂದ ಸತ್ತ ರೂಪದರ್ಶಿ ಜೆಸ್ಸಿಕಾಳಿಗೆ ನ್ಯಾಯ ಕೋರಿ) ತನ್ನದೇ ಜನಪರ ಕಾರಿದೆ. (ಇತ್ತೀಚೆಗೆ ಟಾಟಾ ಕಂಪೆನಿ ಜನಪರ

ಕಾರನ್ನು ಬಿಡುಗಡೆ ಮಾಡಿತು.) ಅದಕ್ಕೆ ತನ್ನದೇ ಆದ ಕನಸುಗಳೂ ಇವೆ. ಟಿ.ವಿ. ಜಾಹೀರಾತುಗಳ ರೂಪ ಪಡೆಯುವ ಕನಸಿನಲ್ಲಿ ಭಾರತದ ಸಿ.ಇ.ಒಗಳು (ಗಂಡಸರ ಫೇರ್ ಅಂಡ್ ಲವ್ಲೀ ಕ್ರೀಮ್ ಬಳಿದುಕೊಂಡ) ಕಾಲ್ಪನಿಕ ಈಸ್ಟ್ ಇಂಡಿಯಾ ಕಂಪೆನಿಯೂ ಸೇರಿದಂತೆ ಅಂತರ ರಾಷ್ಟ್ರೀಯ ಕಂಪೆನಿಗಳನ್ನೂ ಕೊಂಡುಕೊಳ್ಳುತ್ತಾರೆ. ಹಲ್ಲು ಗಿಂಜುತ್ತ ಬಿಳಿ ಹೆಂಗಸರು (ವಿಜಯದ ಅಂತಿಮ ಕೊಡುಗೆಯಾಗಿ ಮಲಗುವುದನ್ನೆ ಅತ್ಯಾಸೆ ಪಡುವವರಂತೆ ಕಾಣುವ) ಮೃದು ಹೊಸ ಆಫೀಸಿನೊಳಗೆ ಅವರನ್ನು ಒಯ್ಯುತ್ತಾರೆ. ಶ್ಲಾಘಿಸುತ್ತಿರುವ ಬಿಳಿ ಗಂಡಸರು ಹೊಸ ರಾಜರುಗಳಿಗೆ ದಾರಿ ಮಾಡಿಕೊಡಲು ಸಿದ್ಧರಿರುತ್ತಾರೆ. ಇದೇ ಹೊತ್ತಿನಲ್ಲಿ ಸ್ಟೇಡಿಯಂನಲ್ಲಿ ನೆರೆದ ಜನಸ್ತೋಮವು ಎದ್ದೆದ್ದು ಭಾರತ! ಭಾರತ!! ಎಂದು ಉದ್ಗರಿಸುತ್ತದೆ (ತಮ್ಮ ಜೇಬಿನಲ್ಲಿ ಕ್ರೆಡಿಟ್ ಕಾರ್ಡುಗಳನ್ನಿಟ್ಟುಕೊಂಡು).

ಆದರೆ ಒಂದು ಸಮಸ್ಯೆ ಇದೆ. ಆ ಸಮಸ್ಯೆ ಎಂದರೆ ಲೆಬೆನ್‌ಸ್ರಾಮ್. ಸಾಮ್ರಾಜ್ಯಕ್ಕೆ ತನ್ನದೇ ಆದ ಲೆಬೆನ್ ಸ್ರಾಮ್‌ನ ಅಗತ್ಯವಿದೆ. ಆಕಾಶದಲ್ಲಿನ ಸಾಮ್ರಾಜ್ಯಕ್ಕೆ ಲೆಬೆನ್ ಸ್ರಾಮ್ ಸಿಗುವುದೆಲ್ಲಿ? ಆಕಾಶದ ನಾಗರಿಕರು ಹಳೆಯ ರಾಷ್ಟ್ರಗಳತ್ತ ನೋಡುತ್ತಾರೆ. ಅವರಿಗೆ ಒರಿಸ್ಸಾದ ಬಾಕ್ಸೈಟ್ ಗಣಿಗಳ ಮೇಲೆ, ಜಾರ್ಖಂಡ್ ಮತ್ತು ಛತ್ತೀಸಗಢ್‌ನ ಕಬ್ಬಿಣದ ಗಣಿಗಳ ಮೇಲೆ ಕೂತಿರುವ ಆದಿವಾಸಿಗಳು ಕಾಣಿಸುತ್ತಾರೆ. ರಾಸಾಯನಿಕ ಸಂಕೀರ್ಣವಾಗಬೇಕಿದ್ದ ಪ್ರಧಾನ ನೆಲದ ಮೇಲೆ ಕುಳಿತಿರುವ ನಂದಿಗ್ರಾಮದ ಜನರು (ದಲಿತರು, ಮುಸ್ಲಿಮ್‌ರು) ಕಾಣಿಸುತ್ತಾರೆ. ಸಾವಿರಾರು ಎಕರೆ ವ್ಯವಸಾಯ ಭೂಮಿಯನ್ನು ಕಂಡು ಈ ನೆಲವು ನಮ್ಮ ಕೈಗಾರಿಕೆಗಳಿಗಾಗಿ ವಿಶೇಷ ಆರ್ಥಿಕ ವಲಯಗಳಾಗಬೇಕಿತ್ತು ಎಂದು ಯೋಚಿಸುತ್ತಾರೆ; ಸಿಂಗೂರಿನ ಫಲವತ್ತಾದ ನೆಲವನ್ನು ನೋಡಿ ಇದು ನಿಜಕ್ಕೂ ಜನರ ಕಾರು ತಯಾರಿಸುವ ಕಾರಿನ ಕಾರ್ಖಾನೆಯಾಗಬೇಕಿತ್ತೆಂದು ತಿಳಿಯುತ್ತಾರೆ. ಅದು ನಮ್ಮ ಬಾಕ್ಸೈಟ್, ಅದು ನಮ್ಮ ಕಬ್ಬಿಣದ ಅದಿರು, ನಮ್ಮ ಯುರೇನಿಯಂ, ಎಂದು ಯೋಚಿಸುತ್ತಾರೆ. ನಮ್ಮ ನೆಲದ ಮೇಲೆ ಆ ಜನ ಏನು ಮಾಡುತ್ತಿದ್ದಾರೆ? ನಮ್ಮ ನೀರು ಅವರ ನದಿಗಳಲ್ಲಿ ಏನು ಮಾಡುತ್ತಿದೆ? ನಮ್ಮ ಮರಮಟ್ಟು ಅವರ ಕಾಡಿನಲ್ಲಿ ಏನು ಮಾಡುತ್ತಿದೆ?

ಭಾರತದ ಅರಣ್ಯಗಳ ನಕ್ಷೆಯನ್ನ, ಅದರ ಖನಿಜ ಸಂಪತ್ತು ಮತ್ತು ಆದಿವಾಸಿಗಳ ನೆಲೆಯನ್ನ ನೀವು ನೋಡಿದರೆ ಅವರನ್ನು ಪರಸ್ಪರ ಎತ್ತಿ ಕಟ್ಟಲಾಗಿದೆ ಎಂಬುದು ಗೋಚರವಾಗುತ್ತದೆ. ವಾಸ್ತವದಲ್ಲಿ ಯಾರನ್ನು ನಾವು ಬಡವರೆಂದು ಕರೆಯುತ್ತೇವೋ ಅವರು ನಿಜವಾಗಿಯೂ ಶ್ರೀಮಂತರಾಗಿದ್ದಾರೆ. ಆದರೆ ಆಕಾಶದ ನಾಗರಿಕರು ಭೂಮಿಯ ಮೇಲೆ ಕಣ್ಣು ಹಾಯಿಸಿದಾಗ ಅವರಿಗೆ ಅಮೂಲ್ಯ ಸಂಪನ್ಮೂಲಗಳ ಮೇಲೆ ಅನಾವಶ್ಯಕ ಜನ ಕುಳಿತಿರುವುದು ಕಾಣಿಸುತ್ತದೆ. ನಾಜಿಗಳಿಗೆಂದು ಅವರದೇ ನುಡಿಗಟ್ಟು ಇತ್ತು 'ಉಬ್‌ಹೆರ್‌ಜಾಹ್ಲಿಗನ್ ಎಸನ್' (Uberzahiligen Essern) ಎಂದು. ಅದರರ್ಥ ಅನವಶ್ಯಕವಾಗಿ ತಿನ್ನುವವರು. ಉತ್ತರ ಅಮೆರಿಕದಲ್ಲಿ ದೇಶಿ ಇಂಡಿಯನ್‌ರು ಮತ್ತವರ ಐರೋಪ್ಯ ವಸಾಹತುಶಾಹಿಗಳ ನಡುವಿನ ಹೋರಾಟವನ್ನು ಹತ್ತಿರದಿಂದ ಗಮನಿಸಿದ ಮೇಲೆ ಫ್ರೆಡ್ರಿಕ್ ರ್ಯಾಟ್ಜೆಲ್ ಲೆಬೆನ್‌ಸ್ರಾಮ್‌ಗಾಗಿ ನಡೆವ ಹೋರಾಟವು ನಿರ್ಮೂಲನೆ ಮಾಡುವ ಹೋರಾಟವೆಂದು ಹೇಳಿದ. ನಿರ್ಮೂಲನೆ ಎಂದರೆ ಜನರನ್ನು ಲಾಠಿ, ಹೊಡೆತ, ಕೋವಿ, ಅನಿಲ, ಬಾಂಬ್ ಅಥವ ಗುಂಡಿಡುವ ಮೂಲಕ ದೈಹಿಕವಾಗಿ ನಾಶ ಮಾಡುವುದೆಂದೇನೂ ಆಗಬೇಕಿಲ್ಲ. (ಕೆಲ ಸಂದರ್ಭಗಳನ್ನು ನಿರ್ದಿಷ್ಟವಾಗಿ ಅವರು ಪ್ರತಿಭಟಿಸಲು ಪ್ರಯತ್ನಿಸುವುದನ್ನು ಹೊರತುಪಡಿಸಿ, ಯಾಕೆಂದರೆ ಆಗವರು ಭಯೋತ್ಪಾದಕರಾಗಿಬಿಡುತ್ತಾರೆ) ಐತಿಹಾಸಿಕವಾಗಿ ಬಹು ಪರಿಣಾಮಕಾರಿ ನರಮೇಧ ವಿಧಾನವೆಂದರೆ ಜನರನ್ನು ಅವರ ನೆಲೆಗಳಿಂದ ಸ್ಥಳಾಂತರಿಸಿ, ಎಲ್ಲರನ್ನೂ ಒಂದೆಡೆ ಒಟ್ಟು ಹಾಕಿ ಊಟ ನೀರಿನ ಸಂಪರ್ಕವನ್ನು ತಡೆಯುವುದು. ಇಂತಹ ಸಂದರ್ಭಗಳಲ್ಲಿ ಜನರು ಪ್ರತ್ಯಕ್ಷ ಹಿಂಸೆ ಇಲ್ಲದೇ ಸಾಯುತ್ತಾರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಾಯುತ್ತಾರೆ. ಸ್ವೆನ್ ಲಿಂಡ್‌ಕ್ವಿಸ್ಟ್ ಹೀಗೆ ಬರೆಯುತ್ತಾನೆ: "ನಾಜಿಗಳು, ಯಹೂದಿಗಳಿಗೆ ಅವರ ಕೋಟಿನ ಮೇಲೆ ಧರಿಸಲು ನಕ್ಷತ್ರ ನೀಡಿದ್ದರು, ಮತ್ತವರನ್ನು 'ಮೀಸಲು ಸ್ಥಳ'ಗಳಲ್ಲಿ ಒಟ್ಟು ಮಾಡಿದರು. ಇಂಡಿಯನ್‌ರು, ಹೆರೆರಾಸ್, ಬುಶ್‌ಮನ್, ಅಮಂಡಬೆಲೆ ಮತ್ತೆಲ್ಲ ನಕ್ಷತ್ರಗಳ ಮಕ್ಕಳನ್ನು ಒಟ್ಟು ಮಾಡಿದಂತೆ. ಮೀಸಲು ಸ್ಥಳಗಳಿಗೆ ಆಹಾರ ಪೂರೈಕೆಯನ್ನು ನಿಲ್ಲಿಸಿದಾಗ ಅವರು ತಾವಾಗಿಯೇ ಸತ್ತರು". ಮೈಕ್ ಡೇವಿಸ್ ಎಂಬ ಇತಿಹಾಸಜ್ಞ ಹೇಳುತ್ತಾನೆ: "ಭಾರತದಲ್ಲಿ ೧೮೭೬ ಮತ್ತು ೧೮೯೨ರ ಭೀಕರ ಬರದಲ್ಲಿ ೨೯ ಮಿಲಿಯನ್ ಜನರು ಹಸಿವಿನಿಂದ ಸತ್ತರು. ಅದೇ ಸಂದರ್ಭದಲ್ಲಿ ಬ್ರಿಟನ್, ಭಾರತದಿಂದ ಆಹಾರ ಮತ್ತು ಕಚ್ಚಾ ಸಾಮಗ್ರಿಗಳನ್ನು ರಫ್ತು ಮಾಡುವುದನ್ನು ಮುಂದುವರೆಸಿತು." ಅಮರ್ತ್ಯ ಸೇನ್‌ರವರು ಪ್ರಜಾತಂತ್ರದಲ್ಲಿ ಬರ ಅಸಂಭವನೀಯ ಎನ್ನುತ್ತಾರೆ. ಚೀನಾದ ಭೀಕರ ಬರದ ಜಾಗದಲ್ಲಿ ಭಾರತದ ಮಹಾನ್ ಅಪೌಷ್ಟಿಕತೆ ಇದೆ. (ಅಪೌಷ್ಟಿಕತೆಗೆ ಭಾರತದ ಕೊಡುಗೆ ಐವತ್ತೇಳು ಮಿಲಿಯನ್ ಮಕ್ಕಳು. ಅಂದರೆ, ಜಗತ್ತಿನ ಒಟ್ಟು ಅಪೌಷ್ಟಿಕ ಮಕ್ಕಳ ಮೂರಕ್ಕಿಂತಲೂ ಹೆಚ್ಚಿನ ಭಾಗ).

ಚೀನಾ ಹೊರತುಪಡಿಸಿ, ಭಾರತದಲ್ಲಿ ಇಂದು ಆಂತರಿಕವಾಗಿ ಸ್ಥಳಾಂತರಗೊಂಡವರ ಜನಸಂಖ್ಯೆ ಜಗತ್ತಿನಲ್ಲೇ ಅತಿ ಹೆಚ್ಚು. ಆಣೆಕಟ್ಟುಗಳಿಂದಾಗಿಯೇ ಮೂವತ್ತು ಮಿಲಿಯನ್‌ಗಿಂತಲೂ ಹೆಚ್ಚಿನ ಜನರು ಸ್ಥಳಾಂತರಗೊಂಡಿದ್ದಾರೆ. ಕೋರ್ಟ್ ಆಜ್ಞೆ ಅಥವ ಪೊಲೀಸ್‌ರ ಬಂದೂಕಿನ ತುದಿ, ಸರ್ಕಾರಿ ನಿಯಂತ್ರಿತ ಪಡೆ ಅಥವ ಕಾರ್ಪೋರೇಟ್ ಗೂಂಡಗಳ ಮೂಲಕ ಸ್ಥಳಾಂತರವನ್ನು ಜನರ ಮೇಲೆ ಹೇರಲಾಗಿದೆ. [ನಂದಿಗ್ರಾಮದಲ್ಲಿ ಸಿ.ಪಿ.ಐ (ಎಂ) ಕೂಡ ತನ್ನದೇ ಶಸ್ತ್ರಧಾರಿ ಪಡೆಯನ್ನು ಹೊಂದಿದೆ]. ಸ್ಥಳಾಂತರಗೊಂಡ ಜನರನ್ನು ಬಾಡಿಗೆ ಸ್ಥಳಗಳಲ್ಲಿ, ಕ್ಯಾಂಪುಗಳಲ್ಲಿ ಮತ್ತು ಪುನರ್ವಸತಿ ಕಾಲೋನಿಗಳಲ್ಲಿ ಒಟ್ಟು ಮಾಡಲಾಗಿದೆ. ಅಲ್ಲಿ ಹೊಟ್ಟೆಪಾಡಿನ ಮಾರ್ಗಗಳಿಲ್ಲದೇ ಅವರು ದಾರಿದ್ರ್ಯದ ಸುಳಿಗೆ ಸಿಲುಕಿಕೊಳ್ಳುತ್ತಾರೆ.



ಕಬ್ಬಿಣದ ಅದಿರಿನ ನಿಧಿಗಾಗಿ ಕಾರ್ಪೋರೇಟ್‌ಗಳಿಗೆ ತುತ್ತಾಗಿರುವ ಛತ್ತೀಸ್‌ಗಢದಲ್ಲಿ ಬೇರೆಯದೇ ತಂತ್ರವನ್ನು ಬಳಸಲಾಗಿದೆ. ಮಾವೋವಾದಿ ಧಂಗೆಕೋರರನ್ನು ಎದುರಿಸುವ ನೆಪದಲ್ಲಿ ನೂರಾರು ಹಳ್ಳಿಗಳನ್ನು ಎತ್ತಂಗಡಿ ಮಾಡಲಾಗಿದೆ. ಸುಮಾರು ೫೦೦೦೦ ಜನರು ಪೊಲೀಸ್ ಕ್ಯಾಂಪ್‌ಗಳಿಗೆ ಸ್ಥಳಾಂತರಗೊಂಡಿದ್ದಾರೆ. ಅವರಲ್ಲಿ ಕೆಲವರನ್ನು ಸರ್ಕಾರ ಶಸ್ತ್ರ ಸನ್ನದ್ಧರನ್ನಾಗಿಸಿ 'ಸಾಲ್ವಾ ಜುಡಂ' ಎಂಬ 'ಜನರ ದಂಡನ್ನು' ನಿರ್ಮಿಸಿದೆ. ಅತಿ ಬಡವರೆ ಅತಿ ಬಡವರ ವಿರುದ್ಧ ಹೋರಾಡುತ್ತಿರುವ ಸಂದರ್ಭವು ಆಂತರಿಕ ಕಲಹದತ್ತ ಸಾಗುತ್ತಿರುವ ಹೊತ್ತಿನಲ್ಲಿ ಟಾಟಾ ಮತ್ತು ಎಸ್ಸಾರ್ ಕಂಪೆನಿಗಳು ತಣ್ಣಗೆ ಸದ್ದಿಲ್ಲದೆ ಛತ್ತೀಸ್‌ಗಢ್‌ನಲ್ಲಿ ಕಬ್ಬಿಣ ಗಣಿಗಾರಿಕೆಯ ಹಕ್ಕಿಗಾಗಿ ವ್ಯವಹಾರ ಕುದುರಿಸುತ್ತಿವೆ. ಸಂಬಂಧ ಸ್ಥಾಪಿಸಲು ಸಾಧ್ಯವೇ ನಮಗೆ? ಕಲ್ಪಿಸುವುದು ಸಾಧ್ಯವಾಗಿರುತ್ತಿರಲಿಲ್ಲ ನಮಗೆ. ಟಾಟಾ ಕಂಪೆನಿ ಮತ್ತು ಸರ್ಕಾರದ ನಡುವೆ MoU ಸಹಿ ಆದ ಮರುದಿನವೇ ಸಾಲ್ವಾ ಜುಡುಂ ಅನ್ನು ಘೋಷಿಸಿದ ಮೇಲೂ.

ಸದ್ಯ, ಮಾರುಕಟ್ಟೆಯಲ್ಲಿರುವ ಹೊಸ ಭಾರತದ ಅವತರಣಿಕೆಯಲ್ಲಿ ಮೇಲಿನ ಘಟನೆಗಳ ಕುರಿತು ಅತ್ಯಲ್ಪವಾ- ವರದಿಯಾಗದಿರುವುದು ಆಶ್ಚರ್ಯವೇನಲ್ಲ. ಯಾಕೆಂದರೆ ಯಾವುದು ಮಾರಾಟಕ್ಕಿದೆಯೋ ಅದು ಇನ್ನೊಂದು ರೀತಿಯ ನಿರಾಕರಣೆ –ರಾಬರ್ಟ್ ಜೆ. ಲಿಫ್ಟನ್ ಹೇಳುವ 'ಖೋಟಾ ವಿಶ್ವದ' ಸೃಷ್ಟಿ. ಈ ವಿಶ್ವದಲ್ಲಿ ವ್ಯವಸ್ಥಿತ ಭೀಕರತೆಗಳನ್ನು ತಾತ್ಕಾಲಿಕ ಸಣ್ಣ ತಪ್ಪುಗಳಾಗಿ ಮಾರ್ಪಾಡು ಮಾಡಿ ದೋಷಪೂರಿತ ವ್ಯಕ್ತಿಗಳನ್ನು ಹೊಣೆಯಾಗಿಸಲಾಗುತ್ತದೆ, ಮತ್ತು ಸಾಚಾ ಜಗತ್ತಿನ ಬದಲಿಗೆ ಹೆಚ್ಚು 'ಸಮನಾದ' ಸಂತೋಷದಾಯಕ ಜಗತ್ತನ್ನು ಪ್ರದರ್ಶಿಸಲಾಗುತ್ತದೆ. ಸಮ ಎಂಬುದೂ ಖೋಟಾ – ಯಾವಾಗಲೂ ಐಕ್ಯತೆ ಮತ್ತು ಪ್ರಗತಿಯನ್ನು ಪರಸ್ಪರ ಎತ್ತಿ ಕಟ್ಟಲಾಗುತ್ತದೆ, ಐಕ್ಯತೆ ಕುರಿತ ಉದಾರ – ಜಾತ್ಯತೀತ ಟೀಕೆಯನ್ನು ಪ್ರಗತಿ ಯೋಜನೆಯ ಸುಲಿಗೆಯನ್ನು ನ್ಯಾಯ ಸಮ್ಮತಗೊಳಿಸಲು ಬಳಸಲಾಗುತ್ತದೆ. ಆಹಾರ ಸರಪಳಿಯ ತುದಿಯಲ್ಲಿರುವವರು, ತಮ್ಮ ಯಥಾಸ್ಥಿತಿಯನ್ನು ಪಲ್ಲಟಗೊಳಿಸಿಕೊಳ್ಳಲು ಕಾರಣಗಳೇ ಇಲ್ಲದವರು –ಇವರ "ಖೋಟಾ ವಿಶ್ವ"ದ ಉತ್ಪಾದನೆಯಲ್ಲಿ ಹೆಚ್ಚು ಆಸಕ್ತರು. ಅವರ ಕೆಲಸವೆಂದರೆ ಗಡಿ ಕಾವಲು, ಕೋಪೋದ್ರೇಕ ಪ್ರಸರಣೆ, ಕೋಪವನ್ನು ಪುನರ್ ನ್ಯಾಯ ಸಮ್ಮತಗೊಳಿಸುವುದು, ಕದನ ವಿರಾಮದ ದಲ್ಲಾಳಿಗಳಾಗುವುದು.

ನರೇಂದ್ರ ಮೋದಿ ಕುರಿತು ಪ್ರಶ್ನೆ ಕೇಳಿದಾಗ, ಶಾರೂಖ್ ಖಾನ್ ನೀಡಿದ ಪ್ರತಿಕ್ರಿಯೆ ಗಮನಿಸಿ "ವೈಯಕ್ತಿಕವಾಗಿ ನನಗೆ ಆತನ ಬಗ್ಗೆ ಗೊತ್ತಿಲ್ಲ..... ನನಗೇನೂ ಅಭಿಪ್ರಾಯಗಳಿಲ್ಲ..... ವೈಯಕ್ತಿಕವಾಗಿ ನನ್ನೊಂದಿಗೆ ಎಂದಿಗೂ ದ್ವೇಷದಿಂದಿಲ್ಲ". ಉದಾರವಾದಿ ಇತಿಹಾಸಜ್ಞರಾದ, ಕಾರ್ಪೋರೇಟ್ ಫಂಡ್ ಪಡೆದುಕೊಳ್ಳುವ 'ನ್ಯೂ ಇಂಡಿಯಾ ಫೌಂಡೇಷನ್' ಎಂಬ ಟ್ರಸ್ಟ್‌ನ ಸ್ಥಾಪಕ ಸದಸ್ಯರಾದ ರಾಮಚಂದ್ರ ಗುಹಾ ಅವರು ತಮ್ಮ ಪುಸ್ತಕದಲ್ಲಿ ಹಾಗೂ ಅತಿ ಹೆಚ್ಚು ಪ್ರಚಾರ ಪಡೆದ ಸರಣಿ ಸಂದರ್ಶನ

ಗಳಲ್ಲಿ ನಮಗೆ ಬುದ್ಧಿ ಹೇಳುವುದು ಹೀಗೆ –"ಗುಜರಾತ್ ಸರ್ಕಾರ ನಿಜವಾಗಿಯೂ ಫ್ಯಾಸಿಸ್ಟ್ ಅಲ್ಲ ಮತ್ತು ನರ ಮೇಧ ಕೇವಲ ಬುದ್ಧಿ ಭ್ರಮಣೆಯ ವಿಚಾರವಾಗಿದ್ದು ಚುನಾವಣೆಯ ನಂತರ ತಂತಾನೇ ಎಲ್ಲಾ ಸರಿ ಹೋಗಿದೆ".

ಜಾತ್ಯತೀತ ರಾಷ್ಟ್ರೀಯ ಪತ್ರಿಕಾ ಮಾಧ್ಯಮದಲ್ಲಿನ ಸಂಪಾದಕರುಗಳು ಮತ್ತು ವ್ಯಾಖ್ಯಾನಕಾರರು ಗುಜರಾತ್‌ನ ನರಮೇಧ ಕುರಿತ ಕೋಪೋದ್ರೇಕ ಇಳಿದ ಮೇಲೆ ಈಗ ಮೋದಿಯ ಆಡಳಿತ ಕೌಶಲ್ಯಗಳ ಮಾಪನ ಮಾಡುತ್ತಿದ್ದಾರೆ. ಆ ಬಗ್ಗೆ ಬಹುಪಾಲು ಜನ ಸಮನಾಗಿ ಪ್ರಭಾವಿತರಾಗಿದ್ದಾರೆ. ಹಿಂದೂಸ್ಥಾನ ಟೈಮ್ಸ್‌ನ ಸಂಪಾದಕರು ಹೀಗೆ ಹೇಳಿದ್ದಾರೆ "ಮೋದಿ ಸಾಮೂಹಿಕ ಕೊಲೆಗಾರನೇ ಇರಬಹುದು, ಆದರೆ ಆತ ನಮ್ಮವ; ನಮ್ಮ ಸಾಮೂಹಿಕ ಕೊಲೆಗಾರ" ಹಾಗೇ ಮುಂದುವರೆಯುತ್ತ 'ಒಳ್ಳೆ' ಮುಖ್ಯಮಂತ್ರಿಯೂ ಆಗಿರುವ ಸಾಮೂಹಿಕ ಕೊಲೆಗಾರನೊಂದಿಗೆ ಹೇಗೆ ವ್ಯವಹರಿಸಬೇಕೆಂಬ ದ್ವಂದ್ವಗಳನ್ನು ತೇಲಿಬಿಟ್ಟರು."

ಈ ಖೋಟಾ ಅವತರಣಿಕೆಯ ಭಾರತದಲ್ಲಿ, ಸಾಂಸ್ಕೃತಿಕ ಲೋಕದಲ್ಲಿ, ಹೊಸ ಬಾಲಿವುಡ್ ಸಿನಿಮಾಗಳಲ್ಲಿ, ಭಾರತಾಂಗ್ಲ ಸಾಹಿತ್ಯದ ಏರಿಕೆಯಲ್ಲಿ ಬಡವರು ಕಾಣೆಯಾಗಿದ್ದಾರೆ. ಮುಂಗಡವಾಗಿಯೇ ಅವರನ್ನು ಒರೆಸಿ ಹಾಕಲಾಗಿದೆ. (ಅವರು ಕಾಣಿಸಿಕೊಳ್ಳುವುದು ಸಣ್ಣ ಉಳಿತಾಯ ಸಾಲ ಅಭಿವೃದ್ಧಿ ಯೋಜನೆ ಮತ್ತು ಸರ್ಕಾರೇತರ ಸಂಸ್ಥೆಗಳ ದಾನ ಸೌಲಭ್ಯಗಳನ್ನು ಮುಗುಳ್ನಗುತ್ತ ಸ್ವೀಕರಿಸುವವರಾಗಿ.)

ಕಳೆದ ಬೇಸಿಗೆಯಲ್ಲಿ, ಅಲೆದಾಡುತ್ತ ನಾನು ತಂಪನೆಯ ಕೋಣೆಯೊಂದನ್ನು ಹೊಕ್ಕೆ. ಅಲ್ಲಿ ನೇರ ಕೂದಲಿನ, ಪಿಂಗಾಣಿ ಚರ್ಮದ ನಾಲ್ಕು ಜನ ಸುಂದರ ಯುವತಿಯರು ತಮ್ಮ ನಾಯಿ ಮರಿಗಳನ್ನು ಒಬ್ಬರಿಗೊಬ್ಬರು ಪರಿಚಯಿಸುತ್ತ ಆರಾಮವಾಗಿ ಕಾಲ ಕಳೆಯುತ್ತಿದ್ದರು. ಒಬ್ಬಳು ನನ್ನತ್ತ ತಿರುಗಿ ಹೇಳಿದಳು –"ನನ್ನ ಕುಟುಂಬದವರೊಂದಿಗೆ ರಜೆಯಲ್ಲಿದ್ದೆ ಡ್ಯಾಮೋ ಇನ್ನೆಂತದೋ? ವಿಷಯ ಕುರಿತ ನಿಮ್ಮ ಹಳೆಯ ಪ್ರಬಂಧವೊಂದು ಸಿಕ್ಕಿತು. ನನ್ನ ಅಣ್ಣನನ್ನು ಕೇಳಿದೆ ಅವನಿಗೇನಾದರೂ ದಲಿತರು ಮತ್ತು ಆದಿವಾಸಿಗಳು ಸ್ಥಳಾಂತರವೋ ಮತ್ತಿನ್ನೇನೊ..... ಕಾರಣದಿಂದ ಕಷ್ಟ ಪಡುತ್ತಿರುವ..... ಅಂದರೆ ಅವರ ಮನೆಗಳಿಂದ ಓಡಿಸಲ್ಪಟ್ಟಿರುವುದು ಅಂತದೇ..... ಸಾಮಗ್ರಿಗಳ ಬಗ್ಗೆ ಗೊತ್ತಿದೆಯಾ ಎಂದು. ನಿಮಗೆ ಗೊತ್ತೆ ನಮ್ಮ ಅಣ್ಣ ಎಂಥ ಸಿಡುಕ ಗೊತ್ತಾ, ಭಾರತವನ್ನು ಜಗ್ಗಿ ಹಿಂದಕ್ಕೆ ಇಟ್ಟಿರುವವರು ಆ ಜನರೇ ಅವರನ್ನು ನಿರ್ಮೂಲ ಮಾಡಬೇಕು ಎಂದು ಹೇಳಿದ." ನೀವು ಊಹಿಸಬಲ್ಲಿರಾ? ತೊಂದರೆ ಏನೆಂದರೆ ನಾನದನ್ನು ಊಹಿಸ ಬಲ್ಲೆ, ಊಹಿಸಬಹುದು.

ನಾಯಿ ಮರಿಗಳು ಮುದ್ದಾಗಿದ್ದವು. ನಾಯಿಗಳು ಪರಸ್ಪರ ನಿರ್ಮೂಲ ಮಾಡುವ ಬಗ್ಗೆ ಊಹಿಸಬಲ್ಲವೆ? ಎಂದು ಆಶ್ಚರ್ಯಪಟ್ಟೆ. ಅವಿನ್ನೂ ಅಷ್ಟು ಪ್ರಗತಿ ಹೊಂದಿಲ್ಲ.

ಅದೇ ದಿನ ಸಂಜೆ ಟಿ.ವಿಯಲ್ಲಿ ಅಮಿತಾಬ್ ಬಚ್ಚನ್‌ನನ್ನು ನೋಡಿದೆ. ಟೈಮ್ಸ್ ಆಫ್ ಇಂಡಿಯಾದವರು ಕೈಗೊಂಡಿರುವ "ತುದಿಗಾಲಲ್ಲಿ ನಿಂತಿರುವ ಭಾರತ" ಎಂಬ ಪ್ರಚಾರಾಂದೋಲನದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಟಿ. ವಿ. ಕಾರ್ಯಕ್ರಮ ನಡೆಸಿಕೊಡುತ್ತಿದ್ದವರು

ಕಬ್ಬಿಣದ ಅದಿರಿನ ನಿಧಿಗಾಗಿ ಕಾರ್ಪೋರೇಟ್‌ಗಳಿಗೆ ತುತ್ತಾಗಿರುವ ಛತ್ತೀಸ್‌ಗಢದಲ್ಲಿ ಬೇರೆಯದೇ ತಂತ್ರವನ್ನು ಬಳಸಲಾಗಿದೆ. ಮಾವೋವಾದಿ ಧಂಗೆಕೋರರನ್ನು ಎದುರಿಸುವ ನೆಪದಲ್ಲಿ ನೂರಾರು ಹಳ್ಳಿಗಳನ್ನು ಎತ್ತಂಗಡಿ ಮಾಡಲಾಗಿದೆ. ಸುಮಾರು ೪೦೦೦೦ ಜನರು ಪೊಲೀಸ್ ಕ್ಯಾಂಪ್‌ಗಳಿಗೆ ಸ್ಥಳಾಂತರಗೊಂಡಿದ್ದಾರೆ. ಅವರಲ್ಲಿ ಕೆಲವರನ್ನು ಸರ್ಕಾರ ಶಸ್ತ್ರ ಸನ್ನಧರನ್ನಾಗಿಸಿ 'ಸಾಲ್ವಾ ಜುಡಂ' ಎಂಬ 'ಜನರ ದಂಡನ್ನು' ನಿರ್ಮಿಸಿದೆ. ಅತಿ ಬಡವರೆ ಅತಿ ಬಡವರ ವಿರುದ್ಧ ಹೋರಾಡುತ್ತಿರುವ ಸಂದರ್ಭವು ಆಂತರಿಕ ಕಲಹದತ್ತ ಸಾಗುತ್ತಿರುವ ಹೊತ್ತಿನಲ್ಲಿ ಟಾಟಾ ಮತ್ತು ಎಸ್ಸಾರ್ ಕಂಪೆನಿಗಳು ತಣ್ಣಗೆ ಸದ್ದಿಲ್ಲದೆ ಛತ್ತೀಸ್‌ಗಢ್‌ನಲ್ಲಿ ಕಬ್ಬಿಣ ಗಣಿಗಾರಿಕೆಯ ಹಕ್ಕಿಗಾಗಿ ವ್ಯವಹಾರ ಕುದುರಿಸುತ್ತಿವೆ. ಸಂಬಂಧ ಸ್ಥಾಪಿಸಲು ಸಾಧ್ಯವೇ ನಮಗೆ?

ಆಂದೋಲನವನ್ನು ಪರಿಚಯಿಸುತ್ತ "ತೊಡಕಾಗಿರುವ ಹಿಂದಿನ ಭೂತಗಳನ್ನು" ಹಿಂದೆ ಬಿಡಲು ಜನರನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು. ನಿರಾಶಾವಾದದ ಬದಲಿಗೆ ಆಶಾವಾದವನ್ನು ಆಯ್ಕೆ ಮಾಡಿಕೊಳ್ಳಲು. ಅಮಿತಾಬ್ ಬಚ್ಚನ್‌ರವರು ತಮ್ಮ ಜನಪ್ರಿಯ ಗಂಭೀರ ಮಧ್ಯಮ ಸ್ವರದಲ್ಲಿ ಹೇಳಿದರು "ಈ ದೇಶದಲ್ಲಿ ಎರಡು ಭಾರತಗಳಿವೆ."

ಒಂದು ಭಾರತ ಕೊರಳು ಪಟ್ಟಿಯನ್ನು ಕಿತ್ತೊಗೆಯಲು ಬಹು ಪ್ರಯಾಸ ಪಡುತ್ತಿದೆ, ವೇಗವಾಗಿ ಜಿಗಿಯಲು ಮತ್ತು ಜಗತ್ತು ನಮ್ಮ ಮೇಲೆ ಸುರಿಮಳೆಗೈಯುತ್ತಿರುವ ಗುಣವಾಚಕಗಳಿಗೆ ತಕ್ಕನಾಗಿ ಬದುಕಲು ತವಕಿಸುತ್ತಿದೆ. ಮತ್ತೊಂದು ಭಾರತ ಕುಣಿಕೆಯಾಗಿದೆ.

ಒಂದು ಭಾರತ ಹೇಳುತ್ತದೆ "ನನಗೆ ಒಂದೇ ಒಂದು ಅವಕಾಶ ಕೊಡಿ, ನಾನೇನೆಂದು ಸಾಬೀತು ಪಡಿಸುತ್ತೇನೆ".

ಇನ್ನೊಂದು ಭಾರತ ಹೇಳುತ್ತಿದೆ "ಮೊದಲು ಸಾಬೀತು ಪಡಿಸು ನಂತರ ಅವಕಾಶ ಕೊಡಲಾಗುವುದು".

ಒಂದು ಭಾರತ ನಮ್ಮ ಹೃದಯಗಳ ಆಶಾವಾದದಲ್ಲಿ ಜೀವಿಸುತ್ತದೆ, ಇನ್ನೊಂದು ಭಾರತ ನಮ್ಮ ಮನಗಳ ಸಂದೇಹದಲ್ಲಿ ಅವಿತಿಟ್ಟುಕೊಂಡಿದೆ.

ಒಂದು ಭಾರತ ಬೇಕು ಎಂದರೆ ಇನ್ನೊಂದು ಭಾರತ ಆಪೇಕ್ಷಿಪಿಸುತ್ತದೆ. ಒಂದು ಭಾರತ ಮುನ್ನಡೆಸುತ್ತದೆ, ಇನ್ನೊಂದು ಭಾರತ ಹಿಂಬಾಲಿಸುತ್ತದೆ.

ಅರುಂಧತಿ ರಾಯ್ ಮಾತುಗಳಿಗೆ ಕಿವಿಯೊಡ್ಡಿ...

ಬದಲಾವಣೆ ಹೆಚ್ಚಾಗುತ್ತಿದೆ.

ಪ್ರತಿಯೊಂದು ದಿನವೂ ಕಳೆದಂತೆ ಇನ್ನೊಂದು ಭಾರತದ ಹೆಚ್ಚೆಚ್ಚು ಜನರು ಬರುತ್ತಿದ್ದಾರೆ ಈ ಕಡೆಗೆ.....

ಜಗತ್ತು ಗಮನಿಸದೇ ಇರುವಾಗ ಸದ್ದಿಲ್ಲದೇ, ತುಡಿಯುತ್ತಿರುವ, ಕ್ರಿಯಾಶೀಲ, ನವಭಾರತ ಉದಯಿಸುತ್ತದೆ.

ಅಂತಿಮವಾಗಿ

ಸ್ವತಂತ್ರ ರಾಷ್ಟ್ರವಾಗಿ ಅರವತ್ತು ವರ್ಷಗಳು ಸಂದಿರುವ ಈ ಸಂದರ್ಭದಲ್ಲಿ, ಸವಾರಿಯು ನಮ್ಮನ್ನು ತಂದು ನಿಲ್ಲಿಸಿದೆ ಕಾಲದ ಮಹಾನ್ ಪ್ರಪಾತದ ತುದಿಗೆ.....

ಒಂದು ಭಾರತ, ತಲೆ ಹಿಂಬದಿಯ ಅತಿ ಸಣ್ಣ ದನಿ ಕಮರಿಯನ್ನ ನೋಡುತ್ತ ಹಿಂಜರಿಯುತ್ತಿದೆ. ಮತ್ತೊಂದು ಭಾರತ ಆಕಾಶದತ್ತ ಮುಖ ಮಾಡಿ ಹೇಳುತ್ತಿದೆ 'ಹಾರಲು ತಕ್ಕ ಸಮಯವಿದು'.

ಹೀಗೆ, ಖೋಟಾ ವಿಶ್ವ ಬೆತ್ತಲಾಗಿದೆ. ಅದು ಶ್ರೀಮಂತರಿಗೆ ಪರ್ಯಾಯವಿಲ್ಲ, ಬಡವರಿಗೆ ಇದೆ ಎಂದು ನಮಗೆ ಹೇಳುತ್ತಿದೆ. ಶ್ರೀಮಂತರಾಗುವ ಆಯ್ಕೆ ಅವರಿಗಿದೆ. ಆಯ್ಕೆ ಮಾಡಿಕೊಳ್ಳದಿದ್ದರೆ ಅದಕ್ಕೆ ಕಾರಣ ಅವರು ಆಶಾವಾದದ ಬದಲಿಗೆ ನಿರಾಶಾವಾದವನ್ನು, ವಿಶ್ವಾಸದ ಬದಲಿಗೆ ಹಿಂಜರಿಕೆಯನ್ನು, ಬೇಕು ಎಂಬುದರ ಬದಲಿಗೆ ನಿರೀಕ್ಷೆಯನ್ನು ಆಯ್ಕೆ ಮಾಡಿಕೊಂಡಿರುವುದೇ ಆಗಿದೆ. ಮತ್ತೊಂದು ಅರ್ಥದಲ್ಲಿ ಹೇಳುವುದಾದರೆ ಅವರು ಬಡವರಾಗಿಯೇ ಉಳಿಯಲು ಆಯ್ಕೆ ಮಾಡಿಕೊಂಡಿದ್ದಾರೆ. ಅದು ಅವರ ತಪ್ಪು. ಅವರು ದುರ್ಬಲರು (ಲೆಬೆನ್ ಸ್ರಾಮ್ ಅನ್ವೇಷಕರು ದುರ್ಬಲರನ್ನು ಕುರಿತು ಹೇಗೆ ಯೋಚಿಸುತ್ತಾರೆ ಎಂದು ನಮಗೆ ತಿಳಿದಿದೆ). ಅವರು 'ತೊಡಕಾಗಿರುವ ಹಿಂದಿನ ಭೂತಗಳು'. ಅವರೀಗಾಗಲೇ ಭೂತಗಳು!

ರಾಬರ್ಟ್ ಜೆ. ಲಿಫ್ಟನ್ ಹೇಳುತ್ತಾರೆ "ಖೋಟಾ ವಿಶ್ವ ತನ್ನೊಳಗೆ ಜೀವಿಸುತ್ತ ಮುಂದುವರೆದಂತೆ ನರಮೇಧವು ಸುಲಭವೂ ಬಹುಮಟ್ಟಿಗೆ ಸಹಜವೂ ಆಗಿಬಿಡುತ್ತದೆ." ಬಡವರು ಎನಿಸಿಕೊಂಡವರಿಗೆ ಇರುವುದು ಒಂದೇ ಆಯ್ಕೆ: ಪ್ರತಿರೋಧಿಸುವುದು ಇಲ್ಲ ಆಹುತಿಯಾಗುವುದು. ಬಚ್ಚನ್ ಹೇಳಿರುವುದು ಸರಿ –ಅವರು ಸದ್ದಿಲ್ಲದೆ ದಾಟುತ್ತಿದ್ದಾರೆ, ಜಗತ್ತು ಅವರನ್ನು ಗಮನಿಸದಿರುವಾಗ. ಅವರು ಯೋಚಿಸುವಲ್ಲಿಗೆ ಅಲ್ಲ, ಮತ್ತೊಂದು ಕಮರಿಯ ಇನ್ನೊಂದು ಬದಿಗೆ. ಶಸ್ತ್ರಾಸ್ತ್ರ ಹೋರಾಟದ ಬದಿಗೆ. ಅಲ್ಲಿಂದ ಹಿಂದಿರುಗಿ ನೋಡುತ್ತಾರೆ ಅಭಿವೃದ್ಧಿ ದೊರೆಗಳತ್ತ ಅಣಕವಾಡಿ ತೋರಿಸುತ್ತಾರೆ ಅವರ ಪಶ್ಚಾತ್ತಾಪದ ಘೋಷಣೆ "ಪರ್ಯಾಯವೇ ಇಲ್ಲ" ಎಂಬುದನ್ನು. ಅವರು ಗಮನಿಸಿದ್ದಾರೆ –ಮಹಾನ್ ಗಾಂಧಿವಾದಿ ಜನ ಚಳವಳಿಯನ್ನು ದುರ್ಬಲಗೊಳಿಸಿರುವುದನ್ನು, ಅಪಮಾನಗೊಳಿ–ಸಿರುವುದನ್ನು, ಕೋರ್ಟ್ ಕೇಸುಗಳ ಹುದುಲಿನಲ್ಲಿ ಒದ್ದಾಡುತ್ತಿರುವುದನ್ನು, ಉಪವಾಸ ಸತ್ಯಾಗ್ರಹ ಮತ್ತು ಪ್ರತಿ ಉಪವಾಸ ಸತ್ಯಾಗ್ರಹಗಳನ್ನು. ಬಹುಶಃ ಈ ಮಿಲಿಯಾಂತರ ತೊಡಕಾಗಿರುವ ಹಿಂದಿನ ಭೂತಗಳು, ಗಾಂಧಿ, ಅಮೆರಿಕದ ಇಂಡಿಯನ್‌ರ, ಆಫ್ರಿಕದ ಗುಲಾಮರ, ತ್ಸಮಾನಿಯನ್‌ರ, ಹೆರೆರೊ, ಹಾಟೆನ್‌ಟಾಟ್ಸ್, ಅರ್ಮೇನಿಯನ್‌ರ, ಜರ್ಮನಿಯ ಯಹೂದಿಗಳ, ಗುಜರಾತ್‌ನ ಮುಸ್ಲಿಮ್‌ರ ಕುರಿತು ಏನು ಬುದ್ಧಿವಾದ ಹೇಳಬಹುದೆಂದು ಆಶ್ಚರ್ಯ ಪಡಬಹುದು. ಬಹುಶಃ ಅವರು ಹಸಿದ ಜನ ಉಪವಾಸ ಸತ್ಯಾಗ್ರಹ ಮಾಡಲು ಹೇಗೆ

(೪೫ನೇ ಪುಟಕ್ಕೆ)

ಮಠಗಳು, ಚುನಾವಣೆ ಮತ್ತು ಡೆಮಾಕ್ರಸಿ

ಮರಾಠಿಯ ದೊಡ್ಡ ಸಂಶೋಧಕರಾದ ರಾ.ಚಿಂ. ಢೇರೆ ಅವರನ್ನು ನೋಡಲು ಕಳೆದ ವರ್ಷ ಪುಣೆಗೆ ಹೋಗಿದ್ದೆ. ಆಗ ಅವರ ಜತೆ ಸಂದರ್ಶನವನ್ನು ಮಾಡಿದ ಅಲ್ಲಿನ ಕನ್ನಡಿಗರಾದ ಶ್ರೀ. ವಿರೂಪಾಕ್ಷ ಕುಲಕರ್ಣಿಯವರಲ್ಲಿ ಉಳಿದುಕೊಂಡಿದ್ದೆ. ಸೂಕ್ಷ್ಮವಾಗಿ ಚಿಂತಿಸುವ ಕುಲಕರ್ಣಿಯವರು, ಕರ್ನಾಟಕದ ವಿದ್ಯಮಾನಗಳ ಚರ್ಚೆ ಮಾಡುತ್ತಾ ಒಂದು ಮಾತು ಹೇಳಿದರು: "ಕರ್ನಾಟಕದಲ್ಲಿ ರಾಜಕಾರಣಿಗಳು ಮತ್ತು ಮಠಾಧಿಪತಿಗಳ ಭಾಗವಹಿಸುವ ಬಹಳಷ್ಟು ಕಾರ್ಯಕ್ರಮಗಳು ವರದಿಗಳು ಬರುತ್ತಿವೆ. ರಾಜಕಾರಣಿಗಳು ಯಾಕೆ ಅಷ್ಟೊಂದು ಮಠಾಧಿಪತಿಗಳನ್ನು ಅವಲಂಬಿಸಿದ್ದಾರೆ? ರಾಜಕಾರಣದಲ್ಲಿ ಕೈಹಾಕಲು ಮಠಾಧಿಪತಿಗಳಿಗೆ ಕನ್ನಡಿಗರು ಬಹಳ ಅವಕಾಶ ಕಲ್ಪಿಸಿದಂತಿದೆ. ಮಹಾರಾಷ್ಟ್ರದಲ್ಲಿ ಇಂತಹ ವಾತಾವರಣವಿಲ್ಲ" ಎಂದರು.

ಈ ಮಾತು ನನ್ನನ್ನು ಕಲಕಿತು. 'ಹೌದು, ಮಹಾರಾಷ್ಟ್ರದ ರಾಜಕೀಯ ಚಟುವಟಿಕೆಗಳಲ್ಲಿ ಮಠಾಧಿಪತಿ ಇರಲಿಕ್ಕಿಲ್ಲ. ಆದರೆ ನಿಮ್ಮ ಬಾಳಾಠಾಕರೆ ಯಾವ ಮಠಾಧಿಪತಿಗೆ ಕಡಿಮೆ? ಅವರ ಕಾವಿ ಬಟ್ಟೆ, ಜಪಸರ, ಸಿಂಹಾಸನದಂತಹ ಕುರ್ಚಿ, ಕಾಲಿಗೆ ಬಹಿರಂಗವಾಗಿ ಬೀಳುವ ಮಂತ್ರಿಗಳು ಶಾಸಕರು, ಅವರ ಮಾತನ್ನೇ ಅಂತಿಮ ಶಾಸನವೆಂದು ತಿಳಿವ ಕಾರ್ಯಕರ್ತರು–ಇದೆಲ್ಲ ಪ್ರಜಾಪ್ರಭುತ್ವದ ಹೆಸರಲ್ಲಿ ತಾನೇ ನಡೆಯುತ್ತಿರುವುದು?' ಎಂದು ಹೇಳಬೇಕೆಂದು ಬಾಯಿಗೆ ಬಂತು. ಆದರೆ ಹೇಳಲಿಲ್ಲ. ಯಾಕೆಂದರೆ ಠಾಕರೆ ಇದನ್ನೆಲ್ಲ ಒಬ್ಬ ಧಾರ್ಮಿಕ ನಾಯಕರಾಗಿ ಮಾಡುತ್ತಿಲ್ಲ. ಒಂದು ರಾಜಕೀಯ ಪಕ್ಷದ ನಾಯಕರಾಗಿ ಮಾಡುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ವಿರಕ್ತರು, ಸನ್ಯಾಸಿಗಳು ಆಗಿರುವ ಜನ ಶುದ್ಧ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವುದು ಅದಕ್ಕಿಂತ ಭಿನ್ನ. ಈ ಭಿನ್ನತೆಯು ಕರ್ನಾಟಕದ ರಾಜಕಾರಣದ ವಿಶಿಷ್ಟತೆಯೊ ದೋಷವೊ? ಹಾಗೆ ಧರ್ಮವನ್ನು ರಾಜಕಾರಣ ರಹಿತವಾಗಿ ನೋಡಲು ಸಾಧ್ಯವೇ? ಧರ್ಮವನ್ನು ಬಿಟ್ಟು ರಾಜಕಾರಣ ಇರಬೇಕು ಎನ್ನುವುದು ಒಂದು ಅವಾಸ್ತವಿಕ ಆದರ್ಶವೇ? ಇದು ಹೌದಾದರೆ ಕರ್ನಾಟಕದಲ್ಲಿ ಮಠಗಳು ರಾಜಕಾರಣದಲ್ಲಿ ಭಾಗವಹಿಸುತ್ತಿರುವುದರ ಸ್ವರೂಪ ಎಂತಹುದು? ಇದು ಜಾತಿ ರಾಜಕಾರಣವೊ ಅಥವಾ ಮತೀಯ ರಾಜಕಾರಣವೊ? ನನಗೆ ಕಳೆದ ಕೆಲವು ವರ್ಷಗಳಲ್ಲಿ ನಡೆದ ಕೆಲವು ಘಟನೆಗಳು ಕಣ್ಮುಂದೆ ಬಂದವು.

ಘಟನೆ ೧: ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದ ಕಾಲ. ಎಚ್. ವಿಶ್ವನಾಥ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದರು. ಸಿರಿಗೆರೆ ಮಠದ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಒಂದು ಕೆಲಸವಾಗಬೇಕಿತ್ತು. ಆಗ ಮಠದ ಅಧಿಪತಿಯವರಾದ ಶ್ರೀ. ಶಿವಮೂರ್ತಿ ಸ್ವಾಮಿಯವರು ಸಚಿವರನ್ನು ಕಡತ ತೆಗೆದುಕೊಂಡು ಮಠಕ್ಕೆ ಬರುವಂತೆ ಸೂಚಿಸಿದರೆಂದೂ, ಸ್ವಾಭಿಮಾನಿಯಾದ ವಿಶ್ವನಾಥ್ ಮಠಕ್ಕೆ ಹೋಗಲು ನಿರಾಕರಿಸಿದರೆಂದೂ, ಕರ್ನಾಟಕ ಸರ್ಕಾರವೆಂದರೆ ಸಿರಿಗೆರೆ ಮಠವಲ್ಲ ಎಂದು ಹೇಳಿಕಳಿಸಿದರೆಂದೂ ಸುದ್ದಿಯಾಯಿತು. ನಂತರ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಕರ್ನಾಟಕದ ಬಹುತೇಕ ಮಠಗಳ ಸ್ವಾಮಿಗಳು ಒಟ್ಟಾಗಿ ವಿಶ್ವನಾಥರ ಮೇಲೆರಗಿದರು. ಮುಖ್ಯಮಂತ್ರಿಗಳು ಒತ್ತಡಕ್ಕೆ ಮಣಿದರು. ಮುಂದೆ ಸಂಪುಟ ವಿಸ್ತರಣೆ ಕಾಲಕ್ಕೆ ವಿಶ್ವನಾಥ್ ಅವರನ್ನು ಆ ಖಾತೆಯನ್ನು ಬದಲಿಸಲಾಯಿತು.

ಒಂದು ಕಾಲಕ್ಕೆ ಮಠಗಳು ಜನರು ಕೊಡುವ ಕಾಣಿಕೆಯಿಂದ ನಡೆಯುತ್ತಿದ್ದವು. ಬಂಡಿ ಕಟ್ಟಿಕೊಂಡು ಆನೆಯ ಮೇಲೆ ಸಂಬಂಧಪಟ್ಟ ಮಠದ ಗುರುಗಳು ಪರಿವಾರ ಸಮೇತ ಭಕ್ತರು ಇರುವಲ್ಲಿ 'ಸರ್ಕ್ಯೂಟು' ಹೋಗಿ, ಅವರಿಂದ ದವಸ ಧಾನ್ಯ ಸಂಗ್ರಹ ಮಾಡಿಕೊಂಡು ಬರುತ್ತಿದ್ದರು. ಆದರೆ ಈಗ ಮಠಗಳು ಕುಳಿತ ಕಡೆ ಮಂತ್ರಿ ಮತ್ತು ಅಧಿಕಾರಿಗಳನ್ನು ಕರೆಸಿಕೊಂಡು ಬೇಕಾದ ಕೆಲಸ ಮಾಡಿಸಿಕೊಳ್ಳುತ್ತವೆ. ಕೆಲಸ ಮಾಡದಿದ್ದ ಅಧಿಕಾರಿ ಇಲ್ಲವೆ ಮಂತ್ರಿಗಳನ್ನು ಬದಲಿಸುತ್ತವೆ. ತಮ್ಮ ಕೆಲಸಗಳು ಸುಗಮವಾಗಿ ನಡೆಯಲೆಂದು ಸಣ್ಣ ಊರುಗಳಲ್ಲಿದ್ದ ಮೂಲ ಮಠಗಳು ಈಗ ರಾಜಧಾನಿಯಲ್ಲಿ ಶಾಖೆಯನ್ನು ತೆರೆದಿವೆ. ಇದು ಮಠ ಮತ್ತು ರಾಜಕೀಯ ಕೇಂದ್ರಗಳ ಸಂಬಂಧ ಬಲಗೊಂಡಿರುವುದರ ಸಂಕೇತವಾಗಿದೆ.

ಘಟನೆ ೨: ಪೇಜಾವರ ಮಠದ ಶ್ರೀ ವಿಶ್ವೇಶ್ವ ತೀರ್ಥ ಸ್ವಾಮಿಗಳು, ಭಕ್ತರು ಕೊಟ್ಟ ಕಾಣಿಕೆ ದುಡ್ಡನ್ನು ಯಾರಿಗೋ ಸಾಲಕೊಟ್ಟರು. ಅದರ ವಸೂಲಾತಿ ಸರಿಯಾಗಿ ಆಗದಿದ್ದಾಗ ತಕ್ಕ ಜನಬಿಟ್ಟು ಬಲಪ್ರಯೋಗ ಮಾಡಿಸಿದರು. ಹಲ್ಲೆಗೆ ಒಳಗಾದ ವ್ಯಕ್ತಿ ಪೋಲಿಸರಿಗೆ ದೂರು ಕೊಟ್ಟರು. ಇದನ್ನು ಉಪಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ತಿಳಿಯಿತು. ಅವರು, "ಅಷ್ಟು ದೊಡ್ಡವರ ಮೇಲೆ ಕೇಸು ಹಾಕುವಷ್ಟು ಧೈರ್ಯವೇ ಅವನಿಗೆ? ಅವನಿಗೆ ಕೂಡಲೆ ಶಿಕ್ಷೆಯಾಗಬೇಕು' ಎಂದು ಆಕ್ರೋಶ ಮಾಡಿದರು. ಪೋಲಿಸರು ಹೊಡೆಸಿದ ಸ್ವಾಮಿಯನ್ನು ಬಿಟ್ಟು ಹೊಡೆತ ತಿಂದು ಜೀವಭಯದಿಂದ ಅಡಗಲು ಓಡಾಡುತ್ತಿದ್ದ ವ್ಯಕ್ತಿಯ ಬೆನ್ನುಹತ್ತಿದರು.

ಘಟನೆ ೩: ರಾಮಚಂದ್ರಾಪುರ ಮಠದ ಶ್ರೀ. ರಾಘವೇಶ್ವರ ಸ್ವಾಮಿಯವರು ಗೋಸಮ್ಮೇಳನ ಮಾಡಿದರು. ಸಮ್ಮೇಳನಕ್ಕೆ ಸರ್ಕಾರದ ಬೊಕ್ಕಸದಿಂದ ಕೋಟ್ಯಂತರ ಹಣ ಬಿಡುಗಡೆ ಮಾಡಿಸಿಕೊಂಡರು. (ಆದರೂ ವೈದಿಕರಿಗೆ ಪ್ರತ್ಯೇಕ ಊಟದ ವ್ಯವಸ್ಥೆಯನ್ನು ಬಹಿರಂಗವಾಗಿಯೇ ಮಾಡಲಾಗಿತ್ತು. ಇದು ಬೇರೆ ಸಂಗತಿ). ಸದರಿ ಸಮ್ಮೇಳನಕ್ಕೆ ಬೇಕಾದ ಮೈದಾನ ಮಾಡಲು ಸರ್ಕಾರಿ ಅರಣ್ಯವನ್ನು ಕಡಿದರೆಂದೂ, ರೆವಿನ್ಯೂ ಜಾಗವನ್ನು ಒತ್ತುವರಿ ಮಾಡಿದರೆಂದೂ, ಕೆಳಗಿನ ಹಳ್ಳಿಯ ಜನರು ಕುಡಿಯುವುದಕ್ಕೆ ಬಳಸುವ ಹಳ್ಳವನ್ನು ಮಲಿನ ಮಾಡಿದರೆಂದೂ ಸ್ಥಳೀಯರು ದೂರುಕೊಟ್ಟರು. ದೂರನ್ನು ಪರಿಶೀಲಿಸಿದ ತಾಲೂಕಿನ ತಹಸಿಲ್ದಾರರು ಒತ್ತುವರಿ ಜಾಗಕ್ಕೆ ಭೇಟಿ ಕೊಟ್ಟು ತಪಾಸಣೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದರು. ಈ ವಿಷಯ ಗೊತ್ತಾಗಿದ್ದೇ ಉಪಮುಖ್ಯಮಂತ್ರಿ ಯಡಿಯೂರಪ್ಪನವರು, ಶಿವಮೊಗ್ಗೆಯ ಪತ್ರಿಕಾಗೋಷ್ಠಿಯಲ್ಲಿ "ಯಾರು ಆ ಅಧಿಕಾರಿ? ಅವನಿಗೆಷ್ಟು ಸೊಕ್ಕು? ಅವನನ್ನು ನೋಡಿಕೊಳ್ಳೇನೆ" ಎಂದು ಗುಟುರು ಹಾಕಿದರು.

ಘಟನೆ ೪: ಈಚೆಗೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿಗಳನ್ನು ಮಾಧ್ಯಮಗಳು ವರದಿ ಮಾಡಿದವು. ರಾಮಸ್ವಾಮಿ ನೇತೃತ್ವದ ಸದನ ಸಮಿತಿ ಕೂಡ ಇದರ ವರದಿ ಮಾಡಿದೆ. ಎಲ್ಲ ವರದಿಗಳ ಪ್ರಕಾರ ಅಕ್ರಮ ಭೂಒತ್ತುವರಿಯಲ್ಲಿ ಪ್ರಸಿದ್ಧ ಗುರು ಶ್ರೀ. ರವಿಶಂಕರ್ ಗುರೂಜಿಯೂ ಸೇರಿದಂತೆ ನಾಡಿನ ಅನೇಕ ಬಲಿಷ್ಠ ಕೋಮಿನ ಮಠಾಧಿಪತಿಗಳು ಇದ್ದರು. ಆನಂತರ ಬೆಂಗಳೂರು ಜಿಲ್ಲೆಯಲ್ಲಿ ಆದಿಚುಂಚನಗಿರಿ ಮಠದವರು ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ ಎಂದು ಯಾರೋ ಒಬ್ಬರು ಅಧಿಕಾರಿ ತಪಾಸಣೆ ಮಾಡಿ ಪತ್ರಿಕೆಗಳಿಗೆ ತಿಳಿಸಿದರು. ಕೂಡಲೆ ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಮಠಕ್ಕೆ ದೌಡಾಯಿಸಿದರು. ಸ್ವಾಮಿಜಿಯನ್ನು ಕಂಡು ಹೂಗುಚ್ಛ ಕೊಡುತ್ತಿರುವ ಚಿತ್ರವನ್ನು ಪತ್ರಿಕೆಗಳು ಅಚ್ಚು ಮಾಡಿದವು.

ಇಂತಹ ಇನ್ನೂ ಅನೇಕ ಘಟನೆಗಳನ್ನು ಉಲ್ಲೇಖಿಸುತ್ತ ಹೋಗಬಹುದು. ನಮ್ಮ ಅಧಿಕಾರಿಶಾಹಿ, ಪೋಲಿಸರು ಮತ್ತು ನ್ಯಾಯಾಲಯಗಳು ಸಾಮಾನ್ಯವಾಗಿ ರಾಜಕೀಯ ಪ್ರಭುತ್ವಗಳಿಗೆ ಅನುಕೂಲವಾದ ರೀತಿಯಲ್ಲಿ ವರ್ತಿಸುವುದೇ ಹೆಚ್ಚು. ಇಂತಹುದರಲ್ಲಿ ಕೆಲವರಾದರೂ ಕಾನೂನಿನ ಚೌಕಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಯತ್ನಿಸುತ್ತಾರೆ. ಹಾಗಿರುವಾಗ ಕೋರ್ಟು ವಿಚಾರಣೆ ಮಾಡಿ ಅಪರಾಧಿಯನ್ನು ನಿರ್ಧರಿಸುವ ಮೊದಲೆ ಉನ್ನತ ಅಧಿಕಾರದಲ್ಲಿದ್ದವರು ಆರೋಪಿಯ ಪರವಾಗಿ ಹೇಳಿಕೆ ನೀಡಿದರೆ ಪೋಲಿಸರು ಮತ್ತು ಅಧಿಕಾರಿಗಳು ಏನು ಮಾಡಬೇಕು? ಬಲಿಷ್ಠರು ತಮಗೆ ವಿಧೇಯರಾಗಿರುವ ಶಾಸಕರು ಮತ್ತು ಮಂತ್ರಿಗಳ ಮೂಲಕ ಒತ್ತಡ ತಂದು ಕಾನೂನಾಚೆ ಹೋಗಿ ತಮಗೆ ಬೇಕಾದನ್ನು ಮಾಡಿಸಿಕೊಳ್ಳುತ್ತಲೇ ಇರುತ್ತಾರೆ. ಸದ್ಯಕ್ಕೆ ಸರ್ಕಾರಗಳ ಮೇಲೆ ಒತ್ತಡ ತಂದು ತಮ್ಮ ಕೆಲಸ ಮಾಡಿಸಿಕೊಳ್ಳುತ್ತಿರುವವರು ಜನರಲ್ಲ. ಮಠಗಳು ಮತ್ತು ಉದ್ಯಮಿಗಳು.

ಮಾತಿನ ಹಂಗು

ರಹಮತ್ ತರೀಕೆರೆ

ಹಾಗೆ ಕಂಡರೆ ಕೆಲವು ಮಠಾಧಿಪತಿಗಳಿಗೂ ಉದ್ಯಮಪತಿಗಳಿಗೂ ಕಂಪನಿ ಸಿಇಓಗಳಿಗೂ ವ್ಯತ್ಯಾಸ ಕಡಿಮೆಯಾಗುತ್ತಿದೆ. ಹೆಚ್ಚಿನ ಮಠಗಳು ಕಾರ್ಪೋರೇಟ್ ಸಂಸ್ಥೆಗಳಾಗುತ್ತಿವೆ. ಅವು ಕ್ಯಾಪಿಟೇಶನ್ ಮೂಲಕ ಅಪಾರ ಹಣ ತಂದುಕೊಡುವ ಶಿಕ್ಷಣೋದ್ಯಮವನ್ನು ಸ್ಥಾಪಿಸಿಕೊಂಡಿವೆ. ಒಂದು ಕಾಲಕ್ಕೆ ಅಬ್ರಾಹ್ಮಣ ಮಠಗಳು ತಂತಮ್ಮ ಜಾತಿಯ ಬಡಮಕ್ಕಳಿಗೆ ಊಟ ವಸತಿ ಕೊಟ್ಟು ವಿದ್ಯೆ ನೀಡುವ ಸಾರ್ವಜನಿಕ ಜವಾಬ್ದಾರಿಯ ಭಾಗವಾಗಿ ಪ್ರಾಥಮಿಕ ಹಂತದ ಶಿಕ್ಷಣವನ್ನು ಕೊಡುವ ಕೆಲಸ ಮಾಡುತ್ತಿದ್ದವು. ಆ ಶಾಲೆಗಳು ಈಗ ಮುಖವಾಡದಂತೆ ಸಾಂಕೇತಿಕವಾಗಿ ಉಳಿದುಕೊಂಡಿವೆ. ಅವುಗಳ ಜಾಗ ದಲ್ಲಿ ಮೆಡಿಕಲ್-ಎಂಜಿನಿಯರಿಂಗ್‌ಗಳಂತಹ ವೃತ್ತಿಶಿಕ್ಷಣ ಕೊಡುವ ಸಂಸ್ಥೆಗಳು ಬಂದಿವೆ. ಒಂದು ಮಠ ಎಷ್ಟು ಪ್ರೈಮರಿ ಶಾಲೆ ನಡೆಸುತ್ತದೆ ಎನ್ನುವುದಕ್ಕಿಂತ, ಎಷ್ಟು ಮೆಡಿಕಲ್-ಎಂಜಿನಿಯರಿಂಗ್ ಕಾಲೇಜು ನಡೆಸುತ್ತದೆ ಎನ್ನುವುದರ ಮೇಲೆ ಅದರ ಘನತೆ, ಸಾರ್ವಜನಿಕ ಮನ್ನಣೆ, ರಾಜಕೀಯ ಪ್ರಭಾವ ನಿರ್ಧರಿಸಲ್ಪಡುತ್ತಿದೆ. ಈಗೀಗ ಮಠಗಳು ವಿದೇಶದಿಂದ ಬರುವ ಹಣವುಳ್ಳ ಎನ್‌ಆರ್‌ಐಗಳ ಮಕ್ಕಳಿಗಾಗಿಯೇ ಶಾಲೆ ಕಾಲೇಜುಗಳನ್ನು ತೆರೆದಿವೆ. ಇದಕ್ಕೆ ತಕ್ಕಂತೆ ಮಠಾಧೀಶರೂ ವಿದೇಶಿ ಪ್ರವಾಸಗಳನ್ನು ಮಾಡುತ್ತ ಜಾಗತೀಕರಣಗೊಂಡಿದ್ದಾರೆ.

ಕೆಲವು ಮಠಾಧಿಪತಿಗಳಿಗೂ ಉದ್ಯಮ ಪತಿ ಗಳಿಗೂ ಕಂಪನಿ ಸಿಇಓಗಳಿಗೂ ವ್ಯತ್ಯಾಸ ಕಡಿಮೆಯಾಗುತ್ತಿದೆ. ಹೆಚ್ಚಿನ ಮಠಗಳು ಕಾರ್ಪೋರೇಟ್ ಸಂಸ್ಥೆಗಳಾಗುತ್ತಿವೆ. ಅವು ಕ್ಯಾಪಿಟೇಶನ್ ಮೂಲಕ ಅಪಾರ ಹಣ ತಂದುಕೊಡುವ ಶಿಕ್ಷಣೋದ್ಯಮ ವನ್ನು ಸ್ಥಾಪಿಸಿಕೊಂಡಿವೆ. ಒಂದು ಕಾಲಕ್ಕೆ ಅಬ್ರಾಹ್ಮಣ ಮಠಗಳು ತಂತಮ್ಮ ಜಾತಿಯ ಬಡಮಕ್ಕಳಿಗೆ ಊಟ ವಸತಿ ಕೊಟ್ಟು ವಿದ್ಯೆ ನೀಡುವ ಸಾರ್ವಜನಿಕ ಜವಾಬ್ದಾರಿಯ ಭಾಗವಾಗಿ ಪ್ರಾಥಮಿಕ ಹಂತದ ಶಿಕ್ಷಣವನ್ನು ಕೊಡುವ ಕೆಲಸ ಮಾಡುತ್ತಿದ್ದವು. ಆ ಶಾಲೆಗಳು ಈಗ ಮುಖವಾಡದಂತೆ ಸಾಂಕೇತಿಕವಾಗಿ ಉಳಿದುಕೊಂಡಿವೆ. ಅವುಗಳ ಜಾಗದಲ್ಲಿ ಮೆಡಿಕಲ್-ಎಂಜಿನಿಯರಿಂಗ್‌ಗಳಂತಹ ವೃತ್ತಿಶಿಕ್ಷಣ ಕೊಡುವ ಸಂಸ್ಥೆಗಳು ಬಂದಿವೆ. ಕೆಲವು ಮಠಾಧೀಶರೂ ವಿದೇಶಿ ಪ್ರವಾಸಗಳನ್ನು ಮಾಡುತ್ತ ಜಾಗತೀಕರಣಗೊಂಡಿದ್ದಾರೆ.

ಒಂದು ಕಾಲಕ್ಕೆ ಮಠಗಳು ಜನರು ಕೊಡುವ ಕಾಣಿಕೆಯಿಂದ ನಡೆಯುತ್ತಿದ್ದವು. ಬಂಡಿ ಕಟ್ಟಿಕೊಂಡು ಆನೆಯ ಮೇಲೆ ಸಂಬಂಧಪಟ್ಟ ಮಠದ ಗುರುಗಳು ಪರಿವಾರ ಸಮೇತ ಭಕ್ತರು ಇರುವಲ್ಲಿ 'ಸರ್ಕ್ಯೂಟು' ಹೋಗಿ, ಅವರಿಂದ ದವಸ ಧಾನ್ಯ ಸಂಗ್ರಹ ಮಾಡಿ ಕೊಂಡು ಬರುತ್ತಿದ್ದರು. ಆದರೆ ಈಗ ಮಠಗಳು ಕುಳಿತ ಕಡೆ ಮಂತ್ರಿ ಮತ್ತು ಅಧಿಕಾರಿಗಳನ್ನು ಕರೆಸಿಕೊಂಡು ಬೇಕಾದ ಕೆಲಸ ಮಾಡಿಸಿಕೊಳ್ಳುತ್ತವೆ. ಕೆಲಸ ಮಾಡದಿದ್ದ ಅಧಿಕಾರಿ ಇಲ್ಲವೆ ಮಂತ್ರಿಗಳನ್ನು ಬದಲಿ ಸುತ್ತವೆ. ತಮ್ಮ ಕೆಲಸಗಳು ಸುಗಮವಾಗಿ ನಡೆಯಲೆಂದು ಸಣ್ಣ ಊರುಗಳಲ್ಲಿದ್ದ ಮೂಲಮಠಗಳು ಈಗ ರಾಜಧಾನಿಯಲ್ಲಿ ಶಾಖೆಯನ್ನು ತೆರೆದಿವೆ. ಇದು ಮಠ ಮತ್ತು ರಾಜಕೀಯ ಕೇಂದ್ರಗಳ ಸಂಬಂಧ ಬಲಗೊಂಡಿರುವುದರ ಸಂಕೇತವಾಗಿದೆ.

ಜನರು ಆರಿಸಿದ ಕಳಿಸಿದ ಪ್ರತಿನಿಧಿಗಳನ್ನೂ ಸರ್ಕಾರವನ್ನೂ ಮಠಗಳು ನಿಯಂತ್ರಿಸುವ ಈ ಬೆಳವಣಿಗೆಗೆ ಒಂದು ಆಯಾಮ ಈಗ ಜೋಡಣೆಯಾಗಿದೆ. ಅದೆಂದರೆ ಕೆಲವು ಮಠಗಳು ತಮಗೆ ಬೇಕಾದ ಜನ ಪ್ರತಿನಿಧಿಗಳನ್ನು ಸಾರ್ವಜನಿಕ ಚುನಾವಣೆಯಲ್ಲೇ ಗೆಲ್ಲಿಸುವ ಕೆಲಸಕ್ಕೆ ಇಳಿದಿರುವುದು. ಯಾರು ಜನ ಪ್ರತಿನಿಧಿ ಆಗಬೇಕೆಂದು, ಜನರು ಮತದಾನದ ಮೂಲಕ ಆರಿಸುವ ಮೊದಲೇ ಆರಿಸುವ ಸಂಪ್ರದಾಯ ಆರಂಭಿಸಿವೆ. ಇದು ನಿರ್ದಿಷ್ಟ ಕೋಮಿನ ಜನರು ದೊಡ್ಡ ಸಂಖ್ಯೆಯಲ್ಲಿರುವ ಕಡೆ ನಡೆಯುತ್ತಿದೆ. ಸಿರಿಗೆರೆ ಮಠವು ತನ್ನ ಪರಿಸರದಲ್ಲಿ ಸಾದ ಲಿಂಗಾಯತ ಅಭ್ಯರ್ಥಿಗಳು ಆರಿಸಿ ಬರುವಂತೆ ಚುನಾವಣಾ ಪೂರ್ವ ಆಯ್ಕೆಯನ್ನು ಮಾಡುವ ಸಂಪ್ರದಾಯವಿದೆ.

ಕೆಲವು ಕಡೆ ಚುನಾವಣೆಗಳಲ್ಲಿ ಆಯಾ ಭಾಗದ ಪ್ರಭಾವಶಾಲಿ ಜಾತಿಯ ಮಠಾಧಿಪತಿಯ ಗಮನಕ್ಕೆ ಬಾರದೆ ನಾಮಪತ್ರ ಕೂಡ ಸಲ್ಲಿಸುವುದು ಕಷ್ಟವಾಗಿದೆ. ಅವರನ್ನು ಅಭ್ಯರ್ಥಿಗಳು ಕಂಡು ನೋ ಅಬ್ಜೆಕ್ಷನ್ ಸರ್ಟಿಫಿಕೇಟು ಪಡೆಯಬೇಕು. ಅವರ ಸಮ್ಮತಿ ಎಂದರೆ ನಿಮ್ಮ ಭಕ್ತರ ಮತಗಳು ನನಗೂ ಬೀಳುವಂತೆ ಮಾಡಿರಿ, ಗೆದ್ದರೆ ನಿಮಗೆ ಅನುಕೂಲಕರವಾಗಿ ಕೆಲಸ ಮಾಡುತ್ತೇನೆ ಎಂಬ

ಅಲಿಖಿತ ಕರಾರು. ವಿಚಾರವಾದಿಯಾದ, ಸ್ವಾಭಿಮಾನಿಯಾದ ಸಿದ್ಧರಾಮಯ್ಯನವರು, ಚಾಮುಂಡೇಶ್ವರಿ ಉಪಚುನಾವಣೆಗೆ ನಿಂತಾಗ ಅಲ್ಲಿನ ಪ್ರಭಾವಶಾಲಿ ಮಠಾಧಿಪತಿಗಳಾದ ಸುತ್ತೂರು ಸ್ವಾಮಿಯವರನ್ನು ಹೋಗಿ ನೋಡುತ್ತಾರೆಯೊ ಇಲ್ಲವೊ ಎಂಬುದು ದೊಡ್ಡ ಚರ್ಚೆಯ ವಿಷಯವಾಗಿತ್ತು. ಸಿದ್ಧರಾಮಯ್ಯನವರು ಮಠಾಧೀಶರನ್ನು ಹೋಗಿ ಕಂಡರು. ಅವರು ವಿನೀತರಾಗಿ ಕೈಮುಗಿಯುತ್ತ, ಸುತ್ತೂರು ಸ್ವಾಮಿಗಳನ್ನು ಭೇಟಿಮಾಡುವ ಫೋಟೊವನ್ನು ಪತ್ರಿಕೆ ಅಚ್ಚುಹಾಕಿದ್ದವು. ಹಾಗೆ ಅವರು ಹೋಗದಿದ್ದರೆ ಸೋಲುವ ಸಾಧ್ಯತೆಯೂ ಇತ್ತು ಎನ್ನಲಾಗುತ್ತದೆ.

ರಾಜಕಾರಣಿಗಳು ಮಠಗಳಿಗೆ ಹೋಗಿ ಸ್ವಾಮಿಗಳಿಗೆ ಕಾಲಿಗೆಬಿದ್ದು, ಅವರ ಆಶೀರ್ವಾದವನ್ನು ಪಡೆಯುತ್ತಿರುವ ದೃಶ್ಯಗಳನ್ನು ಪತ್ರಿಕೆಗಳು ದಿನನಿತ್ಯ ಪ್ರಕಟಿಸುತ್ತಿವೆ. ಯಡಿಯೂರಪ್ಪನವರು ತಮಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ ಎಂದಾಗ ಅವರು ಜನತೆಯ ಬಳಿ ಹೋಗುತ್ತೇನೆಂದು ಹೊರಟರು. ಆದರೆ ಅವರು ಯಾತ್ರೆ ಆರಂಭಿಸಿದ್ದು ಸಿದ್ಧಗಂಗಾ ಮಠದಿಂದ. ಇಲ್ಲಿ ಜನವೆಂದರೆ ಮಠವೆಂದರ್ಥ. ಈ ರಾಜಕೀಯ ಯಾತ್ರೆಗೆ ಬಿಜೆಪಿ ಕೊಟ್ಟ ಹೆಸರು 'ಧರ್ಮಯಾತ್ರೆ' ಎಂಬುದು ಗಮನಾರ್ಹ. ಇದರಂತೆಯೇ ತಾವು ಮುಖ್ಯಮಂತ್ರಿಯಾದೊಡನೆ ಶ್ರೀ. ಕುಮಾರಸ್ವಾಮಿಯವರು ಯಾವುದೊ ಹಳ್ಳಿಯಲ್ಲಿರುವ ಜ್ಯೋತಿಷಿಯನ್ನೊ ಸ್ವಾಮಿಯನ್ನೊ ನೋಡಲು ಹೋದರು. ಇದರ ಪರಿಣಾಮವಾಗಿ ಬಹಿರಂಗ ಸಭೆಗಳಲ್ಲಿ ತಮ್ಮ ಸಹಕಾರದಿಂದ ಗೆದ್ದುಹೋದ ಶಾಸಕರು ಮಂತ್ರಿಗಳನ್ನು ಮಠಾಧೀಶರು ಕಠಿಣವಾದ ಮಾತುಗಳಲ್ಲಿ ದಂಡಿಸುವುದನ್ನು, ಭಾಷಣ ನಿಲ್ಲಿಸಿ ಎಂದು ಸ್ಪೀಕರುಗಳಂತೆ ವರ್ತಿಸುವುದನ್ನೂ ನೋಡಬಹುದು. ಒಮ್ಮೆ ಚುಂಚನಗಿರಿ ಸ್ವಾಮಿಯವರು ಕೋಲಾರದ ಒಂದು ಕಾರ್ಯಕ್ರಮದಲ್ಲಿ ಬಹಿರಂಗವಾಗಿ ಅಪ್ಪಣೆ ಕೊಡಿಸಿದರು. ಒಟ್ಟಿನಲ್ಲಿ ಇಂದು ಅನೇಕ ಮಠಾಧಿಪತಿಗಳು ರಾಜಕೀಯ ಗುರುಗಳಾಗುತ್ತಿದ್ದಾರೆ. ಮಠಗಳು ರಾಜಕೀಯ ಸಮಾಲೋಚನೆಯ ಕಾರಸ್ಥಾನಗಳಾಗುತ್ತಿವೆ. ಸ್ವಾಮಿಗಳು ರಾಜಕೀಯ ಪರಿಭಾಷೆಯಲ್ಲಿ ಮಾತಾಡುತ್ತಿದ್ದರೆ, ರಾಜಕಾರಣಿಗಳು ಧರ್ಮದ ಪರಿಭಾಷೆ ಮಾತಾಡುತ್ತಿದ್ದಾರೆ. ಪಾತ್ರಗಳು ಅದಲುಬದಲಾಗುತ್ತಿವೆ.

ಸದ್ಯಕ್ಕೆ ಕರ್ನಾಟಕದ ಬಲಿಷ್ಠ ಜಾತಿಗಳಾದ ಲಿಂಗಾಯತ ಒಕ್ಕಲಿಗ ಜಾತಿಯ ಮಠಗಳಿಗೆ ಬಂದಿರುವಷ್ಟು ರಾಜಕೀಯ ಬಲ ಸಣ್ಣ ಸಂಖ್ಯೆಯ ಜಾತಿಗಳ ಮಠಾಧಿಪತಿಗಳಿಗೆ ಬಂದಿಲ್ಲ. ಆದರೂ ಅವರು ಜಾತಿಸಂಘಟನೆ–ಮಠನಿರ್ಮಾಣ–ರಾಜಕೀಯ ನಿಯಂತ್ರಣ ಎಂಬ ಈ ಸಮೀಕರಣದ ಮಹತ್ವವನ್ನು ಅರಿತಿದ್ದಾರೆ. ಇದರ ಭಾಗವಾಗಿ ಜಾತಿಗಳು ಮಠಗಳನ್ನು ಕಟ್ಟಿಕೊಳ್ಳುವತ್ತ ನಡೆದಿವೆ. ಇದು ಕರ್ನಾಟಕದ ಡೆಮಾಕ್ರಸಿಯಲ್ಲಿ ನಡೆಯುತ್ತಿರುವ ಮಠೀಕರಣ. ಜನರ ಮತಗಳಿಂದ ಆರಿಸಿಹೋದ ಶಾಸಕರು, ಸಂಸದರು, ಪ್ರಭಾವಶಾಲಿ ಉದ್ಯಮಿಗಳ ಮತ್ತು ಮಠಗಳ ಹಿಡಿತದಲ್ಲಿ ಕೆಲಸ ಮಾಡುವ ರಾಜಕೀಯ ಸಂಸ್ಕೃತಿ ಬೆಳೆಯುತ್ತಿದೆ. ಸರ್ಕಾರಗಳು ಮಠಗಳ ಹಂಗಿನಲ್ಲಿ ಕೆಲಸ ಮಾಡುವ ಸಂಸ್ಕೃತಿ ಬೆಳೆಯುತ್ತಿದೆ.

ಇದನ್ನು ಹೇಳುವಾಗ, ಒಬ್ಬ ಗುರುವಿನ ಮಾತನ್ನು ಆ ಜಾತಿಯ ಎಲ್ಲರೂ ಕೇಳುತ್ತಾರೆ ಎಂದೇನಿಲ್ಲ. ದೆಹಲಿಯ ಜಾಮಾ ಮಸೀದಿಯ ಇಮಾಮರಾದ ಬುಖಾರಿಯವರು, ಪ್ರತಿಸಲ ಭಾರತದ ಮುಸ್ಲಿಮರು ಯಾವ ಪಕ್ಷಕ್ಕೆ ಓಟು ಕೊಡಬೇಕೆಂದು ಫತ್ವಾ ಹೊರಡಿಸುವುದು, ಮುಸ್ಲಿಮರು ತಮ್ಮ ವಿವೇಚನೆಗೆ ಅನುಸಾರವಾಗಿ ಓಟು ಕೊಡುವುದು ನಡೆದೇ ಇದೆ. ಕಳೆದ ಚುನಾವಣೆಯಲ್ಲಿ ಬಳ್ಳಾರಿಯಲ್ಲಿ ಅಷ್ಟೊಂದು ಕೋಮುವಾದಿಗಳಲ್ಲದ ಹಣಬಲದ ರೆಡ್ಡಿಗಳಿಗೆ ಅಲ್ಲಿನ ಮುಸ್ಲಿಮರು ಬೆಂಬಲಿಸಿದರು. ಕೊನೆಗೂ ಸ್ಥಳೀಯ ಸನ್ನಿವೇಶಗಳು ಮತದಾನದ ಸ್ವರೂಪವನ್ನು ನಿರ್ಧರಿಸುತ್ತವೆ. ಆದರೂ ಈ ಧಾರ್ಮಿಕ ನಾಯಕರು ಪ್ರಜಾಪ್ರಭುತ್ವದ ರಾಜಕೀಯದಲ್ಲಿ ಪ್ರಭಾವ ಬೀರುವುದು ಅಥವಾ ಅವರ ಪ್ರಭಾವ ಬೀರುವಂತೆ ನಮ್ಮ ಶಕ್ತಿ ರಾಜಕಾರಣವು ಅವಕಾಶ ಕಲ್ಪಿಸಿರುವುದು ನಮ್ಮ ಕಾಲದ ವೈರುಧ್ಯಗಳಲ್ಲಿ ಒಂದಾಗಿದೆ. ಸಂಖ್ಯಾಬಲವು ನಿರ್ಣಾಯಕವಾಗಿರುವ ಪ್ರಜಾಪ್ರಭುತ್ವವು ಭಾರತದ ಜಾತಿ ವ್ಯವಸ್ಥೆಯಲ್ಲಿ ಪಡೆದುಕೊಂಡಿರುವ ಹೊಸ ರೂಪಾಂತರವಿದು. ಈ ರೂಪಾಂತರದಲ್ಲಿ ದೇವರಾಜ ಅರಸು, ನಜೀರ್‌ಸಾಬ್ ಅವರಂತಹ ದುರ್ಬಲ ವರ್ಗಗಳ ಹಿತಕಾಯುವ ರಾಜಕಾರಣಿಗಳನ್ನು ಪಡೆಯುವ ಸಾಧ್ಯತೆ ಕಡಿಮೆಯಾಗುತ್ತಿದೆ.

ಜನರು ಆರಿಸಿ ಕಳಿಸಿದ ಸರ್ಕಾರವನ್ನು ನಿಯಂತ್ರಿಸುವವರ ಪಟ್ಟಿಗೆ ಬಲಿಷ್ಠ ಜಾತಿಯ ಮಠಾಧಿಪತಿಗಳು ಮತ್ತು ಸ್ಥಳೀಯ ಉದ್ಯಮಿಗಳ ಜತೆ ಈಗ ವಿಶ್ವಬ್ಯಾಂಕುಗಳು ಬಹುರಾಷ್ಟ್ರೀಯ ಕಂಪನಿಗಳು, ಅಮೆರಿಕೆಯಂತಹ ಸಾಮ್ರಾಜ್ಯಶಾಹಿಗಳು ಕೂಡ ಸೇರಿವೆ. ಸರ್ಕಾರದ ನಿಯಂತ್ರಣವೆಂದರೆ, ಜನತೆಗೆ ಸೇರಿದ ನಾಡಿನ ಸಂಪತ್ತಿನ ಮೇಲೆ ಕೆಲವು ವರ್ಗಗಳು ಖಬಜಾ ಮಾಡುವುದು ಎಂದೇ ಅರ್ಥ. ಹಿಂದೆ ನಮ್ಮ ಮಹಾರಾಜರು ತಮ್ಮ ರಾಜ್ಯದಲ್ಲಿ ಬರುವ ಮಠಗಳ ಗುರುಗಳನ್ನು ಕರೆಯಿಸಿ, ಗೌರವಿಸಿ, ಮಠ ನಡೆಯಲು ಬೇಕಾದ ಖಿಲ್ಲತ್ತು, ಜಹಗೀರು, ಇನಾಮು, ಆನೆಗಳನ್ನು ಕೊಡುವ ಪರಿಪಾಠವಿತ್ತು. ಇದನ್ನು ಟಿಪ್ಪು ಶೃಂಗೇರಿ ಸ್ವಾಮಿಗಳಿಗೆ ಬರೆದ ಪತ್ರಗಳನ್ನು, ಬೇರೆಬೇರೆ ಮಠಗಳಿಗೆ ಮೈಸೂರು ಒಡೆಯರು ಬರೆದಿರುವ ಕೌಲುಗಳನ್ನೂ ನೋಡಿದರೆ ಗೊತ್ತಾಗುತ್ತದೆ. ರಾಜಪ್ರಭುತ್ವದಲ್ಲಿ ಸರ್ಕಾರವು ಅದು ಮಠಗಳಿಗೆ ಸಂಪೂರ್ಣವಾಗಿ ಶರಣಾಗಿರಲಿಲ್ಲ. ಕಾರಣ, ಮಠಗಳ ಮೂಲಕ ಆಯಾ ಜಾತಿಯ ಜನರ ಓಟುಗಳನ್ನು ಪಡೆಯುವ ಹಂಗು ಅದಕ್ಕಿರಲಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಬಲಿಷ್ಠ ಜಾತಿಗಳ ಬೆಂಬಲವಿಲ್ಲದೆ ಚುನಾವಣೆ ಗೆಲ್ಲುವುದು ಮತ್ತು ಸರ್ಕಾರ ನಡೆಸುವುದು ಕಷ್ಟ ಎಂಬಂತಾಗಿದೆ. ಜಾತಿಗಳನ್ನು ನಿಯಂತ್ರಿಸುವ ಮಠಗಳಿಗೆ, ಡೆಮಾಕ್ರಸಿಯನ್ನು ನಿಯಂತ್ರಿಸುವ ಅವಕಾಶ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಬಜೆಟ್ಟಿನಲ್ಲೇ ಮಠಗಳಿಗೆ ಹಣವನ್ನು ಮೀಸಲಿಟ್ಟರೆ ಸೋಜಿಗ ಪಡಬೇಕಿಲ್ಲ. ಇದರಿಂದ ಶಕ್ತಿ ರಾಜಕಾರಣಕ್ಕೂ ಜಾತಿಯ ಮಠಗಳಿಗೂ ಇರುವ ಸಂಬಂಧವು ಮತ್ತಷ್ಟು ಗಾಢವಾಗಿದೆ. ರಾಜಕಾರಣಿಗಳು ತಮ್ಮ ಲೆಕ್ಕವಿರದ ಹಣವನ್ನು ಮಠಗಳಲ್ಲಿ ಸ್ವಿಸ್ ಬ್ಯಾಂಕುಗಳಲ್ಲಿ ಇಡುವಂತೆ ಇಡುವ ಪದ್ಧತಿಯಿದೆ. ಹೀಗೆ ಇಟ್ಟುಪಡೆಯುವ ವ್ಯವಹಾರದಲ್ಲಿ ಹೆಚ್ಚು ಕಡಿಮೆಯಾಗಿ, ಸಂಬಂಧಪಟ್ಟ ರಾಜಕಾರಣಿಗಳಿಗೂ ಮಠಾಧೀಶರಿಗೂ ಘನಘೋರವಾದ ಮನಸ್ತಾಪ ಬಂದು, ಅವು ಸಾರ್ವಜನಿಕ ವೇದಿಕೆಗಳಲ್ಲಿ ಬಗೆಬಗೆಯಾಗಿ ಪ್ರಕಟವಾಗುವುದುಂಟು.

ಚುನಾವಣೆ ನಿಧಿಯ ಹೆಸರಲ್ಲಿ ರಾಜಕೀಯ ಪಕ್ಷಗಳಿಗೆ ದೊಡ್ಡ ಉದ್ಯಮಿಗಳು ಹಣ ಕೊಡುವ ಪದ್ಧತಿ ಹಳೆಯದು. ಅಮೆರಿಕೆದಲ್ಲಂತೂ ಯುದ್ಧ ಸಲಕರಣೆ ತಯಾರು ಮಾಡುವ ಮತ್ತು ತೈಲದ ಉದ್ಯಮಗಳನ್ನು ಹೊರತು ಪಡಿಸಿ ಅಲ್ಲಿನ ಚುನಾವಣೆಯನ್ನು ಕಲ್ಪಿಸಿಕೊಳ್ಳು



ನಮ್ಮ ನೆರೆಯ ದೇಶಗಳಲ್ಲಿ ಸರ್ವಾಧಿಕಾರವಿದೆ, ಅಲ್ಲಿ ಕಾಲಕಾಲಕ್ಕೆ ಚುನಾವಣೆ ನಡೆಯುವುದಿಲ್ಲ, ಅಲ್ಲಿ ಮಿಲಿಟರಿ ಆಡಳಿತವಿದೆ, ನಮ್ಮಲ್ಲಿ ಪ್ರಜಾಪ್ರಭುತ್ವವಿದೆ ಎಂದು ನಾವು ಬೀಗುವುದುಂಟು; ನಮ್ಮ ಶಾಸನ ಸಭೆ ಪಾರ್ಲಿಮೆಂಟುಗಳ ಮೇಲೆ ಯಾರೊ ಬಾಂಬಿಟ್ಟರು ಎಂದು ನಮ್ಮ ಜನತೆಯ ಪರಮೋಚ್ಚ ಸಂಸ್ಥೆಗಳ ಪಾವಿತ್ರ್ಯ ಹಾಳಾಯಿತು, ಇದು ಡೆಮಾಕ್ರಸಿಯ ಮೇಲಿನ ಹಲ್ಲೆ ಎಂದು ನಾವು ಅಳಲುವುದುಂಟು. ಆದರೆ ನೆರೆಯ ದೇಶಗಳ ಜನ ತಮ್ಮೆಲ್ಲ ಕಷ್ಟಗಳ ಜತೆ ಕೆಟ್ಟ ಸರ್ಕಾರಗಳನ್ನು ಕಿತ್ತುಹಾಕುತ್ತಿದ್ದಾರೆ. ಇಂದು ನೇಪಾಳದಲ್ಲಿ ಒಬ್ಬ ವಿಲಾಸಿ ದೊರೆಯನ್ನು ಜನ ಸೋಲಿಸಿ ಜನರ ನೋವಿಗೆ ಮಿಡಿಯುವ ಕ್ರಾಂತಿಕಾರಿಗಳನ್ನು ಅಧಿಕಾರಕ್ಕೆ ತಂದಿದ್ದಾರೆ. ಪಾಕಿಸ್ತಾನದಲ್ಲಿ ಜನರಿಂದ ಆಯ್ಕೆಯಾಗಿದ್ದ ಸರ್ಕಾರವನ್ನು ಕಿತ್ತುಹಾಕಿ ಅಧಿಕಾರ ಹಿಡಿದಿದ್ದ, ಅಮೆರಿಕದ ಗುಲಾಮನಂತಿದ್ದ ಒಬ್ಬ ಸೈನ್ಯಾಧಿಕಾರಿಯ ಪಕ್ಷವನ್ನು ಸಂಪ್ರದಾಯವಾದಿ ಪಕ್ಷಗಳನ್ನೂ ಜನ ಸೋಲಿಸಿ, ಉದಾರವಾದಿಗಳನ್ನು ಅಧಿಕಾರಕ್ಕೆ ತಂದಿದ್ದಾರೆ.

ವಂತೆಯೇ ಇಲ್ಲ. ಇನ್ನು ಮುಂದೆ ಭಾರತದಲ್ಲಿ

ಇನ್ನು ಮುಂದೆ ಮಠಗಳು ಚುನಾವಣಾ ನಿಧಿಯನ್ನು ಕೊಡುವ ಸನ್ನಿವೇಶ ಬರಬಹುದು. ಇದರಿಂದ ಜನರಿಂದ ಆರಿಸಿಹೋದ ಜನಪ್ರತಿನಿಧಿಗಳು, ಸರ್ಕಾರಗಳು, ಶಾಸನಗಳು ಸಹಜವಾಗಿಯೇ ಜನರ ಕಷ್ಟಸುಖಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡುವ ಸಾಧ್ಯತೆಯು ಕ್ಷೀಣಿಸುತ್ತ ಹೋಗುತ್ತದೆ. ಪಾರ್ಲಿಮೆಂಟಿನಲ್ಲಿ ಬೇರೆಬೇರೆ ಕಂಪನಿಗಳ ಪರವಾಗಿ ಪ್ರಶ್ನೆಕೇಳಲು ಸಂಸದರು ಲಂಚ ತೆಗೆದುಕೊಳ್ಳುವ ವಿಷಯದಲ್ಲಿ ಸಿಕ್ಕಿಹಾಕಿಕೊಂಡು ತಮ್ಮ ಸದಸ್ಯತ್ವವನ್ನು ಕಳೆದುಕೊಂಡು ಪ್ರಕರಣವು ಇದಕ್ಕೆ ಸಾಕ್ಷಿಯಾಗಿದೆ. (ಹಾಗೆ ಕಳೆದುಕೊಂಡ ೧೧ ಜನ ಸದಸ್ಯರ ಪೈಕಿ, ೬ ಜನ ರಾಷ್ಟ್ರಭಕ್ತಿಯನ್ನು ಸಿಕ್ಕಸಿಕ್ಕವರಿಗೆ ಉಪದೇಶ ಕೊಡುವ ಪಕ್ಷದವರು ಒಂದು ವ್ಯಂಗ್ಯ)

ನಮ್ಮ ನೆರೆಯ ದೇಶಗಳಲ್ಲಿ ಸರ್ವಾಧಿಕಾರವಿದೆ, ಅಲ್ಲಿ ಕಾಲಕಾಲಕ್ಕೆ ಚುನಾವಣೆ ನಡೆಯುವುದಿಲ್ಲ, ಅಲ್ಲಿ ಮಿಲಿಟರಿ ಆಡಳಿತವಿದೆ, ನಮ್ಮಲ್ಲಿ ಪ್ರಜಾಪ್ರಭುತ್ವವಿದೆ ಎಂದು ನಾವು ಬೀಗುವುದುಂಟು; ನಮ್ಮ ಶಾಸನಸಭೆ ಪಾರ್ಲಿಮೆಂಟುಗಳ ಮೇಲೆ ಯಾರೂ ಬಾಂಬಿಟ್ಟರು ಎಂದು ನಮ್ಮ ಜನತೆಯ ಪರಮೋಚ್ಚ ಸಂಸ್ಥೆಗಳ ಪಾವಿತ್ರ್ಯ ಹಾಳಾಯಿತು, ಇದು ಡೆಮಾಕ್ರಸಿಯ ಮೇಲಿನ ಹಲ್ಲೆ ಎಂದು ನಾವು ಅಳಲುವುದುಂಟು. ಆದರೆ ನೆರೆಯ ದೇಶಗಳ ಜನ ತಮ್ಮೆಲ್ಲ ಕಷ್ಟಗಳ ಜತೆ ಕೆಟ್ಟ ಸರ್ಕಾರಗಳನ್ನು ಕಿತ್ತುಹಾಕುತ್ತಿದ್ದಾರೆ. ಇಂದು ನೇಪಾಳದಲ್ಲಿ ಒಬ್ಬ ವಿಲಾಸಿ ದೊರೆಯನ್ನು ಜನ ಸೋಲಿಸಿ ಜನರ ನೋವಿಗೆ ಮಿಡಿಯುವ ಕ್ರಾಂತಿಕಾರಿಗಳನ್ನು ಅಧಿಕಾರಕ್ಕೆ ತಂದಿದ್ದಾರೆ. ಪಾಕಿಸ್ತಾನದಲ್ಲಿ ಜನರಿಂದ ಆಯ್ಕೆಯಾಗಿದ್ದ ಸರ್ಕಾರವನ್ನು ಕಿತ್ತುಹಾಕಿ ಅಧಿಕಾರ ಹಿಡಿದಿದ್ದ, ಅಮೆರಿಕದ ಗುಲಾಮನಂತಿದ್ದ ಒಬ್ಬ ಸೈನ್ಯಾಧಿಕಾರಿಯ ಪಕ್ಷವನ್ನು ಸಂಪ್ರದಾಯವಾದಿ ಪಕ್ಷಗಳನ್ನೂ ಜನ ಸೋಲಿಸಿ, ಉದಾರವಾದಿಗಳನ್ನು ಅಧಿಕಾರಕ್ಕೆ ತಂದಿದ್ದಾರೆ. ಆದರೆ ಗುಜರಾತಿನಲ್ಲಿ ಸಾವಿರಾರು ಜನರನ್ನು ಸರ್ಕಾರದ ಯಂತ್ರಾಂಗವನ್ನೆ ಬಳಸಿ ಕೊಂದ ವ್ಯಕ್ತಿ ಮತ್ತು ಪಕ್ಷಗಳನ್ನು ನಾವು ಚುನಾವಣೆಗಳಲ್ಲಿ ಗೆಲ್ಲಿಸಿ ತರುತ್ತಿದ್ದೇವೆ.

ಅಂದರೆ ಸೈನಿಕಶಾಹಿ ರಾಜಶಾಹಿಗಳಿದ್ದ ಪಕ್ಕದ ದೇಶಗಳಲ್ಲಿ ಇಲ್ಲದ ಸವಾಲು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿದೆ. ಅದೇನೆಂದರೆ, ಧರ್ಮದ ಹೆಸರಲ್ಲಿ ಜನರನ್ನು ವಿಭಜಿಸಿ, ಅವಕಾಶ ಸಿಕ್ಕರೆ ಕೊಂದು ಅಧಿಕಾರ ಪಡೆಯಬಲ್ಲ ಫ್ಯಾಸಿಸ್ಟ್ ಪಕ್ಷಗಳನ್ನು ಚುನಾವಣೆಯಲ್ಲಿ ಮುಖಾಮುಖಿ ಮಾಡುವುದು. ತಮ್ಮ ಜಾತಿಯ ರಾಜಕಾರಣಿಗಳನ್ನು ಗೆಲ್ಲಿಸುವ ಮಠಗಳು ಮಾಡುವ ಧಾರ್ಮಿಕ ರಾಜಕಾರಣಕ್ಕಿಂತ ಇದು ಅಪಾಯಕಾರಿ. ಅದರಲ್ಲೂ ಸಾಧು ಸಂತರನ್ನು ಕಟ್ಟಿಕೊಂಡು ರಾಜಕಾರಣ ಮಾಡುವ ಧರ್ಮ ಸಂಸತ್ತು ಎಂಬ ಬಿಜೆಪಿ ಅಧಿಕಾರಕ್ಕೆ ಬಂದರೆ ಮೇಲ್ಜಾತಿಯ ಮಠಗಳಿಗೆ ಆನೆ ಬಲ ಬಂದಂತೆ. ಪ್ರಜಾಪ್ರಭುತ್ವದ ಹೆಸರಲ್ಲಿ ಮಠಗಳು ಪರ್ಯಾಯ ಅಧಿಕಾರ ಕೇಂದ್ರಗಳಾಗುತ್ತವೆ. ಜನರ ತೆರಿಗೆಯ ಹಣ ಮಠಗಳು ಮಾಡುವ ಜಾತಿವಾದಿ ಕಾರ್ಯಕ್ರಮಗಳಿಗೆ ಹರಿಯುತ್ತದೆ. ನಮ್ಮ ಮತದ ಉಸಿರನ್ನು ಪಡೆದು ಜೀವಂತವಿರುವ ಈ ಡೆಮಾಕ್ರಸಿ ಎಷ್ಟರ ಮಟ್ಟಿಗೆ ನಮ್ಮ ಪರವಾಗಿದೆ, ನಮ್ಮ ಮತವನ್ನು ಪಡೆದು ಅಧಿಕಾರ ವಹಿಸುವವರು ಯಾರ ಮರ್ಜಿಯಲ್ಲಿ ಕೆಲಸ ಮಾಡುತ್ತಾರೆ ಎಂಬ ಪ್ರಶ್ನೆಗಳನ್ನು ನಾಳೆ ಮತದಾನ ಮಾಡುವವರು ಮರೆಯುವಂತಿಲ್ಲ. □

ಯೋಜಿತ ನರಮೇಧ, ನಿರಾಕರಣೆ ಮತ್ತು ಸಂಭ್ರಮ

(೪೧ನೇ ಪುಟದಿಂದ)

ಸಾಧ್ಯವೆಂದು. ಯಾವ ವಸ್ತುಗಳನ್ನೂ ಕೊಳ್ಳಲು ಹಣ ಇಲ್ಲದವರು ವಿದೇಶಿ ವಸ್ತುಗಳನ್ನು ಹೇಗೆ ಬಹಿಷ್ಕರಿಸಬಹುದು ಎಂದು, ಸಂಪಾದನೆಯೇ ಇಲ್ಲದವರು ತೆರಿಗೆ ಪಾವತಿಯನ್ನು ನಿರಾಕರಿಸುವುದಾದರು ಹೇಗೆ? ಎಂದು ಆಶ್ಚರ್ಯ ಪಡಬಹುದು.

ಶಸ್ತ್ರ ಕೈಗೆತ್ತಿಕೊಂಡಿರುವವರು, ಆ ನಿರ್ಧಾರದ ಪರಿಣಾಮ ಏನಾಗಬಹುದೆಂಬುದರ ಸಂಪೂರ್ಣ ಅರಿವಿಟ್ಟು ಕೊಂಡೇ ಹಾಗೆ ಮಾಡಿದ್ದಾರೆ. ತಮ್ಮನ್ನಷ್ಟೇ ಅವಲಂಬಿಸಿ ಹಾಗೆ ಮಾಡಿದ್ದಾರೆ. ಅವರಿಗೆ, ನೆಲದ ಕಾನೂನುಗಳು ಬಡವರನ್ನು ಅಪರಾಧೀಕರಣಗೊಳಿಸಿದೆ, ಪ್ರತಿರೋಧವನ್ನು ಭಯೋತ್ಪಾದನೆಯೊಂದಿಗೆ ತಳಕು ಹಾಕಲಾಗಿದೆ ಎಂದು ತಿಳಿದಿದೆ. (ಶಾಂತಿ ಕಾರ್ಯಕರ್ತರು ಭೂಮಿ ಮೇಲಿನ ಕಾರ್ಮಿಕರು) ವಿವೇಚನಾ ಶಕ್ತಿಗೆ ಮನವಿ ಮಾಡುವುದು, ಉದಾರ ನೈತಿಕತೆ ಮತ್ತು ಮಾಧ್ಯಮದ ಪ್ರಚಾರಾನುಕಂಪ ಈಗ ಯಾವ ಸಹಾಯವನ್ನೂ ಅವರಿಗೆ ಮಾಡುವುದಿಲ್ಲವೆಂದು ಅವರಿಗೆ ತಿಳಿದಿದೆ. ಯಾವ ಅಂತರರಾಷ್ಟ್ರೀಯ ಮೆರವಣಿಗೆಗಳು, ಯಾವ ಜಾಗತಿಕ ವಿರೋಧವು, ಯಾವ ಖ್ಯಾತ ಬರಹಗಾರರು ಗುಂಡುಗಳು ಹಾರುವಾಗ ಅವರ ಸುತ್ತ ಇರುವುದಿಲ್ಲವೆಂಬುದು ಅವರಿಗೆ ತಿಳಿದಿದೆ.

ಭಾರತದ ಪ್ರಜಾತಂತ್ರದ ಸಂಸ್ಥೆಗಳ ಬಗ್ಗೆ ಸಾವಿರಾರು ಜನ ನಂಬಿಕೆ ಕಳೆದುಕೊಂಡಿದ್ದಾರೆ. ದೇಶದ ವ್ಯಾಪಕವಾದ ಪದರಗಳು ಸರ್ಕಾರದ ನಿಯಂತ್ರಣದಿಂದ ಕಳಚಿ ಕೊಂಡಿವೆ (ಶೇ. ೨೫ರಷ್ಟು ಎಂದು ಊಹಿಸಲಾಗಿದೆ). ಹೋರಾಟ ಈಗ ಸಾವಿನ ನಾತ ಹೊಡೆಯುತ್ತಿದೆ. ಇದು ಯಾವ ರೀತಿಯಿಂದಲೂ ಆಕರ್ಷಕವಾಗಿಲ್ಲ. ತೊಡಕಾಗಿ ರುವ ಭೂತಗಳ ಚುಕ್ಕಾಣಿ ಹಿಡಿದಿರುವವನೇ ಥೇರ್ಮನ್ ಮಾವೋನ ಭೂತವೇ ಆಗಿರುವಾಗ ಆಕರ್ಷಕವಾಗಿರುವು ದಾದರೂ ಹೇಗೆ? (ಭರವಸೆಯ ಕಿರಣವೆಂದರೆ ಕಾಲಾಳು ಗಳಿಗೆ ಅವನು ಯಾರೆಂದು ಅಥವ ಏನು ಮಾಡಿದ್ದನೆಂದು ತಿಳಿದಿಲ್ಲ. ಹೆಚ್ಚೆಚ್ಚು ನರಮೇಧ ನಿರಾಕರಣೆ? ಇರಬಹುದು) ಅವರು ಉತ್ತಮ ಜಗತ್ತಿಗಾಗಿ ಹೋರಾಡುತ್ತಿರುವ ಆದರ್ಶವಾದಿಗಳೇ? ಇರಲಿ..... ಯಾವುದಾದರೂ ಒಳ್ಳೆಯದೇ, ನಿರ್ಮೂಲನೆಗಿಂತ.

ಪ್ರಧಾನ ಮಂತ್ರಿಗಳು, ಮಾವೋವಾದಿ ಪ್ರತಿರೋಧವೇ "ಆಂತರಿಕ ಭದ್ರತೆಗಿರುವ ಏಕೈಕ ಬಹು ದೊಡ್ಡ ವಿಪತ್ತು" ಎಂದು ಘೋಷಿಸಿದ್ದಾರೆ. ಸೇನೆಯನ್ನು ಕರೆಯಲು ಮನವಿಗಳಾಗಿವೆ. ಮಾಧ್ಯಮಗಳು ಅತ್ಯಾತುರದ ಉದ್ವಿಗ್ನತೆಯಿಂದ ಖಂಡಿಸುತ್ತಿವೆ.

ಇದೊಂದು ಪತ್ರಿಕಾ ವರದಿಯ ನಮೂನೆ. ಮಾಮೂಲಿಗಿಂತ ಭಿನ್ನವಾಗೇನಿಲ್ಲ. ನಕ್ಸಲ್‌ರನ್ನು ಮಟ್ಟ ಹಾಕಿ ಎಂದು ಕರೆ ನೀಡಿತ್ತು.

"ಕೊನೆಗಾದರೂ ಈ ಸರ್ಕಾರ ನಕ್ಸಲ್‌ವಾದವನ್ನು ನಿಭಾಯಿಸುವ ಬಗ್ಗೆ ಸ್ವಲ್ಪ ವಿವೇಕ ತೋರಿದೆ. ಒಂದು ತಿಂಗಳಿಗಿಂತ ಮೊದಲು ಪ್ರಧಾನಿ ಮನಮೋಹನ್ ಸಿಂಗ್ ಅವರು ನಕ್ಸಲ್ ವ್ಯವಸ್ಥೆಯ ಉಸಿರುಗಟ್ಟಿಸಿ, 'ವೈರಾಣು'ವನ್ನು ನಿರ್ಮೂಲನೆ ಮಾಡುವ ಸಂಕಲ್ಪ ಬಲದಿಂದ ಅವರ ಚಟುವಟಿಕೆಗಳನ್ನು ಮುರಿಯಿರಿ" ಎಂದು ರಾಜ್ಯ ಸರ್ಕಾರಗಳಿಗೆ ಹೇಳಿದರು. ಇದು ಅಭಿವೃದ್ಧಿ ಮೇಲಿನ ವ್ಯರ್ಥ ವೆಚ್ಚಕ್ಕಿಂತ ಕಾನೂನು ಕ್ರಮ ಜರುಗಿಸುವ ಮೂಲಕ ನಕ್ಸಲ್‌ವಾದವನ್ನು ಮಟ್ಟ ಹಾಕಬೇಕೆಂದು ಅರ್ಥ ಮಾಡಿ ಕೊಂಡಿರುವುದನ್ನು ಸಂಕೇತಿಸಿತು.

'ಉಸಿರುಗಟ್ಟಿಸು', 'ಮುರಿ', 'ವೈರಾಣು', 'ಕಾಟ ಕೊಡು', 'ಉಚ್ಚಾಟಿಸು', 'ಮಟ್ಟಹಾಕು'.

ಹೌದು. ನಿರ್ಮೂಲನೆಯ ವಿಷಯ ಗಾಳಿಯಲ್ಲಿದೆ. ನಿರ್ಮೂಲನೆಯನ್ನು ಎದುರಿಸುವವರು ಹಿಂತಿರುಗಿ ಹೋರಾಡಬೇಕೆಂದು ಜನ ನಂಬುತ್ತಾರೆ, ಅಗತ್ಯವಿರುವ ಯಾವುದೇ ಸಾಧನದ ಮೂಲಕ. **ಬಹುಶಃ ಅವರು ಮಿಡತೆಗಳ ಸದ್ದನ್ನು ಕೇಳುತ್ತಿರ ಬೇಕು.**

ಟರ್ಕಿಷ್-ಅರ್ಮೇನಿಯನ್ ಪತ್ರಿಕೆ ಅಗಾಸ್ (Agos)ನ ಸಂಪಾದಕರಾಗಿದ್ದ ಹ್ರಂಟ್ ಡಿಂಕ್ ಹತ್ಯೆಯಾಗಿ ಒಂದು ವರ್ಷವಾದ ಜ್ಞಾಪಕಾರ್ಥವಾಗಿ ಇಸ್ತಾನ್‌ಬುಲ್‌ನಲ್ಲಿ ಜನವರಿ ೧೮, ೨೦೦೮ ರಂದು ಅರುಂಧತಿ ರಾಯ್ ಅವರು ಮಾಡಿದ ಉಪನ್ಯಾಸದ ಸಂಕ್ಷಿಪ್ತ ರೂಪವಿದು. □

(ಸೌಜನ್ಯ: ಔಟ್‌ಲುಕ್ ಪತ್ರಿಕೆ)

ಹೊಟ್ಟೆ ಪಾಡು

ಆಯಕಟ್ಟಿನ
ಗವಿಗಳಲಿ
ಗುನುಗಿದೆ
ಹೋರಾಟ ಹಾಡು
'ಮಾನವ ಪ್ರೀತಿ'ಗಾಗಿ

ಹಿಂಸೆಗರ್ಭದಿಂದ
ಹೊರಬರಲು
ಹವಣಿಸುತ್ತಿದೆ
ಹೊಟ್ಟೆಪಾಡು!

○ ಟಿ.ಎಸ್. ರಾಜೇಂದ್ರ ಪ್ರಸಾದ್

ವಿಮೋಚನೆಯ ಮಾನದಂಡ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಒಬ್ಬ ದಲಿತ ವ್ಯಕ್ತಿ ಹಣಕಾಸು ಮಂತ್ರಿ ಅಥವಾ ಪ್ರಧಾನ ಮಂತ್ರಿ ಆದಲ್ಲಿ ಸಮಗಾರ ಸಮುದಾಯದ ಯುವಜನಕ್ಕೆ ಏನನ್ನು ಕೊಡಬಲ್ಲದು? ಅಂಥ ಸಮುದಾಯಗಳಿಗೆ ಸೇರಿದ ಯುವಜನರಲ್ಲಿ ಬಹುಮಂದಿ ಅನಕ್ಷರಸ್ತರಾಗಿರುತ್ತಾರೆ ಅಥವಾ ಪ್ರಾಥಮಿಕ ಅಥವಾ ೭ನೇ ತರಗತಿ ಹಂತದಲ್ಲಿ ಶಾಲೆ ಬಿಟ್ಟವರಾಗಿರುತ್ತಾರೆ. ಇವರ್ಯಾರೂ ಸಹ ಸರ್ಕಾರಿ ಹುದ್ದೆಗಳಿಗೆ ಅರ್ಹರಿರುವುದಿಲ್ಲ ಮತ್ತು ಖಾಸಗಿ ವಲಯದಲ್ಲಿ ಇವರನ್ನು ಯಾರೂ ಸಹ ಕಣ್ಣೆತ್ತಿನೋಡುವುದಿಲ್ಲ. ಅಂತಿಮವಾಗಿ ಇವರೆಲ್ಲಾ ತಮ್ಮ ಪೂರ್ವಜರು ಏನು ಮಾಡುತ್ತಿದ್ದರೋ ಅದನ್ನೇ ಆಶ್ರಯಿಸುತ್ತಾರೆ.

ಕಳೆದ ಕೆಲವು ದಿನಗಳಿಂದ ನಾನು ನನ್ನ ಪ್ರದೇಶದಲ್ಲಿರುವ ಒಂದು ಕಸಗುಡಿಸುವ ಕುಟುಂಬವನ್ನು ಗಮನಿಸುತ್ತಿದ್ದೇನೆ. ಈ ಕುಟುಂಬ ಬೆಳಿಗ್ಗೆ ೬ ಗಂಟೆಗೆ ಕೆಲಸ ಆರಂಭಿಸುತ್ತಾರೆ. ಈ ಸಮಯದಲ್ಲಿ ನಾವು ಟೀ ಕುಡಿಯುತ್ತಿರುತ್ತೇವೆ ಅಥವಾ ಇನ್ನೂ ನಿದ್ದೆಮಾಡುತ್ತಿರುತ್ತೇವೆ. ಮೊದಲಿಗೆ ರಸ್ತೆಗಳು ಮತ್ತು ಅಕ್ಕಪಕ್ಕವನ್ನೆಲ್ಲಾ ಸ್ವಚ್ಛಮಾಡುತ್ತಾರೆ. ಹೊತ್ತೇರಿದಂತೆ ಅವರು ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸುತ್ತಾರೆ. ಇದೇ ಕುಟುಂಬದ ಮತ್ತೊಬ್ಬ ಸದಸ್ಯ ಒಳಚರಂಡಿಯನ್ನು ಸ್ವಚ್ಛಗೊಳಿಸುತ್ತಾ ಗುಂಡಿಯೊಳಗೆ ಇಳಿದು ಅದನ್ನು ಸ್ವಚ್ಛಮಾಡುತ್ತಿದ್ದ. ಈ ಕುಟುಂಬ ತನ್ನ ಜೀವನವಿಡೀ ಬಡತನದಲ್ಲೇ ಜೀವಿಸುತ್ತಾ ಅವಮಾನವನ್ನು ಅನುಭವಿಸುತ್ತದೆ. ಇದನ್ನು ಬದಲಾಯಿಸಲು ನಾವೇನು ಮಾಡಬಹುದು?

ಕಳೆದ ಕೆಲವು ವಾರಗಳಿಂದ ನನ್ನ ಅಂಕಣ ದಲಿತರಿಗೆ ಜಾತಿ ರಹಿತವಾದ ಮತ್ತು ಅಧಿಕ ಗಳಿಕೆಯನ್ನು ನೀಡುವ ಭಿನ್ನ ವೃತ್ತಿಯನ್ನು ಹುಡುಕುವ ಪ್ರಯತ್ನ ನಡೆಸುತ್ತಿತ್ತು. ಈ ವಾರ ನಾನು ಅಂಥ ಹಣ್ಣು ಮಾರಾಟದ ವೃತ್ತಿಯತ್ತ ಆಕರ್ಷಿತನಾದೆ. ನಾನು ವಾಸಿಸುವ ಪ್ರದೇಶದಲ್ಲಿ ೫೦ಕ್ಕಿಂತಲೂ ಅಧಿಕವಾದ ಹಣ್ಣು ಮಾರಾಟಗಾರರಿದ್ದರು. ಅನಿರೀಕ್ಷಿತ ಎಂಬಂತೆ ದೆಹಲಿಯ ಜನ ಆರೋಗ್ಯ ಪ್ರಜ್ಞೆಯರಾಗಿದ್ದು, ಹೆಚ್ಚು ಹೆಚ್ಚು ಹಣ್ಣು ತಿನ್ನತೊಡಗಿದ್ದಂತೆ ಹಣ್ಣು ವ್ಯಾಪಾರಿಗಳು ಹೆಚ್ಚಾದರು. ಎಲ್ಲೆಲ್ಲಿ ಹೆಚ್ಚು ವ್ಯಾಪಾರವಾಗುತ್ತದೋ ಅಲ್ಲೆಲ್ಲಾ ಹಣ್ಣು ಮಾರಾಟಗಾರರು ತಮ್ಮ ಅಂಗಡಿಗಳನ್ನು ತೆರೆದರು. ಮೂಲತಃ ಈ ಅಂಗಡಿಗಳು ಕಾನೂನು ಬಾಹಿರ. ಆದರು ಈ ಮಾರಾಟಗಾರರು ದಿನಕ್ಕೆ ರೂ.೩೦೦/- ಆದಾಯ ಗಳಿಸುತ್ತಾರೆ. ಅಂದರೆ ಕಸಗುಡಿಸುವವರು ಮತ್ತು ಸಮಗಾರರಿಗಿಂತ ಹೆಚ್ಚು ಹಣ ಮಾಡುತ್ತಾರೆ.

ಈ ಹಣ್ಣು ಮಾರಾಟಗಾರರು ಮುಂಜಾನೆ ೬ ಗಂಡೆಗೆ ಮಂಡಿಗೆ ಸಾಗಿ ೮ ಗಂಟೆಯ ಹೊತ್ತಿಗೆ ವಾಪಸ್ಸಾಗಿ, ೯ರ ವೇಳೆಗೆ ತಮ್ಮ ಗಾಡಿಗಳಲ್ಲಿ ಮಾರಾಟಕ್ಕೆ ತೆರಳಿಬಿಡುತ್ತಿದ್ದರು. ಕೆಲವರು ಇತರರಂತೆ ಮಂಡಿಗೆ ಹೋಗಬೇಕಾಗಿರಲಿಲ್ಲ. ಕಾರಣ ಇವರು ಇದ್ದಲ್ಲಿಗೆ ಹಣ್ಣುಗಳನ್ನು ಸರಬರಾಜು ಮಾಡುತ್ತಿದ್ದರು. ಇವರೆಲ್ಲಾ ತಮಗೆ ಗೊತ್ತುಪಡಿಸಿದ ರಸ್ತೆ ಬದಿಯಲ್ಲಿ ಮಾರಾಟ ಆರಂಭಿಸುತ್ತಿದ್ದರು. ಸ್ಥಳೀಯ ಮುನಿಸಿಪಾಲಿಟಿ ಅಧಿಕಾರಿಗಳನ್ನು ಇವರು ತೃಪ್ತಿ ಪಡಿಸುತ್ತಿದ್ದರಿಂದ ಯಾರು ಇವರಿಗೆ ತೊಂದರೆ ನೀಡುತ್ತಿರಲಿಲ್ಲ. ಈ ಹಣ್ಣು ಮಾರಾಟಗಾರರು ಸಾವಿರ ಸಂಖ್ಯೆಯಲ್ಲಿದ್ದು ಬಹುತೇಕ ಮಂದಿ ವಲಸೆ ಬಂದವರೇ ಆಗಿದ್ದಾರೆ.

ಸಾಮಾಜಿಕವಾಗಿ ಅವಮಾನಕರ ವೃತ್ತಿಗಳಿಂದ ದಲಿತರನ್ನು ಬಿಡುಗಡೆ ಮಾಡುವುದು ರಾಷ್ಟ್ರೀಯ ಕರ್ತವ್ಯವಾಗಿದೆ. ಒಂದೇ ಏಟಿಗೆ ಅನೇಕ ಲಕ್ಷ ಜನರನ್ನು ನಾವು ಬಿಡುಗಡೆಗೊಳಿಸಬಹುದು. ಈಗ ೨೮ ರಾಜ್ಯಗಳೂ ಮತ್ತು ೭ ಕೇಂದ್ರಾಡಳಿತ ಪ್ರದೇಶಗಳು ಹಾಗು ೬೦೦ ಜಿಲ್ಲೆಗಳು ಭಾರತದಲ್ಲಿವೆ. ಅನೇಕರು ಹಣ್ಣು ಸೇವಿಸುತ್ತಾರೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಹೀಗಿರುವಾಗ ಪ್ರತಿಯೊಂದು ರಾಜ್ಯ ಸರ್ಕಾರವೂ ಸಹ ಇಂಥ ಹಣ್ಣು ಮಾರಾಟ ಜಾಗಗಳನ್ನು ಗುರುತಿಸಿ, ಕಸಗುಡಿಸುವ ಮತ್ತು ಸಮಗಾರ ಕುಟುಂಬಗಳ ಯುವಕರಿಗೆ ಅಂಥ ಜಾಗಗಳನ್ನು ನೀಡಿದಲ್ಲಿ ಇವರೆಲ್ಲಾ ತಮ್ಮ ಕುಟುಂಬ ಸಮೇತ ಜಾತಿ ಕಳಂಕದಿಂದ ಬಿಡುಗಡೆಗೊಳ್ಳುತ್ತಾರೆ. ಒಂದು ಸೈಕಲ್ ಅಥವಾ ತಳ್ಳೋಗಾಡಿಯನ್ನು ಕೊಳ್ಳಲು ರೂ.೨೦೦೦ ಮತ್ತು ಹಣ್ಣುಗಳನ್ನು ಕೊಳ್ಳಲು ಇನ್ನೊಂದು ಮೂರು ಸಾವಿರ ರೂಪಾಯಿ ಸಾಕಾಗುತ್ತದೆ. ಅಂದರೆ ರೂ. ೫೦೦೦/-ಗಳಲ್ಲಿ ದಲಿತನೊಬ್ಬ ಸಾಮಾಜಿಕವಾಗಿ ಒಪ್ಪಿತ ಉದ್ಯೋಗದಲ್ಲಿ ತೊಡಗಿಕೊಳ್ಳಬಹುದು. ಹಾಗಾದರೆ ಇಂಥ ಉದ್ಯೋಗದಲ್ಲಿ ಎಷ್ಟು ಮಂದಿ ದಲಿತರು ತೊಡಗಿಕೊಳ್ಳಬಹುದು?

ದೆಹಲಿಯೊಂದರಲ್ಲೇ ಸುಮಾರು ೫೦,೦೦೦ ಹಣ್ಣು ಮಾರಾಟಗಾರರಿದ್ದಾರೆ. ಇಂತೆಡೆ ಮಗದೊಂದು ೧೦೦೦ ಮಂದಿಯನ್ನು ವಾರ್ಷಿಕವಾಗಿ ಇದರಲ್ಲಿ ತೊಡಗಿಸಬಹುದಲ್ಲವೇ? ಅಂದರೆ ದೆಹಲಿ, ಮುಂಬಾಯಿ, ಚೆನ್ನೈ ಮತ್ತು ಕೊಲ್ಕತ್ತಾ ನಗರಗಳಲ್ಲಿ ಪ್ರತಿ ವರ್ಷ ೪೦೦೦ ಮಂದಿ ದಲಿತರನ್ನು ಈ ಉದ್ಯೋಗದಲ್ಲಿ ತೊಡಗಿಸಬಹುದು. ಹೀಗೆ ಪ್ರತಿಯೊಂದು ನಗರ ಪ್ರದೇಶದಲ್ಲೂ ೧೦೦ ಮಂದಿ ದಲಿತರನ್ನು ತೊಡಗಿಸುತ್ತೇವೆಂದರೂ ೪೬೦೦ ಮಂದಿಯನ್ನು ಸಾಮಾಜಿಕವಾಗಿ ಮೇಲೆತ್ತಬಹುದು. ಹೀಗೆ ೬೦೦ ಜಿಲ್ಲೆಗಳಲ್ಲಿ ಕೇವಲ ೫ ಮಂದಿ ದಲಿತರನ್ನು ಈ ಉದ್ಯೋಗದಲ್ಲಿ ತೊಡಗಿಸುತ್ತೇವಾದರೂ ಪ್ರತಿ ವರ್ಷ ೩೦೦೦ ಮಂದಿ ದಲಿತರನ್ನು ಬಿಡುಗಡೆಗೊಳಿಸಬಹುದಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಸಣ್ಣ ನಿರ್ಧಾರ ಮಾಡಿದರೂ ಸಹ ವಾರ್ಷಿಕವಾಗಿ ೧೧,೬೦೦ ಮಂದಿ ದಲಿತರನ್ನು ನಾವು ಅವರ ಜಾತಿ ಕಸುಬಿನಿಂದ ಬಿಡುಗಡೆಗೊಳಿಸಬಹುದು. ಹೀಗೆ ಕೇವಲ ಒಂದು ದಶಕದಲ್ಲಿ ಒಂದು ಲಕ್ಷಕ್ಕಿಂತಲು ಅಧಿಕ ದಲಿತರನ್ನು ಅವರ ವರ್ತಮಾನದ ನರಕದಿಂದ ಬಿಡುಗಡೆಗೊಳಿಸಬಹುದು. ಮಿಲಿಯಗಟ್ಟಲೆ ದಲಿತರು ಜಾತಿ ಕಸುಬಿನ ಅವಮಾನದಲ್ಲಿರುವಾಗ ಇಂಥ ಸಣ್ಣ ಸಂಖ್ಯೆಯಿಂದ ಏನು ಪ್ರಯೋಜನ ಎಂದು ಕೆಲವರು ಕೇಳಬಹುದು. ಈ ಅಂಕಣದಲ್ಲಿ ನಾವು ಚರ್ಚಿಸುತ್ತಿರುವುದು ಅಂಥ ಒಂದು ಉದಾಹರಣೆಯನ್ನು ಅಷ್ಟೆ. ಇಂಥ ನೂರಾರು ಸಾಧ್ಯತೆಗಳು ಇವೆ. ಇವನ್ನು ಮುಂದೆ ನೋಡಬಹುದು.

ಹೀಗಿರುವಲ್ಲಿ ಜಾತಿ ಕಳಂಕದ ವೃತ್ತಿಗಳಿಂದ ಎಲ್ಲಾ ದಲಿತರನ್ನು ಬಿಡುಗಡೆಗೊಳಿಸುವ ಸನ್ನಿವೇಶ ಸಾಧ್ಯವಿಲ್ಲ ಎಂಬುದನ್ನು ದಲಿತ ಸಂಘಟನೆಗಳು, ಸರ್ಕಾರ ಮತ್ತು ಖಾಸಗಿ ವಲಯಗಳು ಅರಿಯಬೇಕಾಗುತ್ತದೆ.

ಎಲ್ಲರನ್ನು ಅಲ್ಲದಿದ್ದರೂ ಬಹುಸಂಖ್ಯಾತ ದಲಿತರನ್ನು ಬಿಡುಗಡೆಗೊಳಿಸುವಂಥ ಒಂದು ವಿದ್ಯಮಾನವನ್ನು ನಾವು ಆರಂಭಿಸಿದ್ದೇ

ದೆಹಲಿಯೊಂದರಲ್ಲೇ ಸುಮಾರು ೫೦,೦೦೦ ಹಣ್ಣು ಮಾರಾಟಗಾರರಿದ್ದಾರೆ. ಇಂತೆಡೆ ಮಗದೊಂದು ೧೦೦೦ ಮಂದಿಯನ್ನು ವಾರ್ಷಿಕವಾಗಿ ಇದರಲ್ಲಿ ತೊಡಗಿಸಬಹುದಲ್ಲವೇ? ಅಂದರೆ ದೆಹಲಿ, ಮುಂಬಾಯಿ, ಚೆನ್ನೈ ಮತ್ತು ಕೊಲ್ಕತ್ತಾ ನಗರಗಳಲ್ಲಿ ಪ್ರತಿ ವರ್ಷ ೪೦೦೦ ಮಂದಿ ದಲಿತರನ್ನು ಈ ಉದ್ಯೋಗದಲ್ಲಿ ತೊಡಗಿಸಬಹುದು. ಹೀಗೆ ಪ್ರತಿಯೊಂದು ನಗರ ಪ್ರದೇಶದಲ್ಲೂ ೧೦೦ ಮಂದಿ ದಲಿತರನ್ನು ತೊಡಗಿಸುತ್ತೇವೆಂದರೂ ೪೬೦೦ ಮಂದಿಯನ್ನು ಸಾಮಾಜಿಕವಾಗಿ ಮೇಲೆತ್ತಬಹುದು. ಹೀಗೆ ೬೦೦ ಜಿಲ್ಲೆಗಳಲ್ಲಿ ಕೇವಲ ೫ ಮಂದಿ ದಲಿತರನ್ನು ಈ ಉದ್ಯೋಗದಲ್ಲಿ ತೊಡಗಿಸುತ್ತೇವಾದರೂ ಪ್ರತಿ ವರ್ಷ ೩೦೦೦ ಮಂದಿ ದಲಿತರನ್ನು ಬಿಡುಗಡೆಗೊಳಿಸಬಹುದಾಗಿದೆ.

ಅನು : ಡೊಮಿನಿಕ್. ಡಿ

ಆದಲ್ಲಿ ಸಾಮಾಜಿಕವಾಗಿ ಒಪ್ಪುವಂಥ ಉದ್ಯೋಗಗಳನ್ನು ಆಯ್ದುಕೊಳ್ಳುವ ಮೂಲಕ ದಲಿತರು ಜಾತಿ ವ್ಯವಸ್ಥೆಯ ಕ್ರೌರ್ಯದಿಂದ ತಪ್ಪಿಸಿಕೊಳ್ಳಬಹುದು.

ಮತ್ತೊಮ್ಮೆ ಅದನ್ನೇ ಹೇಳುತ್ತಿದ್ದೇನಾದರೂ ಅದೇ ಪ್ರಶ್ನೆಯನ್ನು ಮತ್ತೆ ಕೇಳಬೇಕಾಗಿದೆ–ಭಾರತದಲ್ಲಿರುವ ಎಲ್ಲಾ ಬೀದಿಗಳನ್ನು, ಚರಂಡಿಗಳನ್ನು ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು ದಲಿತರ ಕರ್ತವ್ಯವೇ? ಎಲ್ಲಾ ಶೂಗಳನ್ನು ರಿಪೇರಿ ಮಾಡುವುದು ಮತ್ತು ಪಾಲೀಶು ಮಾಡುವುದು ದಲಿತರ ಜವಾಬ್ದಾರಿಯೇ?

ಪಿಯುಸಿ ಪಾಸಾಗಲು ಶತಾಯಗತಾಯ ಪ್ರಯತ್ನಿಸುವವರು ಅಂತಿಮವಾಗಿ ತಮ್ಮ ಕೌಟುಂಬಿಕ ಕಸುಬಿನಲ್ಲೇ ಸಿಲಿಕಿಕೊಳ್ಳುತ್ತಿದ್ದಾರೆ. ಹಾಗಾಗಿ ಸಾಮಾಜಿಕವಾಗಿ ಇಂಥ ಕಳಂಕದಿಂದ ತಪ್ಪಿಸಿಕೊಳ್ಳಬೇಕೆಂಬ ಇವರ ಕನಸು ಕನಸಾಗಿಯೇ ಉಳಿದುಬಿಡುತ್ತದೆ.

ಹಾಗಾದರೆ ಇಂಥವರಿಗೆ ಪರ್ಯಾಯವೇನು? ಇದನ್ನು ನಾನು ಯೋಚಿಸಬೇಕಾದರೆ ನನ್ನ ಬಾಗಿಲಿನ ಗುಂಡಿಯನ್ನು ಒತ್ತಿದ ಒಬ್ಬ ಹೋಟೆಲ್ ಹುಡುಗನನ್ನು ಕಂಡಾಗಲಷ್ಟೆ. ಆತ ಹೋಟೆಲ್‌ನಿಂದ ನನಗೆ ಬೇಕಾದದನ್ನು ಸರಬರಾಜು ಮಾಡಿದ್ದ. ಆತನಿಗೆ ಸ್ವಲ್ಪ ಟಿಪ್ಸ್ ನೀಡಿದಾಗ ಸಂತೋಷದಿಂದ ಹೊರಟು ಹೋದ. ಕೆಲವು ದಿನಗಳ ನಂತರ ಅದೇ ಹೋಟೆಲ್‌ನಿಂದ ನಾನು ಊಟಕ್ಕೆ ಹೇಳಿದೆ. ಅದೇ ಹುಡುಗ ಊಟವನ್ನು ತಂದು ನೀಡಿದ. ಈ ಸಮಯ ನಾನು ಆತನಿಗೆ ಸ್ವಲ್ಪ ಹೆಚ್ಚಿನ ಟಿಪ್ಸ್ ನೀಡಿ, ಕೆಲವು ಪ್ರಶ್ನೆಗಳನ್ನು ಕೇಳಿದೆ.

ಸ್ವಲ್ಪ ಇರುಸುಮುರುಸಾದರೂ ಸಹ ಆತ ತಿಳಿಸಿದ್ದೇನೆಂದರೆ ೭ ವರ್ಷಗಳ ಹಿಂದೆ ಆತ ಈ ಕೆಲಸಕ್ಕೆ ಸೇರಿಕೊಂಡಿದ್ದು, ತಿಂಗಳಿಗೆ ರೂ.೫೩೦೦ ವೇತನ ಮತ್ತು ರೂ.೧೦೦೦/– ಟಿಪ್ಸ್ ಪಡೆಯುತ್ತಿದ್ದಾನೆ. ಕಸಗುಡಿಸುವವರಿಗಿಂತ ಮತ್ತು ಧರ್ಮ ಕೆಲಸದಲ್ಲಿ ತೊಡಗಿರುವ ದಲಿತರಿಗಿಂತ ಈ ಹುಡುಗ ಮುಂದಿದ್ದು ಸಾಮಾಜಿಕವಾಗಿ ಒಪ್ಪಿತ ಉದ್ಯೋಗದಲ್ಲಿ ಆತ ಹೆಜ್ಜೆಯಿಟ್ಟಿದ್ದಾನೆ. ಆತ ಒಂದು ಬೈಕ್‌ನಲ್ಲಿ ಕೆಲಸಕ್ಕೆ ಸಾಗಿ, ಸಮವಸ್ತ್ರ ಧರಿಸಿ, ಸುಂದರವಾಗಿ ಕಾಣುತ್ತಾನೆ.

ಈ ಉದ್ಯೋಗಕ್ಕೆ ನಮ್ಮ ದಲಿತ ಯುವಕರನ್ನು ಸೇರಿಸಬಹುದೇ?

ಜಾಗತೀಕರಣ ಪ್ರೇರಿತ ಮಾರುಕಟ್ಟೆಯ ಆರ್ಥಿಕತೆಯಿಂದಾಗಿ, ಮಧ್ಯಮವರ್ಗವು ತಮ್ಮ ನಡಾವಳಿಯಲ್ಲಿ ಮಹತ್ವದ ಬದಲಾವಣೆಗಳಿಗೆ ಒಳಗಾಗುತ್ತಿದೆ. ಇಂಥ ಬದಲಾವಣೆಗಳಲ್ಲಿ ಮುಖ್ಯವಾದುದೆಂದರೆ ಅವರ ಆಹಾರ ಸೇವನೆಯಲ್ಲಿ. ಅದರಲ್ಲೂ ಫಾಸ್ಟ್ ಫುಡ್ ಒಂದು ಕ್ರೇಜ್ ಆಗಿಬಿಟ್ಟಿದೆ. ಇಂಥ ಆಹಾರವನ್ನು ಮನೆಗೆ ತಂದು ತಲುಪಿಸಿದರಂತೂ ಮುಗಿದೇ ಹೋಯಿತು!

ಒಂದು ವರದಿಯ ಪ್ರಕಾರ ಡೋಮಿನೊಸ್ (ಪಿಝ್ಝೂಸಾ ಕಾರ್ನರ್)ನ ಶೇ.೬೫ರಷ್ಟು ವಹಿವಾಟು ಆಹಾರವನ್ನು ಮನೆ–ಮನೆಗೆ ತಲುಪಿಸುವುದೇ ಆಗಿದೆ. ಹಾಗೆಯೇ ಕೆ.ಎಫ್.ಸಿ ಮತ್ತೊಂದು ಫಾಸ್ಟ್ ಫುಡ್ ಆಹಾರ ಸೇವೆಯಾಗಿದ್ದು ಶೇ.೩೦ರಷ್ಟು ವಹಿವಾಟನ್ನು ಮನೆಗಳಿಗೆ ನೀಡುವುದೇ ಆಗಿದೆ. ನನ್ನ ಜಾಗದಲ್ಲಿರುವ ನಿರುಳ ಹೋಟೆಲ್ ೧೦ ಮಂದಿ ಹುಡುಗರನ್ನು ಉದ್ಯೋಗದಲ್ಲಿ ತೊಡಗಿಸಿಕೊಂಡಿದೆ. ದೆಹಲಿಯಲ್ಲಿ ಈ ನಿರುಳ ಹೋಟೆಲ್‌ಗಳು ಒಟ್ಟು ೩೦ ಇವೆ. ಅಂದರೆ ಸುಮಾರು ೩೦೦ ಮಂದಿಗೆ ಈ ಹೋಟೆಲ್ ಉದ್ಯೋಗ ನೀಡಿದೆ. ಎಲ್ಲಾ ದೊಡ್ಡ ನಗರಗಳಲ್ಲಿ ಈ ಫಾಸ್ಟ್‌ಫುಡ್ ಹೋಟೆಲ್‌ಗಳಾದ ಮ್ಯಾಕ್‌ಡೊನಾಲ್ಡ್, ಪಿಝ್ಝಾ ಹಟ್, ವಿಂಪಿಸ್ ಮುಂತಾದುವುಗಳು ತಮ್ಮ ಶಾಖೆಗಳನ್ನು ತೆಗೆಯುತ್ತಿವೆ. ಯಾವುದೇ ದೊಡ್ಡ ನಗರದಲ್ಲಿ ಇಂಥ ಯಾವುದೇ ಹೋಟೆಲ್‌ಗೆ ಭೇಟಿ ನೀಡಿದರು ಸಹ ಅಲ್ಲಿ ಮೆನು ಕಾರ್ಡ್ ಇರುವುದನ್ನು ಕಾಣುತ್ತೇವೆ. ಇಂಥ ಹೋಟೆಲ್‌ಗಳಲ್ಲಿ ಮನೆಗೆ ಪುಕ್ಕಟೆಯಾಗಿಯೇ ಸೇವೆಯನ್ನು ಒದಗಿಸುತ್ತಾರೆ. ದೆಹಲಿ ಯಾವುದೇ ಕಾರ್ನರ್‌ನಲ್ಲಿ ನೀವು ಸಂಜೆ ಹೊತ್ತು ನಿಂತಲ್ಲಿ ಅನೇಕ ಹುಡುಗರು ಇಂಥ ಸೇವೆಯನ್ನು ಮನೆಗೆ ಒದಗಿಸುವುದನ್ನು ಕಾಣಬಹುದು. ದೆಹಲಿಯೊಂದರಲ್ಲೇ ಇಂಥ ೧೦,೦೦೦ ಹುಡುಗರನ್ನು ನಾವು ಕಾಣಬಹುದು.

ಹಾಗಾದರೆ ಸಾವಿರಾರು ಮಂದಿ ದಲಿತ ಹುಡುಗರನ್ನು ಇಂಥ ಸಾಮಾಜಿಕವಾಗಿ ಒಪ್ಪಿತ ಉದ್ಯೋಗಗಳಲ್ಲಿ ತೊಡಗಿಸುವುದರಿಂದ ಅವರು ಸುಲಭವಾಗಿ ಬಿಡುಗಡೆ ಹೊಂದುತ್ತಾರಲ್ಲವೇ? ವಾರ್ಷಿಕವಾಗಿ ಫಾಸ್ಟ್ ಫುಡ್ ಮಾರುಕಟ್ಟೆ ಶೇ.೪೦ರಷ್ಟು ಬೆಳವಣಿಗೆಯನ್ನು ಕಾಣುತ್ತಿದೆ. ಅಂದರೆ ಭಾರತೀಯ ಆರ್ಥಿಕತೆಯ ಬೆಳವಣಿಗೆಗಿಂತ ನಾಲ್ಕುಪಟ್ಟು ಅಧಿಕ ಬೆಳವಣಿಗೆಯನ್ನು ಅದು ಕಾಣುತ್ತಿದೆ.

ವಿಮೋಚನೆಯನ್ನು ಜಾರಿಯಾಗಿಸುವಿಕೆ

ಸಾಮಾಜಿಕವಾಗಿ ಅವಮಾನಕರವಾದ ಇಂಥ ಕೆಲಸಗಳನ್ನು ದಶಕಗಳಿಂದಲೂ ದಲಿತರು ತಮ್ಮ ಇಚ್ಛೆಗೆ ವಿರುದ್ಧವಾಗಿ ಮಾಡುತ್ತಲೇ ಬಂದಿದ್ದಾರೆ. ೬೦ ವರ್ಷಗಳ ಸ್ವಾತಂತ್ರ್ಯದ ಹೊರತಾಗಿಯೂ ಬೀದಿ ಕಸಗುಡಿಸುವವರು, ಚರ್ಮ ಕೆಲಸದಲ್ಲಿ ತೊಡಗಿರುವವರು ಮತ್ತು ಡೋಬಿ ಕೆಲಸ ಮಡುವವರೆಲ್ಲಾ ದಲಿತರೇ ಆಗಿದ್ದಾರೆ. ಇದನ್ನು ನಾವು ಬದಲಾಯಿಸಬಾರದೇ? ಯಾವ ಸಮಾಜ ಕೊಳಕನ್ನು ಉತ್ಪಾದಿಸುತ್ತದೋ ಅದೇ ಸಮಾಜ ಅದರ ಸ್ವಚ್ಛತೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳಲಿ. ಜನ ತಮ್ಮ ಶೂಗಳನ್ನು ರಿಪೇರಿ ಮಾಡಿಕೊಂಡು, ಪಾಲೀಶು ಹಚ್ಚಿಕೊಳ್ಳಲಿ.

ಹೀಗೆಂದಾಕ್ಷಣ ದಲಿತರಿಗೆ ಎಲ್ಲಾ ಕಪ್ಪು–ಬಿಳಿಪಿನ ಸಂಗತಿಯೆಂದಲ್ಲ. ಈ ಕಸಗುಡಿಸುವವರ, ಸಮಗಾರರ ಮತ್ತು ಡೋಬಿಗಳ ಮಕ್ಕಳು ತಮ್ಮ ಜಾತಿ ಕಳಂಕಿತ ವೃತ್ತಿಗಳಿಂದ ಬಿಡಿಸಿಕೊಂಡು ಹೊರಬಂದಿದ್ದಾರೆ. ಅವರಲ್ಲಿ ಕೆಲವರು ಉನ್ನತ ಶಿಕ್ಷಣ ಪಡೆದು ವಿಜ್ಞಾನಿಗಳು, ಆಡಳಿತ ಸೇವೆ, ವೈದ್ಯರು, ಇಂಜಿನಿಯರ್‌ಗಳು, ಬ್ಯಾಂಕ್ ಅಧಿಕಾರಿಗಳು, ಪ್ರೊಫೆಸರ್‌ಗಳು ಮತ್ತು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದಾರೆ. ಆದರೆ, ಅಂಥವರ ಸಂಖ್ಯೆ ಅತಿ ವಿರಳ. ಬಹುಸಂಖ್ಯಾತ ಮಂದಿ ಇನ್ನೂ ಸಹ ಜಾತಿ ಕಳಂಕಿತ ಉದ್ಯೋಗಗಳಲ್ಲೇ ಸಿಲುಕಿದ್ದಾರೆ. ಇಂಥವರು ದಲಿತರ ನಡುವೆಯೂ ಅವಮಾನಿತರಾಗಿದ್ದಾರೆ.

ದಲಿತ ವಿಮೋಚನೆ ಎನ್ನೋ ಈ ಸರಣಿ ಅಂಕಣಗಳಲ್ಲಿ ನಾನು ಮಾತನಾಡುತ್ತಿರುವುದು ಶಾಲೆಯ ಮೆಟ್ಟಿಲೇರದ ಮತ್ತು ಶಾಲೆಬಿಟ್ಟ ಮಕ್ಕಳನ್ನು. ಅವರಿಗಾಗಿ ಕೆಲವು ಪರ್ಯಾಯಗಳನ್ನಷ್ಟೆ ನಾನು ಸೂಚಿಸಿರುವುದು. ಆದರೆ ೧೦ನೇ ತರಗತಿ ಅಥವಾ ಪಿಯುಸಿ ಮುಗಿಸಿದ ದಲಿತ ಮಕ್ಕಳ ಬಗ್ಗೆ ಯೋಚಿಸಬಾರದೇ?

ನಾನು ದಲಿತ ಮುಖಂಡರಲ್ಲಿ ಮಾತನಾಡುವಾಗ ಈ ವಿದ್ಯಾರ್ಥಿಗಳ ಬದುಕು ಸಹ ದುರಂತಮಯವಾಗಿಯೇ ಉಳಿದಿದೆ ಎಂಬುದನ್ನವರು ತಿಳಿಸಿದರು. ಇವರಲ್ಲಿ ಅನೇಕರು ಸರ್ಕಾರಿ ಉದ್ಯೋಗಗಳಿಗೆ ಸೇರಲು ಪ್ರಯತ್ನಿಸುತ್ತಾರೆ. ಇವರಲ್ಲಿ ಕೆಲವರು ಅಂಥ ಪ್ರಯತ್ನಗಳಲ್ಲಿ ಯಶಸ್ವಿಯಾದರೆ ಅನೇಕರು ಸೋಲುತ್ತಾರೆ. ಸ್ವಲ್ಪ ಬೇಜಾರನ್ನು ಅನುಭವಿಸಿದರೂ ಸಹ ಅವರೆಲ್ಲಾ ಮೆಕಾನಿಕ್‌ಗಳಾಗಿಯೋ, ಚಾಲಕರಾಗಿಯೋ, ಅಥವಾ ಸಣ್ಣ ವ್ಯಾಪಾರದಲ್ಲೋ ತೊಡಗಿಕೊಳ್ಳುತ್ತಾರೆ. ಆದರೆ ಸಮಸ್ಯೆ ಇರುವುದು

ಒಂದು ವರದಿಯ ಪ್ರಕಾರ ಡೋಮಿನೊಸ್ (ಪಿಝ್ಝೂಸಾ ಕಾರ್ನರ್)ನ ಶೇ.೬೫ರಷ್ಟು ವಹಿವಾಟು ಆಹಾರವನ್ನು ಮನೆ–ಮನೆಗೆ ತಲುಪಿಸುವುದೇ ಆಗಿದೆ. ಹಾಗೆಯೇ ಕೆ.ಎಫ್.ಸಿ ಮತ್ತೊಂದು ಫಾಸ್ಟ್ ಫುಡ್ ಆಹಾರ ಸೇವೆಯಾಗಿದ್ದು ಶೇ.೩೦ರಷ್ಟು ವಹಿವಾಟನ್ನು ಮನೆಗಳಿಗೆ ನೀಡುವುದೇ ಆಗಿದೆ. ನನ್ನ ಜಾಗದಲ್ಲಿರುವ ನಿರುಳ ಹೋಟೆಲ್ ೧೦ ಮಂದಿ ಹುಡುಗರನ್ನು ಉದ್ಯೋಗದಲ್ಲಿ ತೊಡಗಿಸಿಕೊಂಡಿದೆ. ದೆಹಲಿಯಲ್ಲಿ ಈ ನಿರುಳ ಹೋಟೆಲ್‌ಗಳು ಒಟ್ಟು ೩೦ ಇವೆ. ಅಂದರೆ ಸುಮಾರು ೩೦೦ ಮಂದಿಗೆ ಈ ಹೋಟೆಲ್ ಉದ್ಯೋಗ ನೀಡಿದೆ. ಎಲ್ಲಾ ದೊಡ್ಡ ನಗರಗಳಲ್ಲಿ ಈ ಫಾಸ್ಟ್‌ಫುಡ್ ಹೋಟೆಲ್‌ಗಳಾದ ಮ್ಯಾಕ್‌ಡೊನಾಲ್ಡ್, ಪಿಝ್ಝಾ ಹಟ್, ವಿಂಪಿಸ್ ಮುಂತಾದುವುಗಳು ತಮ್ಮ ಶಾಖೆಗಳನ್ನು ತೆಗೆಯುತ್ತಿವೆ. ಯಾವುದೇ ದೊಡ್ಡ ನಗರದಲ್ಲಿ ಇಂಥ ಯಾವುದೇ ಹೋಟೆಲ್‌ಗೆ ಭೇಟಿ ನೀಡಿದರು ಸಹ ಅಲ್ಲಿ ಮೆನು ಕಾರ್ಡ್ ಇರುವುದನ್ನು ಕಾಣುತ್ತೇವೆ. ಇಂಥ ಹೋಟೆಲ್‌ಗಳಲ್ಲಿ ಮನೆಗೆ ಪುಕ್ಕಟೆಯಾಗಿಯೇ ಸೇವೆಯನ್ನು ಒದಗಿಸುತ್ತಾರೆ. ದೆಹಲಿ ಯಾವುದೇ ಕಾರ್ನರ್‌ನಲ್ಲಿ ನೀವು ಸಂಜೆ ಹೊತ್ತು ನಿಂತಲ್ಲಿ ಅನೇಕ ಹುಡುಗರು ಇಂಥ ಸೇವೆಯನ್ನು ಮನೆಗೆ ಒದಗಿಸುವುದನ್ನು ಕಾಣಬಹುದು.

ಆಗಾದ ಇಂಥ ಮಾಲ್-ಜಿಂಗೆ ಭೇಟಿ ನೀಡುವ ಹುಡುಗರ ಸಂಖ್ಯೆಯೂ ಈಗ ಹೆಚ್ಚುತ್ತಲೇ ಇರುತ್ತದೆ.

ಇಂಥ ಫಾಸ್ಟ್‌ಫುಡ್ ಜೋಯಿಂಟ್‌ಗಳಲ್ಲಿ ಕನಿಷ್ಠ ಒಬ್ಬ ದಲಿತ ಯುವಕನನ್ನು ಉದ್ಯೋಗದಲ್ಲಿ ತೊಡಗಿಸುವಂತೆ ಮಾಡಲು ಸರ್ಕಾರ ಒಂದು ಆಜ್ಞೆ ಹೊರಡಿಸಿದಲ್ಲಿ ವಾರ್ಷಿಕವಾಗಿ ಎಷ್ಟು ಮಂದಿ ದಲಿತ ಯುವಕರು ಇಂಥೆಡೆ ಉದ್ಯೋಗ ಪಡೆಯಬಹುದು? ವಾರ್ಷಿಕವಾಗಿ ಒಂದು ಲಕ್ಷ ದಲಿತರನ್ನು ಅವರ ಸಾಮಾಜಿಕ ಕಳಂಕಿತ ವೃತ್ತಿಗಳಿಂದ ತಪ್ಪಿಸಿ, ಒಪ್ಪಿತ ಕೆಲಸಗಳಲ್ಲಿ ತೊಡಗಿಸಬಹುದು. ಇಂಥ ವರ ಸಂಖ್ಯೆ ಇಂದು ದಶಕದಲ್ಲಿ ಒಂದು ಮಿಲಿಯನ್ ಆಗಿಬಿಡುತ್ತದೆ.

ದಲಿತ ವಿಮೋಚನೆ ಕುರಿತ ಈ ಸರಣಿಯೋಪಾದಿ ಬರವಣಿಗೆಯಲ್ಲಿ ನಾನು ಜಾತಿ ಆಧಾರಿತ ವೃತ್ತಿಗಳಿಂದ ಮುಕ್ತಿ ಪಡೆಯುವುದು ಹೇಗೆ ಎಂದು ಚರ್ಚಿಸುತ್ತಿದ್ದೇನೆ. ಹಾಗೆಯೇ ಸಾಮಾಜಿಕವಾಗಿ ಅವಮಾನಕರ ಕೆಲಸಗಳಲ್ಲಿ ತೊಡಗಿರುವ ದಲಿತರ ಬಗ್ಗೆ ನನ್ನ ಗಮನ ಅಡಗಿದೆ.

ಮಾರ್ಚ್ ೯ ರ ಅಂಕಣದಲ್ಲಿ ಹಣ್ಣು ಜಾತಿರಹಿತವಾದ ಹಣ್ಣು ಮಾರಾಟಗಾರರ ಬಗ್ಗೆ ನಾನು ಬರೆದಿದ್ದೆ. ಅದರ ಕೊನೆ ಪ್ಯಾರ ಹೀಗಿತ್ತು, "ಜಾತಿ ಕಳಂಕದ ವೃತ್ತಿಗಳಿಂದ ಎಲ್ಲಾ ದಲಿತರನ್ನು ಬಿಡುಗಡೆಗೊಳಿಸುವ ಸನ್ನಿವೇಶ ಸಾಧ್ಯವಿಲ್ಲ ಎಂಬುದನ್ನು ದಲಿತ ಸಂಘಟನೆಗಳು, ಸರ್ಕಾರ ಮತ್ತು ಖಾಸಗಿ ವಲಯಗಳು ಅರಿಯಬೇಕಾಗುತ್ತದೆ... ಎಲ್ಲರನ್ನು ಅಲ್ಲದಿದ್ದರೂ ಬಹುಸಂಖ್ಯಾತ ದಲಿತರನ್ನು ಬಿಡುಗಡೆಗೊಳಿಸುವಂಥ ಒಂದು ವಿದ್ಯಮಾನವನ್ನು ನಾವು ಆರಂಭಿಸುದ್ದೇ ಆದಲ್ಲಿ ಸಾಮಾಜಿಕವಾಗಿ ಒಪ್ಪುವಂಥ ಉದ್ಯೋಗಗಳನ್ನು ಆಯ್ದುಕೊಳ್ಳುವ ಮೂಲಕ ದಲಿತರು ಜಾತಿ ವ್ಯವಸ್ಥೆಯ ಕ್ರೌರ್ಯದಿಂದ ತಪ್ಪಿಸಿಕೊಳ್ಳುವಂತೆ ಮಾಡಬಹುದು."

ನನ್ನ ಕೆಲವು ಗಣ್ಯ ಓದುಗರು "ವಿದ್ಯಮಾನದ" ಪಾತ್ರವನ್ನು ಕುರಿತಂತೆ ಮತ್ತಷ್ಟು ವಿವರಗಳನ್ನು ಕೇಳಿದ್ದರು. ಆ ಅಂಕಣದಲ್ಲಿ ನಾನು ಏನು ಹೇಳ ಬಯಸಿದ್ದೆನೆಂದರೆ ಯಾವುದೇ ಸರ್ಕಾರಿ ಅಥವಾ ಇತರೆ ಗುಂಪು ಸಕಾರಾತ್ಮಕ ನೀತಿಯನ್ನು ರೂಪಿಸಿದರೂ ಸಹ ಅದು ಎಲ್ಲಾ ದಲಿತರನ್ನು ನೇರವಾಗಿ ಮುಟ್ಟಲು ಸಾಧ್ಯವಾಗುವುದಿಲ್ಲ. ಹೀಗಿರುವಲ್ಲಿ ಸಾಧ್ಯವಾದರೂ ಏನಿದೆ ಎನ್ನುವಾಗ ನಮ್ಮ ವಾಸ ಪ್ರದೇಶಗಳಲ್ಲಿ ಜೀವಿಸುತ್ತಿರುವ ದಲಿತ ಕುಟುಂಬಗಳಿಗೆ ಭೇಟಿ ನೀಡಿ, ಅವರಲ್ಲೇ ಇಂಥ ಸಾಧನೆಯ ಒಂದು ಅನುಕರಣ ಮಾದರಿಯನ್ನು ಸೃಷ್ಟಿಸಿದೆವಾದರೆ, ಅದೊಂದು ಉತ್ತಮ ಕಾರ್ಯವಾದೀತು. ಈ ಸಾಧಕರು ಮತ್ತಷ್ಟು ಮಾದರಿಗಳನ್ನು ಹುಟ್ಟುಹಾಕುವುದರಲ್ಲಿ ಸಂಶಯವೇ ಇರುವುದಿಲ್ಲ.

ಆದ್ದರಿಂದ ವಿದ್ಯಮಾನದ ಪಾತ್ರ/ಮಾದರಿ ಎನ್ನೋದು ದಲಿತ ವಿಮೋಚನೆಯಲ್ಲಿ ಬಹುಮುಖ್ಯವಾದ ಸಂಗತಿ. ಹಾಗಾದರೆ ಅದು ಕ್ರಿಯಾಶೀಲವಾಗುವುದು ಹೇಗೆ? ಏಳು ಮಂದಿಯ ಒಂದು ದಲಿತ ಕುಟುಂಬವಿದೆ



ಎಂದು ಭಾವಿಸೋಣ. ಕುಟುಂಬದವರು ಭೂರಹಿತ ಕೃಷಿ ಕಾರ್ಮಿಕರೆಂದು ಭಾವಿಸೋಣ ಅಥವಾ ಯಾವುದೋ ಅವಮಾನಕರ ವೃತ್ತಿಯಲ್ಲಿ ಇದ್ದಾರೆಂದು ಭಾವಿಸೋಣ. ಅವರಲ್ಲಿ ಒಬ್ಬ ವ್ಯಕ್ತಿ ವಿದ್ಯಾವಂತನಾಗಿ ಸರ್ಕಾರಿ ಅಥವಾ ಖಾಸಗಿ ಕಂಪನಿಯಲ್ಲಿ ಒಂದು ಉದ್ಯೋಗ ಪಡೆದು ತನ್ನ ಕುಟುಂಬದಲ್ಲಿರುವ ಇತರರಿಗಿಂತ ಭಿನ್ನವಾಗಿ ಆತ ಕಾಣತೊಡಗುತ್ತಾನೆ. ಆತ ಒಳ್ಳೆ ಬಟ್ಟೆಗಳನ್ನು ಧರಿಸುತ್ತಾನಲ್ಲದೆ, ಆತನ ಇಡೀ ದೈಹಿಕ ವರ್ತನೆಗಳೇ ಬದಲಾಗುತ್ತವೆ.

ಈ ಸಾಧನೆಯಲ್ಲಿ ತೊಡಗಿರುವ ವ್ಯಕ್ತಿ ತನ್ನ ಬಡ ತಂದೆ ತಾಯಿ ಮತ್ತು ಇತರ ಸದಸ್ಯರಿಗೆ ಏನಾದರೂ ಮಾಡಬೇಕೆಂದು ನಿರ್ಧರಿಸುತ್ತಾನೆ. ಅಂದರೆ ತನ್ನ ಕುಟುಂಬದ ಮುಕ್ತಿಯ ಜವಾಬ್ದಾರಿಯನ್ನು ಆತನೇ ಹೊರುತ್ತಾನೆ. ಅಥವಾ ಆತನ ಕುಟುಂಬದವರು ಮತ್ತು ಆತನ ಸಂಬಂಧಿಕರು ಈತನನ್ನು ಗಮನಿಸುತ್ತಿದ್ದಂತೆ, ಆತನನ್ನು ಅನುಸರಿಸಲು ಆರಂಭಿಸುತ್ತಾರೆ. ಇದನ್ನೇ ನಾನು 'ವಿದ್ಯಮಾನ' ಎಂದದ್ದು.

ಶಾಲೆಯನ್ನೇ ಕಾಣದ ಅಥವಾ ಶಾಲೆ ಬಿಟ್ಟ ದಲಿತರಲ್ಲಿ ಈ ವಿದ್ಯಮಾನ ತೀವ್ರವಾಗಿ ಗೋಚರಿಸುತ್ತದೆ. ನನ್ನ ಗ್ರಾಮವಾಸದ ಕಾರ್ಯಕ್ರಮದಲ್ಲಿ ಇಂಥ ಅದ್ಭುತವಾದ ಬದಲಾವಣೆಯ ವಿದ್ಯಮಾನವನ್ನು ನಾನು ಗಮನಿಸುತ್ತಿದ್ದೇನೆ. ನಾನು ಭೇಟಿ ನೀಡಿದ ಪ್ರತಿಯೊಂದು ಹಳ್ಳಿಯಲ್ಲಿ ಪ್ರತಿ ಎರಡನೆ ದಲಿತ ಕುಟುಂಬದಲ್ಲಿ ಒಬ್ಬ ವ್ಯಕ್ತಿ ಮತ್ತೊಂದು ನಗರದಲ್ಲಿ ನೆಲೆಸಿ ಉದ್ಯೋಗದಲ್ಲಿ ತೊಡಗಿರುವುದನ್ನು ನಾನು ಗಮನಿಸುತ್ತಿದ್ದೇನೆ. ಇಲ್ಲು ಅದೇ ಪ್ರವೃತ್ತಿ ಕಂಡುಬರುತ್ತಿದೆ.

ಒಬ್ಬ ವಲಸೆಬಂದ ವ್ಯಕ್ತಿ ಒಂದು ಉದ್ಯೋಗದಲ್ಲಿ ತೊಡಗಿಕೊಂಡನೆಂದರೆ ಉಳಿದವರೂ ಸಹ ಆತನನ್ನು ಅನುಸರಿಸುತ್ತಾರೆ. ಇಂಥ ಮೊದಲ ವ್ಯಕ್ತಿ ಚಾಲಕನಾಗಿ ಉದ್ಯೋಗ ಹುಡುಕಿಕೊಂಡಲ್ಲಿ, ಆತನ ನಂತರದಲ್ಲಿ ಎಲ್ಲರೂ ಸಹ ಚಾಲಕರೇ ಆಗಿಬಿಡುತ್ತಾರೆ. ಹಾಗೆಯೇ ಅಂಥ ವಲಸಿಗ ಮೆಕಾನಿಕ್ ಆದಲ್ಲಿ, ಆತನನ್ನು ಅನುಸರಿಸಿದವರೆಲ್ಲಾ ಮೆಕಾನಿಕ್‌ಗಳೇ ಆಗುತ್ತಾರೆ. ಹಾಗೆಯೇ ಅಂಥ ಮೊದಲಿಗ ವ್ಯಾಪಾರದಲ್ಲಿ ತೊಡಗಿಕೊಂಡರೆ ಉಳಿದವರೆಲ್ಲರೂ ಸಹ ಅಂಥದ್ದೇ ಉದ್ಯೋಗದಲ್ಲಿ ತೊಡಗಿಕೊಳ್ಳುತ್ತಾರೆ. ಇದು ಸರ್ಕಾರ ಅಥವಾ ಒಂದು ಎನ್‌ಜಿಒದಿಂದ ಆಗುವಂತದಲ್ಲ. ಅದು ಆಗುವುದು ಸ್ಥಳೀಯವಾಗಿ ಎದ್ದು ಕಾಣುವ ಮಾದರಿ ಪಾತ್ರಗಳಿಂದ ಎಂಬುದನ್ನು ನಾನು ಮತ್ತೆ ಹೇಳುವ ಅಗತ್ಯವಿಲ್ಲ.

ಆದ್ದರಿಂದ ಸರ್ಕಾರವಾಗಲೀ ಅಥವಾ ಖಾಸಗಿ ವಲಯವಾಗಲೀ ಒಬ್ಬ ದಲಿತ ವ್ಯಕ್ತಿಗೆ ಚಾಲಕ ವೃತ್ತಿ/ ಹೂಮಾರಾಟ/ಐಸ್‌ಕ್ರೀಮ್ ಮಾರಾಟ/ ಹಣ್ಣು ಮಾರಾಟ... ಮುಂತಾದ ಉದ್ಯೋಗ ನೀಡಿತ್ತೆಂದರೆ ಆತನ ಕುಟುಂಬವೇ ಬದಲಾವಣೆಯ ಹಾದಿ ಹಿಡಿಯುತ್ತದೆ. ಇಂಥ ವ್ಯಕ್ತಿ ತನ್ನ ಸಹಪಾಠಿಗಳನ್ನು ಅನುಸರಿಸುತ್ತಾ ಹೊಸ ವ್ಯಕ್ತಿಯಾಗಿ ಬದಲಾಗುತ್ತಾನೆ.

ತನ್ನ ಜೇಬಿನಲ್ಲಿ ಸಾಕಷ್ಟು ಹಣವಿದ್ದಲ್ಲಿ ತನ್ನ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಲು ಆಲೋಚಿಸುತ್ತಾನೆ. ಅಲ್ಲದೆ ತನ್ನ ಸಹಪಾಠಿಗಳು ಸಾಮಾಜಿಕವಾಗಿ ಕಳಂಕಿತ ಕೆಲಸಗಳ ಬಗ್ಗೆ ಏನು ಯೋಚಿಸುತ್ತಾರೆಂದು ಆತನಿಗೆ ಚೆನ್ನಾಗಿ ತಿಳಿದಿದೆ. ಈ ಪ್ರಕ್ರಿಯೆಯಲ್ಲಿ ಆತ ತನ್ನ ಹಿಂದಿನ ಕಸುಬಿನ ಬಗ್ಗೆ ತೀವ್ರವಾದ ಜಿಗುಪ್ಸೆಯನ್ನು ಬೆಳೆಸಿಕೊಳ್ಳುತ್ತಾನೆ.

ಈಗ ತನ್ನ ಕುಟುಂಬದ ವ್ಯಕ್ತಿಗಳನ್ನು ಅಂಥ ಸಾಮಾಜಿಕ ಕಳಂಕಿತ ವೃತ್ತಿಗಳಿಂದ ಬಿಡಿಸುವ ಜವಾಬ್ದಾರಿಯನ್ನು ಆತ ಹೊತ್ತುಕೊಳ್ಳುತ್ತಾನೆ. ಅಥವಾ ಆತನ ಕುಟುಂಬ ಮತ್ತು ಆತನ ಸಂಬಂದಿಕರು ಅವನ ಬದಲಾವಣೆಯನ್ನು ನೋಡುವಾಗ ಬೇಗನೆ ಅವರೆಲ್ಲಾ ಮತ್ತೊಂದು ಉದ್ಯೋಗಕ್ಕೆ ಪಲ್ಲಟಗೊಳ್ಳುತ್ತಾರೆ.

ನನಗೆ ಒಂದು ವಾಲ್ಮಿಕಿ ಕುಟುಂಬ ಗೊತ್ತಿದೆ. ಒಂದುವರೆ ದಶಕದ ಹಿಂದೆ ಈ ಕುಟುಂಬದ ಓರ್ವ ವ್ಯಕ್ತಿ ಬಡ್ಡಿಗೆ ಹಣ ನೀಡುತ್ತಿದ್ದ. ಈಗ ಆತನ ಕುಟುಂಬದಲ್ಲಿರುವವರೆಲ್ಲಾ ಅದೇ ವೃತ್ತಿಯನ್ನು ರೂಢಿಸಿಕೊಂಡಿದ್ದಾರೆ.

ನನ್ನ ನೇಟಿವ್ ಹಳ್ಳಿಯ ಒಂದು ದಲಿತ ಕುಟುಂಬವನ್ನು ನಾನು ಬಲ್ಲೆ. ಆ ಕುಟುಂಬದವರೆಲ್ಲಾ ಪೇಂಟಿಗ್ ಉದ್ಯೋಗದಲ್ಲಿರುವವರು. ಹಾಗೆಯೇ ಮುಂಬಾಯಿಯ ಮತ್ತೊಂದು ದಲಿತ ಕುಟುಂಬದ ಸೋದರರಿಬ್ಬರೂ ಸಹ ಚಾಲಕ ವೃತ್ತಿಯಲ್ಲಿತೊಡಗಿಕೊಂಡವರೇ ಆಗಿದ್ದಾರೆ.

ಈ ಎಲ್ಲಾ ಮಾದರಿಗಳಲ್ಲೂ ಅವರ ಮಕ್ಕಳೆಲ್ಲಾ ಶಾಲೆಗೆ ಹೋಗುತ್ತಿದ್ದಾರೆ. ಇದನ್ನೇ ನಾನು ದಲಿತರ ಮುಕ್ತಿಯಲ್ಲಿ ಮಾದರಿ ವಿದ್ಯಮಾನ ಎಂದು ಕರೆದದ್ದು.

"ಸಂಪತ್ತನ್ನು ಗಳಿಸುವಾಗ ಚಳಿ, ಬಿಸಿಲು, ನೊಣಗಳು, ಸೊಳ್ಳೆಗಳು, ಗಾಳಿ, ಬೇಸಿಗೆ... ಯಾವುದರಿಂದಲೂ ಧೃತಿಗೆಡಬಾರದು. ಒಬ್ಬನು ಈ ಎಲ್ಲಾ ತೊಂದರೆಗಳನ್ನು ಎದುರಿಸಲು ತಯಾರಿರಬೇಕು." ಆದರೆ ಹಣ ಮಾಡುವಾಗ ಅದಕ್ಕೆ ಒಂದು ನೀತಿ ಇದೆಯೇ?

ಮಾದರಿ ವಿದ್ಯಮಾನ

ದಿ ಬುದ್ಧ - ಧಮ್ಮದ ಪ್ರಮುಖ ತತ್ತ್ವಗಳು

ಸುಖದ ಮಂತ್ರ

ಎನ್ನೋ ಆನಂದ್ ಕೃಷ್ಣನ ಪುಸ್ತಕ ಪ್ರಕಟವಾಗುತ್ತಿದೆ. ಆದ್ದರಿಂದ ದಲಿತ ವಿಮೋಚನೆಯ ಈ ಸರಣಿ ಅಂಕಣಗಳನ್ನು ನಾನು ಬರೆಯುವುದಕ್ಕೆ ಸ್ವಲ್ಪ ವಿರಾಮ ನೀಡಿ, ಆ ಪುಸ್ತಕದ ಬಗ್ಗೆ ಸಣ್ಣ ವಿಮರ್ಶೆ ಬರೆಯುತ್ತಿದ್ದೇನೆ.

ಈ ಪುಸ್ತಕ ಹಿಂದಿ ಪ್ರಕಟನೆ **ಧಮ್ಮ ಸಾರ** ೧೯೯೭ರಲ್ಲಿ ಪ್ರಕಟಗೊಂಡು ಸಾವಿರಾರು ಪ್ರತಿಗಳು ಮಾರಾಟವಾಗಿವೆ. ಈಗ ಅದರ ಇಂಗ್ಲಿಷ್ ಆವೃತ್ತಿ ಮತ್ತಷ್ಟು ಸೂಕ್ಷ್ಮಗಳೊಡನೆ ಹೊರಬರುತ್ತಿದೆ.

ಆ ಪುಸ್ತಕವನ್ನು ಓದಿದ ಮೇಲೆ ನಾನು ಹೇಳುವುದೆಂದರೆ ಮಾನವ ಸುಖವನ್ನು ಮತ್ತು ಜಗತ್ತಿನ ಶಾಂತಿಯನ್ನು ಬೋಧಿಸಿದ ತತ್ವಜ್ಞಾನಿಯೇ ಬುದ್ಧ. ಧರ್ಮದ ಬಗೆಗಿನ ನನ್ನ ಅಲ್ಪ ಜ್ಞಾನದ ಪ್ರಕಾರ ಎಲ್ಲಾ ದೇವರುಗಳು ತಮ್ಮ ಹಿಂಬಾಲಕರಿಂದ ಆರಾಧನೆಯನ್ನು ಮಾಡಿಸಿಕೊಳ್ಳುತ್ತಿವೆ. ಹೀಗಿರುವಾಗ ಇಂಥ ದೇವರು ತನ್ನ ಹಿಂಬಾಲಕರಿಗೆ ಹಣವನ್ನು ಹೇಗೆ ವಿನಿಯೋಗಿಸುವುದೆಂದು ಹೇಳಿಕೊಡುತ್ತಾರೆಯೇ? ಬುದ್ಧ ತನ್ನ ಹಿಂಬಾಲಕರಿಗೆ ಏನು ಹೇಳುತ್ತಾನೆಂದು ಗಮನಿಸಿ:

"ಆತ (ಬುದ್ಧ) ಸೂಚಿಸುವುದೇನೆಂದರೆ ಒಬ್ಬನು ತಾನು ಗಳಿಸಿದುದರಲ್ಲಿ ನಾಲ್ಕು ಭಾಗ ಮಾಡಿಕೊಳ್ಳಬೇಕು. ಒಂದು ಭಾಗವನ್ನು ತನ್ನ ದೈನಂದಿನ ಖರ್ಚಿಗಾಗಿ ಬಳಸಬೇಕು. ಮತ್ತೆರಡನ್ನು ತನ್ನ ಉದ್ಯಮ ಅಥವಾ ಕೈಗಾರಿಕೆಯಲ್ಲಿ ತೊಡಗಿಸಬೇಕು. ನಾಲ್ಕನೇ ಭಾಗವನ್ನು ಮಳೆಗಾಲದ ಖರ್ಚಿಗಾಗಿ ಉಳಿಸಿಟ್ಟುಕೊಳ್ಳಬೇಕು."

ದಿಘ ನಿಕಾಯ – ೩ ರಿಂದ ಲೇಖಕರು ಈ ಭಾಗವನ್ನು ತೆಗೆದುಕೊಂಡಿದ್ದಾರೆ. ಬದುಕಿನಲ್ಲಿ ಹಣದ ಮಹತ್ವ ಏನು ಎಂಬುದರ ಬಗ್ಗೆ ಜೀವಂತ ದೈವವಾಗಿರುವ ಬುದ್ಧ ಚೆನ್ನಾಗಿ ಅರಿತಿದ್ದಾನೆ. ಆದ್ದರಿಂದ ತನ್ನ ಹಿಂಬಾಲಕರಿಗೆ ಹಣಕಾಸಿನ ವಿಷಯದಲ್ಲಿ ಶಿಸ್ತಿನ ಕ್ರಮ ಅನುಸರಿಸುವಂತೆ ಸೂಚಿಸುತ್ತಾನೆ.

ಚರಿತ್ರೆಯಲ್ಲಿ ಕಾಣುವ ಅತ್ಯುತ್ತಮ ವ್ಯಕ್ತಿಯೆಂದರೆ ಬುದ್ಧ. ಆತ ಶ್ರಮವನ್ನು ಅಧಿಕವಾಗಿ ಪರಿಗಣಿಸುತ್ತಾನೆ. ಅನೇಕ ದೇವರುಗಳು ತಮ್ಮ ಹಿಂಬಾಲಕರು ತಮ್ಮ ಪೂಜೆಯಲ್ಲಿತೊಡಗಲು ಬಯಸಿದರೆ ಬುದ್ಧ ಅದಕ್ಕೆ ತದ್ವಿರುದ್ಧವಾಗಿ ತನ್ನ ಹಿಂಬಾಲಿಗರಿಗೆ ಹೀಗೆಂದು ಆಜ್ಞೆಪಿಸುತ್ತಾನೆ:

"ಸಂಪತ್ತನ್ನು ಗಳಿಸುವಾಗ ಚಳಿ, ಬಿಸಿಲು, ನೊಣಗಳು, ಸೊಳ್ಳೆಗಳು, ಗಾಳಿ, ಬೇಸಿಗೆ... ಯಾವುದರಿಂದಲೂ ಧೃತಿಗೆಡಬಾರದು. ಒಬ್ಬನು ಈ ಎಲ್ಲಾ ತೊಂದರೆಗಳನ್ನು ಎದುರಿಸಲು ತಯಾರಿರಬೇಕು." ಆದರೆ ಹಣ ಮಾಡುವಾಗ ಅದಕ್ಕೆ ಒಂದು ನೀತಿ ಇದೆಯೇ? ಬುದ್ಧ ಹೀಗೆಂದು ಸೂಚಿಸುತ್ತಾನೆ: "ಬದುಕಿಗೆ ಅಗತ್ಯವಾದ ಸಂಪಾದನೆ ಕಾನೂನುಬದ್ಧವಾಗಿರಬೇಕು ಮತ್ತು ಅಹಿಂಸೆಯಿಂದ ಕೂಡಿರಬೇಕು".

ಅಮೆರಿಕಾದಲ್ಲಿ ಮಾಡಿದ ಇತ್ತೀಚಿನ ಅಧ್ಯಯನದ ಪ್ರಕಾರ ಯಾರು ಹಣವನ್ನು ದಾನ ಮಾಡುತ್ತಾರೋ ಅವರು ಇತರರಿಗಿಂತ ಹೆಚ್ಚು ಸಂತೋಷದಲ್ಲಿದ್ದಾರೆ. ಆದರೆ ಬುದ್ಧ ಇದಕ್ಕೆ ಸಂಶೋಧನೆ ಮಾಡಬೇಕಿರಲಿಲ್ಲ. ಮಾನವ ಸುಖದ ತತ್ವಜ್ಞಾನಿಯಾದ ಆತ ಹೇಳುವುದೇನೆಂದರೆ, "ತನ್ನ ಕುಟುಂಬ, ನೌಕರರು, ಸಂಬಂಧಿಕರು ಮತ್ತು ಸ್ನೇಹಿತರಿಗಾಗಿ ಹಣವನ್ನು ಖರ್ಚು ಮಾಡಿ..." "ಅಂಥ ವ್ಯಕ್ತಿಯನ್ನು ಆಕರ್ಷಕ ನೀಳ ಕಣಿವೆಯಲ್ಲಿರುವ ತಣ್ಣಮೆಯ ನೀರಿಗೆ ಸಮ" ಎನ್ನುತ್ತಾನೆ ಬುದ್ಧ.

> ದಿ ಬುದ್ಧ – ಧಮ್ಮದ ಪ್ರಮುಖ ತತ್ತ್ವಗಳು ಎನ್ನೋ ಆನಂದ್ ಕೃಷ್ಣನ ಪುಸ್ತಕ ಪ್ರಕಟವಾಗುತ್ತಿದೆ. ಆದ್ದರಿಂದ ದಲಿತ ವಿಮೋಚನೆಯ ಈ ಸರಣಿ ಅಂಕಣಗಳನ್ನು ನಾನು ಬರೆಯುವುದಕ್ಕೆ ಸ್ವಲ್ಪ ವಿರಾಮ ನೀಡಿ, ಆ ಪುಸ್ತಕದ ಬಗ್ಗೆ ಸಣ್ಣ ವಿಮರ್ಶೆ ಬರೆಯುತ್ತಿದ್ದೇನೆ. ಈ ಪುಸ್ತಕ ಹಿಂದಿ ಪ್ರಕಟನೆ ಧಮ್ಮಸಾರ ೧೯೯೭ರಲ್ಲಿ ಪ್ರಕಟಗೊಂಡು ಸಾವಿರಾರು ಪ್ರತಿಗಳು ಮಾರಾಟವಾಗಿವೆ. ಈಗ ಅದರ ಇಂಗ್ಲಿಷ್ ಆವೃತ್ತಿ ಮತ್ತಷ್ಟು ಸೂಕ್ಷ್ಮಗಳೊಡನೆ ಹೊರಬರುತ್ತಿದೆ. ಆ ಪುಸ್ತಕವನ್ನು ಓದಿದ ಮೇಲೆ ನಾನು ಹೇಳುವುದೆಂದರೆ ಮಾನವ ಸುಖವನ್ನು ಮತ್ತು ಜಗತ್ತಿನ ಶಾಂತಿಯನ್ನು ಬೋಧಿಸಿದ ತತ್ವಜ್ಞಾನಿಯೇ ಬುದ್ಧ. ನನ್ನ ಪ್ರಕಾರ ಎಲ್ಲಾ ದೇವರುಗಳು ತಮ್ಮ ಹಿಂಬಾಲಕರಿಂದ ಆರಾಧನೆಯನ್ನು ಮಾಡಿಸಿಕೊಳ್ಳುತ್ತಿವೆ. ಹೀಗಿರುವಾಗ ಇಂಥ ದೇವರು ತನ್ನ ಹಿಂಬಾಲಕರಿಗೆ ಹಣವನ್ನು ಹೇಗೆ ವಿನಿಯೋಗಿಸುವುದೆಂದು ಹೇಳಿ ಕೊಡುತ್ತಾರೆಯೇ?

ಮಾನವರಲ್ಲಿ ಮಡುವುಗಟ್ಟಿರುವ ದುರಾಸೆಯನ್ನು ಬುದ್ಧ ಮನಗಂಡು ಹೇಳುವುದೇನೆಂದರೆ, "ಮಾದಕ ವಸ್ತುಗಳನ್ನು, ಹಿಂಸೆಯ ಅಸ್ತ್ರಗಳನ್ನು, ವಿಷವನ್ನು" ಮಾರಾಟ ಮಾಡಬಾರದು.

ಮಾನವ ನಿಜವಾಗಿಯೂ ಸುಖಿಯಾಗಿರಬೇಕಾದರೆ ಆ ವ್ಯಕ್ತಿ ಸ್ವತಂತ್ರವಾಗಿ ಯೋಚಿಸಬೇಕು. ತನ್ನ ವ್ಯಕ್ತಿತ್ವದಿಂದ ಹೊರ ಬಂದು ಆಲೋಚಿಸಬೇಕು. ಸತ್ಯ ಎನ್ನುವುದು ತರ್ಕಬದ್ಧವಾಗಿರಬೆಕು.

ಹೀಗೆ ಬುದ್ಧ ಸ್ವತಂತ್ರ ಯೋಚನೆಗೆ ಅಧಿಕ ಮಹತ್ವ ನೀಡುತ್ತಾನೆ. ಆತನ ಪ್ರಕಾರ, "ನೀನು ಏನನ್ನು ಕೇಳಿಸಿಕೊಳ್ಳುತ್ತಿಯೋ ಅದನ್ನು ನಂಬ ಬೇಡ. ತಲೆಮಾರುಗಳಿಂದ ಬಂದ ಪರಂಪರೆ ಎಂದು ಅದನ್ನು ನಂಬಬೇಡ. ಗಾಳಿ ಸುದ್ದಿ ಮತ್ತು ಅನೇಕರು ಹೇಳುವ ಮಾತುಗಳನ್ನು ನಂಬಬೇಡ. ಹಳೇಕಾಲದಲ್ಲಿ ಬರೆದದ್ದು ಎನ್ನುವುದನ್ನು ಸಹ ನಂಬಬೇಡ. ನಿನ್ನ ಶಿಕ್ಷಕರು ಮತ್ತು ಹಿರಿಯರ ಅಧಿಕಾರವನ್ನು ನಿನ್ನ ಸ್ವಂತ ವಿಶ್ಲೇಷಣೆ ಇಲ್ಲದೆ ಒಪ್ಪಿಕೊಳ್ಳಬೇಡ. ಅದು ನಿನ್ನ ವಿವೇಚನೆಗೆ ನಿಜವೆಂದು ತೋರಿದಲ್ಲಿ ಮತ್ತು ಒಳಿತಿಗೆ ಪೂರಕವಾಗಿದಲ್ಲಿ ಮತ್ತು ಎಲ್ಲರಿಗೂ ಒಳಿತನ್ನುಂಟುಮಾಡುತ್ತದೆಯಾದರೆ ಅದನ್ನು ಒಪ್ಪಿ ಅದರಂತೆ ನಡೆ.

೧೨ ಅಧ್ಯಾಯಗಳ ಈ ಪುಸ್ತಕ ಒಂದು ಸಾಕ್ಷ್ಯಚಿತ್ರದಂತೆ ಬುದ್ಧನ ಬದುಕು, ಆತನ ಧಮ್ಮ ತಾರ್ಕಿಕವಾಗಿ ಸ್ಪಷ್ಟವಾಗಿ ವಿವರಗೊಳ್ಳುತ್ತದೆ. ಅಲ್ಲದೆ ಈ ಪುಸ್ತಕ ಬುದ್ಧ ಮತ್ತು ಆತನ ಧಮ್ಮಕ್ಕೆ ಸಂಬಂಧಿಸಿದಂತೆ ಅನೇಕ ದಂತಕತೆಗಳನ್ನು ನೀಡುತ್ತದೆ. ವಿದ್ವಾಂಸನ ಒಳನೋಟದಿಂದ ಕೂಡಿರುವ ಈ ಪುಸ್ತಕ ವಿದ್ವಾಂಸರಲ್ಲದವರನ್ನೂ ಸಹ ಖುಷಿಯಿಂದ ಓದಿಸಿಕೊಂಡು ಹೋಗುವಂಥದ್ದು. ಲೇಖಕ ಕೃಷ್ಣ ಬುದ್ಧ ಮತ್ತು ಆತನ ಹಿಂಬಾಲಕರಿಗೆ ಶ್ರೇಷ್ಠ ಸೇವೆಯನ್ನು ಇ ಪುಸ್ತಕದ ಮೂಲಕ ಮಾಡಿದ್ದಾರೆ.

ಮಾನವ ಸುಖ ಮತ್ತು ಜಗತ್ತಿನ ಶಾಂತಿಯನ್ನು ಬಯಸುವ ಈ ಪುಸ್ತಕ ಬೌದ್ಧೇತರರಿಗು ಇದು ಒಳ್ಳೆ ಕೈಪಿಡಿಯಾಗಿದೆ. ಕಾರನ ಎಲ್ಲರೂ ಸುಖವನ್ನು ಬಯಸುತ್ತಾರೆ. ಆದ್ದರಿಂದ ಈ ಪುಸ್ತಕ ಎಲ್ಲಾ ಧರ್ಮೀಯರಿಗೂ ಅಗತ್ಯವಾಗಿ ಬೇಕಾಗಿದೆ. □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು– ೫೬೦ ೦೦೧, ☎ : ೨೨೨೦೩೫೮೦
✦ಗಾಂಧಿನಗರ, ಬೆಂಗಳೂರು–೫೬೦ ೦೦೯, ☎ : ೨೨೨೫೦೩೮೨, ✦ಸ್ಟೇಷನ್ ರಸ್ತೆ, ಗುಲ್ಬರ್ಗ–೨ ☎ : ೪೨೪೩೦೨
✦ಕೆ.ಎಸ್.ರಾವ್.ರಸ್ತೆ, ಮಂಗಳೂರು–೧, ☎ : ೨೪೪೧೦೧೬, ✦ರಾಮಸ್ವಾಮಿ ವೃತ್ತ ಮೈಸೂರು–೨೪, ☎ : ೨೪೨೪೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ–೨೦
☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ಬುದ್ಧಾಯಣ

೩೩

ಬುದ್ಧನೇ ನನ್ನ ಸಂಪತ್ತು!

ಸಿ. ಎಚ್. ರಾಜಶೇಖರ್

ಎಂದಿಗೂ ಸುಳ್ಳು ಹೇಳದ, ಯಾರಿಗೂ ಮೋಸ ಮಾಡದ, ತನ್ನ ಸೇವೆಗಿಂತ ಹೆಚ್ಚನ್ನು ಯಾರಿಂದಲೂ ಪಡೆಯದ ಉಪಾಲಿಯು ಎಂತಹ ಕಠಿಣ ಪ್ರಸಂಗ ಬಂದಾಗಲೂ ಕಳ್ಳತನಕ್ಕೆ ಮೊದಲಾಗಲಿಲ್ಲ ಮತ್ತು ಭಿಕ್ಷೆಯನ್ನು ಬೇಡಲಿಲ್ಲ. ಇಂತಹ ಉದಾತ್ತಗುಣಗಳಿಂದ ಇವನು ಕಪಿಲವಸ್ತುವಿನಲ್ಲಿ ಜನಪ್ರಿಯನಾಗಿದ್ದ. ಹಾಗಾಗಿ ಇವನಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗೆ ಸೇರಿದ ಅನಿರುದ್ಧ, ಆನಂದ, ಭಾಗು, ಕಿಂಬಿಲ, ದೇವದತ್ತ ಮತ್ತು ಸಾಕ್ಯ ರಾಜ ಭದ್ದಿಯ ಮುಂತಾದ ಗಣ್ಯರ ಸ್ನೇಹ ವಿಶ್ವಾಸಗಳ ಒಡನಾಟವಿತ್ತು. ಅವರೆಲ್ಲ ಇವನನ್ನು ಸೇವಕನೆಂದು ತಿಳಿಯದೆ ಸ್ನೇಹಿತನು ಮತ್ತು ಹಿರಿಯನೆಂದು ಆದರಿಸಿ ಗೌರವಿಸುತ್ತಿದ್ದರು.

ಉಪಾಲಿಯು ಕಪಿಲವಸ್ತುವಿನಲ್ಲಿ ಒಬ್ಬ ಸಾಮಾನ್ಯ ಕ್ಷೌರಿಕ. ಜಾತಿಯಲ್ಲಿ ಪಂಚಮನಾಗಿದ್ದ. ಈತ ವೃತ್ತಿಯಲ್ಲಿ ಅಪಾರ ಶ್ರದ್ಧೆಯನ್ನು ಹೊಂದಿದ್ದ. ತನ್ನ ಜಾತಿಯ ಇತರರಿಗಿಂತ ಭಿನ್ನವಾಗಿದ್ದ. ನಡೆತೆಯಲ್ಲಿ ನ್ಯಾಯ, ನಿಷ್ಠೆ, ಪ್ರಾಮಾಣಿಕತೆ ಹೊಂದಿದ್ದ. ವಿಚಾರಶಕ್ತಿಯನ್ನು ಬೆಳೆಸಿಕೊಂಡಿದ್ದ. ಅವನಿಗೆ ಯಾವುದು ಸರಿ ಯಾವುದು ತಪ್ಪು ಎಂಬ ಬಗ್ಗೆ ಅರಿವಿತ್ತು. ತನಗಿಂತ ಉತ್ತಮ ಸ್ನೇಹಿತರ ಜೊತೆ ಬಯಸುತ್ತಿದ್ದ. ಕ್ಷೌರಿಕ ಕಸುಬಿನ ಬಗ್ಗೆ ಎಂದಿಗೂ ಕೀಳರಿಮೆ ಬೆಳೆಸಿಕೊಂಡಿರಲಿಲ್ಲ.

ದಿನವೂ ತನ್ನ ಅಡಪವನ್ನು ಹೊತ್ತು ಮನೆ ಮನೆಗೆ ಹೋಗುತ್ತಿದ್ದ. ಗುರುಮನೆ, ಅರಮನೆ, ಪಂಚಮನ ಕೀಳು ಗುಡಿಸಲು ಎಂಬ ಭೇದ ಭಾವ ತೋರುತ್ತಿರಲಿಲ್ಲ. ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದ. ತನ್ನ ಸೇವೆಯನ್ನು ಸಲ್ಲಿಸುತ್ತಿದ್ದ, ಅವರು ಕೊಟ್ಟ ದವಸ ಧಾನ್ಯ ಪುಡಿಗಾಸು ಮತ್ತು ಹಾಕಿದ ಭಿಕ್ಷೆಯನ್ನು ಮನೆಗೆ ತಂದು ಮನೆ ಮಂದಿಯೊಂದಿಗೆ ಹಂಚಿಕೊಂಡು ತಿನ್ನುತ್ತಿದ್ದ.

ಎಂದಿಗೂ ಸುಳ್ಳು ಹೇಳದ, ಯಾರಿಗೂ ಮೋಸ ಮಾಡದ, ತನ್ನ ಸೇವೆಗಿಂತ ಹೆಚ್ಚನ್ನು ಯಾರಿಂದಲೂ ಪಡೆಯದ ಉಪಾಲಿಯು ಎಂತಹ ಕಠಿಣ ಪ್ರಸಂಗ ಬಂದಾಗಲೂ ಕಳ್ಳತನಕ್ಕೆ ಮೊದಲಾಗಲಿಲ್ಲ ಮತ್ತು ಭಿಕ್ಷೆಯನ್ನು ಬೇಡಲಿಲ್ಲ. ಇಂತಹ ಉದಾತ್ತ ಗುಣಗಳಿಂದ ಇವನು ಕಪಿಲವಸ್ತುವಿನಲ್ಲಿ ಜನಪ್ರಿಯನಾಗಿದ್ದ. ಹಾಗಾಗಿ ಇವನಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗೆ ಸೇರಿದ ಅನಿರುದ್ಧ, ಆನಂದ, ಭಾಗು, ಕಿಂಬಿಲ, ದೇವದತ್ತ ಮತ್ತು ಸಾಕ್ಯ ರಾಜ ಭದ್ದಿಯ ಮುಂತಾದ ಗಣ್ಯರ ಸ್ನೇಹ ವಿಶ್ವಾಸಗಳ ಒಡನಾಟವಿತ್ತು. ಅವರೆಲ್ಲ ಇವನನ್ನು ಸೇವಕನೆಂದು ತಿಳಿಯದೆ ಸ್ನೇಹಿತನು ಮತ್ತು ಹಿರಿಯನೆಂದು ಆದರಿಸಿ ಗೌರವಿಸುತ್ತಿದ್ದರು.

ಉಪಾಲಿಗೆ ಮೊದಲಿನಿಂದಲೂ ಸಿದ್ಧಾರ್ಥ ಗೌತಮನ ಬಗ್ಗೆ ಅಪಾರ ಪ್ರೀತಿ, ಗೌರವ. ನಮ್ಮ ನೆಚ್ಚಿನ ರಾಜಕುಮಾರ ಜ್ಞಾನೋದಯ ಪಡೆದು ಏಳು ವರ್ಷಗಳ ಬಳಿಕ ಅರಮನೆಗೆ ಮರಳುತ್ತಿರುವ ವಿಷಯ ತಿಳಿದು ಪುಳಕಿತರಾದ ಅಪಾರ ಪ್ರಜೆಗಳಲ್ಲಿ ಉಪಾಲಿಯು ಒಬ್ಬ. ಪ್ರತಿ ಮನೆಯಿಂದ ಒಬ್ಬೊಬ್ಬರು ಬುದ್ಧನಿಂದ ಧೀಕ್ಷೆ ಪಡೆದು ಭಿಕ್ಷುವಾಗುವ ನಿರ್ಧಾರ ಹೊರ ಬೀಳುತ್ತಿದ್ದಂತೆ ತನ್ನ ಮನೆಯಲ್ಲಿ ತಾನು ಧೀಕ್ಷೆ ಪಡೆಯಲು ತಂದೆ ತಾಯಿಗಳಿಂದ ಅನುಮತಿ ಪಡೆದು ತನ್ನ ಸ್ನೇಹಿತರಾದ:

ಭದ್ದಿಯ, ಅನಿರುದ್ಧ, ಆನಂದ, ಭಾಗು, ಕಿಂಬಿಲ ಮತ್ತು ದೇವದತ್ತರೊಂದಿಗೆ ಒಟ್ಟು ಏಳು ಜನರು ಬುದ್ಧ ತಂಗಿದ್ದ ವಿನೋದ ವನದ ಕಡೆ ಹೊರಟರು. ವಿನೋದ ವನ ಸಮೀಪಿಸುತ್ತಿದ್ದಂತೆ ಉಪಾಲಿಯ ಆರು ಜನ ಸ್ನೇಹಿತರು ತಮ್ಮೆಲ್ಲ ಬೆಲೆ ಬಾಳುವ ವಸ್ತ್ರಗಳು ಮತ್ತು ಒಡವೆಗಳನ್ನು ತೆಗೆದು ಗಂಟುಕಟ್ಟಿ ಉಪಾಲಿಯ ಕೈಗಿತ್ತು:

'ಪುಣ್ಯಾತ್ಮ ಉಪಾಲಿಯೇ, ನೀನು ಜೀವನ ಪೂರ ಕಷ್ಟದಲ್ಲಿ ಕಳೆದವನು. ಸುಖ ಸಂಪತ್ತನ್ನು ಕಾಣದವನು. ನಾವುಗಳೆಲ್ಲ ಗೃಹಸ್ಥಾಶ್ರಮದಲ್ಲಿದ್ದಾಗ ಹೆಚ್ಚಿನದೇನನ್ನೂ ನಿನಗೆ ಧಾನ ಮಾಡಲು ಸಾಧ್ಯವಾಗಿರಲಿಲ್ಲ. ನೀನು ನಿನ್ನ ಜೀವಿತವೆಲ್ಲಾ ನಮ್ಮಗಳ ಸೇವೆಯನ್ನು ಮಾಡಿದ್ದೀಯಾ. ಇನ್ನಾದರು ಸುಖಭೋಗವನ್ನು ಅನುಭವಿಸು ನಿನ್ನ ಭೋಗ ಜೀವನಕ್ಕೆ ನಮ್ಮೆಲ್ಲರ ಒಡವೆ ವಸ್ತ್ರಗಳ ಜೊತೆಗೆ ರಾಜನಾದ ಭದ್ದಿಯನ ಕೀರಿಟ, ರತ್ನ ಖಚಿತ ಪಾದರಕ್ಷೆಗಳು, ಬೆಲೆ ಬಾಳುವ ವಸ್ತ್ರಗಳು ನಿನ್ನ ಇಡೀ ಜೀವಿತಕ್ಕೆ ಸಾಕು. ಇವುಗಳನ್ನು ತೆಗೆದುಕೊಂಡು ಕಪಿಲವಸ್ತುವಿಗೆ ಹಿಂದಿರುಗು. ಸುಖ ಜೀವನ ನಡೆಸು. ಸುಖ, ಜೀವನ ಎಂದರೆ ಏನೆಂಬುದನ್ನು ಕಂಡುಕೋ, ಮುಂದೊಂದು ದಿನ ಭೋಗ ಜೀವನದಲ್ಲಿ ನೆಮ್ಮದಿ ಕಾಣದಿದ್ದರೆ ಆಗ ಮತ್ತೆ ಮರಳಿ ನಮ್ಮನ್ನು ಮತ್ತು ಬುದ್ಧನನ್ನು ಸೇರಿಕೊಳ್ಳುವುದು ಇದ್ದೇ ಇದೆ. ನೀನಿನ್ನು ಹಿಂದಿರುಗಿ ಹೊರಡು.' ಎಂದು ಅವನನ್ನು ಮಾರ್ಗ ಮಧ್ಯದಿಂದ ಹಿಂದಿರುಗಿಸಿದರು.

ಕ್ಷಣ ಕಾಲ ಅಪಾರ ಒಡೆವೆ ವಸ್ತ್ರಗಳಿಗೆ ಮರುಳಾದ ಉಪಾಲಿಯು ತನ್ನ ಸ್ನೇಹಿತರಿಂದ ಬೀಳ್ಗೊಂಡು ಕಪಿಲವಸ್ತುವಿನ ಕಡೆ ನೆಡೆಯ ತೊಡಗಿದ. ಸ್ವಲ್ಪ ದೂರ ಹಿಂದಿರುಗಿದ ಅವನು ತಾನು ಹೊತ್ತು ತಂದ ಆಭರಣಗಳ ಗಂಟನ್ನು ಕೆಳಗಿಳಿಸಿ ಬಿಚ್ಚಿ ನೋಡಿದ. ಆ ಅಪಾರ ಸಂಪತ್ತಿಗೆ ನಾನೇ ಒಡೆಯನೆಂದು ನೆನೆದು ಕ್ಷಣಕಾಲ ಖುಷಿಗೊಂಡ. ಆ ಒಡವೆ ವಸ್ತ್ರಗಳನ್ನು ತಾನು ತೊಟ್ಟುಕೊಂಡು ಶ್ರೀಮಂತನಂತೆ ಮೆರೆದಂತೆ ಸುಖ ಭೋಗದಲ್ಲಿ ತೇಲಿದಂತೆ ಕನಸು ಕಂಡ. ಮರು ಕ್ಷಣವೇ ಅವನ ಮನಸ್ಸಿನಲ್ಲಿ:

ನಾನು ಈ ಒಡವೆ ವಸ್ತುಗಳೊಂದಿಗೆ ಕಪಿಲವಸ್ತುವನ್ನು ತಲುಪಿದರೆ ಈ ವಿಷಯ ಸಾಖ್ಯರ ಕಿವಿಗೆ ಬಿದ್ದರೆ ಏನೆಂದು ಕೊಂಡಾರು? ತನ್ನೊಂದಿಗೆ ಬಂದಿದ್ದ ಆರು ಜನರನ್ನು ಕೊಂದು ಅವರ ಸಂಪತ್ತನ್ನೆಲ್ಲಾ ದೋಚಿಕೊಂಡು ಬಂದ ದರೋಡೆಕೋರನೆಂದು ಬಗೆದು ನನ್ನನ್ನು ಕೊಲ್ಲದೆ ಬಿಟ್ಟಾರೆಯೇ? ಎಂಬ ವಾಸ್ತವಾಂಶ ಅರಿತಾಗ ತನ್ನ ಮಂಕುತನಕ್ಕೆ ಇನ್ನಿಲ್ಲದಂತೆ ವ್ಯಥೆ ಪಟ್ಟ. ತಾನು ಯಾರು? ತಾನು



ಇದುವರೆವಿಗೂ ಬದುಕಿದ ರೀತಿ ನೀತಿಗಳು ಎಂತಹುದು? ನನ್ನ ಬದುಕಿನ ಗುರಿ ಏನಾಗಿತ್ತು? ನಾನೀಗ ಏನು ಮಾಡಿದ್ದೇನೆ? ಈ ಸಣ್ಣ ತನಕ್ಕಾಗಿ ಬದುಕು ಪೂರ ಪ್ರಜ್ಞಾವತನಾಗಿರಬೇಕಾಗಿತ್ತೇ? ಎಂಬ ಪ್ರಶ್ನೆ ಗಳು ಅವನ ಸ್ವಾಭಿಮಾನವನ್ನು ಹಂಗಿಸಿದಾಗ ತನ್ನೆದುರಿಗಿದ್ದ ಸಂಪತ್ತನ್ನು ಮತ್ತೆ ಅದೇ ಬಟ್ಟೆಯಲ್ಲಿ ಬಿಗಿಯಾಗಿ ಗಂಟುಕಟ್ಟಿ:

'ಪವಿತ್ರಾತ್ಮನೇ, ನನ್ನ ಕ್ಷಣಿಕ ಆಸೆಗಾಗಿ ಕ್ಷಮೆ ಇರಲಿ! ನೀನೇ ಹೇಳಿದಂತೆ ಆಸೆಯು ದುಃಖವನ್ನಲ್ಲದೆ ಮತ್ತೇನನ್ನು ತರಲು ಸಾಧ್ಯ? ನಿನ್ನ ಒಂದು ವಾಣಿಯೇ ಇಷ್ಟೊಂದು ಸತ್ಯದಿಂದ ಕೂಡಿರುವಾಗ ನಿನ್ನ ಸಾನಿಧ್ಯ, ಇನ್ನೆಷ್ಟು ಅಮೃತಮಯ!! ಹಿಗೋ ನಾನು ಈ ಸಂಪತ್ತನ್ನು ತ್ಯಜಿಸುತ್ತಿದ್ದೇನೆ. ಇದು ಯಾರಿಗೆ ಸಿಕ್ಕುತ್ತದೋ ಅವರು ಇದನ್ನು ಬಹುಮಾನವೆಂದಾದರು ತಿಳಿದುಕೊಳ್ಳಲಿ ಅಥವಾ ಪೀಡೆ ಎಂದಾದರೂ ತಿಳಿದುಕೊಳ್ಳಲಿ ಅದು ಅವರವರ ಮಾನಸಿಕ ಸ್ಥಿತಿ.' ಎನ್ನುತ್ತಾ ತನ್ನೆದುರಿದ್ದ ಮರದ ಕೊಂಬೆಯೊಂದಕ್ಕೆ ನೇತಾಕಿ ಹಿಂದಿರುಗಿ ಮತ್ತೆ ತನ್ನ ಸ್ನೇಹಿತರನ್ನು ಕೂಡಿಕೊಂಡ. ಆಶ್ಚರ್ಯದಿಂದ ಅವರು ಪ್ರಶ್ನಿಸಿದರು.

'ಪ್ರಿಯಾ ಉಪಾಲಿ, ಮತ್ತೆ ನೀನೇಕೆ ಹಿಂದಿರುಗಿದೆ?'

'ಕ್ಷಮಿಸಿ ಮಿತ್ರರೇ, ನನಗೆ ಗೌತಮ ಬುದ್ಧನೇ ಸಂಪತ್ತು! ಅವನ ಸಾನಿಧ್ಯವೇ ನನ್ನ ಪಾಲಿನ ಸುಖಭೋಗ' ಎನ್ನಲು ಆ ಆರೂ ಜನ ಮಿತ್ರರಿಗೂ ತಮ್ಮ ತಪ್ಪಿನ ಅರಿವಾಗಿ ತಲೆ ತಗ್ಗಿಸಿ ನಿಂತರು. ಮರು ಕ್ಷಣವೇ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು:

'ಪ್ರಿಯಾ ಉಪಾಲಿಯೇ, ನಮ್ಮ ಸಣ್ಣತನಕ್ಕೆ ಕ್ಷಮೆ ಇರಲಿ! ನಿನಗಿಂತ ಜಾತಿಯಲ್ಲಿ, ವಿದ್ಯೆಯಲ್ಲಿ, ಸಂಪತ್ತಿನಲ್ಲಿ ನಾವುಗಳು ಮೇಲೆಂದು ಬಗೆದು ನಿನ್ನನ್ನು ನಮ್ಮ ಸರಿಸಮವೆಂದು ಒಪ್ಪಿಕೊಳ್ಳದ ಮತ್ತು ನಿನ್ನನ್ನು ನಮ್ಮ 'ಸೇವಕನೆಂದು' ಬಗೆದವೇ ಹೊರತು 'ಸ್ನೇಹಿತ'ನೆಂದು ಪರಿಗಣಿಸದೆ ನಿನ್ನೆದುರು ನಾವು ಅಲ್ಪಮತಿಗಳಾದೆವು, ನಮ್ಮನ್ನು ಕ್ಷಮಿಸು. ಬಾ ಸ್ನೇಹಿತ ಉಪಾಲಿಯೇ, ಇನ್ನೂ ಮುಂದೆ ನೀನೇ ನಮ್ಮ ತಂಡದ ನಾಯಕ ಎಂದ ಅವರೆಲ್ಲ ಬುದ್ಧನನ್ನು ಸಂಧಿಸಿ ನಡೆದ ವಿಷಯ ಮತ್ತು ತಪ್ಪನ್ನು ತಿಳಿಸಿ:

'ಪ್ರಭುವೇ, ನಾವು ಸಾಕ್ಯರು ಅಹಂಕಾರಿಗಳು, ನಮ್ಮ ತಪ್ಪನ್ನು ಮನ್ನಿಸಿ! ಉಪಾಲಿಯು ಇನ್ನೂ ಮುಂದೆ ನಮ್ಮ ಸೇವಕನಲ್ಲ. ಸ್ನೇಹಿತ. ನಮ್ಮ ತಂಡದ ಹಿರಿಯ, ಆದ್ದರಿಂದ ನಮಗಿಂತ ಮೊದಲು ಅವನನ್ನೇ ತಮ್ಮ ಸಂಘಕ್ಕೆ ಪವಿತ್ರಾತ್ಮರು ಆದರಗೌರವಗಳನ್ನು ಸೇರಿಸಿಕೊಂಡರೆ ನಾವು ಅವನಿಗೆ ಆದರಗೌರವಗಳನ್ನು ತೋರಿಸುತ್ತಾವೆ. ಅವನೇ ನಮ್ಮ ಹಿರಿಯನೆಂದು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ. ಹೀಗಾದರೂ ನಮ್ಮ ಅಹಂಕಾರ ಮುರಿಯಲಿ' ಎನ್ನಲು, ಬುದ್ಧನು ಅವರನ್ನುದ್ದೇಶಿಸಿ;

'ಎಲೈ ದುರ್ಬಲರ ಪಕ್ಷಪಾತಿಗಳಾದ ಸಾಕ್ಯರೇ, ನೀವು ನನ್ನ ಶಿಷ್ಯರಲ್ಲಿ ಅಚ್ಚುಮೆಚ್ಚಿನವರು. ನಿಮ್ಮ ಉದಾರ ಗುಣಕ್ಕೆ ನಾನು ಮಾರು ಹೋದೆ. ನೀವಿನ್ನು ಒಳಗೆ ಬನ್ನಿ...!!' ಎನ್ನಲು. ಆ ಆರು ಜನ ಸ್ನೇಹಿತರು ಬುದ್ಧ ಮತ್ತು ಉಪಾಲಿಗೆ ವಂದಿಸುತ್ತಾ;

'ನಿಮ್ಮಿಂದಾಗಿ ನಮ್ಮ ಆಹಂಕಾರ ಮುರಿಯಿತು! ಅಹಂಕಾರಕ್ಕೆ ಮಿಗಿಲಾದ ಶತ್ರುವಾಗಲಿ, ಅಜ್ಞಾನವಾಗಲಿ, ಮತ್ತೊಂದಿಲ್ಲ ಎಂಬುದನ್ನು ಕಂಡುಕೊಂಡೆವು ಗುರುದೇವಾ...!! ಇನ್ನು ಮುಂದೆ ನಮ್ಮ ತಂಡಕ್ಕೆ ಉಪಾಲಿಯೇ ನಾಯಕ...!!!' ಎಂದು ತಲೆಬಾಗಿದರು. □

ಪ್ರಯೋಜನಕ್ಕಾಗಿ ಸೇವೆಯಲ್ಲ



ಬುದ್ಧನ ನ್ಯಾಯನಿಷ್ಠುರತೆ ಸದಾ ಕಾಲವೂ ಜಾಗೃತವಾಗಿರುತ್ತಿತ್ತು, ಅದಕ್ಕೆ ಅವನ ನಿಸ್ವಾರ್ಥ ಮನೋಭಾವವೇ ಕಾರಣ. ಈ ನಿಸ್ವಾರ್ಥ ಮತ್ತು ನಿರ್ವಿಕಾರ ಮನೋಭಾವವೇ ಅವನ ಜ್ಞಾನೋದಯದ ಮೂಲ ಮಂತ್ರ ಬುದ್ಧನ ಅಮರತ್ವಕ್ಕೆ ಸರ್ವಕಾಲಕ್ಕೂ ಸಲ್ಲುವ ಮೌಲ್ಯಕ್ಕೆ ಸದಾ ಜೀವಂತಿಕೆ ಮತ್ತು ವೈವಿಧ್ಯತೆಗೆ ಮೂಲ ಕಾರಣ. ಅವನ ಮಹಾ ಮಾನವೀಯ ಕಾಳಜಿಯೇ ಆಗಿದೆ! ಈ ಗುಣಗಳು ಎಲ್ಲೇ ಇದ್ದರೂ ಯಾರಲ್ಲಿಯೇ ಇದ್ದರೂ ಜಗತ್ತು ಬೇಷರತ್ತಾಗಿ ಸ್ವೀಕರಿಸುತ್ತದೆ ಎಂಬುದಕ್ಕೆ ಬುದ್ಧನೇ ಜ್ವಲಂತ ಸಾಕ್ಷಿ!

ಒಮ್ಮೆ ಎಂದಿನಂತೆ ಬುದ್ಧನು ಭಿಕ್ಷುಗಳ ಬಿಡದಿಯ ಪರಿವೀಕ್ಷಣೆಗೆ ಆನಂದದೊಂಡನೆ ಹೋಗಿದ್ದ. ಆ ಸಮಯದಲ್ಲಿ ಭಿಕ್ಷು ಸಹೋದರನೊಬ್ಬನು ಅತಿಸಾರದಿಂದ ಬಳಲುತ್ತಿದ್ದ. ತೀವ್ರವಾಗಿ ಆಯಾಸಗೊಂಡಿದ್ದ. ತನ್ನ ಹೇಸಿಗೆಯ ನಡುವೆಯೇ ಮಲಗಿ ನರಳುತ್ತಿದ್ದ ಈ ದೃಶ್ಯವನ್ನು ಕಂಡ ಬುದ್ಧ ಕಳವಳಗೊಂಡು ತೀವ್ರ ಕಾಳಜಿಯಿಂದ ಆ ರೋಗಿಯನ್ನು ಉದ್ದೇಶಿಸಿ;

'ಸಹೋದರ ನಿನಗೇನಾಗಿದೆ?' ಎಂದು ಪ್ರಶ್ನಿಸಿದ ಆತ ಅತೀವ ದುಃಖ ನೋವು ಮತ್ತು ಕ್ಷೀಣ ಸ್ವರದ ನಡುವೆಯೂ ಬುದ್ಧನಿಗೆ ವಂದಿಸುತ್ತಾ;

'ಗುರುವೇ, ನಾನು ಅತಿಸಾರದಿಂದ ಬಳಲುತ್ತಿದ್ದೇನೆ' ಎಂದ.

'ಯಾರಾದರೂ ನಿನ್ನನ್ನು ನೋಡಿಕೊಳ್ಳುತ್ತಿದ್ದಾರೆಯೇ?'

'ಇಲ್ಲ ಪ್ರಭುವೆ'

'ಸಹೋದರ, ಏಕೆ? ಉಳಿದ ಸಹೋದರರು ನಿನ್ನ ಸೇವೆಯನ್ನೇಕೆ ಮಾಡುತ್ತಿಲ್ಲ?'

'ಪ್ರಭುವೆ, ನನ್ನಿಂದ ಅವರಿಗೇನು ಪ್ರಯೋಜನವಿಲ್ಲ. ಹಾಗಾಗಿ ಅವರು ನನ್ನ ಬಗ್ಗೆ ಕಾಳಜಿ ವಹಿಸುತ್ತಿಲ್ಲ.'

ಬುದ್ಧನು ಆನಂದನನ್ನು ಉದ್ದೇಶಿಸಿ;

'ಆನಂದ, ಹೋಗಿ ನೀರು ತಾ. ನಾನು ಇವನಿಗೆ ಸ್ನಾನ ಮಾಡಿಸಿ ಶುಭ್ರಗೊಳಿಸುತ್ತೇನೆ'

'ಹಾಗೆಯೇ ಆಗಲಿ ಗುರುವೆ' ಎಂದ ನೀರನ್ನು ತಂದ ಬಳಿಕ ಬುದ್ಧ ಮತ್ತು ಆನಂದ ಸೇರಿ ಆ ಭಿಕ್ಷುವಿಗೆ ಸ್ನಾನ ಮಾಡಿಸಿ ಶುಭ್ರಗೊಳಿಸಿದರು. ನಂತರ ಬುದ್ಧನು ಆ ರೋಗಿಯ ತಲೆಯನ್ನು ಮತ್ತು ಆನಂದ ಅವನ ಕಾಲನ್ನು ಹಿಡಿದೆತ್ತಿ ಹಾಸಿಗೆಯ ಮೇಲೆ ಮಲಗಿಸಿ ಶುಶ್ರೂಷೆ ಮಾಡಿದರು. ಆ ಭಿಕ್ಷುವು ಗುಣಮುಖನಾದ ನಂತರ ಸಂಘದ ಸಭೆಯನ್ನು ಕರೆದ ಬುದ್ಧನು ಭಿಕ್ಷುಗಳನ್ನು ಉದ್ದೇಶಿಸಿ ಹೀಗೆ ಪ್ರಶ್ನಿಸಿದ;

'ಸಹೋದರರೇ, ಬಿಡದಿಯ ಕೊಠಡಿಯೊಂದರಲ್ಲಿ ಭಿಕ್ಷುವೊಬ್ಬನು ಕಾಯಿಲೆ ಬಿದ್ದಿದ್ದಾನೆ ಎಂಬುದು ನಿಮಗೆ ತಿಳಿಯದೆ?'

'ತಿಳಿದಿದೆ ಗುರುವೆ'

'ಸಹೋದರರೇ, ಅವನಿಗೆ ಏನಾಗಿದೆ?'

'ಗುರುವೆ ಅವನು ಅತಿಸಾರದಿಮದ ಬಳಲುತ್ತಿದ್ದ'

'ಸಹೋದರರೇ, ಯಾರಾದರೂ ಅವನ ಸೇವೆಯನ್ನು ಮಾಡಿದಿರಾ?'

'ಇಲ್ಲ ಗುರುವೆ'

'ಸಹೋದರರೇ, ಏಕೆ? ಯಾವ ಗೆಳೆಯರೂ ಅವನನ್ನು ಏಕೆ ನೋಡಿಕೊಳ್ಳಲಿಲ್ಲ?'

'ಗುರುವೆ, ಅವನಿಂದ ಯಾವ ಗೆಳೆಯರಿಗೂ ಪ್ರಯೋಜನವಿಲ್ಲ. ಹಾಗಾಗಿ ಅವನನ್ನು ಯಾರೂ ನೋಡಿಕೊಳ್ಳುತ್ತಿಲ್ಲ'

'ಸಹೋದರರೇ, ನಿಮ್ಮನ್ನು ನೋಡಿಕೊಳ್ಳಲು ಇಲ್ಲಿ ಯಾರಾದರೂ ನಿಮ್ಮಗಳ ತಂದೆ ತಾಯಿಗಳು ಇದ್ದಾರೆಯೇ?'

'ಖಂಡಿತಾ ಯಾರೂ ಇಲ್ಲ ಗುರುವೆ!'

'ಸಹೋದರರೇ, ನಿಮ್ಮನ್ನು ನೀವೇ ಪರಸ್ಪರ ನೋಡಿಕೊಳ್ಳದೇ ಹೋದರೆ ಮತ್ಯಾರು ನೋಡಿಕೊಳ್ಳುತ್ತಾರೆ?'

'ಹೌದು ಗುರುವೆ ಮತ್ಯಾರು ನೋಡಿಕೊಳ್ಳಲಾರರು'

'ಸಹೋದರರೇ, ನಾನೊಂದು ಪಕ್ಷ ಅನಾರೋಗ್ಯದಿಂದ ಬಳಲುತ್ತಿದ್ದರೆ ನನ್ನನ್ನು ನೋಡಿಕೊಳ್ಳಾರರೇ?'

'ಖಂಡಿತಾ ನೋಡಿಕೊಳ್ಳುತ್ತೇವ ಗುರುವೆ'

'ಸಹೋದರರೇ ನನ್ನಂತೆಯೇ ಎಂದು ಪ್ರತಿ ರೋಗಿಯನ್ನು ನೋಡಿಕೊಳ್ಳಿ ನೀವಿಲ್ಲದ ಸಂದರ್ಭದಲ್ಲಿ ನಾನು ನೋಡಿಕೊಳ್ಳುತ್ತೇನೆ. ಅವನು ಗುಣ ಹೊಂದುವವರೆಗೆ ಕಾಯುತ್ತೇನೆ. ನೀವೇ ಇರುವಾಗ ಆ ರೋಗಿಗೆ ಒಬ್ಬ ಪಾಲಕ, ಪೋಷಕ, ಶಿಷ್ಯ ಅಥವಾ ಸಹಪಾಠಿಯಂತೆ ಆತನ ಆರೋಗ್ಯ ನೋಡಿಕೊಳ್ಳಿ. ಗುಣ ಹೊಂದುವುದನ್ನು ನಿರೀಕ್ಷೆ ಮಾಡಿ. ಪ್ರತಿಯೊಬ್ಬ ರೋಗಿಯನ್ನು ನೋಡಿಕೊಳ್ಳುವುದು ನಿಮ್ಮ ಕರ್ತವ್ಯ. ಇದರಿಂದ ವಂಚಿತರಾದರೆ ಅದು ಅಪರಾಧವಲ್ಲವೆ?'

'ಹೌದು ಗುರು... ಖಂಡಿತಾ ಅಪರಾಧವೇ ಸರಿ...?'

'ಎಲೈ ಭಿಕ್ಷು ಸಹೋದರರೇ ಅಪರಾಧದಿಂದ ಮುಕ್ತರಾಗಿ. ಎಂದಿಗೂ ಕರ್ತವ್ಯದಿಂದ ವಿಮುಖರಾಗಬೇಡಿ. ಇದೇ ಮಾನವೀಯತೆ. ಈ ಮೂಲಕ ಜನತೆಗೆ ಮಾರ್ಗದರ್ಶಕರಾಗಿ' ಎಂದ. ಆಗ ಭಿಕ್ಷು ಸಹೋದರರು ಬುದ್ಧನನ್ನು ಉದ್ದೇಶಿಸಿ;

'ಹೌದು ಗುರುದೇವಾ, ನೀನು ಮಾನವೀಯತೆಯ ಸಾಕಾರ ಮೂರ್ತಿ...! ನಮ್ಮನ್ನು ಮತ್ತೆ ಕರ್ತವ್ಯಕ್ಕೆ ತೊಡಗಿಸಿದೆ...!! ನಮ್ಮನ್ನು ಅಪರಾಧದಿಂದ ಪಾರು ಮಾಡಿದೆ ನಿನಗೆ ವಂದನೆಯು ಗುರುವೇ...!!!' ಎಂದರು. □

'SAMVADA' Kannada Monthly, May 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಸುಂದರ ಕರ್ನಾಟಕ

ಸುಮಾರು 200 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ 1.1956 ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು. ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ -50 ವರ್ಷಗಳ ಒಂದು ಅವಲೋಕನ

* ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ
* ಉಳುವವನಿಗೆ ಭೂಮಿ ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ.
* ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ.
* ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ.
* ಸಾಕ್ಷರತೆಯಲ್ಲಿ ಗಣನೀಯ ಸಾಧನೆ-ಕೇವಲ ಶೇ. 24 ರಷ್ಟಿದ್ದ ಸಾಕ್ಷರತೆ ಈಗ ಶೇ. 71ಕ್ಕೆ ಏರಿಕೆ.
* ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
* ನೀರಾವರಿ ಸಾಮರ್ಥ್ಯ - 23.84 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ
* ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.
* ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಕರ್ನಾಟಕ ವಾರ್ತೆ
Karnataka Information